ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು

(ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಶಾಮಲಾ

ಮಾರ್ಗದರ್ಶಕರು

ಡಾ. ಕೆ.ಜಿ.ಭಟ್‌ಸೂರಿ

ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೨

ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು

(ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಶಾಮಲಾ

ಮಾರ್ಗದರ್ಶಕರು
ಡಾ. ಕೆ.ಜಿ.ಭಟ್‌ಸೂರಿ
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೧-೧೨

ಸಂಶೋಧಕರ ಪ್ರಮಾಣ ಪತ್ರ

"ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು" ಎಂಬ ಪ್ರಬಂಧವನ್ನು ಸಹ ಪ್ರಾಧ್ಯಾಪಕರಾದ ಡಾ. ಕೆ.ಜಿ.ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೨೦-೦೬-೨೦೧೨

ಶಾಮಲಾ
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಕು. ಶಾಮಲಾ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೩೦-೬-೨೦೧೧

ಡಾ. ಕೆ.ಜಿ.ಭಟ್‌ಸೂರಿ
ಸಹ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

HI-STORY ಎಂದರೆ His/Her Imperial Important Story. ಇತಿಹಾಸ ಎಂದರೆ, ಚಕ್ರಾಧಿಪತ್ಯದ ಪ್ರಮುಖ ಕಥೆ. ವಿವಿಧ ಮುಖಗಳಲ್ಲಿ ಮನುಕುಲದ ಚಿತ್ರಗಳನ್ನು ಅಥವಾ ಘಟನೆಗಳನ್ನು ಕಥೆಯ ರೂಪದಲ್ಲಿ ವಿವರಿಸುವುದೇ ಇತಿಹಾಸ.

ಒಬ್ಬ ರಾಜನ ಯಶಸ್ಸು ಅಲ್ಲಿನ ಜನರ ಜೀವನದಿಂದ ತಿಳಿಯುವಂತೆ, ಒಂದು ದೇಶದ ಇತಿಹಾಸ ಸತ್ಯದ ತಳಹದಿಯಿಂದ ಕಟ್ಟಲು ಆ ದೇಶದ ಗ್ರಾಮಗಳ ಇತಿಹಾಸ ಅತ್ಯಾವಶ್ಯಕ. ಆ ಗ್ರಾಮಗಳ ಸಮಗ್ರ ಮತ್ತು ಸೂಕ್ಷ್ಮ ಅಧ್ಯಯನದಿಂದಲೇ ದೇಶದ ಸತ್ಯ ಮತ್ತು ವಸ್ತುನಿಷ್ಠ ಇತಿಹಾಸ ರೂಪಗೊಳ್ಳಲು ಸಾಧ್ಯ. ಆದ್ದರಿಂದ ಗ್ರಾಮಗಳಲ್ಲಿನ ಶಾಸನ, ದೇವಾಲಯ ಮತ್ತು ಮೂರ್ತಿಶಿಲ್ಪಗಳ ಸಮಗ್ರ ಮತ್ತು ಸರ್ವತೋಮುಖ ಹಾಗೂ ಸೂಕ್ಷ್ಮ ಅಧ್ಯಯನಕ್ಕೊಳಪಡಿಸುವುದು ಅವಶ್ಯಕ.

ಪ್ರಸ್ತುತ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕನ್ನು ಸೀಮಿತ ಮಾಡಿಕೊಂಡ ಈ ತಾಲೂಕಿನ ಶಾಸನಗಳ ಮತ್ತು ದೇವಾಲಯಗಳ ಅಧ್ಯಯನ ಇದಾಗಿದೆ.

ಐತಿಹಾಸಿಕ ಮಹತ್ವತೆ ಹೊಂದಿರುವ ಚಿಂಚೋಳಿ, ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ತಾಲೂಕು ಕೇಂದ್ರವಾಗಿದೆ. ವನಸಿರಿ, ನದಿ, ಕೆರೆಗಳು, ಜಲಪಾತ, ಖನಿಜಸಂಪತ್ತಿನಿಂದ ಆವೃತವಾದ ಪ್ರದೇಶವೇ ಚಿಂಚೋಳಿ. ಗುಲ್ಬರ್ಗಾದಿಂದ ಈಶಾನ್ಯಕ್ಕೆ ೮೫ ಕಿ.ಮೀ. ದೂರದಲ್ಲಿ ಚಿಂಚೋಳಿ ಇದೆ. ಈ ಪ್ರದೇಶವು ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು, ಬಹುಮನಿಯರು ಮತ್ತು ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತೆನ್ನುವುದಕ್ಕೆ ಇಲ್ಲಿ ದೊರೆಯುವ ಕುರುಹುಗಳು ಸಾಕ್ಷಿಗಳಾಗಿವೆ.

೧.೧. ಉದ್ದೇಶ :

ಚಿಂಚೋಳಿ ತಾಲೂಕಿನಲ್ಲಿ ಬರುವ ಶಾಸನಗಳು, ದೇವಾಲಯಗಳು ಸುಮಾರು ಎಂಟನೆ ಶತಮಾನದಿಂದ ಹದಿನೆಂಟನೆ ಶತಮಾನದವರೆಗಿನವುಗಳಾಗಿವೆ. ಇಲ್ಲಿರುವ ಶಾಸನಗಳಾಗಲಿ,

ದೇವಾಲಯಗಳಾಗಲಿ, ಐತಿಹಾಸಿಕವಾಗಿ ವ್ಯವಸ್ಥಿತವಾದ ಹೆಚ್ಚಿನ ಅಧ್ಯಯನವಾಗಿಲ್ಲ. ಚಿಂಚೋಳಿ ತಾಲೂಕನ್ನು ಸೀಮಿತ ಮಾಡಿಕೊಂಡು ವ್ಯವಸ್ಥಿತ ಅಧ್ಯಯನ ಮಾಡುವುದೇ ಇದರ ಉದ್ದೇಶ.

೧.೨. ಪೂರ್ವಾಧ್ಯಯಗಳ ಸಮೀಕ್ಷೆ :

ಆಕರಗ್ರಂಥಗಳಾದ ಕರ್ನಾಟಕ ಸರ್ಕಾರ ರಾಜ್ಯ ಗೆಜೆಟಿಯರ್ (ಕಲ್ಬುರ್ಗಿ ಜಿಲ್ಲೆ) ಮುಖ್ಯ ಸಂಪಾದಕರು–ಎಂ.ಬಿ. ಪಾಟೀಲ್ (೧೯೯೭), ಇದರಲ್ಲಿ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಭೌಗೋಳಿಕ, ಶಾಸನಗಳ ಮತ್ತು ದೇವಾಲಯಗಳ ವಿವರಣೆಯಿದೆ. ಕಲ್ಬುರ್ಗಿ ಜಿಲ್ಲೆಯ ಶಾಸನಗಳು–ಹನುಮಾಕ್ಷಿ ಗೋಗಿ (೧೯೯೬), ಈ ಕೃತಿಯಲ್ಲಿ ದೇಗಲ್ಮಡಿ, ಶಿರೋಳ್ಳಿ, ಮೋಘಾ ಮತ್ತು ನಿಡಗುಂದದ ಶಾಸನ ಪಾಠಗಳಿವೆ. ಕರ್ನಾಟಕದ ಪುರಾತತ್ವ ನೆಲೆಗಳು–ಡಾ.ಕೆ.ಬಿ. ಶಿವತಾರಕ್(೨೦೦೧) ಇದು ಚಿಂಚೋಳಿ ತಾಲೂಕಿನ ಪುರಾತತ್ವ ನೆಲೆಗಳ ವಿವರಣೆಯನ್ನೊಳಗೊಂಡಿದೆ. ಸಿರಿಗಂಧ ಸ್ಮರಣ ಸಂಚಿಕೆ–ಸಂಪಾದಕರು ಪ್ರೊ. ಶ್ರೀಶೈಲ ನಾಗರಾಳ (೨೦೦೩), ಚಿಂಚೋಳಿ ತಾಲೂಕಿನ ಸ್ಥಳನಾಮ ಮತ್ತು ಭೌಗೋಳಿಕತೆ, ಆರ್ಥಿಕತೆಯ ವಿವರಣೆಯಿದೆ. ಹಸಿರು–ಹಸಿವು–ಸಂಪಾದಕರು ಪ್ರೊ.ವಿಜಯಕುಮಾರ ಪರುತೆ (೨೦೦೭), ಇದರಲ್ಲಿ ಐತಿಹಾಸಿಕ ಮತ್ತು ದೇವಾಲಯಗಳ ಕುರಿತಾಗಿದೆ. ಚಿಂಚೋಳಿ ತಾಲೂಕಿನ ದರ್ಶನ–ಎ.ಕೆ. ರಾಮೇಶ್ವರ (೧೯೮೬), ಇದು ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಿವರವಿದೆ. ಗುಲ್ಬರ್ಗಾ ಜಿಲ್ಲೆಯ ದರ್ಶನ –ಟಿ.ಎಂ.ಭಾಸ್ಕರ್, ೨೦೦೫, ಇದರಲ್ಲಿ ಗುಲ್ಬರ್ಗಾ ಜಿಲ್ಲೆಯ ಭೌಗೋಳಿಕ, ಸಾಮಾಜಿಕ ಮತ್ತು ರಾಜಕೀಯದ ಮಾಹಿತಿಯಿದೆ. ಚಿಂಚೋಳಿ ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕರಾದ ಶ್ರೀ ಶೇರಿಕಾರ್ ಡಿ. ಅವರ ಬಿಡಿ ಲೇಖನಗಳು–೨೦೦೭, ೨೦೦೮, ೨೦೦೯, ೨೦೧೦ ಮತ್ತು ೨೦೧೧ ಇವುಗಳಲ್ಲಿ ಚಿಂಚೋಳಿ ತಾಲೂಕಿನ ಬೇಡಕ್‌ಪಳ್ಳಿ, ರುಮ್ಮನಗೂಡು ಮತ್ತಿತರೆ ಐತಿಹಾಸಿಕ ಸ್ಥಳಗಳ ಮಾಹಿತಿಯನ್ನೊಳಗೊಂಡಿವೆ. ಕರ್ನಾಟಕದ ವೀರಗಲ್ಲುಗಳು–ಡಾ.ಆರ್.ಶೇಷಶಾಸ್ತ್ರಿ ಇದರಲ್ಲಿ ವೀರಗಲ್ಲುಗಳ ಕುರಿತು ಮಾಹಿತಿಯಿದೆ. ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ–ಡಾ.ಆರ್.ಗೋಪಾಲ್, ೨೦೦೭ ಇದರಿಂದ ಚಿಂಚೋಳಿ ತಾಲೂಕಿನ ನಿಡಗುಂದ, ಮಿರ್‍ಯಾಣ, ಸುಲೇಪೇಟೆ, ಕೇಶ್ವಾರದ ದೇವಾಲಯಗಳ ಮಾಹಿತಿ ದೊರೆಯುತ್ತದೆ.

ಹಲವು ಗ್ರಂಥಗಳು, ಕೃತಿಗಳು, ಲೇಖನಗಳು, ಕ್ಷೇತ್ರಕಾರ್ಯದ ಮತ್ತು ಸಂದರ್ಶನದ ಮೂಲಕ ಚಿಂಚೋಳಿ ತಾಲೂಕಿನ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೧.೩. ಸ್ವರೂಪ :

'ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು' ಇದರ ಸ್ವರೂಪ ಬಿಂಬಿಸುವ ಅಂಶಗಳು ಹೀಗಿವೆ: ಈ ಅಧ್ಯಯನವು ಲಭ್ಯ ಶಾಸನಗಳನ್ನು, ದೇವಾಲಯಗಳ

ಕ್ಷೇತ್ರಕಾರ್ಯ ಸಮೀಕ್ಷೆ ಮಾಡಿ ಇತರೆ ಆಕರಗಳಿಂದ ಸಂಗ್ರಹಿತ ಮಾಹಿತಿಯನ್ನು ಅಭ್ಯಸಿಸಿ ಪರಿಶೀಲಿಸುವುದರ ಮೂಲಕ, ನಿರ್ದಿಷ್ಟಪಡಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸುವ ಸ್ವರೂಪದ್ದಾಗಿದೆ.

ಅನೇಕ ರಾಜಮನೆತನಗಳು ಮತ್ತು ಅವರ ಸಾಮಂತರು, ಅಧಿಕಾರಿಗಳು ಆಳ್ವಿಕೆ ಮಾಡಿ ಈ ಪರಿಸರದ ಐತಿಹಾಸಿಕ ಮತ್ತು ಧಾರ್ಮಿಕ ಪ್ರಗತಿಗೆ ಕಾರಣೀಭೂತರಾಗಿದ್ದಾರೆ. ಐತಿಹಾಸಿಕ ಮಹತ್ವ, ಶಿಲ್ಪಕಲೆ, ವೇಷಭೂಷಣ, ಆಭರಣಗಳು, ಅಲಂಕಾರದ ಬಗ್ಗೆ ಮತ್ತು ಅಲ್ಲಿನ ಜನಜೀವನದ ಮೇಲೆ ಸೂಕ್ಷ್ಮವಾಗಿ ಬೆಳಕು ಚೆಲ್ಲುವ ಮೂರ್ತಿಶಿಲ್ಪಗಳು ಮತ್ತು ವೀರಗಲ್ಲುಗಳ ಸಾಂಸ್ಕೃತಿಕ ಅಧ್ಯಯನ ಪ್ರತಿಬಿಂಬಿಸುವ ಸ್ವರೂಪ ಹೊಂದಿದೆ. ಹೀಗೆ ಐತಿಹಾಸಿಕ ಹಿನ್ನೆಲೆ, ರಾಜಕೀಯ ಸ್ಥಿತಿಗತಿ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಕಲೆ, ವಾಸ್ತುಶಿಲ್ಪ, ಶಿಲ್ಪಕಲೆಗಳ ಕುರಿತು ವಿವರಿಸುವುದು ಇಲ್ಲಿನ ಅಧ್ಯಯನದ ಸ್ವರೂಪಗಳಾಗಿವೆ.

೧.೪. ವ್ಯಾಪ್ತಿ :

ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ವಿಭಾಗಗಳಲ್ಲೊಂದಾದ ಗುಲ್ಬರ್ಗಾ ವಿಭಾಗದ, ಚಿಂಚೋಳಿ ತಾಲೂಕಿನ ಅಧ್ಯಯನ ವ್ಯಾಪ್ತಿಯನ್ನು ಈ ರೀತಿ ನಿಶ್ಚಿತಗೊಳಿಸಲ್ಪಟ್ಟಿದೆ. ಚಿಂಚೋಳಿ ಕೇಂದ್ರವಾಗಿರಿಸಿಕೊಳ್ಳಲಾಗಿದೆ. ಅದರ ಪೂರ್ವಕ್ಕೆ ಐನಾಪೂರ, ಪಶ್ಚಿಮಕ್ಕೆ ರಟ್ಕಲ್, ಉತ್ತರಕ್ಕೆ ತುಮಕುಂಟಾ, ದಕ್ಷಿಣಕ್ಕೆ ಶಿರೋಳ್ಳಿ ಪ್ರದೇಶಗಳನ್ನು ಮತ್ತು ಈಶಾನ್ಯಕ್ಕೆ ಐನೋಳ್ಳಿ, ಆಗ್ನೇಯಕ್ಕೆ ಮಿರ್ಯಾಣ, ನೈರುತ್ಯಕ್ಕೆ ಗಡಿಕೇಶ್ವಾರ, ವಾಯುವ್ಯಕ್ಕೆ ಚೇಂಗಟಾ ಪ್ರದೇಶಕ್ಕೆ ಸೀಮಿತಗೊಳಿಸಲಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಪ್ರತಿಯೊಂದು ಪ್ರಾಚೀನ ದೇವಾಲಯದ ವಾಸ್ತುರಚನೆಯನ್ನು ಅಧ್ಯಯನ ಮಾಡಿ, ಶೈಲಿಗಳನ್ನು ಗುರುತಿಸಿ ಅವುಗಳ ಗುಣಲಕ್ಷಣಗಳನ್ನು ಕಂಡುಕೊಳ್ಳಲಾಗುವುದು. ಅವುಗಳ ವಾಸ್ತು ವಿವರಣೆಗಳನ್ನು ಚರ್ಚಿಸುವಾಗ ಮೊದಲು ತಿರಸ್ಮುಖ ವಾಸ್ತು ರಚನೆಯನ್ನು (ಗರ್ಭಗೃಹದಿಂದ ಮುಖಮಂಟಪದವರೆಗಿನ ಒಳಭಾಗ), ನಂತರ ಊರ್ಧ್ವಮುಖ ವಾಸ್ತು ರಚನೆಯನ್ನು (ಅಧಿಷ್ಠಾನದಿಂದ ಕಳಸದವರೆಗಿನ ಹೊರಭಾಗ), ಪರಿಶೀಲಿಸಿ ಅವುಗಳಲ್ಲಿರುವ ವಿವಿಧ ಉಪಾಂಗಗಳ ವಾಸ್ತು ಲಕ್ಷಣಗಳನ್ನು ಗುರ್ತಿಸಲಾಗಿದೆ. ದೇವಾಲಯಗಳಲ್ಲಿ ಮತ್ತು ಅವುಗಳ ಪರಿಸರದಲ್ಲಿ ಕಂಡುಬಂದ ಶಿಲ್ಪಗಳನ್ನು ಮಾಧ್ಯಮ, ಶೈಲಿ, ಕಾಲಮಾನ ಮತ್ತು ಪ್ರತಿಮಾ ಲಕ್ಷಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಉಬ್ಬುಶಿಲ್ಪಗಳನ್ನು, ಶಾಸನಗಳನ್ನು ಗಣನೆಗೆ ತೆಗೆದುಕೊಂಡು ವಿಷಯ ನಿರೂಪಣೆಗಾಗಿ ಅವುಗಳ ಉಪಯುಕ್ತತೆಯನ್ನು ವಿಂಗಡಿಸಿ ಅಧ್ಯಯನ ಮಾಡಲಾಗುವುದು.

೧.೫. ವಿಧಾನ :

ಪ್ರಸ್ತುತ ಅಧ್ಯಯನವು ಕ್ಷೇತ್ರಕಾರ್ಯ ಆಧಾರಿತವಾಗಿದೆ. ಈ ಪ್ರದೇಶದ ಇತಿಹಾಸ ರಚಿಸುವಾಗ, ಇಲ್ಲಿರುವ ಪ್ರಾಚ್ಯಾವಶೇಷಗಳು ಮತ್ತು ಕೃತಿಗಳು ಪೂರಕ ಅಂಶಗಳಾಗಿವೆ. ಈಗಾಗಲೇ ಪ್ರಕಟವಾಗಿರುವ, ಬಿಡಿ ಲೇಖನಗಳು, ಗೆಜೆಟಿಯರ್, ಕೃತಿಗಳನ್ನು ಅಭ್ಯಸಿಸಿ ಅವುಗಳಲ್ಲಿನ ಮಾಹಿತಿಯನ್ನು ಸಂಗ್ರಹಿಸಿ ಪರಿಶೀಲಿಸಿ ದಾಖಲಿಸಲಾಗಿದೆ.

ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿನ ಪ್ರಾಚೀನ–ಪ್ರಾಗೈತಿಹಾಸಿಕ ನೆಲೆ, ದೇವಾಲಯಗಳು, ಮಂಟಪ, ಮೂರ್ತಿಶಿಲ್ಪಗಳು, ಶಾಸನಗಳು ಮೊದಲಾದ ಅವಶೇಷಗಳ ಸಂಪೂರ್ಣವಾದ ವಿವರ ದಾಖಲಾತಿಯೊಂದಿಗೆ, ಛಾಯಾಚಿತ್ರಗಳನ್ನು ಮತ್ತು ನಕ್ಷೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಲಾಗಿದೆ. ಸಂದರ್ಶನದ ಮೂಲಕ ಸ್ಥಳೀಯ ವಿಷಯಗಳ ಪ್ರಮುಖ ಮಾಹಿತಿ ಸಂಗ್ರಹಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳನ್ನು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಚಿಂಚೋಳಿ ಭೌಗೋಳಿಕ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ಐತಿಹಾಸಿಕ ಹಿನ್ನೆಲೆ, ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತು ಚರ್ಚಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಶಾಸನಗಳ ಅರ್ಥ ಮತ್ತು ಮಹತ್ವ, ಶಾಸನಗಳ ವೈವಿಧ್ಯತೆ ಮತ್ತು ಚಿಂಚೋಳಿಯ ತಾಲೂಕಿನ ಶಾಸನಗಳ ಸಾರಾಂಶವನ್ನು ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ದೇವಾಲಯಗಳ ವಾಸ್ತು, ಶಿಲ್ಪ, ಶೈಲಿ, ಕಲೆ ಕುರಿತು ಶೈವ, ವೈಷ್ಣವ, ಜೈನ ಮತ್ತು ಶಾಕ್ತ ದೇವಾಲಯಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ಐದನೆಯ ಅಧ್ಯಾಯದಲ್ಲಿ ಮೂರ್ತಿಶಿಲ್ಪಗಳ ವೈಶಿಷ್ಟ್ಯತೆಯ ಕುರಿತಿದೆ. ಆರನೆಯ ಅಧ್ಯಾಯ ಸಮಾರೋಪ/ಉಪಸಂಹಾರವಾಗಿದ್ದು ಇಲ್ಲಿ ಪ್ರಸ್ತುತ ಅಧ್ಯಯನದ ಒಟ್ಟಾರೆ ಫಲಿತಗಳನ್ನು ಕ್ರೂಢಿಕರಿಸಲಾಗಿದೆ. ಅನುಬಂಧದಲ್ಲಿ ಗ್ರಂಥಋಣ, ಛಾಯಾಚಿತ್ರ ಮತ್ತು ನಕಾಶೆಗಳನ್ನು ಅಳವಡಿಸಲಾಗಿದೆ.

♦ ♦ ♦

ಅಧ್ಯಾಯ ೨

ಭೌಗೋಳಿಕ ಅಧ್ಯಯನ ಮತ್ತು ಐತಿಹಾಸಿಕ ಹಿನ್ನೆಲೆ

ಅಧ್ಯಾಯ ೨

ಭೌಗೋಳಿಕ ಅಧ್ಯಯನ ಮತ್ತು ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕ ಪ್ರಭಾವ

ಭೌಗೋಳಿಕವಾಗಿ ಎತ್ತರವಾದ ದಖ್ಖನ್ ಪ್ರಸ್ಥಭೂಮಿಯ ಭಾಗವಾಗಿರುವ ಈ ಪ್ರದೇಶ ಫಲವತ್ತಾದ ಎರೆಮಣ್ಣನ್ನು ಹೊಂದಿದೆ (ಕ.ಸ.ಗೆ.ಕ.ಜಿ.,೧೯೯೭,ಪು.೬೯೪). ಚಿಂಚೋಳಿ ತಾಲೂಕು ಗುಲ್ಬರ್ಗಾ ಜಿಲ್ಲೆಯ ಈಶಾನ್ಯ ಭಾಗದಲ್ಲಿದೆ. ಒಟ್ಟು ೧೭೫ ಗ್ರಾಮಗಳನ್ನು ಒಳಗೊಂಡಿದೆ. ಪೂರ್ವಕ್ಕೆ ಆಂಧ್ರ ಪ್ರದೇಶ (ಮೆಡಕ್), ಪಶ್ಚಿಮಕ್ಕೆ ಚಿತಾಪೂರ ತಾಲೂಕು, ಉತ್ತರಕ್ಕೆ ಬೀದರ್ ಜಿಲ್ಲೆ, ದಕ್ಷಿಣಕ್ಕೆ ಸೇಡಂ ತಾಲೂಕು, ವಾಯುವ್ಯಕ್ಕೆ ಗುಲ್ಬರ್ಗಾ ತಾಲೂಕು ಇದರ ನೆರೆಯ ಪ್ರದೇಶಗಳಾಗಿವೆ.

ಗುಡ್ಡಗಾಡು ಮತ್ತು ಅರಣ್ಯ ಪ್ರದೇಶದಿಂದ ಕೂಡಿರುವ ಈ ತಾಲೂಕು ಸಮುದ್ರ ಮಟ್ಟಕ್ಕಿಂತ ೪೫೩.೮೫ ಮೀ. ಎತ್ತರದಲ್ಲಿದೆ (ಚಿ.ತಾ.ದ. ೧೯೮೬, ಪು.೦೩). ತಾಲೂಕು ೭೭°ಯಿಂದ ೭೯° ರೇಖಾಂಶ ಹಾಗೂ ೧೮°೧೫° ಯಿಂದ ೧೮°೪೫° ಅಕ್ಷಾಂಶದ ನಡುವೆ ವಿಸ್ತರಿಸಿದೆ. ಚಿಂಚೋಳಿ ತಾಲೂಕು ಸಮಶೀತೋಷ್ಣವಲಯವಾಗಿದ್ದು ಇಲ್ಲಿಯ ಕನಿಷ್ಠ ಸರಾಸರಿ ಉಷ್ಣಾಂಶ ೨೪° ಸೆ. ಮತ್ತು ಗರಿಷ್ಠ ಸರಾಸರಿ ಉಷ್ಣಾಂಶ ೪೯° ಸೆ. ಆಗಿರುತ್ತದೆ. ತಾಲೂಕು ಸರಾಸರಿ ಮಳೆ ಸು. ೧೦೨೨ ಮಿ.ಮೀ. ಚಿಂಚೋಳಿ ತಾಲೂಕಿನಲ್ಲಿ ಬಿಸಿಲು ಮತ್ತು ಉಷ್ಣದಿಂದ ಕೂಡಿರುವ ಹವಾಗುಣವನ್ನು ವರ್ಷವಿಡಿ ಕಾಣಬಹುದು.

ತಾಲೂಕಿನ ಭೌಗೋಳಿಕ ವೈಶಿಷ್ಟ್ಯತೆ : ಸುಣ್ಣದ ಕಲ್ಲು, ಸಾಬೂನಿನ ಕಲ್ಲು, ಸವಳು ಮಣ್ಣು, ಉಪ್ಪಿನಾಂಶದ ಮಣ್ಣು, ಗ್ರ್ಯಾನೇಟ್ ಕಲ್ಲು ಇತ್ಯಾದಿ ಯತೇಚ್ಚವಾಗಿ ಸಿಗುತ್ತದೆ. ಜೇಡಿಮಣ್ಣು, ಕೆಂಪು, ಹಳದಿ, ಬಿಳಿ, ನೀಲಿಬಣ್ಣದ ಉತ್ತಮ ರೀತಿಯ ಹಾಸುಗಲ್ಲುಗಳು ದೊರಕುತ್ತವೆ. ಸೇಲು ಶಿಲೆಗಳು, ಕೆಮ್ಮಣ್ಣು ಸಹ ದೊರಕುತ್ತಿದ್ದು, ನೆರೆಯ ರಾಜ್ಯಗಳಿಗೆ ಕಚ್ಚಾವಸ್ತುವಿನ ರೂಪದಲ್ಲಿ ರಫ್ತಾಗುತ್ತವೆ (ಕ.ಜಿ.ಶಾ.೧೯೯೬,ಪು.೧೬-೧೭).

೨.೨. ಪ್ರಾಗೈತಿಹಾಸಿಕತೆ :

ಚಿಂಚೋಳಿ ತಾಲೂಕಿನ ಗೊಟ್ಟಂಗೊಟ್ಟಿ (ವಿರಾಟನಗರ), ಇಲ್ಲಿ ಇತಿಹಾಸ ಆರಂಭಯುಗದ ಕೆಂಪು, ಕಪ್ಪು-ಕೆಂಪು, ಕೆಂಪು ಲೇಪನದಡಿ ಬಿಳಿ ವರ್ಣದ ಚಿತ್ರಿತ ಮಡಕೆ ಭಾಗ ದೊರೆತಿದೆ. ನಾಗಾಯಿದಲಾಯಿಯಲ್ಲಿ ಬೂದಿದಿಬ್ಬಗಳು ದೊರಕಿವೆ. ಇದು ಬೃಹತ್ ಶಿಲಾಯುಗದ ಸಂಸ್ಕೃತಿಯ ಗೋರಿನೆಲೆ ಮತ್ತು ಕಲ್ಮನೆ ಮಾದರಿಗಳು ಹೊಂದಿದೆ. ಈ ಬೂದಿದಿಬ್ಬಗಳ ನಿರ್ದಿಷ್ಟ ಕಾಲಮಾನ ತಿಳಿಯದು. ಭೋಮಸಪುರವು ಶಿಲಾ ಮತ್ತು ತಾಮ್ರಯುಗದ ಸಂಸ್ಕೃತಿಯ ನೆಲೆ ಹೊಂದಿದೆ. ಮಂಬಾಪುರ ಬೃಹತ್ ಶಿಲಾಯುಗದ ಗೋರಿನೆಲೆ ಮತ್ತು ಶಿಲಾವೃತ್ತಗಳು ಕಂಡುಬಂದಿವೆ. ಮುಕ್ತಾವು ಇತಿಹಾಸ ಆರಂಭ ಯುಗದ ನೆಲೆಯಾಗಿದೆ. ಇಲ್ಲಿ ಕೆಂಪು, ಕಪ್ಪು-ಕೆಂಪು, ಕೆಂಪು ಲೇಪನದಡಿ ಬಿಳಿವರ್ಣದ ಚಿತ್ರಿತ ಮಡಕೆ ಭಾಗ ದೊರೆತಿದೆ. ಮೋರನಹಾಳವು ಬೃಹತ್ ಶಿಲಾಯುಗದ ನೆಲೆಯಾಗಿದೆ. ಸುಲೇಪೇಟೆ ಸಹ ಪ್ರಾಗೈತಿಹಾಸಿಕತೆ ಹೊಂದಿದೆ ಎಂದು ತಿಳಿದುಬರುತ್ತದೆ (ಕ.ಪು.ನೆ.೨೦೦೧, ಪು.೨೯).

೨.೩. ಐತಿಹಾಸಿಕ ಹಿನ್ನೆಲೆ :

ಸುಮಾರು ೧೦-೧೧ನೇ ಶತಮಾನದಲ್ಲಿ ಮನ್ನೆದಡಿ ಸಾಸಿರನಾಡು (ಮನ್ನೆದಡಿ-೧೦೦೦) ಎಂದು ಆಳಲ್ಪಡುತ್ತಿದ್ದ ಈ ತಾಲೂಕು ಕಾಳಗಿಯನ್ನು ರಾಜಧಾನಿಯನ್ನಾಗಿ ಹೊಂದಿತ್ತು. ದಟ್ಟವಾದ ಅರಣ್ಯ ಪ್ರದೇಶ. ಗುಡ್ಡಗಾಡಿನಿಂದ ಕೂಡಿರುವ ಈ ಪ್ರದೇಶದಲ್ಲಿ ಅಲೆಮಾರಿಗಳಾದ ಚಂಚರು, ಗಡ್ಡೆ-ಗೆಣಸು, ಅಗೆದು, ಆಯ್ದು, ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು. ಇವರು ಚಂಚರು ಗಡ್ಡೆಯರೆಂದೇ ಹೆಸರಾಗಿದ್ದರು (ಸಿರಿಗಂಧ,೨೦೦೩,ಪು.೫೭). ಚಂಚರುಗಡ್ಡೆ ಹಳ್ಳಿ ಎನ್ನುವುದು ಗಡ್ಡೆ ಲೋಪವಾಗಿ ಚಂಚರ ಹಳ್ಳಿ ಮುಂದೆ, ಚಂಚವಳ್ಳಿಯಾಯಿತು. ಚಂಚವಳ್ಳಿ – ಚಿಂಚವಳ್ಳಿ – ಚಿಂಚೋಳಿಯಾಯಿತೆನ್ನಬಹುದು. ಆದರೆ ಈ ಕುರಿತು ಶಾಸನ ಮಾಹಿತಿ ನಮಗೆ ಈವರೆಗೆ ದೊರೆತಿಲ್ಲ.

ಅ. ರಾಜಕೀಯ ಸ್ಥಿತಿಗತಿ :

ಈ ತಾಲೂಕಿನ ಪ್ರದೇಶಗಳನ್ನು ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಬಹುಮನಿ ಸುಲ್ತಾನರು ಮತ್ತು ನಿಜಾಮರು, ಪೇಶ್ವೆಗಳು ಆಳಿದ್ದರು. ಪ್ರಾಚೀನ ಮನ್ನೆದಡಿ ಸಾಸಿರ ಎಂದೇ ಹೆಸರಾಗಿದ್ದ ಈ ಭಾಗ ಅಧಿಕವಾಗಿ ರಾಜಮನೆತನದವರ, ಮಾಂಡಳಿಕರ ಆಳ್ವಿಕೆಗೆ ಒಳಪಟ್ಟಿತ್ತು. ಪ್ರಾಚೀನ ಕಾಲದಲ್ಲಿ ವಿವಿಧ ರಾಜ ಮನೆತನದವರು ಆಳಿದ ಕುರುಹುಗಳನ್ನಾಧರಿಸಿ ಈ ಕೆಳಕಂಡಂತೆ ರಾಜಕೀಯ ಸ್ಥಿತಿಗತಿ ವಿವರಿಸಲಾಗಿದೆ.

ಶಾತವಾಹನರು : ಗೊಟ್ಟಂಗೊಟ್ಟಿಯಲ್ಲಿ ದೊರೆತ ಶಾತವಾಹನರ ಕಾಲದ ಇಟ್ಟಿಗೆ ಗೋಡೆಯ ಅವಶೇಷಗಳು. ಇಲ್ಲಿ ಬಳಸಿರುವ ಇಟ್ಟಿಗೆ ಜಂಬಿಟ್ಟಿಗೆಯದಾಗಿದ್ದು, ಸುಟ್ಟ ಇಟ್ಟಿಗೆಯ ಪ್ರಮಾಣದಲ್ಲೇ ಗಣಿಯಿಂದ ಕತ್ತರಿಸಿ ನಿರ್ಮಾಣಕ್ಕೆ ಬಳಸಲ್ಪಟ್ಟಿವೆ (ಗು.ಜಿ.ಇ. ಮತ್ತು ಪು.,೨೦೦೭, ಪು.೪೯). ಈ ಆಧಾರದ ಮೇಲೆ ಈ ಭಾಗವು ಶಾತವಾಹನರ ಕಾಲದಲ್ಲಿ ಆಳ್ವಿಕೆಗೆ ಒಳಪಟ್ಟಿತೆನ್ನಬಹುದು.

ಬಾದಾಮಿ ಚಾಲುಕ್ಯರು : ಕೇಶಾವರ್ (ಗಡಿ)ಯ ಜೈನ ಬಸದಿಯಲ್ಲಿನ ಗರ್ಭಗೃಹದಲ್ಲಿನ ಜೈನ ಶಿಲ್ಪ ಮತ್ತು ಅಲ್ಲಿಯ ಸುತ್ತಮುತ್ತಲಿನ ಐತಿಹಾಸಿಕ ಕುರುಹುಗಳು ಕ್ರಿ.ಶ. ೭ನೇ ಶತಮಾನಕ್ಕೆ ಸೇರಿದ್ದು ಆಗಿವೆ. ಅಲ್ಲದೆ ಈ ಬಸದಿ ವಾಸ್ತುಶೈಲಿ, ಬಾದಾಮಿ ಚಾಲುಕ್ಯರ ಕಾಲದ್ದಾಗಿದೆ. ಇಲ್ಲಿಯ ಅನೇಕ ಐತಿಹಾಸಿಕ ಕುರುಹುಗಳು ಬಾದಾಮಿ ಚಾಲುಕ್ಯರ ಶೈಲಿಯಲ್ಲಿವೆ. ಉದಾ. ಕಂಬದ ವಿಭಾಗಗಳು, ಯಕ್ಷ ಶಿಲ್ಪ (ಗು.ಜಿ.ಇ. ಮತ್ತು ಪು., ೨೦೦೭, ಪು.೩೦೭). ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು ಎನ್ನುವುದಕ್ಕೆ ಇವೇ ಸಾಕ್ಷಿಗಳಾಗಿವೆ.

ರಾಷ್ಟ್ರಕೂಟರು : ಮುಮ್ಮಡಿ ಗೋವಿಂದ ತನ್ನ ಎರಡನೆಯ ರಾಜಧಾನಿಯಾಗಿ ಸೇಡಂ ತಾಲೂಕಿನ ಮಾನ್ಯಖೇಟವನ್ನು ಆಳ್ವಿಕೆಗೊಳಪಡಿಸಿದನು. ನಂತರ ಅಮೋಘವರ್ಷನು ಸು. ಕ್ರಿ.ಶ. ೮೧೪ರಲ್ಲಿ ಮಾನ್ಯಖೇಡವನ್ನು ರಾಜಧಾನಿ ನಗರವನ್ನಾಗಿ ನಿರ್ಮಿಸಿಕೊಂಡು ಆಳ್ವಿಕೆ ಮಾಡಿದನು. ಇಮ್ಮಡಿ ಕೃಷ್ಣ, ಮುಮ್ಮಡಿ ಇಂದ್ರ, ಮುಮ್ಮಡಿ ಕೃಷ್ಣ ಮುಂತಾದವರ ಕಾಲದಲ್ಲಿ ಮನ್ನೆದಡಿ ಸಾಸಿರ ಆಳಿದ್ದಕ್ಕೆ ಹಲವು ಕುರುಹು ದೊರೆತಿವೆ (ಗು.ಜಿ.ಇ.ಮತ್ತು ಪು.,೨೦೦೭,ಪು.೩೪೫).

ನಿಡಗುಂದದಲ್ಲಿನ ನವಕೋಟಿ ನಾರಾಯಣನ ದೇವಾಲಯದಲ್ಲಿನ ರಾಷ್ಟ್ರಕೂಟರ ದೊರೆ ಆಕಾಲವರ್ಷ ಕ್ರಿ.ಶ.೯೩೯ರಲ್ಲಿ ಆಳಿದ ಎಂಬ ಅಪೂರ್ಣ ಶಾಸನ ದೊರೆಕಿದೆ. ಅಲ್ಲದೆ ಸುಲೇಪೇಟೆ, ಕೇಶಾವರ್ (ಗಡಿ) ಮತ್ತು ಮಿರ್ಯಾಣದ ದೇವಾಲಯಗಳು ಮತ್ತು ಐತಿಹಾಸಿಕ ಹಲವು ಕುರುಹುಗಳು ಈ ಕಾಲದಲ್ಲಿನವುಗಳಾಗಿವೆ. ಅಲ್ಲದೆ ಕೇಶಾವರ್ ಸಿದ್ದಪ್ಪನಗುಡಿ ಶಾಸನ ಇವುಗಳನ್ನಾಧರಿಸಿ ರಾಷ್ಟ್ರಕೂಟರ ಕಾಲದಲ್ಲಿ ಈ ತಾಲೂಕು ಪ್ರಮುಖ ಆಡಳಿತ ವಿಭಾಗವಾಗಿತ್ತೆಂದು ತಿಳಿದುಬರುತ್ತದೆ.

ಕಲ್ಯಾಣ ಚಾಲುಕ್ಯರು : ಕ್ರಿ.ಶ. ೯೭೩ರಲ್ಲಿ ಇಮ್ಮಡಿ ತೈಲಪ ರಾಷ್ಟ್ರಕೂಟರ ಕೊನೆಯ ದೊರೆ ಕರ್ಕನ ಆಳ್ವಿಕೆ ಕೊನೆಗಾಣಿಸಿ ಸ್ವತಂತ್ರ ರಾಜ್ಯ ಸ್ಥಾಪಿಸಿದನು. ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆ ಕಾಲದಲ್ಲಿ ಔನತ್ಯಕ್ಕೆ ಹೋಗಿದ್ದು, ಇಲ್ಲಿನ ಶಾಸನಗಳು ಮತ್ತು ವಾಸ್ತುಶಿಲ್ಪ, ಕಲೆ, ಐತಿಹಾಸಿಕ ಕುರುಹುಗಳಿಂದ ತಿಳಿಯಬಹುದು. ಈತನ ಆಳ್ವಿಕೆ ಕಾಲ ಕ್ರಿ.ಶ.೧೦೭೬–೧೧೨೬ ಆಗಿದೆ.

ಸುಲೇಪೇಟೆಯ ಈಶ್ವರಲಿಂಗ ದೇವಾಲಯದ ಶಾಸನಗಳು ೧ನೇ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಬಗ್ಗೆ ಪ್ರಸ್ತಾಪಿಸುತ್ತವೆ. ದೇಗಲ್ಮಡಿಯ ಕ್ರಿ.ಶ.೧೧೦೦ರ ಶಾಸನವು ಆರನೆಯ ವಿಕ್ರಮಾದಿತ್ಯನ ಬಿರುದು, ಆಳ್ವಿಕೆ ಬಗ್ಗೆ ವಿವರಿಸುತ್ತದೆ. ನಿಡಗುಂದದ ಕಾಳಮ್ಮನ ಗುಡಿ ಶಾಸನ ವಿಷ್ಣುವರ್ಧನ ವೀರ ಪೇರ್ಮಾಡಿಯ ಆಳ್ವಿಕೆಯ ಬಗ್ಗೆ ಸೂಚಿಸುವ ಅಪೂರ್ಣ ಶಾಸನವೊಂದು ದೊರೆತಿದೆ. ಇವುಗಳಲ್ಲದೆ ಈ ಕಾಲದ ದೇವಾಲಯ ವಾಸ್ತುಶಿಲ್ಪ ಶೈಲಿಯ ಔನತ್ಯದಿಂದ ಇವರ ಆಳ್ವಿಕೆ ಹೇಗಿತ್ತು ಎಂಬುದರ ಬಗ್ಗೆ ಮತ್ತು ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆ ತಿಳಿಯಲು ಸಹಾಯಕವಾಗಿವೆ. ಶಿರೋಳ್ಳಿ ಶಾಸನ ಮುಮ್ಮಡಿ ತೈಲಪನ ವಂಶಾವಳಿ, ಕಾಲ ವಿವರಿಸುತ್ತದೆ. ಇದು ಕಲ್ಯಾಣ ಚಾಲುಕ್ಯರ ವಂಶಾವಳಿ ಬಿರುದು ಮತ್ತು ಸಾಧನೆ ಕುರಿತು ತಿಳಿಸುವ ಪ್ರಶಸ್ತಿ ಶಾಸನವು ಆಗಿದೆ. ಮತ್ತು ದಾನಶಾಸನವು ಆಗಿದೆ.

ಕಳಚೂರಿಗಳು : ಕ್ರಿ.ಶ.೧೧೩೮ರಲ್ಲಿ ಮುಮ್ಮಡಿ ತೈಲಪ ತನ್ನ ಮಗನಾದ ನಾಲ್ಕನೆಯ ಸೋಮೇಶ್ವರ ತ್ರಿಭುವನ ಮಲ್ಲನಿಗೆ ರಾಜ್ಯಭಾರ ವಹಿಸಿದನು. ಈತನ ಆಳ್ವಿಕೆಯಲ್ಲಿ ಚಾಲುಕ್ಯ ರಾಜ್ಯ ಕಳಚೂರಿಗಳ ವಶವಾಯಿತು. ೪ನೇ ಸೋಮೇಶ್ವರನು ಇಪ್ಪತ್ತು ವರ್ಷಗಳ ಕಾಲ ರಾಜ್ಯ ಬಿಟ್ಟು ದೂರವಿದ್ದನು. ಕ್ರಿ.ಶ.೧೧೬೧ರಲ್ಲಿ ಮುಮ್ಮಡಿ ತೈಲಪನ ನಿಧನದ ನಂತರ ಸಂಪೂರ್ಣ ಸ್ವತಂತ್ರನಾಗಿ ಸರ್ವಾಧಿಕಾರಿಯಾಗಿ ಆಳ್ವಿಕೆ ನಡೆಸಿದನು. ಈ ಬಗ್ಗೆ ಮಾಹಿತಿಯನ್ನು ನೀಡುವ ಚಿಂಚೋಳಿ ತಾಲೂಕಿನ ಮೋಘಾದಲ್ಲಿ ದೊರೆತ ೧೨ನೇ ಶತಮಾನದ ಶಾಸನ ಕಳಚೂರಿಗಳ ಕಾಲಕ್ಕೆ ಸೇರಿದ್ದು, ೧೧೭೦ರಲ್ಲಿ ಬರೆಯಿಸಲಾಗಿದೆ. ಇದು ಕಳಚೂರಿ ರಾಜ ಅಧಿಕಾರಕ್ಕೆ ಬಂದ ವಿವರ, ಬಿರುದುಗಳ ವಿವರಗಳಿವೆ.

ಮೋಘಾ ಶಾಸನದಲ್ಲಿ ರಾಣಿ ಮೈಲಳದೇವಿ, ದಂಡನಾಯಕ ಮಹಾಮಂಡಲೇಶ್ವರ ಅರಸ ವೀರಗೊಂಕರಸ ಮತ್ತು ಕುಮಾರ ಮಲ್ಲದೇವರಸರು, ಆ ಕಾಲದಲ್ಲಿ ಆಳ್ವಿಕೆ ಮಾಡಿದ ಅಧಿಕಾರಿ ವರ್ಗ ಮತ್ತು ರಾಜಕೀಯ ಪ್ರಭಾವಯುತ ವ್ಯಕ್ತಿಗಳನ್ನು ಈ ಶಾಸನದಲ್ಲಿ ಸೂಚಿಸಿದೆ. ಅಲ್ಲದೆ ಬಾಣ ವಂಶದ ಗೊಂಕವೇವಮ ಮನ್ನೆದಡಿಯ ಒಡೆಯ ಎಂದು ಕಳಚೂರ್ಯರ ಮಹಾಮಂಡಳಾಧಿಕಾರಿ ಯಾಗಿದ್ದ ಎಂಬುದು ತಿಳಿಸುತ್ತದೆ. ಇದೊಂದು ದಾನಶಾಸನದೊಂದಿಗೆ ಪ್ರಶಸ್ತಿ ಶಾಸನವೂ ಆಗಿದೆ. ಇದರಿಂದ ಕ್ರಿ.ಶ.೧೧೭೦ರಲ್ಲಿ ಮನ್ನೆದಡಿಯು ಬಾಣ ವಂಶದ ಗೊಂಕವೇವಮ್ ಎಂಬ ಮಹಾ ಮಂಡಲಾಧಿಕಾರಿಯ ಆಳ್ವಿಕೆಗೊಳಪಟ್ಟಿತ್ತು ಎಂಬುದು ತಿಳಿದುಬರುತ್ತದೆ.

ಬಹಮನಿಯರ ಕಾಲ : ಗುಲ್ಬರ್ಗಾ ಪ್ರಥಮ ರಾಜಧಾನಿಯಾಗಿ ೧೩೪೭ರಲ್ಲಿ ಹಸನ್ ಗಂಗೂವಿನಿಂದ ಈ ರಾಜ್ಯ ಸ್ಥಾಪಿಸಲ್ಪಟ್ಟಿತು. ಬರೀದ್ ಷಾಹಿ ಸುಲ್ತಾನನ ಆಳ್ವಿಕೆಯ ಕಾಲದಲ್ಲಿ

ಬೀದರ್ ಪ್ರದೇಶ ಅವರ ಆಳ್ವಿಕೆಯ ಭಾಗವಾಗಿತ್ತು. ಅದೇ ರೀತಿ ಚಿಂಚೋಳಿ ತಾಲೂಕು ಸಹ ಇವರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದಕ್ಕೆ ಮಸಿದಿ ಇತ್ಯಾದಿ ಐತಿಹಾಸಿಕ ಕುರುಹುಗಳು ಸಾಕ್ಷಿಯಾಗಿವೆ.

ಪೇಶ್ವೆಗಳ ಆಳ್ವಿಕೆ (ಕ್ರಿ.ಶ.೧೭೨೮) : ಮರಾಠರ ಪೇಶ್ವೆಗಳ ಆಳ್ವಿಕೆ ಕಾಲದಲ್ಲಿ ೭೭ ಹಳ್ಳಿಗಳ ಸಂಸ್ಥಾನವಾಗಿತ್ತು. ರಾಜ ಧರ್ಮಪಾಲ ಮತ್ತು ರಾಣಿ ಲಕ್ಷ್ಮೀಬಾಯಿ ವಾಡೆಯರಿದ್ದ ವಿವರ ಇಲ್ಲಿನ ಅರಮನೆ ಮತ್ತು ರಾಣಿಮಹಲ್‌ನಲ್ಲಿನ ಕುರುಹುಗಳಿಂದ ತಿಳಿಯಬಹುದು (ಚಿ.ತಾ.ದ.೧೯೮೬, ಪು.೧೪).

ನಿಜಾಮರು : ಕ್ರಿ.ಶ. ೧೭ ಮತ್ತು ೧೮ನೇ ಶತಮಾನದಲ್ಲಿ ಬಹಲೂಲ್‌ಖಾನ್, ಅಬ್ದುಲ್‌ಖಾನ್, ಮಹ್ಮದ್‌ಖಾನ್ ಇವರು ಚಿಂಚೋಳಿ ಪ್ರದೇಶದಲ್ಲಿ ಕೋಟೆ ದರ್ಗಾ ಕಟ್ಟಿಸಿದರು. ಈ ವಿಷಯ ತಿಳಿಸುವ ಚಿಂಚೋಳಿಯ ದರ್ಗಾ ಬಳಿಯ ಪರ್ಷಿಯನ್ ಶಾಸನಗಳು ಆಧಾರವಾಗಿವೆ (ಕ.ಸ.ಗೆ.ಕ.ಜಿ.೧೯೯೭, ಪು.೭೧೯).

೧. ಆಡಳಿತ ವ್ಯವಸ್ಥೆ :

ಈ ಪ್ರದೇಶದ ಒಟ್ಟಾರೆ ಆಡಳಿತವನ್ನು ಎರಡು ವಿಭಾಗದಲ್ಲಿ ವಿವರಿಸಲಾಗಿದೆ.

* ಪ್ರಾಚೀನ ಕಾಲದ ಆಡಳಿತ (ಹಿಂದೂಗಳ ಆಡಳಿತ)
  (ಕ್ರಿ.ಶ. ೨-೧೩ನೇ ಶತಮಾನ ಅಂತ್ಯದವರೆಗೆ)
* ಮಧ್ಯಕಾಲೀನ ಆಡಳಿತ (ಮುಸಲ್ಮಾನರ ಆಡಳಿತ)
  (ಕ್ರಿ.ಶ.೧೪-೧೮ನೇ ಶತಮಾನ)

*** ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆ :**

ಕ್ರಿ.ಶ. ೨-೧೩ನೇ ಶತಮಾನದ ಅಂತ್ಯದವರೆಗೆ ಹಲವು ರಾಜಮನೆತನಗಳು ಮತ್ತು ಅವರ ಮಾಂಡಳಿಕರು ಆಳಿದ್ದಾರೆ. ಇವರೆಲ್ಲಾ ಬಹುತೇಕವಾಗಿ ಒಂದೇ ರೀತಿಯ ಆಳ್ವಿಕೆ ರೂಢಿಸಿಕೊಂಡಿದ್ದರು. ರಾಜ್ಯದ ಅಗ್ರ ಅಧಿಕಾರಿ ರಾಜನೇ ಆಗಿದ್ದನು. ಅವನ ತರುವಾಯ ಯುವರಾಜ, ಇವರನ್ನು ಬಿಟ್ಟರೆ ಮಹಾಪ್ರಧಾನ, ಬಲಾಧಿಕೃತ, ದಂಡನಾಯಕ, ಮಹಾಪ್ರಚಂಡ ದಂಡನಾಯಕ, ಭಂಡಗಾರಿಕ, ಮನೆವೆರ್ಗಡೆ, ಮಹಾಸಂಧಿವಿಗ್ರಹಿಕ, ಧರ್ಮಾಧಿಕಾರಿ, ತಂತ್ರಪಾಲ ಇವರೆಲ್ಲರ ಉಲ್ಲೇಖ ಗುಲ್ಬರ್ಗಾ ಜಿಲ್ಲೆಯ ಶಾಸನಗಳಲ್ಲಿವೆ (ಕ.ಜಿ.ಶಾ.,೧೯೯೬,ಪು.೨೩).

ರಾಜಕೀಯ ವಿಭಾಗಕ್ಕೆ ಸಂಬಂಧಪಟ್ಟಂತೆ ೧೦೦೦ ಹಳ್ಳಿಗಳಿಂದ ೧೨ ಹಳ್ಳಿಯವರೆಗೆ, ಆಡಳಿತಕ್ಕಾಗಿ, ವಿಭಾಗಗಳನ್ನು ಮಾಡಿರುವುದಕ್ಕೆ ಶಾಸನಗಳಲ್ಲಿ ಆಧಾರಗಳಿವೆ. ಅಂತಹವುಗಳಲ್ಲಿ

ಮನ್ನೆದಡಿನಾಡು-೧೦೦೦. ಇದರ ರಾಜಧಾನಿ ಕಾಳುಗೆ (ಕಾಳಗಿ)ಯಾಗಿತ್ತು. ಇದರಲ್ಲಿ ತೆಂಗುಳಿ-೭೦, ಮನ್ನೆ-೩೦ ರಂತೆ ಇತರ ಕಂಪಣಗಳಿದ್ದವು (ಆಧಾರ ಕಾಳಗಿ ಮತ್ತು ತೆಂಗಳಿ ಶಾಸನಗಳು). ಬೆರಣಿ-೫೦೦ ಎನ್ನುವ ಕಂಪಣವಿದ್ದ ವಿವರ ಶಿರೋಳ್ಳಿ ಶಾಸನದಿಂದ ತಿಳಿದುಬರುತ್ತದೆ.

ಈ ವಿಭಾಗಗಳನ್ನು ಹೆಚ್ಚಾಗಿ ರಾಜ ಪರಿವಾರದವರು, ಸಾಮಂತರು, ಮಹಾಮಂಡಳೇಶ್ವರರು ಇಲ್ಲವೆ ಭಟ್ಟಾರಿಕರು ಅಥವಾ ಮಹಾಭಟ್ಟಾರಿಕರು ಆಳುತ್ತಿದ್ದರು. (ಕ.ಜಿ.ಶಾ.೧೯೯೬, ಪು.೨೫). ಅಗ್ರಹಾರಗಳ ಆಳ್ವಿಕೆ ಮಹಾಜನರಿಂದ ನಡೆಯುತ್ತಿತ್ತು. ಹಳ್ಳಿಗಳ ಆಡಳಿತವನ್ನು ನೋಡಿಕೊಳ್ಳಲು ಗಾವುಂಡ ಇಲ್ಲವೆ ಪೆರ್ಗ್ಗಡೆಯರಿರುತ್ತಿದ್ದರು. ಇವರಿಗೆ ಪ್ರಭುಗಳೆಂದು ಶಾಸನಗಳಲ್ಲಿ ಕರೆಯಲಾಗಿದೆ. ೩೦೦ ಹಳ್ಳಿಗಳ ಗುಂಪನ್ನು ನಾಳ್ಗಾವುಂಡರು ಆಳಿದರೆ, ೬೦೦ರ ಗುಂಪಿನಲ್ಲಿ ಧರ್ಮಮಹಾರಾಜರು ಆಳುತ್ತಿದ್ದರೆಂದು ಇಲ್ಲಿಯ ಒಂದು ಶಾಸನದಿಂದ ತಿಳಿದುಬರುತ್ತದೆ (ಕ.ಜಿ.ಶಾ.೧೯೯೬, ಪು.೨೬).

೨. ಪ್ರಾಚೀನ ಆಡಳಿತ ಘಟಕಗಳು :

ನಮಗೆ ರಾಜಕೀಯ ಸ್ಥಿತಿಗತಿ ತಿಳಿಸುವ ಇತ್ತೀಚಿನ ಕ್ರಿ.ಶ.೯-೧೦ನೇ ಶತಮಾನದಿಂದೀಚೆಗೆ ಸಿಗುವ ಶಾಸನಗಳ ಆಧಾರವಾಗಿಟ್ಟುಕೊಂಡು ಆಗ ಪ್ರಚಲಿತದಲ್ಲಿದ್ದ ಆಡಳಿತ ಘಟಕಗಳ ಸ್ಥೂಲ ವಿವರಣೆ ನೀಡುವ ಪ್ರಯತ್ನ ಮಾಡಲಾಗಿದೆ.

ಯಾವ ಒಬ್ಬ ರಾಜನು ತನ್ನ ಸಂಪೂರ್ಣ ರಾಜ್ಯವನ್ನು ತಾನೇ ಸ್ವತಃ ಆಳ್ವಿಕೆ ಮಾಡಲಾರನು. ಮತ್ತು ಶಾಂತಿಯುತ ಕಲ್ಯಾಣ ರಾಜ್ಯ ಸ್ಥಾಪಿಸಲು ರಾಜನೊಬ್ಬನಿಂದಲೆ ಸಾಧ್ಯವಿಲ್ಲ. ಇದನ್ನರಿತ ರಾಜರು ತಮ್ಮ ರಾಜ್ಯವನ್ನು ಅವರ ನಿಯಂತ್ರಣದಲ್ಲಿ ಆಡಳಿತ ಘಟಕಗಳನ್ನಾಗಿ ವಿಭಾಗಿಸಿದರು. ವಿಭಾಗ, ಉಪವಿಭಾಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ರಾಜನು ಅಧಿಕಾರಿಗಳನ್ನು ನೇಮಿಸುತ್ತಿದ್ದನು (ಗು.ಜಿ.ಇ.ಮತ್ತು ಪು.,೨೦೦೭, ಪು.೮೪).

ಹೀಗೆ ಪ್ರಾಚೀನ ಕಾಲದಲ್ಲಿ ಇಂಥ ವಿಭಾಗಗಳನ್ನು ಆಹಾರ, ಮಂಡಲ, ಭುಕ್ತಿ, ವಿಷಯ, ದೇಶ ಎಂದು ಮುಂತಾಗಿ ಕರೆಯಲಾಗುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಆಳಿದ ಮೌರ್ಯರು, ಶಾತವಾಹನರು, ಪಲ್ಲವ, ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಶಿಲಾಶಾಸನಗಳಲ್ಲಿ ಆಹಾರ, ಮಂಡಲ, ಭುಕ್ತಿ, ವಿಷಯ, ದೇಶಗಳೊಂದಿಗೆ ನಾಡು, ಕಂಪಣ ಎಂಬ ಘಟಕ ಸೂಚಕ ಹೆಸರುಗಳು ಕಂಡುಬರುತ್ತವೆ (ಗು.ಜಿ.ಇ.ಮತ್ತು ಪು.,೨೦೦೭, ಪು.೮೪).

ಆಡಳಿತ ಘಟಕಗಳು :

೧. ವಿಭಾಗ – ಮನ್ನೆದಡಿ ನಾಡು-೧೦೦೦

೨. ಉಪವಿಭಾಗ – ನೂರುಂಬಾಡು

೩. ರಾಜಧಾನಿ – ಕಾಳುಗೆ

೪. ಕಂಪಣಗಳು – * ತೆಂಗುಳಿ–೭೦

* ಮನ್ನೆ–೩೦

* ಬೆರಣಿ–೫೦೦

೫. ಗ್ರಾಮಗಳು ಮತ್ತು ಅಗ್ರಹಾರಗಳು

ಹೀಗೆ ಆಡಳಿತ ಘಟಕಗಳಾಗಿ ಮನ್ನೆದಡಿ ನಾಡು–೧೦೦೦ವನ್ನು ಈ ರೀತಿ ಆಳ್ವಿಕೆ ಮಾಡಲಾಗುತ್ತಿತ್ತು. ಸು.೨–೩ನೇ ಶತಮಾನದಲ್ಲಿ ಶಾತವಾಹನರು ಈ ಭಾಗದಲ್ಲಿ ಆಳ್ವಿಕೆ ಮಾಡಿದರು. ಅನಂತರ ಅವರ ಮಹಾರಥಿ ಅಂದರೆ ಮಾಂಡಲಿಕರು ಆಳಿದರು (ಉದಾ. ಗೊಟ್ಟಂಗೊಟ್ಟಿಯ ಇಟ್ಟಿಗೆ ಕಟ್ಟಡ ಕುರುಹು).

ಕ್ರಿ.ಶ.೪–೫ನೇ ಶತಮಾನದಲ್ಲಿ ಈ ಭಾಗದಲ್ಲಿ ಆಳಿದ ವಿವರ ಮಾಹಿತಿಗೆ ನಾವು ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳಬೇಕಾಗಿದೆ. ಕ್ರಿ.ಶ.೬–೭ನೇ ಶತಮಾನದ ಅಂತ್ಯದಲ್ಲಿ ಬಾದಾಮಿ ಚಾಲುಕ್ಯರು ಕರ್ನಾಟಕವನ್ನು ಏಕೈಕ ಆಡಳಿತಕ್ಕೆ ಒಳಪಡಿಸಿದ್ದರು (ಗು.ಜಿ.ಇ.ಮತ್ತು ಪು.,೨೦೦೭, ಪು.೮೫). ಕೇಶಾವರ್‌ದಲ್ಲಿ ಇವರ ಕಾಲದ ಪುರಾತತ್ವ ಕುರುಹುಗಳು ಸಾಕ್ಷಿಯಾಗಿವೆ.

ಈ ಪ್ರದೇಶವು ಚಾಲುಕ್ಯರಿಗೆ, ಗಂಗ, ಸೇಂದ್ರಕ, ಆಳುಪ, ಗುಜರಾತಿನ ಲಾಟ, ಆಂಧ್ರದ ಭೋಜ ಮತ್ತು ವೆಂಗಿಯ ಚಾಲುಕ್ಯರು, ಬಾಣರಸರು, ಭೋಜ ಹೀಗೆ ಅನೇಕ ಮಾಂಡಲಿಕ ಅರಸರ ಅಧೀನರಾಗಿದ್ದರು (ಗು.ಜಿ.ಇ.ಮತ್ತು ಪು.,೨೦೦೭,ಪು.೮೫). ಮಹಾರಾಷ್ಟ್ರ, ರಾಷ್ಟ್ರ, ಮಂಡಲ, ವಿಷಯ, ಭೋಗ, ಗ್ರಾಮ ಮುಂತಾದ ಆಡಳಿತ ಘಟಕಗಳ ಪ್ರಸ್ತಾಪ ಚಾಲುಕ್ಯರ ಶಾಸನಗಳಲ್ಲಿ ಕಂಡುಬರುತ್ತವೆ.

ನಂತರ ಬಂದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳು ವಿಭಾಗ, ಉಪವಿಭಾಗ, ಕಂಪಣ, ನಾಳ್ಗಾವುಂಡ, ಗ್ರಾಮ, ಅಗ್ರಹಾರಗಳೆಂದು ವಿಭಾಗಿಸಿ ಆಳ್ವಿಕೆ ಮಾಡಿದರು. ಮನ್ನೆದಡಿ ಸಾಸಿರದಲ್ಲಿ ಚಿಂಚೋಳಿ ತಾಲೂಕಿನ ಭಾಗಗಳು, ಗುಲ್ಬರ್ಗಾ ಮತ್ತು ಚಿತಾಪುರ ತಾಲೂಕಿನ ಹಲವು ಪ್ರದೇಶಗಳು ಅಂತರ್ಗತವಾಗಿದ್ದವು. ಈ ವಿಸ್ತಾರವಾದ ಆಡಳಿತ ಘಟಕದಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಅನೇಕ ಗ್ರಾಮಗಳು ಹಾಗೂ ಇಂದಿನ ಆಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆಯ ಕೆಲ ಗ್ರಾಮಗಳು ಸೇರ್ಪಡೆಯಾಗಿದ್ದವು. ನೂರುಂಬಾಡ ಎನ್ನುವ ಒಂದು ಉಪವಿಭಾಗ ಇದರಲ್ಲಿ ಅಂತರ್ಗತವಾಗಿದ್ದ ವಿವರ 'ಹಿಲಾಲಪುರ' ಶಾಸನದಿಂದ ತಿಳಿಯುತ್ತದೆ (ಗು.ಜಿ.ಇ.ಮತ್ತು ಪು.,೨೦೦೭,ಪು.೮೮). ಅಲ್ಲದೆ ಘಟ್ಟ–೨೪ ಎಂಬುದು ನೂರುಂಬಾಡದ ಒಂದು ಒಳ ವಿಭಾಗವಾಗಿದ್ದ ಸಂಗತಿ ಶಾಸನವೊಂದರಿಂದ ತಿಳಿದುಬರುತ್ತದೆ.

ಮನ್ನೆದಡಿ ಸವಕಟ್ಟನುಜ್ಜಳಜೆ-೩೦ರ ಬಳಿಯ ಬಾಡ ಜವಳಿಗೆ ಎಂಬ ಉಲ್ಲೇಖ ರುದ್ರವಾಡಿ ಶಾಸನದಲ್ಲಿ ಬಂದಿದೆ (ಗು.ಜಿ.ಇ.ಮತ್ತು ಪು.,೨೦೦೭,ಪು.೮೮).

ಮನ್ನೆದಡಿ ಸಾಸಿರದ ರಾಜಧಾನಿ ಕಾಳುಗೆ ಎಂಬುದು ಕಾಳಗಿ (ಚಿತಾಪುರ ತಾಲೂಕು) ಶಾಸನದಿಂದ ತಿಳಿದುಬರುತ್ತದೆ. ತೆಂಗಳಿ-೭೦ ಎಂಬುದು ಮನ್ನೆದಡಿ ಸಾಸಿರದ ಭಾಗವೆಂದು ತೆಂಗುಳಿ ಶಾಸನದಿಂದ ತಿಳಿದುಬರುತ್ತದೆ.

ಬೆರಣಿ-೬೦೦ : ಈ ವಿಭಾಗದಲ್ಲಿ ಚಿಂಚೋಳಿ ತಾಲೂಕಿನ ಹಲವು ಪ್ರದೇಶಗಳು ಇದ್ದವು. ಆಧಾರ ಶಿರೋಳ್ಳಿ ಶಾಸನ. ಇದರಲ್ಲಿ ಬೆರಣಿ-೫೦೦ರ ಸಿರವೊಳಿ ಅಗ್ರಹಾರ ಎಂಬುದಾಗಿದೆ. 'ಬೆರಣಿಯಯ್ನೂರರ ಬೈಲಬಾಡಂ ಸಿರಿವಳ್ಳಿಯ' ಎಂದು ಉಲ್ಲೇಖಿಸಿದೆ.

ಮನ್ನೆದಡಿ-೩೦೦ : ರಾಣಿ ಮೈಳಲದೇವಿ ಆಳಿದ ಬಗ್ಗೆ ತೇಂಗಳಿ ಶಾಸನ ಉಲ್ಲೇಖಿಸುತ್ತದೆ.

ಅಧಿಕಾರಿಗಳ ಹೆಸರು : ಮಹಾಮಂಡಳೇಶ ಸೋವರಸ (ಶಿರೋಳ್ಳಿ ಶಾಸನ)

ವರಸೇನಾಧಿಪಟ್ಟಂ ಶ್ರೀ ಸೋಮೇಶ್ವರದೇವ

'ಮನ್ನೆದಡಿಯೊಡೆಯಂ ಗೊಂಕಲದೇವಮರು'

ಮನ್ನೆದಡಿ ಮಹಾಮಂಡಳೇಶ ಗೊಂಕದೇವಂ (ಮೋಘಾ ಶಾಸನ)

*ವೆಸವಯ್ಯ-ದಂಡಾಧೀಶ *ವೆಸಪಯ್ಯ ದಂಡನಾಯಕ (ಮೋಘಾ ಶಾಸನ)

ಮಹಾದಂಡನಾಯಕ-ಬಮ್ಮನಾಯಕ (ದೇಗಲ್ಮಡಿ ಶಾಸನ)(ಕ.ಜಿ.ಶಾ.೧೯೯೬,ಪು.೨೫೧-೨೫೨)

೩. ಮಧ್ಯಕಾಲೀನ ಆಡಳಿತ (ಮುಸಲ್ಮಾನರ ಕಾಲ)(ಕ್ರಿ.ಶ.೧೪-೧೮ನೆಯ ಶತಮಾನದವರೆಗೆ):

ಖಿಲ್ಜಿ ಮನೆತನದವರು ರಾಜ್ಯಾಡಳಿತ ನಡೆಸಿದಾಗ ಹಲವು ಹಳ್ಳಿಗಳನ್ನು ಸೇರಿಸಿ '**ಶಿಖ್**' ಎಂದು ಹೆಸರಿಟ್ಟರು. ಇವು ಪರಗಣಗಳಿದ್ದಂತೆ. ಇವುಗಳ ಅಧಿಕಾರಿಯು ಶಿಖಾದಾರ್ ಈತನ ಕೆಳಗಿನ ಅಧಿಕಾರಿಗಳೆಂದರೆ ಮುಶರೀಫ್ ಅಥವಾ ಮುನ್ಸೀಫ್ ಖಜಾಂಚಿ ಕಾರಕೂನ ಹಾಗೂ ಖಾನುಂಗೋ (ಕ.ಜಿ.ಶಾ.೧೯೯೬, ಪು.೨೬). ಬಹುಮನಿಯರ ಕಾಲದಲ್ಲಿ ತರಫ್ (ತರಾಫ್‌ದಾರ್) ಸರಕಾರ, ಪರಗಣ ಮತ್ತು ಹಳ್ಳಿಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಿ ಆಳ್ವಿಕೆ ಮಾಡುತ್ತಿದ್ದರು (ಕ.ಜಿ.ಶಾ.೧೯೯೬, ಪು.೨೬). ಕ್ರಿ.ಶ. ೧೭೨೪ರ ವೇಳೆಗೆ ೭೭ ಹಳ್ಳಿಗಳ ಸಂಸ್ಥಾನವಾಗಿ ಪೇಶ್ವೆಗಳ ಕಾಲದಲ್ಲಿ ಅಸ್ತಿತ್ವಕ್ಕೆ ಬಂತು ಎನ್ನಲಾಗಿದೆ (ಚಿ.ತಾ.ದ.೧೯೮೬, ಪು.೧೪). ನಿಜಾಮನ ಕಾಲದಲ್ಲಿ ಭೂಮಿಯನ್ನು ಜಾಗೀರು, ಇನಾಮು, ದತ್ತಿ ಮತ್ತು ಪೈಗಾ ಎಂದು ಸೇವೆ ಸಲ್ಲಿಸುವವರಿಗೆ ಭೂಮಿ, ಹಣ ಇತ್ಯಾದಿ ನೀಡುತ್ತಿದ್ದರು (ಕ.ಜಿ.ಶಾ.೧೯೯೬, ಪು.೨೬). ಹೀಗೆ ಈ ನಾಡು ಹಲವು ವೈವಿಧ್ಯಪೂರ್ಣವಾಗಿ ವಿವಿಧ ರಾಜಮನೆತನಗಳ ಆಳ್ವಿಕೆಗೊಳಪಟ್ಟು ರಾಜಕೀಯ ಬೆಳವಣಿಗೆ ಕಂಡಿತು.

ಬ. **ಸಾಮಾಜಿಕ ಸ್ಥಿತಿಗತಿ:**

ದೇವಾಲಯಗಳ, ವೀರಗಲ್ಲುಗಳ ಶಿಲ್ಪ ಮತ್ತು ಮೂರ್ತಿಶಿಲ್ಪಗಳ ಅಧ್ಯಯನದಿಂದ ಆ ಕಾಲದ ಅಲ್ಲಿನ ಜನತೆಯ ವೇಷಭೂಷಣ, ಸಾಂಸ್ಕೃತಿಕ ಚಟುವಟಿಕೆ, ಆಭರಣಗಳ ವಿವರ ದೊರೆಯುತ್ತವೆ. ಶಾಸನಗಳ ಅಧ್ಯಯನದಿಂದ ಆ ಕಾಲದ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ವಿವರಗಳು ದೊರೆಯುತ್ತವೆ. ಇವುಗಳನ್ನಾಧರಿಸಿ ಆ ಕಾಲದ ಸಾಮಾಜಿಕ ವ್ಯವಸ್ಥೆ ವಿವರಿಸುವ ಪ್ರಯತ್ನ ಮಾಡಲಾಗಿದೆ.

೧. **ವೇಷಭೂಷಣ ಮತ್ತು ಆಭರಣಗಳು (ವೀರಗಲ್ಲುಗಳನ್ನಾಧರಿಸಿ):**

* **ರಾಷ್ಟ್ರಕೂಟರ ಕಾಲದ ವೇಷಭೂಷಣ ಮತ್ತು ಆಭರಣಗಳು:** ವೀರರು 'ಯು' 'ವಿ' ಆಕಾರದಂತಹ ಬಟ್ಟೆ ಸೊಂಟದಿಂದ ಕೆಳಗೆ ತೊಡೆಯವರೆಗೂ ಪುರುಷರು ಧರಿಸುತ್ತಿದ್ದರು. ಕರ್ಣಕುಂಡಲ, ಕಟಿವಸ್ತ್ರ, ತೋಳ್ಬಂದಿ, ಮಣಿಕಂಠ, ವಕ್ಷಬಂಧ, ಕಾಲ್ಗಡಗ, ಕೊರಳಹಾರ, ಸೊಂಟಪಟ್ಟಿ ಧರಿಸುತ್ತಿದ್ದರು. ಪುರುಷರ ಮುಡಿ ತಲೆಯ ಮೇಲೆ ಕಟ್ಟುತ್ತಿದ್ದರು.

* **ಕಲ್ಯಾಣ ಚಾಲುಕ್ಯರ ಕಾಲ:** ವೀರರು ಮಿನಿಸ್ಕರ್ಟ್‌ನಂತಹ ಸೊಂಟದಿಂದ ತೊಡೆಯವರೆಗಿನ ಭಾಗಕ್ಕೆ ಉಡುಪು ಧರಿಸುತ್ತಿದ್ದರು. ಸೊಂಟಪಟ್ಟಿ, ಕೊರಳಹಾರ, ತೋಳ್ಬಂದಿ, ಕಂಠಹಾರ, ಕರ್ಣಕುಂಡಲ, ಕಾಲ್ಗಡಗ ಧರಿಸುತ್ತಿದ್ದರು. ವೀರರು ಮುಡಿ ತಲೆಯ ಹಿಂಭಾಗಕ್ಕೆ ಹಾಕುತ್ತಿದ್ದರು.

ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ಆಧರಿಸಿ:

ಸ್ತ್ರೀಯರು: ಮಿನಿಸ್ಕರ್ಟ್‌ನಂತಹ ಉಡುಪುಗಳು ಸೊಂಟದಿಂದ ತೊಡೆಯ ಭಾಗದವರೆಗೆ ಮತ್ತು ಮೇಲ್ಭಾಗಕ್ಕೆ ಕುಪ್ಪಸ ಧರಿಸುತ್ತಿದ್ದರು. ಉದ್ದನೆಯ ಜರಿ ರೀತಿಯ ಬಟ್ಟೆಯನ್ನು ಕೊರಳ ಭಾಗದಿಂದ ಮೊಳಕಾಲಿನ ಕೆಳಭಾಗದವರೆಗೂ ಧರಿಸುತ್ತಿದ್ದರು. ಕಟಿವಸ್ತ್ರ, ತೋಳ್ಬಂದಿ, ಪೈಜಾಮ (ಕಾಲಿಗೆ ಹಾಕುವ ಆಭರಣ), ಕಾಲ್ಗಡಗ, ಕಾಲ್ಗೆಜ್ಜೆ, ಬಳೆಗಳು, ಸೊಂಟಪಟ್ಟಿ, ಡಾಬು, ಕಿವಿಓಲೆ, ಕಂಠಹಾರ, ಕೊರಳಹಾರ, ತುರುಬಕ್ಕೆ ಹಾಕುವ ಹೂವಿನ ಅಲಂಕಾರದ ಮತ್ತು ಮುತ್ತಿನ ಆಭರಣಗಳು, ಜಡೆ ಅಲಂಕಾರದ ಆಭರಣಗಳು, ಕೈಬೆರಳುಉಂಗುರ, ಕಾಲುಂಗುರ ಮತ್ತು ಕಾಲ್ಬೆರಳುಂಗುರ, ಸಿಂಧೂರ, ಭುಜಬಂದಿ, ಬಾಹುವ್ಯಲ್ಯ, ಸ್ತನಹಾರ, ಕುಚಹಾರ, ತೋಳ್ಬಂದಿ ಇತ್ಯಾದಿ ಧರಿಸುತ್ತಿದ್ದರು.

ಪುರುಷರು: 'ವಿ' ಆಕಾರದ ಮತ್ತು ಮಿನಿಸ್ಕರ್ಟ್‌ನಂತಹ ಉಡುಮ ಧರಿಸುತ್ತಿದ್ದರು. ತೋಳ್ಬಂದಿ, ಬಾಹುವಲ್ಯ, ವಕ್ಷಬಂಧ, ಕಟಿವಸ್ತ್ರ, ಸೊಂಟಪಟ್ಟಿ, ಕರ್ಣಕುಂಡಲ, ಹಾರ, ಸರ, ಕಂಠಹಾರ, ಕಾಲ್ಗಡಗ, ಕೈಉಂಗುರ ಧರಿಸುತ್ತಿದ್ದರು.

ರಾಜವರ್ಗದವರು ಮತ್ತು ಶ್ರೀಮಂತರು ಧೋತರ (ಜರೆ ಮತ್ತು ರೇಷ್ಮೆ) ಪಂಚೆ, ಕಿರೀಟ, ಪೇಟಿಕೆಯನ್ನು ಮತ್ತು ಅಲಂಕಾರಿಕ ಹಣೆಪಟ್ಟಿ ಧರಿಸುತ್ತಿದ್ದರು. ಮಣಿಕಂಠ, ಮುತ್ತಿನ ಹಾರ ಮತ್ತು ಕೈಯೂರ ಧರಿಸುತ್ತಿದ್ದರು. ವೀರರು ಮುಡಿ ಕಟ್ಟುತ್ತಿದ್ದರು.

ಆಯುಧಗಳು: ಭರ್ಚಿ, ಖಡ್ಗ, ಚಾಕು, ಚೂರಿ, ಗುರಾಣಿ, ಬಿಲ್ಲು, ಬಾಣ ಇತ್ಯಾದಿ ಆ ಕಾಲದ ವೀರರು ಬಳಸುವ ಆಯುಧಗಳಾಗಿವೆ.

ಶಾಸನಗಳಲ್ಲಿ ವಾರದ ಉಲ್ಲೇಖ: ದೇಗಲ್ಮಡಿ ಶಾಸನದ ೧೨ನೇ ಸಾಲಿನಲ್ಲಿ ಆದಿತ್ಯವಾರ ಎಂದರೆ ಈಗಿನ ರವಿವಾರ ಎಂದು ಉಲ್ಲೇಖಿಸಿದೆ. ನಿಡಗುಂದದ ನವಕೋಟಿ ನಾರಾಯಣ ಗುಡಿಯ ಶಾಸನದ ೪ನೇ ಸಾಲಿನಲ್ಲಿ ಸೋಮವಾರ ಎಂದು ಉಲ್ಲೇಖಿಸಿದೆ. ಅದೇ ಊರಿನ ಕಾಳಮ್ಮನ ದೇವಾಲಯದ ಇನ್ನೊಂದು ಶಾಸನದ ನಾಲ್ಕನೇ ಸಾಲಿನಲ್ಲಿ ಬೃಹಸ್ಪತಿವಾರ ಎಂದರೆ ಇಂದಿನ ಗುರುವಾರ ಎಂದು ಉಲ್ಲೇಖಿಸಿದೆ. ಶಿರೋಳ್ಳಿ ಶಾಸನದ ೫೭ನೇ ಸಾಲು ಮತ್ತು ಮೋಘಾದ ೮೮ನೇ ಸಾಲು ಸೋಮವಾರ ಎಂಬುದರ ಬಗ್ಗೆ ಉಲ್ಲೇಖಿಸಿವೆ.

ಅಲ್ಲದೆ, ವಿಕ್ರಮಶಕೆ, ಉತ್ತರಾಯಣ ಸಂಕ್ರಮಣ, ಬಹುಳದಮಾವಸ್ಯೆ, ಸೂರ್ಯಗ್ರಹಣದ ಬಗ್ಗೆ ಚಾಳುಕ್ಯ ವಿಕ್ರಮ ವರ್ಷವೆಂದು ಪರಾಭವ ಸಂವತ್ಸರ, ಆಷಾಢ, ವಿಕ್ರಮ ಸಂವತ್ಸರ, ನೃಪಕಾಳಾತೀತ ಸಂವತ್ಸರ, ವಿಕಾರಿ ಸಂವತ್ಸರ ಇತ್ಯಾದಿ ಎಂದು ಕಾಲ ತಿಳಿಸುವ ವಿವರ ಈ ಮೇಲಿನ ಶಾಸನಗಳಲ್ಲಿ ಉಲ್ಲೇಖವಾಗಿದೆ.

ಶಾಸನಗಳಲ್ಲಿ ಸ್ತ್ರೀಯರ ಸ್ಥಾನಮಾನ: ಮೋಘಾ ಶಾಸನದಲ್ಲಿ ಸಾವಿತ್ರಿ ಪುತ್ರ ವೆಸವಯ್ಯ ದಂಡಾಧೀಶ ಎಂದು ಹೇಳಿರುವುದು ಇಲ್ಲಿ ತಾಯಿ ಸ್ಥಾನ ಪ್ರಮುಖವಾಗಿತ್ತೆಂದು ತಿಳಿಯುತ್ತದೆ. ಮೋಘಾ ಮಹೇಶ್ವರಿ ಮೈಲಳದೇವಿ ದಾನ ನೀಡಿದ ವಿಷಯ ತಿಳಿಸುತ್ತದೆ (ಮೋಘಾ ಶಾಸನ). ಮಾಸ್ತಿಗಲ್ಲಿನಿಂದ ಸ್ತ್ರೀ ಸಾಮಾಜಿಕ ಮೌಲ್ಯಗಳಿಗೆ ಬೆಲೆ ಕೊಟ್ಟು ಸತಿಹೋಗುವ ವಿಷಯ ತಿಳಿಸುತ್ತದೆ. ಸ್ತ್ರೀಯರು ಹೆಚ್ಚಾಗಿ ತಮ್ಮನ್ನು ಧಾರ್ಮಿಕ ಜೀವನದಲ್ಲಿ ತೊಡಗಿಸಿರುವುದು ಮತ್ತು ಆ ಹೆಸರಲ್ಲಿ ಮೂಢನಂಬಿಕೆಗಳಿಗೆ ಬಲಿಯಾಗಿದ್ದು ತಿಳಿಯುತ್ತದೆ.

೨. ಶಿಕ್ಷಣ ವ್ಯವಸ್ಥೆ:

ಬ್ರಾಹ್ಮಣ ವರ್ಗದವರು ಅಗ್ರಹಾರಗಳಲ್ಲಿ ಮಠ, ದೇವಾಲಯಗಳಲ್ಲಿ ಶಿಕ್ಷಣ ನೀಡುತ್ತಿದ್ದರು. ಶಿರೋಳ್ಳಿ ಶಾಸನ ಉಪಾಧ್ಯಾಯರಿಗೆ ಮತ್ತು ಅಲ್ಲಿಯ ಪಟ್ಟಹ ವಿದ್ಯಾರ್ಥಿ ಮಾಣಿಯರ ಗ್ರಾಸಕ್ಕೆಂದು ಭೂದಾನ ನೀಡಿದ ವಿವರವಿದೆ. ಕೇಶಾವರ (ಗಡಿ) ಕುಂಬಾರ ದೇಗುಲದ ಶಾಸನ ಮತಿಸೆಟ್ಟಿಯ ಗುರು ಮಾಘನಂದಿ ಎಂದು ಸೂಚಿಸುತ್ತದೆ.

ಶಿಕ್ಷಣ ಕೇಂದ್ರಗಳು: ಶಿರೋಳ್ಳಿ, ಸುಲೇಪೇಟೆ, ತೋನಿಪಲ್ಲಿ, ಮೋಘಾ, ರುಮ್ಮನಗೂಡು, ದೇಗಲ್ಮಡಿ, ಮಿರ್‍ಯಾಣ, ಗಡಿ ಕೇಶಾವರ್.

ಶಿಕ್ಷಣದ ನಾಲ್ಕು ಕೇಂದ್ರಗಳು: ೧. ಅಗ್ರಹಾರ, ೨. ಬ್ರಹ್ಮಪುರಿ, ೩. ಮಠಗಳು ಮತ್ತು ೪. ಘಟಿಕ ಸ್ಥಾನಗಳು. ಈ ಬಗ್ಗೆ ಶಾಸನಗಳಿಂದ ಮಾಹಿತಿ ದೊರಕುತ್ತವೆ. ತೆಂಗಳಿಯ ಕ್ರಿ.ಶ.೧೧೬೨ರ ಶಾಸನ 'ಶಾಲೆಯ ಹಳ್ಳಿಯ' ಎಂದು ಹತ್ತಿರದ ಒಂದು ಶಾಲೆಯಾಗಿದ್ದ ಗ್ರಾಮವನ್ನು ಉಲ್ಲೇಖಿಸುತ್ತದೆ (ಕ.ಜಿ.ಶಾ.೧೯೯೬,ಪು.೧೭೧).

ಪ್ರಮುಖ ಅಗ್ರಹಾರಗಳು: ಶಿರೋಳ್ಳಿ, ಸುಲೇಪೇಟೆ, ಮೋಘಾ, ತೋನಿಪಲ್ಲಿ ಶಿಕ್ಷಣ ಕೇಂದ್ರಗಳಾಗಿದ್ದವು (ಶಾಸನಗಳ ಆಧಾರ).

೨. ಬ್ರಹ್ಮಪುರಿಗಳು: ಬ್ರಾಹ್ಮಣರು ವಾಸಿಸುವ ಓಣಿಗಳಾಗಿದ್ದವು.

೩. ಮಠಗಳು: ನಿರ್ಗತಿಕರಿಗೆ, ಅನಾಥರಿಗೆ, ಬಡವರಿಗೆ, ಸನ್ಯಾಸಿಗಳಿಗೆ, ಭಿಕ್ಷುಕರಿಗೆ ಮತ್ತು ಪ್ರವಾಸಿಗರಿಗೆ ಆಹಾರ ದಾನ ಮಾಡುವ ಸ್ಥಳವಾಗಿತ್ತು (ಗು.ಜಿ.ಇ.ಮತ್ತು ಪು.,೨೦೦೭, ಪು.೧೦೪-೧೦೫). ಈ ಮಠಗಳು ವಿದ್ಯಾಕೇಂದ್ರಗಳಾಗಿ, ಸತ್ರಗಳಾಗಿ, ವೈದ್ಯ ಶಾಲೆಗಳಾಗಿ, ಸಕಲರ ಹಿತ ರಕ್ಷಿಸುವ ಕಾಮಧೇನುಗಳಂತಿದ್ದವು. ಶಾಸನಗಳಲ್ಲಿ ಮಠ ಎಂದರೆ ಶಾಲೆಗಳೆಂಬ ಅರ್ಥದಲ್ಲಿ ಸಂಬೋಧನೆಯಾಗಿದೆ. ಉದಾ: ಕಾಳಗಿ (ಗು.ಜಿ.ಇ.ಮತ್ತು ಪು.,೨೦೦೭, ಪು.೧೦೬). ಶಿರೋಳ್ಳಿ ಶಾಸನವೊಂದರಲ್ಲಿ ಸತ್ರ ಕಟ್ಟಿಸಲು ಭೂದಾನ ಮಾಡಿದ ಉಲ್ಲೇಖವಿದೆ.

೪. ಘಟಿಕ ಸ್ಥಾನಗಳು: ಉನ್ನತ ಶಿಕ್ಷಣ ಕೇಂದ್ರಗಳಾಗಿದ್ದವು. ನಾಗಾವಿ ಶಾಸನೋಕ್ತ ಘಟಿಕ ಸ್ಥಾನವಾಗಿತ್ತು. ಘಟಿಕ ಸ್ಥಾನದಲ್ಲಿ ವೇದ, ವೇದಾಂಗ, ಜೋತಿಷ್ಯ, ಪುರಾಣಗಳು, ಸಾಹಿತ್ಯ, ಖಗೋಳಶಾಸ್ತ್ರ, ಗಣಿತ, ಯುದ್ಧ ತರಬೇತಿ ಇತ್ಯಾದಿ ಕಲಿಸುತ್ತಿದ್ದರು (ಗು.ಜಿ.ಇ.ಮತ್ತು ಪು., ೨೦೦೭,ಪು.೧೦೭). ಕೇಶಾವರ್(ಗಡಿ), ರಟ್ಕಲ್, ಮಿರ್‍ಯಾಣ, ರುಮ್ಮನಗೂಡು, ಶಿರೋಳ್ಳಿ, ಮೋಘಾ ಇವುಗಳಲ್ಲಿ ಕೆಲವು ಘಟಿಕ ಸ್ಥಾನಗಳಾಗಿದ್ದವು. ಇಲ್ಲಿ ಉನ್ನತ ಶಿಕ್ಷಣ ನೀಡಲಾಗುತ್ತಿತ್ತು (ಗು.ಜಿ.ಇ.ಮತ್ತು ಪು.,೨೦೦೭,ಪು.೩೦೧).

ಗುರುವಿನ ಉಲ್ಲೇಖ : ಮೋಘಾನಂದಿ (ಕೇಶಾವರ್ ಶಾಸನ), ಶರೀರಪ್ಪ ಮಾರ್ತಂಡೋಜ್ವಳ (ಶಿರೋಳ್ಳಿ ಶಾಸನ). ಈ ಗುರುಗಳು ಮೀಮಾಂಸೆ, ಶಾಸ್ತ್ರ, ಹದಿನೆಂಟು ಪುರಾಣ, ಯಜನ, ಯಾಜನ, ದಾನ, ಪ್ರತಿಗ್ರಹ, ಷಟ್ಕರ್ಮ ನಿರತರಾಗಿದ್ದರು. ಅಗ್ನಿಸೋಮ, ವಾಜಪೇಯ ಯಜ್ಞಾವಭೃತಾವಗಾಹನ ಪವಿತ್ರೀಕೃತ ಶರೀರಪ್ಪ ಎಂದು ಶಿರೋಳ್ಳಿ ಶಾಸನ ತಿಳಿಸುತ್ತದೆ.

ಯುದ್ಧ ತರಬೇತಿ : ಸೈನಿಕರಿಗೆ ಯುದ್ಧ ತರಬೇತಿ ನೀಡುವ ವಿವರ ಇಲ್ಲಿನ ವೀರಗಲ್ಲುಗಳೇ ನೀಡುತ್ತವೆ. ಸಾಮಾನ್ಯ ವ್ಯಕ್ತಿಯು ತಮ್ಮ ಗ್ರಾಮ ರಕ್ಷಣೆಗೆ, ಗೋಸಂಪತ್ತಿನ ರಕ್ಷಣೆಗೆ ಹೋರಾಡಿದ ಕುರುಹುಗಳಿವೆ. ಈ ಆಧಾರದ ಮೇಲೆ ಕುದುರೆ ಸವಾರಿ, ಕತ್ತಿವರಸೆ, ಬಿಲ್ಲುಬಾಣದ ತರಬೇತಿ, ಚಾಕು, ಚೂರಿಗಳ ಪ್ರಹಾರದ ತರಬೇತಿ ನೀಡುತ್ತಿದ್ದರೆಂದು ಕಂಡುಬರುತ್ತದೆ.

ಕ. ಧಾರ್ಮಿಕ ಸ್ಥಿತಿಗತಿ

ಚಿಂಚೋಳಿ ತಾಲೂಕಿನಲ್ಲಿ ಧಾರ್ಮಿಕ ವ್ಯವಸ್ಥೆ ಕಾಣಲು ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳೇ ಮೂಕಸಾಕ್ಷಿಗಳಾಗಿ ನಿಂತಿವೆ. ಧಾರ್ಮಿಕ ಇತಿಹಾಸವನ್ನು ನೋಡಿದರೆ ಆರಂಭದ ಶಾತವಾಹನರು, ರಾಷ್ಟ್ರಕೂಟರ ಕಾಲದಲ್ಲಿ ಹಿಂದೂ ಧರ್ಮ, ಜೈನ ಧರ್ಮ ಜನಪ್ರಿಯವಾಗಿತ್ತು. ಬಾದಾಮಿ ಚಾಲುಕ್ಯರ ಕಾಲದಲ್ಲಿ ವೈಷ್ಣವ ಧರ್ಮ ಆಚರಣೆಯಲ್ಲಿತ್ತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವ ಧರ್ಮ ಜನಪ್ರಿಯವಾಗಿತ್ತು. ಕಲಚೂರಿಗಳ ಕಾಲದಲ್ಲಿ ವೀರಶೈವ ಜನಪ್ರಿಯವಾಗಿತ್ತು. ಕ್ರಿ.ಶ.೧೪ನೇ ಶತಮಾನದಿಂದ ಬಹುಮನಿ, ನಿಜಾಮರ ಪ್ರಭಾವದಿಂದ ಇಸ್ಲಾಂ ಧರ್ಮ ಬೆಳವಣಿಗೆ ಹೊಂದಿತು. ಹೀಗೆ ಹಂತ ಹಂತವಾಗಿ ಧಾರ್ಮಿಕ ಬೆಳವಣಿಗೆಯನ್ನು ಕಾಣಬಹುದು.

ದೇವರ ಆರಾಧನೆ : ಪ್ರಕೃತಿ ಪೂಜೆ, ಶಿವ ಪೂಜೆ, ವಿಷ್ಣು, ಹನುಮಾನ, ಗಣೇಶ, ಕಾಳಿ, ನಾಗ, ಅರಳಿ ಮತ್ತು ಬೇವಿನ ಮರ, ತುಳಸಿ ಪೂಜೆ, ಲಿಂಗ, ನಂದಿ, ಗೋವು, ಲಕ್ಷ್ಮೀ ನಾರಾಯಣ, ಪಾರ್ವತಿ, ದುರ್ಗ ಮತ್ತು ಜೈನ ತೀರ್ಥಂಕರ ಆರಾಧನೆ ಮಾಡುತ್ತಿದ್ದರು. ಮುಸ್ಲಿಂರು ನಮಾಜ, ಮಸೀದಿ ಮತ್ತು ಖುರಾನ್ ಪಠಣ ಮಾಡುತ್ತಿದ್ದರು (ಧಾರ್ಮಿಕ ಕುರುಹುಗಳನ್ನಾಧರಿಸಿ).

ಧಾರ್ಮಿಕ ತೀರ್ಥಸ್ಥಳಗಳು : ಭೋಗಲಿಂಗೇಶ್ವರ (ಭೋಗಲಿಂಗದ ಹಳ್ಳಿ), ಗೊಟ್ಟಂಗೊಟ್ಟಿಯ ಬಕ್ಕಪ್ರಭು ಮತ್ತು ರಾಮನ ಚಿಕ್ಕಪಾದಗಳು, ಚಾಂಗಲೇರ–ವೀರಭದ್ರೇಶ್ವರ ದೇವಾಲಯ.

ಪ್ರಮುಖ ಧರ್ಮಗಳು :

ವೈದಿಕ ಧರ್ಮ, ಶೈವ ಧರ್ಮ, ಕಾಳಾಮುಖ ಶೈವಧರ್ಮ, ವೀರಶೈವ ಧರ್ಮ, ವೈಷ್ಣವ ಧರ್ಮ, ಬ್ರಾಹ್ಮಣ ಧರ್ಮ, ಜೈನ ಧರ್ಮ, ಬೌದ್ಧ ಧರ್ಮ, ಇಸ್ಲಾಂ ಧರ್ಮಗಳಾಗಿದ್ದವು.

೧. **ವೈದಿಕ ಧರ್ಮ :** ವೇದಗಳ ಕಾಲದಿಂದ ಸನಾತನ ಧರ್ಮವಾಗಿ ಹಿಂದೂ ಧರ್ಮ ಏಳಿಗೆಗೆ ಬಂದು ಮುಂದೆ ಶೈವ, ವೈಷ್ಣವ, ವೀರಶೈವ ಹೀಗೆ ಅನೇಕ ಧರ್ಮಗಳಾಗಿ ವಿಭಾಗಿಸಲ್ಪಟ್ಟಿದೆ.

* **ಶೈವ ಧರ್ಮ** : ಇಲ್ಲಿ ಈಶ್ವರ, ರಾಮಲಿಂಗೇಶ್ವರ ದೇವಾಲಯಗಳು ಸು.೧೦-೧೧ನೇ ಶತಮಾನದಲ್ಲಿ ನಿರ್ಮಿತಗೊಂಡಿವೆ. ಶೈವಧರ್ಮ ಅತ್ಯಧಿಕ ಜನಪ್ರಿಯವಾಗಿತ್ತು ಎನ್ನುವುದಕ್ಕೆ ಇಲ್ಲಿರುವ ಕೆಲ ಸ್ಥಳನಾಮಗಳು ಉದಾಹರಣೆಯಾಗಿವೆ.

ಚಿಕ್ಕ+ಲಿಂಗದ+ಹಳ್ಳಿ – ಚಿಕ್ಕಲಿಂಗದಹಳ್ಳಿ, ಸೋಮ+ಲಿಂಗದ+ಹಳ್ಳಿ – ಸೋಮಲಿಂಗದಹಳ್ಳಿ, ರುದ್ರನ+ಊರು–ರುದ್ನೂರು, ಭೋಗ+ಲಿಂಗದ+ಹಳ್ಳಿ–ಭೋಗಲಿಂಗದಹಳ್ಳಿ, ಭಕ್ತರ+ಹಳ್ಳಿ–ಭಕ್ತಂಪಳ್ಳಿ (ಚಿ.ತಾ.ದ.೧೯೮೬,ಪು.೧೩), ಗಣಾಪುರ–ಶಿವಗಣಾಧೀಶರನ್ನು ಹೊಂದಿರುವ ಹಳ್ಳಿ (ಚಿ.ತಾ.ದ. ೧೯೮೬,ಪು.೧೩) ನಂದಿಮೂರ್ತಿಗಳು, ಲಿಂಗದ ದೇವಾಲಯಗಳು ಇವು ಶೈವ ಧರ್ಮ ಆಚರಣೆಯಲ್ಲಿರುವುದಕ್ಕೆ ಸಾಕ್ಷಿಗಳಾಗಿವೆ.

* **ಕಾಳಾಮುಖ ಶೈವಧರ್ಮ** : ಕೇಶಾವರ ಮಲ್ಲಿಕಾರ್ಜುನ, ಸಿದ್ದೇಶ್ವರ, ಸಂಗಮನಾಥ, ಕೊಡ್ಲಿಯ ರಾಮಲಿಂಗ, ಭೋಗಲಿಂಗೇಶ್ವರ, ಚೇಂಗಟಾ ಸೋಮೇಶ್ವರ, ಮಿರ್ಯಾಣದ ಭೀಮೇಶ್ವರ, ಪಾಪನಾಥ, ರಟ್ಕಲ್‌ನ ಬಂಕೇಶ್ವರ, ರಾಮಲಿಂಗೇಶ್ವರ, ರಾಮತೀರ್ಥದ ರಾಮಲಿಂಗೇಶ್ವರ, ರುಮ್ಮನಗೂಡಿನ ರಾಮಲಿಂಗೇಶ್ವರ ಇತ್ಯಾದಿ ಕಾಳಾಮುಖ ಶೈವ ಸಂಪ್ರದಾಯ ದೇವಾಲಯಗಳಿಗೆ ಆಧಾರಗಳಾಗಿವೆ. (ಗು.ಜಿ.ಇ.ಮತ್ತು ಪು.,೨೦೦೭, ಪು.೩೦೧).

* **ವೀರಶೈವ ಧರ್ಮ** : ೧೨ನೇ ಶತಮಾನದಲ್ಲಿ ಹುಟ್ಟಿ ಬೆಳೆದ ಈ ಧರ್ಮವು ಇಲ್ಲಿಯೂ ಜನಪ್ರಿಯವಾಯಿತು. ಉದಾ: ಮಹಾಂತೇಶ್ವರ ಮಠ, ಚಿಂಚೋಳಿ (ಗು.ಜಿ.ಇ.ಮತ್ತು ಪು., ೨೦೦೭, ಪು.೩೦೨). ಈ ಭಾಗದಲ್ಲಿ ಬಹಳಷ್ಟು ರಾಮಲಿಂಗೇಶ್ವರ ದೇವಾಲಯಗಳಿವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ವೈಷ್ಣವ ಧರ್ಮ ಜನಪ್ರಿಯವಾಗಿದ್ದು, ಕಲ್ಯಾಣ ಚಾಲುಕ್ಯರ ಆರಂಭಿಕ ಕಾಲದಲ್ಲಿ ಆಗ ತಾನೇ ಶೈಶವಾವಸ್ಥೆಯಲ್ಲಿದ್ದು, ಶೈವಧರ್ಮ ವೈಷ್ಣವ ಧರ್ಮದ ರಾಮನೊಂದಿಗೆ ಸೇರಿಸಿ ವೈಷ್ಣವರಿಗೂ ಸಮಾಧಾನಗೊಳಿಸಿದಂತೆ ಮತ್ತು ತಮ್ಮ ಧರ್ಮದ ಬೆಳವಣಿಗೆಗೆ ರಾಮಲಿಂಗೇಶ್ವರ ಎಂದು ಸೇರಿಸಿರಬಹುದು.

* **ವೈಷ್ಣವ ಧರ್ಮ** : ಸು.೮ನೇ ಶತಮಾನದ ನವಕೋಟಿ ನಾರಾಯಣ ಗುಡಿ, ಕೇಶವನಾರಾಯಣ ಗುಡಿ (೧೦ನೇ ಶತಮಾನ), ವೆಂಕಟೇಶ್ವರ ದೇವಾಲಯ (ಸು.೧೫ನೇ ಶತಮಾನ) ಇಲ್ಲಿ ವೈಷ್ಣವರಿದ್ದರು ಎಂಬುದಕ್ಕೆ ಸಾಕ್ಷಿಗಳಾಗಿವೆ. ವಿಷ್ಣುವಿನ ಮೂರ್ತಿಗಳು, ಹರಿಹರ ದೇವಾಲಯ (ಶಿರೋಳ್ಳಿ) ಶಂಕರನಾರಾಯಣ ಗುಡಿ (ರುಮ್ಮನಗೂಡು) ಇತ್ಯಾದಿಗಳಿಂದ ಆ ಕಾಲದಲ್ಲಿ ವೈಷ್ಣವ ಧರ್ಮ ಈ ಭಾಗದಲ್ಲಿ ಜನಪ್ರಿಯವಾಗಿತ್ತು ಎಂದು ತಿಳಿದುಬರುತ್ತದೆ. ಗಡಿ ಕೇಶಾವರ, ತಿರುಮಲಾಪುರ ಎಂಬ ಸ್ಥಳನಾಮಗಳು ಅಲ್ಲಿಯ ವೈಷ್ಣವ ಧರ್ಮದ ಪ್ರಭಾವ ಮತ್ತು ಆಚರಣೆ ಬಗ್ಗೆ ತಿಳಿಸುತ್ತದೆ.

* **ಬ್ರಾಹ್ಮಣ ಧರ್ಮ** : ಇಲ್ಲಿ ಬ್ರಾಹ್ಮಣ ಧರ್ಮ ಪ್ರಚಲಿತವಾಗಿರುವುದಕ್ಕೆ ಇಲ್ಲಿಯ ಅಗ್ರಹಾರಗಳೇ ಸಾಕ್ಷಿಯಾಗಿವೆ (ಕ.ಜಿ.ಶಾ.೧೯೬೬, ಪು.೨೨). ಉದಾ : ತೋನಿಪಲ್ಲಿ, ಸುಲೇಪೇಟೆ, ಶಿರೋಳ್ಳಿ, ಮೋಘಾ.

೨. ಜೈನ ಧರ್ಮ : ಸು.೦೮-೧೧ನೇ ಶತಮಾನದಲ್ಲಿ ಜೈನ ಬಸದಿಗಳು, ಜೈನ ಮೂರ್ತಿಶಿಲ್ಪಗಳು ಇಲ್ಲಿ ಹೇರಳವಾಗಿ ದೊರಕಿವೆ. ಇವು ಜೈನಧರ್ಮದ ಜನಪ್ರಿಯತೆ ಸೂಚಿಸುತ್ತವೆ. ತೀರ್ಥಂಕರ ಶಿಲ್ಪಗಳು ಜೈನಧರ್ಮ ಇಲ್ಲಿ ಹೆಚ್ಚು ಆಚರಣೆಯಲ್ಲಿರುವುದನ್ನು ತಿಳಿಸುತ್ತವೆ. ಕೇಶಾವರ್ (ಗಡಿ) ಜೈನ ಬಸದಿ, ನಿಡಗುಂದ-ಜೈನ ತೀರ್ಥಂಕರ ಶಿಲ್ಪಗಳು, ಮಿರ್ಯಾಣ-ಜೈನಬಸದಿ, ಸುಲೇಪೇಟೆ-ಜೈನ ಬಸದಿ, ಇನ್ನೊಂದು ಜೈನಬಸದಿ ಪ್ರಸ್ತುತ ಶಂಭುಲಿಂಗೇಶ್ವರ ದೇವಾಲಯವಾಗಿ ಮಾರ್ಪಡಿಸಲಾಗಿದೆ. ಕ್ರಿ.ಶ.೧೧-೧೨ನೇ ಶತಮಾನದಲ್ಲಿ ಶೈವ ಧರ್ಮದ ಬೆಳವಣಿಗೆ ಮತ್ತು ಅದಕ್ಕೆ ರಾಜಮನೆತನದ ಮಾನ್ಯತೆ ದೊರೆತು ಜೈನ ಧರ್ಮದ ಅವನತಿಗೆ ನಾಂದಿಯಾಯಿತು. ಶೈವರ ಒಂದು ಪ್ರಾಬಲ್ಯದಿಂದ ಹಲವು ಜೈನ ಬಸದಿಗಳು ಶೈವ ದೇವಾಲಯಗಳಾಗಿ ಮಾರ್ಪಟ್ಟವು. ಉದಾ: ಸುಲೇಪೇಟೆಯ ಶಂಭುಲಿಂಗೇಶ್ವರ ದೇವಾಲಯ.

೩. ಬೌದ್ಧ ಧರ್ಮ : ಅಶೋಕನ ಕಾಲದ ಬೌದ್ಧ ಧರ್ಮದ ಸನ್ನತಿ, ನಾಗಾವಿ ಇದ್ದರೂ ಸಹ ಈ ಭಾಗದಲ್ಲಿ ಜನಪ್ರಿಯವಾಗಿಲ್ಲದಂತೆ ತೋರುತ್ತದೆ. ಈ ಬಗ್ಗೆ ಇನ್ನೂ ಹೆಚ್ಚಿನ ಕ್ಷೇತ್ರಕಾರ್ಯ ಮತ್ತು ಅಧ್ಯಯನವಾಗಬೇಕಾಗಿದೆ.

೪. ಇಸ್ಲಾಂ ಧರ್ಮ : ಕ್ರಿ.ಶ.೧೩೪೭ರಲ್ಲಿ ಸ್ಥಾಪಿತ ಬಹುಮನಿ ಸಾಮ್ರಾಜ್ಯ ದಕ್ಷಿಣ ಭಾರತದ ಉತ್ತರ ಕರ್ನಾಟಕದ ಭಾಗವಾದ ಗುಲ್ಬರ್ಗ, ಬೀದರ, ರಾಯಚೂರಗಳ ಮೇಲೆ ತನ್ನ ಪ್ರಭಾವ ಬೀರಿತು. ಈ ಪ್ರಭಾವದಿಂದ ಇಸ್ಲಾಂ ಧರ್ಮದ ಬೆಳವಣಿಗೆಯಾಗಿ ಇಂದಿಗೂ ನಮ್ಮಲ್ಲಿ ಒಂದಾಗಿ ಉಳಿದಿದೆ. ಹಿಂದೂ ಧರ್ಮದವರು ಸಮ್ಮಿಳಿತವಾಗಿ ಮೊಹರಂ ಆಚರಣೆ, ಕಲೆಯಲ್ಲಿ ಇಂಡೋ-ಇಸ್ಲಾಂಮಿಕ್ ಶೈಲಿ ಇದು ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಕುರುಹುಗಳಾಗಿವೆ. ಉದಾ: ವೆಂಕಟೇಶ್ವರ ದೇವಾಲಯದ ಕಮಾನುಗಳು, ಫತ್ತೇಪುರ ಹೆಸರು ಮತ್ತು ಅಲ್ಲಿನ ಬಾವಿಯು ಮತ್ತು ಪೋಲಕಪಳ್ಳಿಯ ಬಾವಿಯ ಕಮಾನುಗಳು ಇವುಗಳಿಗೆ ಉದಾಹರಣೆಗಳಾಗಿವೆ (ಇಲ್ಲಿ ದೊರೆತ ನಿಜಾಮನ ನಾಣ್ಯಗಳು ಇಸ್ಲಾಂ ಧರ್ಮದ ಬಗ್ಗೆ ಉರ್ದು ಭಾಷೆಯ ಬೆಳವಣಿಗೆ ಬಗ್ಗೆಯ ಆಧಾರಗಳಾಗಿವೆ).

* **ದೇವಾಲಯಗಳು** : ಹಲವು ದೇವಸ್ಥಾನಗಳಿಗೆ ದತ್ತಿ-ದಾನ ಬಿಟ್ಟು ಅವುಗಳು ಸಮೃದ್ಧವಾಗಿ ಇರುವಂತೆ ಮಾಡುತ್ತಿದ್ದರು. ಇಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಧಾರ್ಮಿಕ ಕಾರ್ಯ, ಸಾಮಾಜಿಕ ಕಾರ್ಯಗಳು ನಡೆಯುತ್ತಿದ್ದವು.

ಉದಾ: ಮೋಘಾ ರಾಮಲಿಂಗೇಶ್ವರ ದೇವಾಲಯ, ಶಿರೋಳ್ಳಿ–ನಾಗಲಿಂಗೇಶ್ವರ ದೇವಾಲಯ, ಸುಲೇಪೇಟೆ ಈಶ್ವರ ದೇವಾಲಯ ಇತ್ಯಾದಿಗಳಿಗೆ ದಾನ ದತ್ತಿ ಬಿಟ್ಟ ವಿಷಯ ಮತ್ತು ಅಲ್ಲಿ ಧಾರ್ಮಿಕ ಕಾರ್ಯ, ಸಾಮಾಜಿಕ ಕಾರ್ಯಗಳಲ್ಲದೆ ಶಿಕ್ಷಣ ನೀಡುತ್ತಿರುವ ಬಗ್ಗೆ ಅಲ್ಲಿನ ಶಾಸನಗಳು ತಿಳಿಸುತ್ತವೆ.

* **ವೀರಗಲ್ಲುಗಳು** : ಪ್ರಾಚೀನ ನೈತಿಕ, ಮಾನವೀಯ ಮೌಲ್ಯಗಳನ್ನು ಎತ್ತರಿಸಿ, ಬಿತ್ತರಿಸಿದ ಕೀರ್ತಿ ಇವುಗಳದ್ದಾಗಿದೆ. ಧಾರ್ಮಿಕ, ಸಾಮಾಜಿಕ ಮೌಲ್ಯಗಳು ಆ ಕಾಲದ ಜನರಲ್ಲಿತ್ತು ಎನ್ನುವುದಕ್ಕೆ ಇವು ಸಾಕ್ಷಿಗಳಾಗಿವೆ. ಜನರಲ್ಲಿ ಐಕ್ಯತೆ ಇತ್ತು ಎಂದು ಸಹ ಇವು ತಿಳಿಸುತ್ತವೆ. ಗ್ರಾಮದ ಹಸುಗಳನ್ನು ರಕ್ಷಿಸಿ ಪ್ರಾಣ ತೆತ್ತು ವೀರನ ಬಗ್ಗೆ ತಿಳಿಸುವ ತುರುಗೋಳ್ ವೀರಗಲ್ಲುಗಳು. ದೇಶದ ಮತ್ತು ಜನರ ರಕ್ಷಣೆಗಾಗಿ ಹೋರಾಡಿ ಮಡಿದ ವೀರಗಲ್ಲುಗಳು. ಉದಾ:ಚಿಂಚೋಳಿ, ಬೇಡಕ್‌ಪಳ್ಳಿ, ಕೇಶಾವರ (ಗಡಿ)ಗಳ ತುರುಗೋಳ್ ವೀರಗಲ್ಲುಗಳು ಮತ್ತು ಸೋಮನಿಂಗದಹಳ್ಳಿ, ಶಿರೋಳ್ಳಿ, ಗೊಟ್ಟಂಗೊಟ್ಟಿಯ ಹೋರಾಟದ ವೀರಗಲ್ಲುಗಳು.

* **ಆತ್ಮಬಲಿದಾನಗಳು** : ಧಾರ್ಮಿಕ ಆದರ್ಶಭಾವ ಹೊಂದಿದ್ದ ಜನತೆ ಧಾರ್ಮಿಕ ಉದ್ದೇಶಗಳಿಗಾಗಿ, ಸಮಾಜ ಕಲ್ಯಾಣಕ್ಕಾಗಿ ಇಲ್ಲವೆ ವ್ಯಕ್ತಿಗತ ಉದ್ದೇಶಕ್ಕಾಗಿ ಆತ್ಮಬಲಿದಾನ ಮಾಡಿಕೊಳ್ಳುತ್ತಿದ್ದರು. ಉದಾ: ಎತ್ಬಾಪುರದ ನಿಷಿಧಿಗಲ್ಲು, ರುಮ್ಮನಗೂಡಿನ ಮಾಸ್ತಿಕಲ್ಲು.

ಡ. ಆರ್ಥಿಕ ಸ್ಥಿತಿಗತಿ :

ಶಿರೋಳ್ಳಿಯಲ್ಲಿ ದೊರೆತ ಕ್ರಿ.ಶ.೧೧೫೪ರ ನಾಗಲಿಂಗೇಶ್ವರ ಗುಡಿ (ಶಂಕರನಾರಾಯಣ) ಗುಡಿಯ ಶಾಸನದಲ್ಲಿ ದಂಡನಾಯಕ ವಿಮಲಾದಿತ್ಯ ಮತ್ತು ಅವನ ಸೋದರ ಸಿರಿವೊಳಲಲ್ಲಿ ಒಂದು ಕೆರೆ ನಿರ್ಮಿಸಿ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಇದರಿಂದ ಆ ಕಾಲದಲ್ಲಿ ಕೃಷಿ ಮತ್ತು ಸಾರ್ವಜನಿಕರ ಕಲ್ಯಾಣಕ್ಕೆ ಮಹತ್ವ ನೀಡಿರುವುದು ಕಂಡುಬರುತ್ತದೆ.

ಉದ್ಯೋಗ : ಕೃಷಿ, ಶಾಸನಗಳು ಭೂದಾನ ಬಿಟ್ಟದ್ದು ಇಲ್ಲಿ ಆರ್ಥಿಕವಾಗಿ ಕೃಷಿಯನ್ನು ಅವಲಂಬಿಸಿದ್ದರು ಎಂದು ಪರೋಕ್ಷವಾಗಿ ತಿಳಿದುಬರುತ್ತದೆ. ಉದಾ:ಮೋಘಾ, ಶಿರೋಳ್ಳಿ ಶಾಸನಗಳು, ಕುಪನೂರು ನೇಗಿಲು ಹಿಡಿದ ಮೂರ್ತಿಶಿಲ್ಪ.

ವ್ಯಾಪಾರ : ಸುಲೇಪೇಟೆ ಪ್ರಾಚೀನ ರೇಷ್ಮೆ ವ್ಯಾಪಾರ ಕೇಂದ್ರವಾಗಿತ್ತು ಎಂದು ತಿಳಿಸಲಾಗಿದೆ. ಇದರಿಂದ ವ್ಯಾಪಾರವು ಮಾಡುವ ಬಗ್ಗೆ ಹಲವು ಶಾಸನಗಳು ವಿವರ ನೀಡುತ್ತವೆ.

ವರ್ತಕರಲ್ಲಿ ಮುಮ್ಮರಿನಂದ, ಸೆಟ್ಟಿಗುತ್ತರು, ನಖರರು, ಉಭಯ ನಾನಾ ದೇಸಿಗಳು, ಅಯ್ಯಾವಳಿಯ ಐನೂರರ್ವರು, ವೀರಬಣಂಜು ಸಂಘ ಇತ್ಯಾದಿ. ಸು.೮ನೇ ಶತಮಾನದಿಂದ

೧೪ನೇ ಶತಮಾನದಲ್ಲಿದ್ದರು. ಜೈನರು ವೈಶ್ಯರಾಗಿರುವ ಸಂಭವವಿದೆ (ಸೆಟ್ಟಿಗಳು). ವ್ಯಾಪಾರಿ ಸಂಘಗಳ ಮುಖ್ಯಸ್ಥನನ್ನು 'ಪಟ್ಟಣ ಸ್ವಾಮಿ' ಎನ್ನುತ್ತಿದ್ದರು. ಉದಾ: ಮಳಖೇಡ ಶಾಸನದಲ್ಲಿ ಈಶ್ವರ ಸೆಟ್ಟಿಗೆ ಮಲೆಯಾದ್ರಿ ಪುರವರಾಧೀಶ್ವರ ಎಂಬ ಬಿರುದಿದೆ (ಮಲೆಯಾದ್ರಿಪುರ ಇಂದಿನ ಮಳಖೇಡ) (ಕ.ಜಿ.ಶಾ.೧೯೯೬,ಪು.೨೭).

ಗಡಿಕೇಶಾವರ್‌ದ ಜೀರಬಾವಿ ಬಳಿಯಲ್ಲಿರುವ ಶಾಸನ ಬಮ್ಮಸೆಟ್ಟಿ ಎನ್ನುವ ವರ್ತಕನ ಮರಣ ದಾಖಲಿಸುತ್ತದೆ. ಇದೇ ಗ್ರಾಮದ ಕುಂಬಾರ ದೇಗುಲದ ಶಾಸನ ಮತಿಸೆಟ್ಟಿ ಎನ್ನುವ ವರ್ತಕನನ್ನು ಸೂಚಿಸುತ್ತದೆ. ಶಿರೋಳ್ಳಿಯ ಒಂದು ಶಾಸನ ಈಶ್ವರಸೆಟ್ಟಿ ತಮ್ಮ ನಾರಾಯಣ ಸೆಟ್ಟಿ ಹೆಸರನ್ನು ಸೂಚಿಸುತ್ತದೆ. ಇವುಗಳಿಂದ ಇಲ್ಲಿ ಪ್ರಮುಖ ವ್ಯಾಪಾರಿಗಳು ಮತ್ತು ಈ ಭಾಗ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದವೆಂದು ತಿಳಿದುಬರುತ್ತದೆ.

ಭೂ ಅಳತೆ ಮಾಪನಗಳು : ಶಿರೋಳ್ಳಿಯ ಶಾಸನದ ೧೪ನೇ ಸಾಲಿನಲ್ಲಿ ೩೦೦ ಮತ್ತರು ದಾನ ಮಾಡಿದ ವಿವರವಿದೆ. ನಿಡಗುಂದದ ೮ನೇ ಸಾಲಿನಲ್ಲಿ ೪೦ ಮತ್ತರು ದಾನ ಮಾಡಿದ ವಿಷಯ ತಿಳಿಸುತ್ತದೆ. ಮೋಘಾದ ಶಾಸನವು ಮತ್ತರುಗಳಲ್ಲಿ ಭೂಮಿ ದಾನ ಮಾಡಿದ ಮಾಹಿತಿ ತಿಳಿಸುತ್ತದೆ. ಈ ಶಾಸನಗಳಿಂದ ಭೂಮಿಯನ್ನು 'ಮತ್ತರು' ಎಂಬ ಅಳತೆಗೋಲಿನಿಂದ ಅಳೆಯುತ್ತಿದ್ದರೆಂದು ತಿಳಿದುಬರುತ್ತದೆ.

ನಾಣ್ಯಗಳು : ಗದ್ಯಾಣ ಅಥವಾ ಪೋನ್ ಎಂಬ ನಾಣ್ಯಗಳು ಬಳಕೆಯಾಗುತ್ತಿದ್ದವು. (ಕ.ಜಿ.ಶಾ.೧೯೯೬,ಪು.೨೭).

ಕರಗಳು : ಗಾತುಕ, ಕಿರುಕುಳಾಯ, ಕೂಳಪೊರಸು ಇತ್ಯಾದಿ ಕರಗಳಿದ್ದವು. ಈ ಕರಗಳನ್ನು ಮಹಾಜನರು ಹಾಕುತ್ತಿದ್ದರು (ಮುದ್ನೂರು ಶಾಸನ). ತಳಾರಗೂಲಿ ತಳವಾರನ ಜೀವಿತಕ್ಕಾಗಿ ಕೊಡಬೇಕಾದ ಸುಂಕ, ತಿರುಕುಳಾಯಿ-ಚಿಕ್ಕ ತೆರಿಗೆ. ಹೆಜ್ಜುಂಕ ಮತ್ತು ವಡ್ಡರಾವುಳ ಸುಂಕದಿಂದ ದೇವರಿಗೆ ದತ್ತಿ ಬಿಟ್ಟಿದುದನ್ನು ಮುದ್ನೂರಿನ ಇನ್ನೊಂದು ಶಾಸನ ತಿಳಿಸುತ್ತದೆ (ಕ.ಜಿ.ಶಾ. ೧೯೯೬, ಪು.೨೭).

♦ ♦ ♦

ಅಧ್ಯಾಯ ೩
ಶಾಸನಗಳ ಅಧ್ಯಯನ ಮತ್ತು ವೈವಿಧ್ಯತೆ

ಅಧ್ಯಾಯ ೩

ಶಾಸನಗಳ ಅಧ್ಯಯನ ಮತ್ತು ವೈವಿಧ್ಯತೆ

೩.೧. ಶಾಸನಗಳ ಅರ್ಥ, ಸ್ವರೂಪ, ಮಹತ್ವ

ಶಾಸನ ಎಂದರೆ ಆದೇಶ, ಆಜ್ಞೆ, ರಾಜಾಜ್ಞೆ ಎಂದರ್ಥ. ಶುಕ್ರ ನೀತಿಸಾರ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ರಾಜಾಜ್ಞೆ' ಎಂದು ಶಾಸನವನ್ನು ಅರ್ಥೈಸಿದ್ದಾರೆ. ಶಾಸನ ಎಂಬ ಪದ 'ಶಾಸ್' ಎಂಬ ಧಾತುವಿನಿಂದ ಬಂದಿದೆ. 'ಶಾಸ್' ಎಂದರೆ ಆಜ್ಞೆ ಮಾಡು, ಘೋಷಣೆ ಹೊರಡಿಸು ಎಂದಾಗುತ್ತದೆ (ಸಿ.ಪಿ.ಕೆ.ಯ ಶಾಸನ ಪರಿಚಯ, ಪು.೩೬). ಇಂಗ್ಲೀಷ್‌ನ Inscription ವು Inscribe ಪದದ ನಿಷ್ಪತ್ತಿ. ಇದರ ಅರ್ಥ ಕೆತ್ತು, ಕಂಡರಿಸು ಎಂದಾಗಿದೆ.

ನಮಗೆ ಶಾಸನಗಳು ಕೇವಲ ರಾಜಾಜ್ಞೆಯನ್ನು ಮಾತ್ರ ತಿಳಿಸುವುದಿಲ್ಲ. ಅವು ರಾಜರ ಸಾಧನೆ ರಾಜಮನೆತನಗಳ ವಂಶಾವಳಿಗಳ ವಿವರಣೆ, ಅವರು ಪಾಲಿಸುತ್ತಿದ್ದ ಧರ್ಮ ಅಲ್ಲದೆ ಸಾಮಾಜಿಕ, ಆರ್ಥಿಕ ಮತ್ತು ಸಾರ್ವಜನಿಕ ಜೀವನ ವ್ಯವಸ್ಥೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಆದ್ದರಿಂದ ಇಂತಹ ವಸ್ತುನಿಷ್ಠ ಇತಿಹಾಸ ತಿಳಿಸುವ ಶಾಸನಗಳ ಅಧ್ಯಯನವಾಗಿದೆ.

ಕರ್ನಾಟಕದಲ್ಲಿ ಅಶೋಕನ ಕಾಲದಿಂದ ವಿವಿಧ ರಾಜಮನೆತನಗಳ ಆಳ್ವಿಕೆ ಕಾಲ ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗೂ ನಮಗೆ ಹಲವು ಶಾಸನಗಳು ವಿಪುಲವಾಗಿ ದೊರೆಯುತ್ತವೆ. ಗುಲ್ಬರ್ಗಾ ಜಿಲ್ಲೆಯಲ್ಲಿ, ಅಶೋಕನ ಕಾಲದಿಂದ ನಿಜಾಮನ ಕಾಲದವರೆಗಿನ ಅನೇಕ ಶಾಸನಗಳು ದೊರೆಯುತ್ತವೆ. ಪ್ರಸ್ತುತ ಈ ಅಧ್ಯಯನ ಚಿಂಚೋಳಿ ತಾಲೂಕಿಗೆ ಸೀಮಿತವಾಗಿದೆ.

೩.೨. ಶಾಸನಗಳ ವೈವಿಧ್ಯತೆ :

ಶಾಶ್ವತವಾಗಿರುವ ಪದಾರ್ಥಗಳಾದ ಕಲ್ಲು, ಲೋಹ ಮತ್ತು ಮಣ್ಣಿನ ಮುದ್ರೆಗಳ ಮೇಲೆ ಕಂಡರಿಸಿರುವ ವಿಷಯಗಳೇ ಶಾಸನಗಳಾಗಿವೆ. ಅಂತಹ ಶಾಸನಗಳನ್ನು ದಾನಶಾಸನಗಳು, ದಾನ-ದತ್ತಿ ಶಾಸನಗಳು, ವೀರಗಲ್ಲುಗಳು, ಮಾಸ್ತಿ ಅಥವಾ ಮಹಾಸತಿ ಕಲ್ಲುಗಳು, ಗಡಿಕಲ್ಲು ಮತ್ತು ನಿಷಿಧಿಗಲ್ಲುಗಳು ಎಂದು ವಿಂಗಡಿಸಲಾಗಿದೆ.

ಚಿಂಚೋಳಿ ತಾಲೂಕಿನಲ್ಲಿ ದೊರೆತ ಶಾಸನಗಳನ್ನು ೧. ದಾನ ಶಾಸನಗಳು, ೨. ಸ್ಮಾರಕ ಶಾಸನಗಳು, ೩. ಪ್ರಶಸ್ತಿ ಶಾಸನಗಳು ೪. ನಾಮಸೂಚನಾವಳಿ ಶಾಸನ ಎಂದು ವಿಂಗಡಿಸಲಾಗಿದೆ. ವೀರಗಲ್ಲುಗಳನ್ನು (ಅ) ಹೋರಾಡುವ ವೀರನ ವೀರಗಲ್ಲು (ಬ) ಮಹಾಸತಿಗಲ್ಲುಗಳು (ಕ) ನಿಷಿಧಿಗಲ್ಲು (ಡ) ಗಡಿಕಲ್ಲು ಎಂದು ವಿಂಗಡಿಸಲಾಗಿದೆ.

ಅ. ಧಾರ್ಮಿಕ ಶಾಸನಗಳು :

ದಾನ-ದತ್ತಿ ಸೂಚಿಸುವ ಅಂದರೆ, ದೇವರ ಮತ್ತು ಧರ್ಮದ ಹೆಸರಲ್ಲಿ ಅನೇಕ ದಾನ-ದತ್ತಿ ನೀಡಿದ ಶಾಸನಗಳು ಧಾರ್ಮಿಕ ದಾನಶಾಸನಗಳಾಗಿವೆ. ಅದೇ ರೀತಿ ಧಾರ್ಮಿಕ ಉದ್ದೇಶಗಳಿಗಾಗಿ, ಶೈಕ್ಷಣಿಕ ಉದ್ದೇಶಗಳಿಗಾಗಿ ಹೊಸದಾಗಿ ಕಟ್ಟಿಸಿದ ಅಗ್ರಹಾರ ಇಲ್ಲವೆ ಅಗ್ರಹಾರಗಳಿಗೆ ನೀಡಿದ ದಾನದ ವಿವರ ಸೂಚಿಸುವ ಶಾಸನಗಳಾಗಿವೆ. ಒಟ್ಟಿನಲ್ಲಿ ಧಾರ್ಮಿಕ ಉದ್ದೇಶಗಳಿಗಾಗಿ ನೀಡಿದ ದಾನವನ್ನು ಸೂಚಿಸುವ ಶಾಸನಗಳಿಗೆ ಧಾರ್ಮಿಕ ದಾನ ಶಾಸನಗಳು ಎಂದು ಕರೆಯುತ್ತಾರೆ.

*** ದಾನ-ದತ್ತಿ ಶಾಸನಗಳು :**

ದಾನದ ಉದ್ದೇಶ ಕೇವಲ ಧಾರ್ಮಿಕವಾಗಿರಬಹುದು. ಸಾರ್ವಜನಿಕ ಕಲ್ಯಾಣಕಾರಕ ಉದ್ದೇಶವಾಗಿರಬಹುದು. ಉದಾ: ದೇವಾಲಯಕ್ಕೆ ನೀಡಿದ ದಾನ, ಕೆರೆ, ಛತ್ರ, ಅಗ್ರಹಾರ ಕಟ್ಟಿಸಲು ನೀಡಿದ ದಾನವಾಗಿರಬಹುದು. ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಆಹಾರ ವ್ಯವಸ್ಥೆಗೆ ಇಲ್ಲವೆ ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಿದ ದಾನವಾಗಿರಬಹುದು. ಜೀರ್ಣೋದ್ಧಾರ ವಿಷಯ ಕುರಿತು ನೀಡಿದ ದಾನವಾಗಿರಬಹುದು. ದೇವಾಲಯದ ಬ್ರಾಹ್ಮಣರಿಗೆ ಧೂಪಕ್ಕೆ, ಸಿಗರಿಗೆ, ಬಾರಿಸುವವರಿಗೆ ಪೂಜಾರಿಗಳಿಗೆ, ಅಲ್ಲಿನ ಪೂಜೆ ಸೇವೆಗಳಿಗಾಗಿ ಹಲವು ಜನರಿಗೆ ನೀಡಿದ ದಾನಗಳಾಗಿರಬಹುದಾಗಿದೆ.

ದಾನ ಶಾಸನಗಳು ಖಾಸಗಿ ವ್ಯಕ್ತಿಗಳು ನೀಡಿದ ದಾನವನ್ನು ಇಲ್ಲವೆ ರಾಜನು, ಮಾಂಡಳಿಕರು ಅಧಿಕಾರ ವರ್ಗದವರು ನೀಡಿದ ದಾನದ ವಿಷಯ ಒಳಗೊಂಡಿರಬಹುದು. ದಾನಶಾಸನಗಳು ಹಣದ ರೂಪದಲ್ಲಿ ಇಲ್ಲವೆ ಭೂಮಿಯ ರೂಪದಲ್ಲಿ ನೀಡಲಾಗುತ್ತಿತ್ತು. ಪ್ರಸ್ತುತ ಚಿಂಚೋಳಿ ತಾಲೂಕಿನಲ್ಲಿ ಸುಲೇಪೇಟೆಯ ಈಶ್ವರ ದೇವಾಲಯದ ಶಾಸನವು ಸಾರಂಗದೇವ ಹಾಗೂ ಮತ್ತೊಂದು ದೇವರಿಗೆ ಭೂದಾನ ನೀಡಿದ ವಿಷಯ ದಾಖಲಿಸಿದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೮೯).

*** ಭೂದಾನ ಶಾಸನಗಳು :**

ದೇಗಲ್ಮಡಿಯ ಸಂಗಮೇಶ್ವರ ಗುಡಿಯ ಬಳಿಯಲ್ಲಿರುವ ಶಾಸನ ಆರನೆ ವಿಕ್ರಮಾದಿತ್ಯನ ಕಾಲದ್ದಾಗಿದೆ. ಇದು ಅರಸ ಮಹಾದಂಡನಾಯಕನಾದ ಬಮ್ಮನಾಯಕ ದೇವಾಲಯ ನಿರ್ಮಿಸಿ, ದೇವರಿಗೆ ಮತ್ತು ತಪೋಧನರಿಗೆ ಭೂದಾನ ಮಾಡಿದ ಎಂದು ತಿಳಿಸುತ್ತದೆ (ಕ.ಸ.ಗೆ.ಕ.ಜಿ.೧೯೯೭, ಪು.೭೨೯). ಶಿರೋಳ್ಳಿಯ ನಾಗಲಿಂಗೇಶ್ವರ ಗುಡಿಯ ಶಾಸನದಲ್ಲಿ ದಂಡನಾಯಕ ವಿಮಲಾದಿತ್ಯ ಮತ್ತು ಅವನ ಸೋದರ ಚಂದ್ರ ಸಿರಿವೋಳಲಲ್ಲಿ ಮೂರು ದೇವಾಲಯ ಮತ್ತು ಒಂದು ಕೆರೆ ಕಟ್ಟಿಸಿದ ಮತ್ತು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ (ಕ.ಸ.ಗೆ.ಕ.ಜಿ.೧೯೯೩, ಪು.೭೮೦). ಶಿರೋಳ್ಳಿಯಲ್ಲಿನ ಹೂಡ್ಯಾದ ಮೇಲಿನ ಶಾಸನ ನಾರಾಯಣ ಶೆಟ್ಟಿಯು ಸತ್ರವನ್ನು ನಿರ್ಮಿಸಿ ೪೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ (ಕ.ಸ.ಗೆ.ಕ.ಜಿ. ೧೯೯೭,ಪು.೭೮೦). ಮೋಘಾದ ಪಂಚಾಯತ್ ಕಟ್ಟೆ ಬಳಿ ದೊರೆತ ಶಾಸನ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿ, ಅದರ ಪೂಜಾವಿಧಿಗೆಂದು ಬಾಲಚಂದ್ರ ಭಟಾರರಿಗೆ ೩೦೦ ಮತ್ತರು ಭೂಮಿ ದಾನ ಬಿಟ್ಟ ವಿಷಯ ತಿಳಿಸುತ್ತದೆ (ಕ.ಸ.ಗೆ.ಕ.ಜಿ.೧೯೯೭, ಪು.೭೬೩).

ಮೋಘಾದ ರಾಮಲಿಂಗೇಶ್ವರ ದೇವಾಲಯದ ಕಳಚೂರಿ ಕಾಲದ ಶಾಸನ ರಾಮನಾಥ ದೇವಾಲಯ ಹಾಗೂ ರಾಮತೀರ್ಥವನ್ನು ವಾಸಪ್ಪಯ್ಯ ದಂಡನಾಯಕನು ಮಾಡಿಸಿದಾಗ ಮಹಾಮಂಡಲೇಶ್ವರ ವೀರಗೊಂಕರಸ, ರಾಣಿ ಮೈಳಲದೇವಿ ಹಾಗೂ ಕುಮಾರ ಮಲ್ಲದೇವರಸರು ಮೋಘೆಯ ದೇಗುಲಕ್ಕೆ ದಾನ ಕೊಟ್ಟ ವಿಷಯ ತಿಳಿಸುತ್ತದೆ (ಕ.ಸ.ಗೆ.ಕ.ಜಿ.೧೯೯೭, ಪು.೭೬೩).

*** ಅಗ್ರಹಾರ, ದೇವಾಲಯ ನಿರ್ಮಾಣ ಮತ್ತು ಕೆರೆ, ಕೋಟೆ, ದರ್ಗಾ ನಿರ್ಮಾಣ ತಿಳಿಸುವ ಶಾಸನಗಳು :**

ಪಸ್ತಾಪುರ ಗುಡ್ಡದ ಮೇಲಿನ ಶಾಸನವು ತೋನಿಪಲ್ಲಿ ಅಗ್ರಹಾರ ಕಟ್ಟಿಸಿದ ವಿಷಯ ತಿಳಿಸುತ್ತದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೪೧). ನಾಗಲಿಂಗೇಶ್ವರ ಗುಡಿಯ ಶಾಸನವು ಹರಿಹರನ ತ್ರಿಕೂಟ ದೇವಾಲಯ ಮತ್ತು ಕೆರೆ ಕಟ್ಟಿಸಿದ ವಿಷಯ ತಿಳಿಸುತ್ತದೆ. ಕೇಶಾವರ್ ಜೈನ ಬಸದಿಯ ಮುಖಮಂಟಪದ ಶಾಸನ ಪಾರ್ಶ್ವನಾಥ ಚೈತ್ಯಾಲಯವನ್ನು ನಿರ್ಮಿಸಿದ ವಿಷಯ ತಿಳಿಸುತ್ತದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೦೨). ಚಿಂಚೋಳಿಯ ಒಂದು ಪರ್ಶಿಯನ್ ಶಾಸನ ಅಮಿರ್‌ಖಾನ್ ಕೋಟೆ ನಿರ್ಮಿಸಿದ ಎಂದು ತಿಳಿಸುತ್ತದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೧೯). ಚಿಂಚೋಳಿಯ ಎರಡು ಪರ್ಶಿಯನ್ ಶಾಸನಗಳಲ್ಲಿ ಒಂದು ಸಿದ್ದಿ ಬಷೀರ್ ದರ್ಗಾದ ಬಾಗಿಲು ನಿರ್ಮಿಸಿದ ಅಂಶ ತಿಳಿಸುತ್ತದೆ. ಇನ್ನೊಂದು ದಲೀಲ್‌ಖಾನ್‌ನು ದರ್ಗಾಕ್ಕೆ ಕಮಾನುಳ್ಳ ಬಾಗಿಲವಾಡ ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೧೯).

* **ಸ್ಮಾರಕ ಶಾಸನಗಳು :**

ಊರಿನ ಗಣ್ಯ ಅಧಿಕಾರಿ, ರಾಜ ಇಲ್ಲವೆ ವ್ಯಕ್ತಿಯ ಮರಣ ಹೊಂದಿದ ವಿಷಯವನ್ನು ದಾಖಲಿಸುವ ಶಾಸನವೇ ಸ್ಮಾರಕ ಶಾಸನ ಎಂದು ಕರೆಯುತ್ತಾರೆ. ಉದಾ:ಚಿಂಚೋಳಿಯ ಗಡಿ ಕೇಶಾವರ್‌ನ ಜೀರಾಬಾವಿಯ ಬಳಿ ದೊರೆತ ಶಾಸನವೊಂದು ಪ್ರಸಿದ್ಧ ವ್ಯಾಪಾರಿಯಾದ ಬಮ್ಮಸೆಟ್ಟಿಯು ಮರಣ ಹೊಂದಿದ ವಿಷಯವನ್ನು ದಾಖಲಿಸಿದೆ (ಕ.ಸ.ಗೆ.ಕ.ಜಿ.೧೯೯೩, ಪು.೭೦೨).

* **ನಾಮಸೂಚಾವಳಿ ಶಾಸನಗಳು**

ರಟಕಲ್‌ನ ಬಂಕನಾಥ ದೇವಾಲಯದ ನವರಂಗದ ಕಂಬವೊಂದರ ಪೀಠದ ಮೇಲಿರುವ ಶಾಸನವು ಇಲ್ಲಿಯ ದೇವರನ್ನು ಬಂಕೇಶ್ವರನೆಂದು ಕರೆದಿದೆ (ಕ.ಸ.ಗೆ.ಕ.ಜಿ. ೧೯೯೭, ಪು.೬೬). ನವಕೋಟಿ ನಾರಾಯಣ ಗುಡಿಯ ನವರಂಗದ ಕಂಬದ ಮೇಲಿನ ಶಾಸನವು ರಾಷ್ಟ್ರಕೂಟ ಅರಸ ಅಕಾಲವರ್ಷ ಮತ್ತು ಅವನ ಬಿರುದು ಹಾಗೂ ವರ್ಷ ಕ್ರಿಶ. ೯೩೯ ಎನ್ನುವ ಕಾಲವನ್ನು ಸೂಚಿಸುತ್ತದೆ (ಕ.ಸ.ಗೆ.ಕ.ಜಿ. ೧೯೯೭, ಪು.೯೩). ಸುಲೇಪೇಟೆಯ ಈಶ್ವರ ದೇವಾಲಯದ ಶಾಸನವೊಂದು ಒಂದನೇ ಸೋಮೇಶ್ವರನ ಕಾಲದ್ದಾಗಿದೆ. (ಕ್ರಿಶ.೧೦೬೦) ಇದರಲ್ಲಿ ಸುಲ್ಲಿಗ್ರಾಮ ಎಂಬ ಉಲ್ಲೇಖವಿದೆ (ಕ.ಸ.ಗೆ.ಕ.ಜಿ. ೧೯೯೭, ಪು.೯೮).

* **ಪ್ರಶಸ್ತಿ ಶಾಸನಗಳು :**

ಮೋಘಾದ ರಾಮಲಿಂಗೇಶ್ವರ ದೇವಾಲಯದ ಶಾಸನವು ದಾನ ಶಾಸನ ಹೊರತಾಗಿ ಪ್ರಶಸ್ತಿ ಶಾಸನವೂ ಆಗಿದೆ. ಇದು ಕಲ್ಯಾಣ ಚಾಲುಕ್ಯರ ೬ನೆಯ ವಿಕ್ರಮಾದಿತ್ಯನ ಮತ್ತು ಕಳಚೂರಿಯ ಬಿಜ್ಜಳದೇವನ ಸಾಧನೆಗಳನ್ನು ಮತ್ತು ಬಿರುದುಗಳನ್ನು ವಿವರಿಸುತ್ತದೆ. ಅಲ್ಲದೆ ಮಹಾಮಂಡಳೇಶ್ವರನಾದ ವೀರಗೊಂಕ ದೇವನ ಬಗ್ಗೆ ಸ್ತುತಿಸುವ ಶಾಸನ ಇದಾಗಿದೆ. ಶಿರೋಳ್ಳಿಯ ನಾಗಲಿಂಗೇಶ್ವರ ಗುಡಿಯ ಶಾಸನವು ದಾನದ ವಿಷಯ ತಿಳಿಸುವುದರೊಂದಿಗೆ ೬ನೆಯ ವಿಕ್ರಮಾದಿತ್ಯನ ಸಾಧನೆಗಳನ್ನು ಮತ್ತು ಕಲ್ಯಾಣ ಚಾಲುಕ್ಯರ ಮೂಲ ವಂಶಸ್ಥಾಪಕರ ಕುರಿತು ವಿವರಣೆ ನೀಡುತ್ತದೆ. ಕಲ್ಯಾಣ ಚಾಲುಕ್ಯ ವಂಶದ ರಾಜರ ಗುಣಗಾನ ಇದರಲ್ಲಿ ವ್ಯಕ್ತವಾಗಿದೆ. ವಿಮಳಾದಿತ್ಯ ದಂಡನಾಯಕ ಮತ್ತು ಚಂದ್ರಾದಿತ್ಯರನ್ನು ಹೊಗಳುವ ಹೊಗಳಿಕೆ ಇದರಲ್ಲಿದೆ. ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಶಾಸನವು ೬ನೇ ವಿಕ್ರಮಾದಿತ್ಯನ ಬಿರುದುಗಳ ವಿವರ ಮತ್ತು ಹೊಗಳಿಕೆಯನ್ನು ಹೊಂದಿರುವ ಶಾಸನವಾಗಿದೆ (ಕ.ಜಿ.ಶಾ. ೧೯೯೬, ಪು.೨೫೯-೨೬೩).

*** ದತ್ತಿ ಶಾಸನಗಳು :**

ಕೇಶಾವರದ ಪಾಳು ಸಿದ್ದಪ್ಪನ ಗುಡಿಯ ಶಾಸನ ಬ್ರಹ್ಮಚಾರಿಗಳಿಗೆ ದತ್ತಿಕೊಟ್ಟ ಅಂಶ ತಿಳಿಸುತ್ತದೆ (ಕ.ಸ.ಗೆ.ಗು.ಜಿ. ೧೯೯೩, ಪು.೭೦೨). ನಿಡಗುಂದದ ಕಾಳಮ್ಮನ ಗುಡಿಯ ನವರಂಗದ ಶಾಸನ ವಿಷ್ಣುವರ್ಧನ ವೀರಪೆರ್ಮಾಡಿ ದೇವನ ಕಾಲದ ದತ್ತಿ ಶಾಸನವಾಗಿದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೩೯).

*** ಜೀರ್ಣೋದ್ಧಾರ ಅಂಶ ಒಳಗೊಂಡ ಶಾಸನಗಳು :**

ಚಿಂಚೋಳಿಯ ಎರಡು ಪರ್ಶಿಯನ್ ಶಾಸನಗಳು ಕೋಟೆಗೆ ಮತ್ತು ದರ್ಗಾಕ್ಕೆ ಜೀರ್ಣೋದ್ಧಾರ ಮಾಡಿದ ವಿಷಯ ತಿಳಿಸುತ್ತವೆ. ಕೇಶಾವರ್ (ಗಡಿ)ಯ ಒಂದು ಶಾಸನ ಕ್ರಿ.ಶ. ೧೩೮೫ರಲ್ಲಿ ಜೈನ ಬಸದಿಯನ್ನು ಜೀರ್ಣೋದ್ಧಾರ ಮಾಡಿದ ವಿಷಯವನ್ನು ತಿಳಿಸುತ್ತದೆ.

ಬ. ವೀರಗಲ್ಲುಗಳು :

> "ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
> ಕ್ಷಣ ವಿದ್ವಂಸಿ ನೀ ಕಾಯೇ ಕಾ ಚಿಂತಾ ಮರಣೇ ರಣೇ"

ಎಂಬುದಾಗಿ ಕರ್ನಾಟಕದ ವೀರಗಲ್ಲುಗಳ ಪಾಠದ ನಾಂದಿ ಶ್ಲೋಕವಾಗಿದೆ (ಕ.ವಿ. ಆರ್.ಶೇಷಶಾಸ್ತ್ರಿ,೧೯೮೨,ಪು.೨೭).

> "ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಣ್ಡನಮ್
> ಮೃತ್ಯುಸ್ತತ್ ಕ್ಷಣಿಕೋ ದುಃಖಮ್ಮಾನಭಂಗಂ ದಿನೇ ದಿನೇ"
> ಕ್ರಿ.ಶ. ೧೧೪೦ರ ಶಾಸನದಲ್ಲಿ ಉಲ್ಲೇಖ.
> "ಅನಿತ್ಯಮದ್ರುವಂ ಪ್ರಾಣಂ ಮಾನಮಾಚಂದ್ರ ತಾರಕಂ
> ಪ್ರಾಣಮೇವ ಪರಿತ್ಯಾಗೇ ಮಾನವೇವ ಸುರಕ್ಷಿತಂ"

ಎಂಬ ಶ್ಲೋಕದಲ್ಲಿ ವೀರತ್ವದ ಪಾರಮಾರ್ಥಿಕ ಫಲವೂ ವ್ಯಕ್ತವಾಗುತ್ತದೆ (ಕ.ವಿ. ಆರ್.ಶೇಷಶಾಸ್ತ್ರಿ,ಪು.೨೮) ಮಾನ ಇಲ್ಲವೆ ಒಂದು ಜೀವಿಯ ರಕ್ಷಣೆಗಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ವೀರನ ವೀರಗಾಥೆಯನ್ನು ವಿವರಿಸುವ ಶಿಲ್ಪಗಳೇ ವೀರಗಲ್ಲುಗಳಾಗಿವೆ. ದೇಶದ ರಕ್ಷಣೆ, ಉಪ್ಪಿನ ಋಣ ತೀರಿಸುವ ಉದ್ದೇಶ ಮತ್ತು ಹೆಣ್ಣಿನ ಮಾನ, ಗೋಸಂಪತ್ತಿನ ರಕ್ಷಣೆಗಳ ಉದ್ದೇಶದಿಂದ ಹೋರಾಡುವ ವೀರನ ಬಗ್ಗೆ ವೀರಗಲ್ಲುಗಳು ಸೂಚಿಸುತ್ತವೆ. ಲೌಕಿಕ ಮತ್ತು ಧಾರ್ಮಿಕ, ವ್ಯಕ್ತಿಗತ ಉದ್ದೇಶದಿಂದ ಮಡಿದವರಿಗಾಗಿ ನೆಟ್ಟ ಕಲ್ಲುಗಳೇ ವೀರಗಲ್ಲಾಗಿವೆ. ಒಟ್ಟಿನಲ್ಲಿ ವೀರನು ಲೌಕಿಕ ಮತ್ತು ಪಾರಮಾರ್ಥಿಕ ಉದ್ದೇಶದಿಂದ ಹೋರಾಡಿ ಜಯಿಸುತ್ತಿದ್ದ

ಇಲ್ಲವೆ ಮಡಿಯುತ್ತಿದ್ದರು. ಜಯಿಸಿದ ವೀರರಿಗೆ ಬಾಳ್ಗಚ್ಚುವಾಗಿ ಅನೇಕ ಗೌರವ ಧನ ಪದವಿ, ಭೂಮಿ ನೀಡುತ್ತಿದ್ದರು. ಇದಕ್ಕೆ ಉತ್ತಮ ಉದಾ : ೫ನೇ ಶತಮಾನದ ಪ್ರಾಚೀನ ಕನ್ನಡದ ಹಲ್ಮಿಡಿ ಶಾಸನ.

ಮರಣ ಹೊಂದಿದ ವೀರನ ರಕ್ತಸಂಬಂಧಿಗಳು ಇಲ್ಲವೆ ಆತ್ಮೀಯರು ಆ ವೀರನ ಹೆಸರಲ್ಲಿ ವೀರಗಲ್ಲು ನೆಡುತ್ತಿದ್ದರು. ವೀರ ಸತ್ತು ಸ್ವರ್ಗಕ್ಕೆ ಹೋಗಿರುವಂತೆ, ಮುಕ್ತಿ ಪಡೆದಂತೆ ಕೆತ್ತಿಸಿ ವೀರರಲ್ಲಿ ಪಾರಮಾರ್ಥಿಕ ಗುರಿ, ಉದ್ದೇಶ ಜಾಗೃತಗೊಳಿಸುತ್ತಿದ್ದ ವೀರಗಲ್ಲುಗಳು ಹೋರಾಡಲು ಉತ್ತೇಜಿಸುತ್ತಿದ್ದವು. ಕರ್ನಾಟಕದಲ್ಲಿ ಈ ರೀತಿಯ ವೀರಗಲ್ಲುಗಳು ಸಾಕಷ್ಟು ಸು.೫ನೇ ಶತಮಾನದ ಅಂತ್ಯ ಭಾಗದಿಂದ ದೊರೆಯುತ್ತವೆ ಎಂದು ಹೇಳಬಹುದು.

ಪ್ರಸ್ತುತ ಗುಲ್ಬರ್ಗಾದ ಚಿಂಚೋಳಿ ತಾಲೂಕಿನಲ್ಲಿ ಸುಮಾರು ಕ್ರಿ.ಶ.೬ನೇ ಶತಮಾನದಿಂದ ವೀರಗಲ್ಲುಗಳು ದೊರೆತಿವೆ. ಕ್ರಿ.ಶ.೬-೭ನೇ ಶತಮಾನದಿಂದ ೧೨ನೇ ಶತಮಾನದ ಅಂತ್ಯ ಭಾಗದವರೆಗೆ ವೀರಗಲ್ಲುಗಳು ದೊರಕುತ್ತವೆ. ಅಂತಹ ವೀರಗಲ್ಲುಗಳ ವೈವಿಧ್ಯತೆ ಈ ರೀತಿಯಾಗಿ ಇಲ್ಲಿ ಕಾಣಬಹುದು.

* **ಹೋರಾಟದ ವೀರನ ವೀರಗಲ್ಲುಗಳು** : ಯುದ್ಧದಲ್ಲಿ ಹೋರಾಡಿ ಮಡಿದ ವೀರರನ್ನು ಸೂಚಿಸುವ ವೀರಗಲ್ಲು ಶಿಲ್ಪಗಳು ಇಲ್ಲಿ ಹೆಚ್ಚು ದೊರೆಯುತ್ತವೆ.

ರಟ್ಕಲ್‌ನಲ್ಲಿನ ವೀರಗಲ್ಲುಗಳು, ಯುದ್ಧದಲ್ಲಿ ಹೋರಾಡುತ್ತಿರುವ ವೀರರ ಶಿಲ್ಪಗಳನ್ನು ಒಳಗೊಂಡಿವೆ. ಸೋಮನಿಂಗದಹಳ್ಳಿಯ ವೀರಗಲ್ಲುಗಳು ಯುದ್ದದಲ್ಲಿ ಶತ್ರು ಸೈನ್ಯದ ವಿರುದ್ಧ ಹೋರಾಡುತ್ತಿರುವ ದೃಶ್ಯಾವಳಿಯನ್ನೊಳಗೊಂಡಿದೆ. ಗೊಟ್ಟಂಗೊಟ್ಟಿಯಲ್ಲಿಯ ಎಂಟು ವೀರಗಲ್ಲುಗಳಲ್ಲಿ ವೀರರು ಹೋರಾಡಿ ಮಡಿದ ಚಿತ್ರಣ ಕೆತ್ತಲ್ಪಟ್ಟಿದೆ. ಇವು ಹೆಚ್ಚಾಗಿ ಕಾಲಾಳುಗಳು ಹೋರಾಡಿದ ವಿವರ ನೀಡುವ ವೀರಗಲ್ಲುಗಳಾಗಿವೆ.

ಕ. ಮಹಾಸತಿಗಲ್ಲುಗಳು :

ಮರಣ ಹೊಂದಿದ ಪತಿಯೊಂದಿಗೆ ಪತ್ನಿ ಚಿತೆಯೇರಿ ಸತಿ ಹೋಗಿದ್ದವರ ನೆನಪಿಗಾಗಿ ನೆಟ್ಟ ಕಲ್ಲುಗಳೆ ಮಾಸ್ತಿಗಲ್ಲುಗಳಾಗಿವೆ. ಅಂತಹ ಪದ್ಧತಿ ಇಲ್ಲಿ ಇತ್ತು ಎನ್ನುವುದಕ್ಕೆ ಚಿಂಚೋಳಿ ತಾಲೂಕಿನಲ್ಲಿ ದೊರೆತ ಏಳು ಮಾಸ್ತಿಗಲ್ಲುಗಳು ಸಾಕ್ಷಿಯಾಗಿವೆ. ಉದಾ: ಎತ್ಪಾಪುರದ ಸು.೬-೭ನೇ ಶತಮಾನದ ಈ ತಾಲೂಕಿನ ಪುರಾತನ ಮಾಸ್ತಿ ಮೂರ್ತಿ ದೊರೆತಿದೆ. ರುಮ್ಮನಗೂಡದ ಸು.೧೦ನೇ ಶತಮಾನದ ಮಾಸ್ತಿಗಲ್ಲುಗಳು ಕಪ್ಪುಶಿಲೆಯಲ್ಲಿದ್ದು ಒಕ್ಕೈ ಮಾಸ್ತಿಗಳಾಗಿವೆ. ಸೋಮನಿಂಗದ ಹಳ್ಳಿಯಲ್ಲಿ ದೊರೆತ ಒಂದು ವೀರ ಮಾಸ್ತಿ ಮತ್ತೊಂದು ಮಾಸ್ತಿಗಲ್ಲು ಇಲ್ಲಿಯೂ ಸತಿ

ಹೋಗುವ ಪದ್ಧತಿ ಕ್ರಿ.ಶ.೧೧ನೇ ಶತಮಾನದಲ್ಲಿತ್ತು ಎನ್ನುವುದಕ್ಕೆ ಕುರುಹುಗಳಾಗಿವೆ. ಭೂತಪುರದ ಸು.೧೧-೧೨ನೇ ಶತಮಾನದ ಒಕ್ಕೈ ಮಾಸ್ತಿ (ಕ.ಸ.ಗೆ.ಕ.ಜಿ.೧೯೯೭ ಪು.೭೪೭) ಹಲ್‌ಚೇರಾದ ಮಾಸ್ತಿಗಲ್ಲು ಇವುಗಳೆಲ್ಲ ಈ ಪ್ರದೇಶದಲ್ಲಿ ಪತಿಯ ಮರಣದ ನಂತರ ಸತಿ ಹೋಗುವ ಪದ್ಧತಿ ಇತ್ತೆಂಬುದನ್ನು ಸೂಚಿಸುತ್ತವೆ.

ಡ. ಇತರೆ :

* **ನಿಷಧಿಕಲ್ಲು** : ಜೈನ ಧರ್ಮದಲ್ಲಿ ಧಾರ್ಮಿಕ ಉದ್ದೇಶ ಇಲ್ಲವೆ, ವ್ಯಕ್ತಿಗತ ಉದ್ದೇಶ ಇಲ್ಲವೆ ಸಾರ್ವಜನಿಕ ಕಲ್ಯಾಣದ ಉದ್ದೇಶಕ್ಕಾಗಿ ಸಲ್ಲೇಖನ ವ್ರತ ಆಚರಣೆ ಮಾಡಿ ಮರಣ ಹೊಂದಿದ ವಿಷಯವನ್ನು ಸೂಚಿಸುವ ಕಲ್ಲುಗಳಾಗಿವೆ. ಉದಾ: ಎತ್ಬಾಪುರದ ಹನುಮಾನ ಮಂದಿರದ ಹತ್ತಿರ ದೊರೆತ ಎರಡು ಪಾದಗಳು ಇಲ್ಲಿ ನಿಷಧಿ ಹೋದ ಬಗ್ಗೆ ಸೂಚಿಸುತ್ತದೆ.

* **ಗಡಿಕಲ್ಲು** : ಗಡಿಯನ್ನು ಅಥವಾ ಸೀಮೆಯನ್ನು ಸೂಚಿಸುವ ಕಲ್ಲುಗಳೆ ಗಡಿಕಲ್ಲುಗಳಾಗಿವೆ. ಬೇಡಕ್‌ಪಳ್ಳಿಯ ಒಂದು ಬಿಳಿಕಲ್ಲಿನ ಮೇಲೆ ಈಟಿ ಹಿಡಿದು ಶಂಖದಂತ ಮುಡಿ ಧರಿಸಿ ಕಾವಲು ನಿಂತಂತೆ ನಿಲ್ಲಿಸಲ್ಪಟ್ಟ ಕಲ್ಲಿದೆ.

* **ಹಂದಿ ಬೇಟೆಯ ವೀರಗಲ್ಲು** : ಹುಲುಸುಗೂಡಿನ ಅಗಸಿ ಬಳಿ ದೊರೆತ ಒಂದು ವೀರಗಲ್ಲು ಹಂದಿ ಬೇಟೆಯಾಡುತ್ತಿರುವಂತೆ ಕೆತ್ತಲ್ಪಟ್ಟಿದೆ. ಪ್ರಸ್ತುತ ಈ ಭಾಗದಲ್ಲಿ ದೊರೆತ ಶಾಸನ ವೈವಿಧ್ಯತೆಗಳನ್ನು ಇಲ್ಲಿ ಸೆರೆಹಿಡಿಯಲಾಗಿದೆ.

೩.೩. ಚಿಂಚೋಳಿ ತಾಲೂಕಿನ ಶಾಸನಗಳು ಮತ್ತು ವೀರಗಲ್ಲುಗಳು

ಗ್ರಾಮ: ದೇಗಲ್ಮಡಿ	ಸ್ಥಳ: ಸಂಗಮೇಶ್ವರ ದೇವಾಲಯ
ಕಾಲ: ಕ್ರಿ.ಶ.೧೧೦೦	ಅರಸು ಮನೆತನ: ಕಲ್ಯಾಣ ಚಾಲುಕ್ಯರು
ಲಿಪಿ ಮತ್ತು ಭಾಷೆ: ಕನ್ನಡ	ಉಲ್ಲೇಖ: ಕ.ಸ.ಗೆ.ಕ.ಜಿ. (೧೯೯೭) ಪು.೭೯
	ಕ.ಜಿ.ಶಾ.ಹನುಮಾಕ್ಷಿಗೋಗಿ (ಪುಟ.೨೫೧-೨೫೨)

ಮಹಾದಂಡನಾಯಕ, ಬಮ್ಮನಾಯಕ ಎಂದು ಉಲ್ಲೇಖಿಸುತ್ತದೆ. ವಿಕ್ರಮ ವರ್ಷ ೨೬ನೇ ವಿಕ್ರಮ ಸಂವತ್ಸರದ ಪುಷ್ಯ ಶುದ್ಧ ೧೧ನೇ ಆದಿವಾರ ಉತ್ತರಾಯಣ ಸಂಕ್ರಾಂತಿ ದಿವಸ ಎಂದು ಕಾಲ ಉಲ್ಲೇಖಿಸಿದೆ. (ಮುಂದಿನ ಅಕ್ಷರಗಳು ತ್ರುಟಿತ). ದೇವರ ನೈವೆದ್ಯಕ್ಕೆ ಮತ್ತು ತಪೋಧರನಿಗಾಗಿ ಬಿಟ್ಟ ಧರ್ಮ ಎಂದು ತಿಳಿಸುತ್ತದೆ. ಶಾಸನದ ಕೊನೆಯಲ್ಲಿ ಶಾಪಾಶಯವನ್ನು ಒಳಗೊಂಡಿದೆ.

ಹಿಮ್ಮುಖ ಶಾಸನ ೨೦–೨೮ನೇ ಸಾಲುಗಳಿಂದ ಕೂಡಿದೆ. ಒಟ್ಟು ಎಂಟು ಸಾಲಿನ ಶಾಸನ ಭೂದಾನದ ಶ್ರೇಷ್ಠತೆ, ದಾನ ಮಾಡಿದವರಿಗೆ ಮಂಗಳವಾಗಲಿ ಎಂಬ ಶ್ರೇಯಸ್ಕರ ಶ್ಲೋಕ ಮತ್ತು ಶಾಪಾಶಯವನ್ನೊಳಗೊಂಡಿದೆ.

ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯ ಕುಲತಿಲಕ, ಚಾಲುಕ್ಯಾಭರಣ, ಶ್ರೀಮತ್ರಿಭುವನಮಲ್ಲ, ದೇವರನರ್ಘ್ಯರತ್ನ ಮತ್ತು ಸಮಸ್ತ ಭುವನಾಶ್ರಯ ಎಂಬ ವಿಕ್ರಮಾದಿತ್ಯನ ಬಿರುದಾವಳಿಗಳನ್ನು ಉಲ್ಲೇಖಿಸುತ್ತದೆ.

ಗ್ರಾಮ: ನಿಡಗುಂದ | ಸ್ಥಳ: ನವಕೋಟಿ ನಾರಾಯಣ

ಕಾಲ: ಕ್ರಿ.ಶ.೯೩೯ | ಅರಸು ಮನೆತನ: ರಾಷ್ಟ್ರಕೂಟರು

ಲಿಪಿ ಮತ್ತು ಭಾಷೆ: ಕನ್ನಡ | ಉಲ್ಲೇಖ:ಕ.ಸ.ಗೆ.ಕ.ಜಿ. (೧೯೯೭) ಪು.೭೩೯, ಕ.ಜಿ.ಶಾ.ಹನುಮಾಕ್ಷಿಗೋಗಿ(೧೯೯೬) ಪು.೨೫೩

ಸ್ವಸ್ತಿ ಎಂದು ಪ್ರಾರಂಭವಾಗುವ ಶಾಸನ ಶಕ ನೃಪಕಾಲಾತೀತ ಸಂವತ್ಸರದ ಸತಾಂಗ ೮೬೧ ನೆಯ ವಿಕಾರಿ ಸಂವತ್ಸರದ ಆಷಾಢ ಶುದ್ಧ ಸೋಮವಾರ ಎಂದಿದೆ. ನಾಲ್ಕನೇ ಸಾಲಿನ ಕೊನೆಯ ಪದ ಮತ್ತು ೫ನೇ ಸಾಲು ಸ್ವಸ್ತ್ಯ ಕಾಳವರ್ಷದೇವ ಶ್ರೀ ಪೃಥ್ವಿವಲ್ಲಭ ಮಹಾರಾ(ಜ) ಎಂದು ಉಲ್ಲೇಖಿಸುತ್ತದೆ. ನವಕೋಟಿ ನಾರಾಯಣ ನವರಂಗದ(ಮಂಟಪದ) ಕಂಬದ ಮೇಲಿರುವುದು ರಾಷ್ಟ್ರಕೂಟ ಅಕಾಲವರ್ಷನ ಆಳ್ವಿಕೆಗೆ ಸೇರಿದೆ. ಕ್ರಿ.ಶ.೯೫೮ರ ಈ ಶಾಸನ ಮೂರನೇ ಕೃಷ್ಣನನ್ನು ಹೆಸರಿಸಿದೆ (ಕ.ಜಿ.ಐ ಮತ್ತು ಸಾಂ.ಪ.,೨೦೧೧,ಪು.೨೯).

ಅಕಾಲವರ್ಷನ ಬಿರುದು ಶ್ರೀಪೃಥ್ವಿವಲ್ಲಭ ಮಹಾರಾಜ(ಧಿರಾಜ)ಭಾಷೆ ಮತ್ತು ಕಾಲವನ್ನು ತಿಳಿಸುತ್ತದೆ. ಇದು ಸ್ತಂಭ ಶಾಸನವಾಗಿದೆ.

ಗ್ರಾಮ: ನಿಡಗುಂದ | ಸ್ಥಳ: ಕಾಳಮ್ಮನ ದೇವಾಲಯ

ಕಾಲ: ೧೧ನೇ ಶತಮಾನ | ಅರಸು ಮನೆತನ: ವಿಷ್ಣುವರ್ಧನ ವೀರಪೇರ್ಮಾಡಿ

ಲಿಪಿ ಮತ್ತು ಭಾಷೆ: ಕನ್ನಡ | ಉಲ್ಲೇಖ:ಕ.ಸ.ಗೆ. ಕಲ್ಬುರ್ಗಿ ಜಿಲ್ಲೆ(೧೯೯೭) ಪು.೭೩೯, ಗು.ಜಿ.ಶಾ.ಹನುಮಾಕ್ಷಿಗೋಗಿ,ಪು.೨೫೪

"ಸ್ವಸ್ತಿ" ಎಂಬುದರಿಂದ ಪ್ರಾರಂಭವಾಗುವ ಈ ಶಾಸನದ ಮೊದಲ ಎರಡು ಸಾಲುಗಳು ರಾಜನ ಬಿರುದು ಮತ್ತು ಹೆಸರನ್ನು ಉಲ್ಲೇಖಿಸುತ್ತದೆ. ಒಂಭತ್ತು ಸಾಲುಗಳಿದ್ದು, ಹೆಚ್ಚಿನ ಸಾಲುಗಳು ಅಳಿಸಿವೆ. ಶ್ರೀ ಕೇಶವ ದೇವರಿಗೆ ಎಂದು ಅಸ್ಪಷ್ಟವಾಗಿದೆ. ತೋಂಟ(ತೋಟ್ಟ)

ಮತ್ತರು ಬಿಟ್ಟ ವಿಷಯ ತಿಳಿಸುತ್ತದೆ. ಕೊನೆಯ ಸಾಲುಗಳು ಶಾಪಾಶಯವನ್ನು ಉಲ್ಲೇಖಿಸುತ್ತದೆ. ಈ ಶಾಸನ ಅಸ್ಪಷ್ಟ ಮತ್ತು ಅಪೂರ್ಣವಾಗಿದೆ.

ಗ್ರಾಮ: ಶಿರೊಳ್ಳಿ	ಸ್ಥಳ: ಹೂಡ್ಯಾ
ಕಾಲ: ಸು.೧೨ ನೇ ಶತಮಾನ	ಅರಸು ಮನೆತನ: ಕಲ್ಯಾಣ ಚಾಲುಕ್ಯರು
ಲಿಪಿ ಮತ್ತು ಭಾಷೆ: ಕನ್ನಡ	ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೮೦

ಈಶ್ವರ ಶೆಟ್ಟಿಯ ತಮ್ಮ ನಾರಾಯಣ ಶೆಟ್ಟಿಯು ಸತ್ರವನ್ನು ನಿರ್ಮಿಸಿ ೪೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕಪ್ಪುಶಿಲೆ(ಗ್ರ್ಯಾನೆಟ್)ಯಲ್ಲಿ ಈ ಶಾಸನವನ್ನು ಕೊರೆಯಲಾಗಿದೆ. ಉಪಾಧ್ಯಾಯರಿಗೆ ಉತ್ತಮ ಸ್ಥಿತಿಯಲ್ಲಿದೆ. ಅಗ್ರಹಾರದಲ್ಲಿನ ವಿದ್ಯಾರ್ಥಿಗಳಿಗಾಗಿ ಭೂದಾನ ಬಿಟ್ಟ ವಿಷಯ ಉಲ್ಲೇಖಿಸುತ್ತದೆ.

ಗ್ರಾಮ: ಪಸ್ತಾಪುರ	ಸ್ಥಳ: ಪಸ್ತಾಪುರ ಗುಡ್ಡ
ಕಾಲ: ೧೧-೧೨ನೇ ಶತಮಾನ	ಅರಸು ಮನೆತನ: ಕಲ್ಯಾಣ ಚಾಲುಕ್ಯರು
ಲಿಪಿ ಮತ್ತು ಭಾಷೆ: ಕನ್ನಡ	ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು-೭೪೧

ಈ ಶಾಸನ ತೋನಿಪಲ್ಲಿಯನ್ನು ಅಗ್ರಹಾರವನ್ನಾಗಿಸಿ ಬ್ರಾಹ್ಮಣರಿಗೆ ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಸು.೧೧-೧೨ನೇ ಶತಮಾನದಲ್ಲಿ ತೋನಿಪಲ್ಲಿ ಎಂಬುದನ್ನು ಹೊಸದಾಗಿ ಅಗ್ರಹಾರ ಮಾಡಿರುವದು ಈ ಶಾಸನದ ವಿಶೇಷ ಅಂಶವಾಗಿದೆ.

ಗ್ರಾಮ: ಮೋಘಾ	ಸ್ಥಳ: ಗ್ರಾಮಪಂಚಾಯತ್ ಕಟ್ಟೆ
ಕಾಲ: ೧೦-೧೧ನೇ ಶತಮಾನ	ಅರಸು ಮನೆತನ: ಕಲ್ಯಾಣ ಚಾಲುಕ್ಯರು
ಲಿಪಿ ಮತ್ತು ಭಾಷೆ: ಕನ್ನಡ	ಉಲ್ಲೇಖ: ಕ.ಸ.ಗೆ.ಕ.ಜಿ.(೧೯೯೭)ಪು.೭೬೩

ಶಾಸನವು ಮೋಘಾದಲ್ಲಿ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿ ಅದರ ಪೂಜಾವಿಧಿಗೆಂದು ಬಾಲಚಂದ್ರ ಭಟಾರರಿಗೆ ೩೦೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ದಾಖಲಿಸಿದೆ. ಆದರೆ ಇದರ ಅಕ್ಷರಗಳು ಬಹಳಷ್ಟು ಅಳಿಸಿವೆ. ಇದು ಗ್ರ್ಯಾನೆಟ್ ಶಿಲೆಯಲ್ಲಿದೆ.

'ಮೋಘಾ' ಎನ್ನುವ ಸ್ಥಳನಾಮ ಮತ್ತು ಆದಿತ್ಯ ದೇವರ(ಸೂರ್ಯದೇವ) ಪ್ರತಿಷ್ಠಾಪಿಸಿದ ವಿಷಯ ಮತ್ತು ಭೂಮಿಯ ಅಳತೆ ಮಾಡುವ ವಿಧಾನ-'ಮತ್ತರು' ಎಂಬ ಅಳತೆಗೋಲನ್ನು ಉಲ್ಲೇಖಿಸುತ್ತದೆ.

ಗ್ರಾಮ: ಸುಲೇಪೇಟೆ | ಸ್ಥಳ: ಈಶ್ವರ ದೇವಾಲಯ

ಕಾಲ: ೧೦-೧೧ನೇ ಶತಮಾನ | ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ | ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೮೯

ಶಾಸನವು ಅಗ್ರಹಾರ ಸುಲ್ಯ ಗ್ರಾಮದ ಮಹಾಜನ ಹಾಗೂ ಮಹಾಪ್ರಧಾನ ಮಲ್ಲಿಕಾರ್ಜುನ ಭಟ್ಟೋಪಧ್ಯಾಯರನ್ನು ದಾಖಲಿಸಿದೆ. ಇಲ್ಲಿಯ ಸಾರಂಗದೇವ ಹಾಗೂ ಮತ್ತೊಂದು ದೇವರಿಗೆ ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಇದು ಕಪ್ಪುಶಿಲೆಯಲ್ಲಿ ಕೊರೆಯಲ್ಪಟ್ಟಿದೆ. ಆದರೆ ಅಕ್ಷರಗಳು ಬಹಳಷ್ಟು ಹಾಳಾಗಿವೆ.

ಶಾಸನದ ವಿಶೇಷತೆ ೧೧ನೇ ಶತಮಾನದಲ್ಲಿ ಸುಲ್ಯ ಗ್ರಾಮವು ಒಂದು ಪ್ರಮುಖ ಅಗ್ರಹಾರವಾಗಿತ್ತು. ಈ ಶಾಸನ ಭೂದಾನದ ವಿಷಯವನ್ನೊಳಗೊಂಡಿದೆ.

ಗ್ರಾಮ: ಚಿಂಚೋಳಿ | ಸ್ಥಳ: ದರ್ಗಾದ ಬಾಗಿಲು

ಕಾಲ: ೧೮ನೇ ಶತಮಾನ | ಅರಸು ಮನೆತನ: ನಿಜಾಮ(ಹೈದ್ರಾಬಾದ್ ನಿಜಾಮ)

ಲಿಪಿ ಮತ್ತು ಭಾಷೆ: ಪರ್ಶಿಯನ್ | ಉಲ್ಲೇಖ: ಕ.ಸ.ಗೆ.ಕ.ಜಿ.(೧೯೯೭)ಪು.೭೧೯

ದರ್ಗಾದ ಪ್ರವೇಶದಲ್ಲಿರುವ ಶಾಸನ ಕ್ರಿ.ಶ.೧೭೭೪ರಲ್ಲಿ ಸಿದ್ದಿಬಷೀರ್‌ನು ದರ್ಗಾದ ಬಾಗಿಲನ್ನು ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ.

ಗ್ರಾಮ: ಚಿಂಚೋಳಿ | ಸ್ಥಳ: ದರ್ಗಾದ ಬಾಗಿಲು

ಕಾಲ:೧೯ನೇ ಶತಮಾನ | ಅರಸು ಮನೆತನ: ನಿಜಾಮ(ಹೈದ್ರಾಬಾದ್ ನಿಜಾಮ)

ಲಿಪಿ ಮತ್ತು ಭಾಷೆ: ಪರ್ಶಿಯನ್ | ಉಲ್ಲೇಖ: ಕ.ಸ.ಗೆ.ಗು.ಜಿ(೧೯೯೭)ಪು.೭೧೯

ಕ್ರಿ.ಶ.೧೮೫೨ರಲ್ಲಿ ದಲೀಲ್‌ಖಾನ್‌ನು ದರ್ಗಾಕ್ಕೆ ಕಮಾನುಳ್ಳ ಬಾಗಿಲವಾಡವನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ.

ಗ್ರಾಮ: ಚಿಂಚೋಳಿ | ಸ್ಥಳ: ಕೋಟೆಯ ಬಾಗಿಲು

ಕಾಲ: ೧೭ನೇ ಶತಮಾನ | ಅರಸು ಮನೆತನ: ಹೈದರಾಬಾದ್ ನಿಜಾಮ

ಲಿಪಿ ಮತ್ತು ಭಾಷೆ: ಪರ್ಷಿಯನ್ | ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೧೯

ಚಿಂಚೋಳಿಯ ಕೋಟೆಯನ್ನು ಬೂಹುಲಲ್‌ಖಾನನ ಮಗ ಅಬ್ದುಲ್ ಅಮೀರ್‌ಖಾನನು ಕ್ರಿ.ಶ.೧೬೫೬ರಲ್ಲಿ ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ.

ಗ್ರಾಮ:ಚಿಂಚೋಳಿ ಸ್ಥಳ: ಕೋಟೆ

ಕಾಲ:೧೭-೧೮ನೇ ಶತಮಾನ ಅರಸು ಮನೆತನ: ಹೈದರಾಬಾದ್ ನಿಜಾಮ

ಲಿಪಿ ಮತ್ತು ಭಾಷೆ: ಪರ್ಶಿಯನ್ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೧೯

ಕ್ರಿ.ಶ.೧೬೫೬ರಲ್ಲಿ ಅಬ್ದುಲ್ ಅಮೀರ್‌ಖಾನನಿಂದ ನಿರ್ಮಿತ ಚಿಂಚೋಳಿ ಕೋಟೆಯನ್ನು ಜೀರ್ಣೋದ್ಧಾರ ಮಾಡಿದ ಮಹ್ಮದ್‌ಖಾನನ ಕುರಿತು ದಾಖಲಿಸಿದೆ.

ಗ್ರಾಮ: ರಟಕಲ್ ಸ್ಥಳ: ಬಂಕನಾಥ ದೇವಾಲಯ

ಕಾಲ:ಸು.೧೨ನೇ ಶತಮಾನ ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು೭೬೯

ಸು.೧೨-೧೩ನೇ ಶತಮಾನದ ಶಾಸನವೊಂದು ಬಂಕನಾಥ ದೇವಾಲಯದ ನವರಂಗದ ಕಂಬವೊಂದರ ಪೀಠದ ಮೇಲಿದ್ದು ಇದು ದೇವರನ್ನು ಬಂಕೇಶ್ವರನೆಂದು ಕರೆದಿದೆ. ಆದರೆ ಇದರ ಹೆಚ್ಚಿನ ವಿವರ ಲಭ್ಯವಿಲ್ಲ.

ಗ್ರಾಮ: ಕೇಶಾವರ್(ಗಡಿ) ಸ್ಥಳ: ಸಿದ್ದಪ್ಪನ ಗುಡಿ

ಕಾಲ: ಸು.೮ನೇ ಶತಮಾನ ಅರಸು ಮನೆತನ: ರಾಷ್ಟ್ರಕೂಟರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೦೨

ಪಾಳು ಸಿದ್ದಪ್ಪನ ಗುಡಿಯ ಪ್ರವೇಶ ದ್ವಾರದ ಎಡಕ್ಕೆ ಬಳಪದ(ಬಿಳಿ) ಕಲ್ಲಿನ ಮೇಲೆ ಈ ಶಾಸನವಿದ್ದು, ತ್ರುಟಿತವಾಗಿದೆ. ರಾಷ್ಟ್ರಕೂಟರ ಕಾಲದ ಈ ಶಾಸನವು ಬ್ರಹ್ಮಚಾರಿಗಳಿಗೆ ದತ್ತಿಕೊಟ್ಟ ಅಂಶವನ್ನು ತಿಳಿಸುತ್ತದೆ.

ಗ್ರಾಮ: ಕೇಶಾವರ್(ಗಡಿ) ಸ್ಥಳ: ಜೀರಭಾವಿ

ಕಾಲ: ಸು೧೧ ನೇಶತಮಾನ ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ.(೧೯೯೭)ಪು.೭೦೨

ಜೀರಬಾವಿ ಬಳಿಯಿರುವ ಸು.೧೧ನೇ ಶತಮಾನದ ಈ ಶಾಸನ ಬಮ್ಮಸೆಟ್ಟಿಯ ಮರಣವನ್ನು ದಾಖಲಿಸಿದೆ.

ಗ್ರಾಮ: ಕೇಶಾವರ್(ಗಡಿ) ಸ್ಥಳ: ಕುಂಬಾರ ದೇಗುಲ

ಕಾಲ: ೧೪ನೇ ಶತಮಾನ ಅರಸು ಮನೆತನ: ಕಳಚೂರಿಗಳು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೦೨

ಕುಂಬಾರ ದೇಗುಲದ ಶಾಸನ ಮಾಘನಂದಿಯ ಶಿಷ್ಯನಾದ ಮತಿಸೆಟ್ಟಿಯು ಕೇಶವಪುರದ ಪಾರ್ಶ್ವನಾಥನ ಚೈತ್ಯಾಲಯವನ್ನು ೧೩೮೫ರಲ್ಲಿ ಪುನರ್ ಜೀರ್ಣೋದ್ಧಾರ ಮಾಡಿದ ವಿಷಯವನ್ನು ದಾಖಲಿಸುತ್ತದೆ.

ಗ್ರಾಮ: ಕೇಶಾವರ್(ಗಡಿ) ಸ್ಥಳ: ಕಂಬಾರ ಓಣಿ

ಕಾಲ: ೧೦-೧೧ನೇ ಶತಮಾನ ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೦೨

ಕಂಬಾರ ಓಣಿಯಲ್ಲಿರುವ ದೇಗುಲವು ಸು.೧೦-೧೧ನೇ ಶತಮಾನದ ಚೈತ್ಯಾಲಯವಾಗಿದ್ದು, ಮುಖಮಂಟಪದಲ್ಲಿರುವ ಸು.೧೧ನೇ ಶತಮಾನದ ಶಾಸನ ಮಸಣಯ್ಯನು ಈ ಪಾರ್ಶ್ವನಾಥನ ಚೈತ್ಯಾಲಯವನ್ನು ನಿರ್ಮಿಸಿದನೆಂದು ತಿಳಿಸುತ್ತದೆ.

ಗ್ರಾಮ: ಸುಲೇಪೇಟೆ ಸ್ಥಳ: ಈಶ್ವರ ಲಿಂಗ ಗುಡಿ

ಕಾಲ: ೧೧-೧೨ನೇ ಶತಮಾನ ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೮೯

ಕಪ್ಪುಶಿಲೆಯಲ್ಲಿರುವ ಈ ಶಾಸನ ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯನ ಕಾಲದ್ದಾಗಿದ್ದು ಇದರ ಅಕ್ಷರಗಳು ಬಹಳ ಹಾಳಾಗಿವೆ.

ಗ್ರಾಮ: ಸುಲೇಪೇಟೆ ಸ್ಥಳ: ಈಶ್ವರ ಲಿಂಗ ಗುಡಿ

ಕಾಲ: ೧೧-೧೨ನೇ ಶತಮಾನ ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೮೯

ಕ್ರಿ.ಶ.೧೦೬೦ರ ಈ ಶಾಸನವು ಕಲ್ಯಾಣದ ಚಾಲುಕ್ಯ ಅರಸ ಒಂದನೆಯ ಸೋಮೇಶ್ವರನ ಕಾಲದ್ದಾಗಿದೆ. ಇದು ಸುಲ್ಲಿಗ್ರಾಮ ಎಂಬ ಉಲ್ಲೇಖವನ್ನೊಳಗೊಂಡಿದೆ. ಆದರೆ ಈ ಕುರಿತು ಹೆಚ್ಚಿನ ವಿವರಗಳು ಲಭಿಸುವುದಿಲ್ಲ.

ಗ್ರಾಮ: ಮಿರ್ಯಾಣ ಸ್ಥಳ: ಈಶ್ವರ ದೇವಾಲಯ

ಕಾಲ: ೧೨ನೇ ಶತಮಾನ ಅರಸು ಮನೆತನ: ಕಲ್ಯಾಣ ಚಾಲುಕ್ಯರು

ಲಿಪಿ ಮತ್ತು ಭಾಷೆ: ಕನ್ನಡ ಉಲ್ಲೇಖ: ಕ.ಸ.ಗೆ.ಕ.ಜಿ(೧೯೯೭)ಪು.೭೫೭

ಐದು ಸಾಲಿನ ಶಾಸನ ಜ್ಯೋತಿರ್ದೇವ, ಭೀಮೇಶ್ವರ ಹಾಗೂ ಚೌಡೇಶ್ವರಿ ದೇವಾಲಯಗಳಿಗೆ ಭೂದಾನ ಬಿಟ್ಟ ವಿಷಯವನ್ನು ದಾಖಲಿಸಿದೆ. ದೇವಾಲಯದ ಲಲಾಟದ ಮೇಲೆ ಕೊರೆಯಲಾಗಿದೆ. ಇದು ಉತ್ತಮ ಸ್ಥಿತಿಯಲ್ಲಿದೆ.

ಗ್ರಾಮ: ಮೋಘಾ
ಕಾಲ: ೧೧೭೦
ವಸ್ತುಸ್ಥಿತಿ: ತ್ರುಟಿತ

ಸ್ಥಳ: ರಾಮಲಿಂಗೇಶ್ವರ
ರಾಜ ಮನೆತನ: ಕಳಚೂರಿಗಳು
ಪ್ರಕಟಣೆ: (ಕ.ಸ.ಗೆ.ಕಜಿ. ೧೯೯೭-ಪು. ೭೬೩)
ಮತ್ತು ಕ.ಜಿ.ಶಾ. ೧೯೯೬ ಪು.೨೫೫-೨೫೮.

ಶೈವದಾನ ಶಾಸನವಾಗಿರುವ ಶಾಸನದ ಲಲಾಟದ ಮೇಲೆ ಲಿಂಗ, ನಂದಿ, ಸೂರ್ಯ ಮತ್ತು ಚಂದ್ರರನ್ನು ಕೆತ್ತಲಾಗಿದೆ. ಇದು ಕಳಚೂರಿಗಳ ಕಾಲದ್ದಾಗಿದೆ. ವಿಕ್ರಮಾದಿತ್ಯನ ಬಿರುದುಗಳು ಮತ್ತು ಹಿಮಾಚಲದಿಂದ ಗಂಗಾಜಲದವರೆಗೂ ವಿಕ್ರಮಾದಿತ್ಯನ ಕೀರ್ತಿ ಹಬ್ಬಿತ್ತು ಎಂದು ಶಾಸನ ಉಲ್ಲೇಖಿಸಿದೆ. ಪೆರ್ಮ್ಮಾಡಿ ದೇವ ಪಟ್ಟಾಧಿಪತಿಯಾಗಿದ್ದಾಗ ಸೋಮೆಶ್ವರದೇವ ಹುಟ್ಟಿದ. ಈತನು ರಾಜ್ಯವಾಳಿದ ನಂತರ ಜಗದೇಕಮಲ್ಲ ಮತ್ತು ಈತನ ಮಗ ಸೋಮೆಶ್ವರ ಆಳ್ವಿಕೆಗೆ ಬಂದರು. ಸೋಮೆಶ್ವರ ಆಳ್ವಿಕೆಗೆ ಬಂದಿದ್ದಾಗ ಕಳಚೂರಿಗಳು ಅವನಿಗೆ ಅಧಿಕಾರದಿಂದ ಕೆಳಗಿಳಿಸಿ ರಾಜ್ಯವನ್ನು ಆಕ್ರಮಿಸಿದರು ಮತ್ತು ತಮ್ಮ ರಾಜ್ಯ ಸುಭದ್ರಪಡಿಸಿಕೊಳ್ಳಲು ಚೋಳ ಗೂರ್ಜರನ್ನು ಗೆದ್ದ ಬಿಜ್ಜದೇವಲ ಎಂದು ಉಲ್ಲೇಖವಿದೆ.

ಕಳಚೂರಿಗಳ ಕಾಲದಲ್ಲಿ ಸುಖದಿಂದ ರಾಜ್ಯವಾಳುತ್ತಿದ್ದಾಗ ಎಂದು ಮೂಲ ವಿಷಯ ಅಂದರೆ, ದಾನದ ವಿಷಯಕ್ಕೆ ಬಂದಿದ್ದಾರೆ. ಜಗದಲ್ಲೆ ಹಿರಿದಾದ ಅಗ್ರಹಾರದಲ್ಲಿ ಸಾವಿತ್ರಿ ಧರೆಯ ಯುಧಿಷ್ಠರ ಎಂದು ಹೆಸರಾದ ದೈವತ್ವ, ಸುಂದರಗುಣ ಹೊಂದಿದ ವೆಸವಯ್ಯ ದಂಡಾಧೀಶ, ಮನ್ನೆದಡಿನಾಡ ವೆಸಪಯ್ಯ ದಂಡನಾಯಕನಾಗಿದ್ದನು. ಶ್ರೀ ಮದನಂದಿಯ ಅಗ್ರಹಾರ ಮೈಗೆಹ (ಮೋಘಾ)ದ ಶ್ರೀ ಸ್ವಯಂಭು ರಾಮನಾಥ ದೇವರಿಗೆ ತಾನು ಕಮ್ಮ ಪ್ರವೇಶದ (ಅಗಿ ತುಳಿಯುವ) ವೇಳೆಗೆ ಆನಂದದಿಂದ ಬಂದು ಭೂದಾನ ಮಾಡುವೆನೆಂದನು. ತನ್ನ ಮನೊಳ್ದರೆಯ ದಿಬ್ಬವನ್ನು ಮಹಾಜನಗಳ ಸಮ್ಮುಖದಲ್ಲಿ ಆ ಪ್ರದೇಶದ ಸ್ಥಾನಪತಿ ಪಾಲ ಪಂಡಿತರು ಶೇಷ ಪಂಡಿತರನ್ನು ಕರೆದು ಮೂರು ಸುಂಕದಿಂದ ತಾಮಾಮಂಡಲದ ವಿಶ್ವಕರ್ಮ ಏಕವಲ್ಲಿ ಬಳಿ ಈ ಸಂಪದವನ್ನು ಮಾಡಿಸಿ ರಾಮತೀರ್ಥ ಪರಿಛತ್ರದಲ್ಲೇ ಅದನ್ನು ದೇವಾಲಯಕ್ಕೆ ಒಪ್ಪಿಸಿದನು ಎಂದಿದೆ. ವಿಭುನಾಡಿನ ಅಧಿಪತಿ ಬಾಣವಂಶದವ, ಗಣ್ಯರು ಕೂಡಿ ಮಾಡಲ್ಪಟ್ಟ ಶ್ರೀಮನ್ ಮಹಾಮಂಡಳೇಶ್ವರ ವೀರಗೊಂಕದೇವನ ಹೊಗಳಿಕೆ ಈತನಿಗಿದೆ. ಸಿಂಹ(ಮೃಗ) ಬೇಟೆ ಮಾಡಿದ 'ನಿಂದಾಪಿರಿಯ' ಎಂಬ ಬಿರುದು ಪಡೆದವನಾಗಿದ್ದಾನೆ. ಖಾಂಡವ ಮಂಡಳಾಧೀಶ ಬಾಣವಂಶದಲ್ಲಿ ಹುಟ್ಟಿದ ವೀರ ವೆಡಂಗ ಬಿಬ್ಬನಂಕಕಾರನ ಹೊಗಳಿಕೆ ಮತ್ತು ಬಿರುದುಗಳು ಪ್ರಸ್ತಾಪಿಸಲಾಗಿದೆ. ಈತ ಧರ್ಮಕ್ಷೇತ್ರವಾದ "ಭಾಗಲಾದೇವಿ" ವರ ಪ್ರಸಾದದಿಂದ ಮತ್ತು ಬಿಬ್ಬೇಶ್ವರ ದೇವ ಪಾದಾರಾಧಕನಾದ ಪರ ಬಳಸಾಧಕಂ ಎಲ್ಲಾ ಪ್ರಶಸ್ತಿ ಸಹಿತ ಮಹಾಮಂಡಳೇಶ್ವರ ವೀರಗೊಂಕರಸ, ದೇವರಸರು ಅಕ್ಷಯರಪ್ಪ ತಮ್ಮ ಮಹೇಶ್ವರಿ ಮೈಲಳದೇವಿಯ ವಂಶ ಕುಮಾರಮಲ್ಲ ದೇವರಸ ಸೇರಿ ಭೂದಾನ ಮಾಡಿದ ಉಲ್ಲೇಖ ನೀಡಲಾಗಿದೆ.

ಕೊನೆಯ ನಾಲ್ಕು ಸಾಲುಗಳು ಕಾಲ ದಿವಸ ಮತ್ತು ಸೂರ್ಯಗ್ರಹಣದ ಬಗ್ಗೆ ಉಲ್ಲೇಖಿಸಿದೆ. ಕೊನೆಯ ಕೆಲ ಸಾಲುಗಳಲ್ಲಿನ ಅಕ್ಷರಗಳು ಪ್ರಸ್ತುತ ಹಾಳಾಗಿವೆ. ಇದೊಂದು ಪ್ರಶಸ್ತಿ ಸಹಿತವಾದ ದಾನ ಶಾಸನವಾಗಿದೆ.

ಗ್ರಾಮ: ಶಿರೋಳ್ಳಿ

ಸ್ಥಳ: ನಾಗಲಿಂಗೇಶ್ವರ ಗುಡಿ(ಹರಿಹರ ಗುಡಿ)

ಕಾಲ: ಕ್ರಿ.ಶ. ೧೧೫೪

ವಸ್ತುಸ್ಥಿತಿ: ಕಪ್ಪುಶಿಲೆ

ರಾಜ ಮನೆತನ: ಕಲ್ಯಾಣ ಚಾಲುಕ್ಯರು

ಪ್ರಕಟಣೆ: ಕ.ಸ.ಗೆ.ಕಜಿ. ೧೯೯೭ ಪು-೭೮೦ ಮತ್ತು ಕ.ಜಿ.ಶಾ.೧೯೯೬ ಪು-೨೫೫-೨೬೩

ಶಾಸನದ ಲಲಾಟದ ಮಧ್ಯದಲ್ಲಿ ನಾರಾಯಣ ಶಿಲ್ಪ ಮತ್ತು ಅದರ ಅಕ್ಕಪಕ್ಕಕ್ಕೆ ಎರಡು ಲಿಂಗಗಳು ಕೆತ್ತಲ್ಪಟ್ಟಿವೆ. ಈ ಶಾಸನ ಹರಿಹರ ದೇವಾಲಯಕ್ಕೆ ದಾನ ಮಾಡಿದ ವಿಷಯ ತಿಳಿಸುತ್ತದೆ.

ಶಾಸನವು ಒಟ್ಟು ೬೪ ಸಾಲುಗಳನ್ನೊಳಗೊಂಡಿದೆ. ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ರಚಿಸಲ್ಪಟ್ಟಿದೆ ಎಂದು ೧೯೯೭ರ ಕರ್ನಾಟಕ ಸರ್ಕಾರ ಹೊರಡಿಸಿರುವ ಕಲಬುರ್ಗಿ ಜಿಲ್ಲೆ ಗೆಜೆಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ ವಿಕ್ರಮಾದಿತ್ಯನ ಆಳ್ವಿಕೆ ಕಾಲ ಕ್ರಿ.ಶ. ೧೦೭೬ ರಿಂದ ೧೧೨೭ ಆಗಿದೆ. ಈ ಶಾಸನದ ಪ್ರಕಾರ ಮತ್ತು ಕಾಲದ ಪರಿಗಣನೆಯ ಪ್ರಕಾರ ಕ್ರಿ.ಶ.೧೧೫೪ರ ಆಧಾರದ ಮೇಲೆ, ಈ ಶಾಸನ ನೂರ್ಮಡಿ ತೈಲಪ (ಮುಮ್ಮಡಿ ತೈಲಪ)ನ ಕಾಲದ್ದಾಗಿದೆ ಎಂದು ತಿಳಿದು ಬರುತ್ತದೆ.

ಆರಂಭಿಕ ಸಾಲುಗಳ ಪ್ರಾರ್ಥನೆಯಲ್ಲಿ ವಿಷ್ಣುವಿನ ಸ್ತುತಿ, ಶಿವನ ಸ್ತುತಿ ಮತ್ತು ಶಂಕರ ನಾರಾಯಣರಿಬ್ಬರಿಗೂ ವಂದಿಸುವ ಶ್ಲೋಕಗಳನ್ನು ಒಳಗೊಂಡಿದೆ. ಚಾಲುಕ್ಯ ಮೂಲ ವಂಶಸ್ಥರು ಬ್ರಹ್ಮನ ಚಲುಕದಿಂದ ಹುಟ್ಟಿದವರು ಎಂದು ತಿಳಿಸುತ್ತದೆ. ಚಾಲುಕ್ಯ ವಂಶಾವಳಿಯಲ್ಲಿ ಸತ್ಯಾಶ್ರಯ ಜಯಸಿಂಹ, ವಿಷ್ಣು ಮೂರ್ತಿ, ನೂರ್ಮಡಿ ತೈಲಪರ ವಿವರಣೆ ನೀಡಿದೆ. ಅಪವಮಲ್ಲನು ನಂದರನ್ನು, ಚೋಳರನ್ನು ನಿರ್ಮೂಲನೆ ಮಾಡಿ ಕಂಚಿ ಆಕ್ರಮಿಸಿದನು. ಇತರಾಯ ಪೇರ್ಮಾಡಿದೇವನ ಸಹಾಯದಿಂದ ಧಾರಾಪುರದ ಮಾಂಡಲಿಕನ ಸೊಕ್ಕು ಅಡಗಿಸಿದ ಎಂದು ಶಾಸನ ಉಲ್ಲೇಖಿಸಿದೆ. ವೆಂಗಿ, ಸೌರಾಷ್ಟ್ರ ಗೆದ್ದನು. ಭೂತಳದಿಂದ ಹಿಮಾಲಯದವರೆಗೆ ತನ್ನ ರಾಜ್ಯ ವಿಸ್ತರಿಸಿದನು ಎಂದು ಉಲ್ಲೇಖವಿದೆ. ನಂತರ ಸೋಮೇಶ್ವರನ ಗುಣಗಾನ, ಜಗದೇಕಮಲ್ಲನ ಗುಣಗಾನದ ಬಗ್ಗೆ ತಿಳಿಸುತ್ತದೆ. ನೂರ್ಮಡಿ ತೈಲಪನ ಆಳ್ವಿಕೆ ಕಾಲದ ಬಗ್ಗೆ ತಿಳಿಸುತ್ತದೆ.

ನಂತರ ದಾನ ನೀಡಿದ ವ್ಯಕ್ತಿ ವಿಮಲಾದಿತ್ಯನ ಕುಟುಂಬದ ವಿವರಣೆ ಮತ್ತು ಸಿರವಳ್ಳಿಯ ಅಗ್ರಹಾರದಲ್ಲಿರುವ ವೇದ ದ್ವಿಜರು ಮಾಡುತ್ತಿದ್ದ ನಿತ್ಯಕರ್ಮ ವಿವರಣೆ ಹೊಂದಿದೆ. ೧೬೨ ಜನ ಈ ಅಗ್ರಹಾರದಲ್ಲಿದ್ದ ಮಾಹಿತಿ ತಿಳಿಸುತ್ತದೆ. ಚಂದ್ರಾದಿತ್ಯರ ವಿಶೇಷ ಗುಣ ಸ್ವಭಾವ ವಿವರಿಸಿದೆ. ಇತನು ಈ ಅಗ್ರಹಾರ ಸ್ಥಿರವಾಗಿರಲು ಸಿರವಳ್ಳಿಯ ಪಶ್ಚಿಮ ದಿಕ್ಕಿಗೆ 'ಹರಿಹರ ಭವನ ತ್ರಯಮಲ" (ತ್ರಿಕೂಟ ದೇವಾಲಯ) ನಿರ್ಮಿಸಿದನು ಮತ್ತು ವಜ್ರಘಟತ್ ಪ್ರಾಕಾರ ಕಟ್ಟಿಸಿದ ನಿರ್ಮಲ ತೀರ್ಥ ಮಾಡಿಸಿದ ಎಂದು ಉಲ್ಲೇಖವಿದೆ. ವಿಮಲಾದಿತ್ಯ ಇಲ್ಲಿ ಕಮಲ ವಲ್ಲಭ (ಕೇಶವ)ನನ್ನು ಪ್ರತಿಷ್ಠಾಪಿಸಿದ ವಿವರಗಳಿವೆ.

ಇದು ಪ್ರಶಸ್ತಿ ಸಹಿತ ದಾನ ಶಾಸನವಾಗಿದೆ. ಶಾಸನ ದಂಡನಾಯಕ ವಿಮಲಾದಿತ್ಯ ಮತ್ತು ಅವನ ಸೋದರ ಚಂದ್ರದಿತ್ಯ ಸಿರಿವೋಳಲಲ್ಲಿ ಮೂರು ದೇವಾಲಯಗಳನ್ನು ಹಾಗೂ ಒಂದು ಕೆರೆಯನ್ನು ನಿರ್ಮಿಸಿ ದಾನ ಬಿಟ್ಟ ವಿಷಯ ತಿಳಿಸುತ್ತದೆ (ಕ.ಸ.ಗೆ.ಕ.ಜಿ.೧೯೯೭, ಪು.೭೮೦).

ಬ. ವೀರಗಲ್ಲುಗಳು :

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೧೦ನೇ ಶತಮಾನ ವಸ್ತು: ತ್ರುಟಿತ

ಉಲ್ಲೇಖ: ಅಪ್ರಕಟಿತ

ಒಂದು ಸ್ತರದ ಈವೀರಗಲ್ಲಿನಲ್ಲಿ ವೀರನು ಬಲಗೈಯಲ್ಲಿ ಖಡ್ಗ (ತಲವಾರು) ಎಡಗೈಯಲ್ಲಿ ಗುರಾಣಿ ಹಿಡಿದಂತೆ ತೋರುತ್ತದೆ. ಇರ್ವರು ಶತ್ರುಗಳನ್ನು ಬಿಂಬಿಸಲಾಗಿದೆ. ಒಬ್ಬ ಶತ್ರು ಗುರಾಣಿಯ ಬಳಿ ನಿಂತಿರುವಂತೆ, ಮತ್ತೊಬ್ಬ ಕುದುರೆಯ ಮೇಲೆ ಕುಳಿತು ಹೋರಾಡುತ್ತಿರುವಂತೆ ದೃಶ್ಯಾವಳಿಯಲ್ಲಿ ಮೂಡಿಬಂದಿದೆ.

ವೀರನು ಮುಂಗೈಗೆ ಮಣಿಕಂಠ ಮುತ್ತಿನಿಂದ ಕೂಡಿರುವ ಕಂಕಣ ಪಟ್ಟಿ, ತೋಳ್ಬಂದಿ ಹಾಕಿಕೊಂಡಿರುವಂತೆ ತೋರುತ್ತದೆ. ಕಟಿವಸ್ತ್ರ ಹಾಕಿಕೊಂಡಿದ್ದಾನೆ. ಈ ವೀರಗಲ್ಲು ಶಿಲ್ಪ ಕಪ್ಪುಶಿಲೆಯಲ್ಲಿದ್ದು ಸು.೪-೨ ಅಡಿ ಎತ್ತರವಾಗಿದೆ. ವೀರ ಮುಡಿ ಕಟ್ಟಿದಂತೆ ಚಿತ್ರಿಸಲಾಗಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ:ಗುಡ್ಡದ ಇಳಿಜಾರು ನೀರಿನ ಝರಿ

ಕಾಲ: ಸು.೯-೧೦ನೇ ಶತಮಾನ ವಸ್ತು: ತ್ರುಟಿತ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ಭರ್ಚಿ ಹಿಡಿದಿರುವ ವೀರನು ಕಟಿ ವಸ್ತ್ರ ಧರಿಸಿರುವ ಸೊಂಟದಲ್ಲಿ ಖಡ್ಗವಿಟ್ಟುಕೊಂಡಂತೆ ಶಿಲ್ಪಿತವಾಗಿದೆ. ಈ ರೀತಿಯ ವಸ್ತ್ರ ಧರಿಸಿರುವ ವೀರರ ಶಿಲ್ಪಗಳು ಈ ಪ್ರದೇಶದಲ್ಲಿ ಸರ್ವೇ

ಸಾಮಾನ್ಯವಾಗಿವೆ. ನೆಲಕ್ಕುರುಳಿರುವ ಇಬ್ಬರು ಶತ್ರುಗಳನ್ನು ಇಲ್ಲಿ ಬಿಂಬಿಸಲಾಗಿದೆ. ವೀರನು ಕೊರಳಲ್ಲಿ ಹಾರ, ಮುಂಗೈಪಟ್ಟಿ ಮತ್ತು ಕಿವಿ ಓಲೆ ಹಾಕಿದೆ. ಒಂದು ಸ್ತರದ ವೀರಗಲ್ಲಿನಲ್ಲಿ ವೀರನು ಸೈನಿಕನಾಗಿ ಹೋರಾಡುತ್ತಿರುವನು.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೯-೧೦ನೇ ಶತಮಾನ ವಸ್ತು: ತ್ರುಟಿತ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ಮುಡಿ ಕಟ್ಟಿರುವ ವೀರನು 'ಯು' ಆಕಾರದ ವಸ್ತ್ರ ಧರಿಸಿರುವನು. ಕರ್ಣಕುಂಡಲ, ಮುತ್ತಿನ ತೋಳ್ಬಂದಿ ಮತ್ತು ಮುಂಗೈಗೆ ಮಣಿಕಟ್ಟು ಕಟ್ಟಿರುವನು. ಬಲಭಾಗದ ಸೊಂಟದಲ್ಲಿ ಒಂದು ಚಾಕು ಇದೆ. ಬಲಗೈಯಲ್ಲಿ ಚಾಕು, ಎಡಗೈಯಲ್ಲಿ ಗುರಾಣಿ ಹಿಡಿದಿದೆ. ನಿಂತ ಭಂಗಿಯಲ್ಲಿರುವ ವೀರನ ಎಡಕ್ಕೆ ಶರಣಾಗತಿ ಸ್ಥಿತಿಯಲ್ಲಿ ಕುಳಿತ ಶತ್ರುವಿನ ದೃಶ್ಯಾವಳಿ ಮೂಡಿಬಂದಿದೆ. ಉಳಿದ ಭಾಗ ತ್ರುಟಿತವಾಗಿದೆ. ಇದರ ಎಡಭಾಗದಲ್ಲಿರುವ ತ್ರುಟಿತ ಶಿಲ್ಪದಲ್ಲಿ ಲಿಂಗ ಮತ್ತು ಅಂಜಲಿ ಮುದ್ರೆಯ ವೀರನ ಶಿಲ್ಪವಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೯-೧೦ನೇ ಶತಮಾನ ವಸ್ತು: ಉತ್ತಮ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ನಿಂತ ಭಂಗಿಯಲ್ಲಿರುವ ವೀರ ಚಾಕುವಿನಿಂದ ಕುದುರೆಯ ಮೇಲಿರುವ ಶತ್ರುವನ್ನು ಇರಿಯುವಂತೆ ಪ್ರದರ್ಶಿಸಲಾಗಿದೆ. ಕಟಿ ವಸ್ತ್ರ, ಸೊಂಟ ಪಟ್ಟಿ, ಮೊಳಕಾಲಿನವರೆಗೂ ಧೋತಿ ಹಾಕಿಕೊಂಡಂತೆ ಶಿಲ್ಪದಲ್ಲಿದೆ. ಮುಡಿ ಧರಿಸಿದ ವೀರ ಎಡಗೈಯಲ್ಲಿ ಗುರಾಣಿ ಹಿಡಿದಿರುವನು. ಇದರ ಮೇಲ್ಭಾಗದಲ್ಲಿ ಲಿಂಗವಿದೆ ಮತ್ತು ಅಂಜಲಿ ಹಸ್ತದಲ್ಲಿ ಕುಳಿತ ಲಿಂಗೈಕ್ಯವಾದ ವೀರನ ಶಿಲ್ಪವಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೯-೧೦ನೇ ಶತಮಾನ ವಸ್ತು: ತ್ರುಟಿತ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ವೀರಗಲ್ಲು ಎರಡು ಸ್ತರದಲ್ಲಿದೆ. ಈ ಶಿಲ್ಪದ ವಿಶೇಷತೆ ವೀರ ಮತ್ತು ಶತ್ರು ಇಬ್ಬರನ್ನು ಸಮಾನರಾಗಿ ತೋರಿಸಲ್ಪಟ್ಟಿದೆ. ವೀರ ಖಡ್ಗದಿಂದ ಶತ್ರುವನ್ನು ಇರಿದಂತೆ ಶಿಲ್ಪದಲ್ಲಿ ಮೂಡಿಬಂದಿದೆ. ಶತ್ರುವಿನ ಎಡಗೈಯಲ್ಲಿ ಬಿಲ್ಲಿದೆ. ಶತ್ರುವಿನ ಶಿಲ್ಪ ಅಲಂಕಾರಿಕವಾಗಿದೆ. ಕೊರಳ ಹಾರ,

ಕಂಠಹಾರ ಧರಿಸಿರುವಂತೆ ಅವನ ಕೆಳಗೆ ಒಬ್ಬ ಶತ್ರು ನೆಲಕ್ಕುರುಳಿದಂತೆ ಚಿತ್ರಿಸಲಾಗಿದೆ. ಮೇಲಿನ ಸ್ತರದಲ್ಲಿ ಸುರಾಂಗನೆಯರು ಚಾಮರ ಹಿಡಿದು ವೀರನನ್ನು ವಿಮಾನದಲ್ಲಿ ದೇವಲೋಕಕ್ಕೆ ಕರೆದೊಯ್ಯುತ್ತಿರುವಂತೆ ಬಿಂಬಿಸಲಾಗಿದೆ. ವೀರನು ನಿಂತ ಭಂಗಿಯಲ್ಲಿ ಹೋರಾಡುತ್ತಿರುವ ಶಿಲ್ಪವಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೯–೧೦ನೇ ಶತಮಾನ ವಸ್ತು: ತ್ರುಟಿತ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ಬಹಳಷ್ಟು ತ್ರುಟಿತ ಈ ವೀರಗಲ್ಲು ಬಲಗೈಯಲ್ಲಿ ಭರ್ಚಿ ಹಿಡಿದ ವೀರನ ಶಿಲ್ಪವಿದೆ. ಬಲಭಾಗದ ಸೊಂಟದಲ್ಲಿ ಚೂರಿ ಇಟ್ಟುಕೊಂಡು ಸೊಂಟ ಪಟ್ಟಿಕೆ ಮತ್ತು ಯಜ್ಞೋಪವೀತ ಧರಿಸಿದೆ. ಪ್ರಸ್ತುತ ಮುಖ, ಎಡಗೈ ಮತ್ತು ಎಡಗಾಲಿನ ಭಾಗ ತ್ರುಟಿತವಾಗಿದೆ. ನಿಂತ ಭಂಗಿಯಲ್ಲಿ ಹೋರಾಡುತ್ತಿರುವ ಒಂದು ಸ್ತರದ ವೀರಗಲ್ಲಾಗಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೯–೧೦ನೇ ಶತಮಾನ ವಸ್ತು: ಮಧ್ಯಮ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ಎರಡು ಸ್ತರದ ವೀರಗಲ್ಲಿನಲ್ಲಿ ವೀರ ಎಡಗೈಯಲ್ಲಿ ಬಿಲ್ಲು ಹಿಡಿದಂತೆ, ಸೊಂಟಪಟ್ಟಿ, ಕಿವಿ ಓಲೆ ಹಾಕಿದೆ. ಅವನ ಎಡಕ್ಕೆ ಶತ್ರುವನ್ನು ನಿಂತ ಭಂಗಿಯಲ್ಲಿ ಬಿಂಬಿಸಲಾಗಿದೆ. ಲಿಂಗೈಕ್ಯವಾದ ವೀರ ಲಿಂಗದ ಮುಂದೆ ಅಂಜಲಿ ಮುದ್ರೆಯಲ್ಲಿ ಕುಳಿತಿರುವ ಶಿಲ್ಪವಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೯–೧೦ನೇ ಶತಮಾನ ವಸ್ತು: ಮಧ್ಯಮ (ಕಪ್ಪು ಶಿಲೆ)

ಉಲ್ಲೇಖ: ಅಪ್ರಕಟಿತ

ಒಂದು ಸ್ತರದ ವೀರಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಬಿಲ್ಲು ಹಿಡಿದಿದ್ದಾನೆ. ನಿಂತ ಭಂಗಿಯಲ್ಲಿ ಹೋರಾಡುತ್ತಿರುವ ವೀರನನ್ನು ಚಿತ್ರಿಸಲಾಗಿದೆ. ವೀರನು ವೀರ ಮುಡಿ ಕಟ್ಟಿರುವನು. ಕರ್ಣಕುಂಡಲ ಹಾಕಿದೆ.

ಊರು: ಭಕ್ತಂಪಳ್ಳಿ ಸ್ಥಳ: ಸಂಗಮ ಕೆ(ಕಲ್ಲೂರು ಸಂಗಮ)

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಉತ್ತಮ ಉಲ್ಲೇಖ: ಅಪ್ರಕಟಿತ

ವೀರಗಲ್ಲು ಕಪ್ಪುಶಿಲೆಯಲ್ಲಿ ಮೂರು ಸ್ತರಗಳಲ್ಲಿದೆ. ಕೆಳಸ್ತರದಲ್ಲಿ ಕುದುರೆ ಮೇಲೆ ಖಡ್ಗ ಹಿಡಿದು ಹೋರಾಡುತ್ತಿರುವ ಶತ್ರುವಿನ ವಿರುದ್ಧ ವೀರನು ಭರ್ಚಿ ಹಿಡಿದು ಹೋರಾಡುವಂತೆ ಮತ್ತು ಒಬ್ಬ ಶತ್ರುವನ್ನು ನೆಲಸಮಗೊಳಿಸಿದಂತೆ ಶಿಲ್ಪಾವಳಿಯಲ್ಲಿದೆ. ಈ ಶಿಲ್ಪದಲ್ಲಿ ಕಟಿವಸ್ತ್ರ, ಚಾಕು ಸೊಂಟಕ್ಕೆ ಕಟ್ಟಿಕೊಂಡಂತೆ, ಕೊರಳಲ್ಲಿ ಹಾರ ಮತ್ತು ವೀರ ಮುಡಿ ಕಟ್ಟಿರುವನು. ಇದರ ನಂತರದ ಸ್ತರದಲ್ಲಿ ದೇವಕನ್ಯೆಯರು ವೀರನನ್ನು ದೇವಲೋಕಕ್ಕೆ ಒಯ್ಯುತ್ತಿರುವ ದೃಶ್ಯಾವಳಿಯಿದೆ. ಮೇಲಿನ ಸ್ತರದಲ್ಲಿ ಲಿಂಗೈಕ್ಯವಾದ ವೀರ ಲಿಂಗದ ಮುಂದೆ ಅಂಜಲಿ ಹಸ್ತದೊಂದಿಗೆ ಕುಳಿತಿರುವ ಶಿಲ್ಪವಿದೆ.

ಊರು: ಎತ್ಬಾಪುರ — ಸ್ಥಳ: ಹನುಮಾನ ಮಂದಿರದ ಬಳಿ

ಕಾಲ: ಸು.೧೦ನೇ ಶತಮಾನ — ವಸ್ತು: ತ್ರುಟಿತ

ಉಲ್ಲೇಖ: ಅಪ್ರಕಟಿತ

ವೀರಗಲ್ಲು ಶಾಸನ ಒಂದು ಸ್ತರದಲ್ಲಿದೆ. ವೀರ ಕಟಿವಸ್ತ್ರ ಧರಿಸಿದ್ದು, ಸೊಂಟದಲ್ಲಿ ಒಂದು ಖಡ್ಗವಿದೆ. ಬಲಗೈಯಲ್ಲಿ ಚೂಪಾದ ಚಾಕು ಮತ್ತು ಎಡಗೈಯಲ್ಲಿ ಗುರಾಣಿ ಹಿಡಿದಿದೆ. ಇದು ತ್ರುಟಿತವಾಗಿದ್ದು ಸು.೧೦ನೇ ಶತಮಾನದ್ದಾಗಿದೆ. ವೀರನ ಎದುರು ಶತ್ರುವಿಗೆ ತೋರಿಸದೆ, ಆರು ಚೂಪಾದ ಚಾಕುಗಳು ಬರುವಂತೆ ತೋರಿಸಿದ್ದಾರೆ. ಅವುಗಳನ್ನು ವೀರನು ನಿಂತು ತನ್ನ ಚಾಕು ಮತ್ತು ಗುರಾಣಿಯಿಂದ ತಡೆಯಲು ಸಿದ್ಧನಿರುವಂತೆ ದೃಶ್ಯಾವಳಿಯಲ್ಲಿ ಮೂಡಿ ಬಂದಿದೆ.

ಊರು: ಹಲ್‌ಚೇರಾ — ಸ್ಥಳ:ಅಂಬಿಗರ ಚೌಡಯ್ಯ(ಈಶ್ವರ ಮಂದಿರದೊಳಗೆ)

ಕಾಲ: ಸು.೭ನೇ ಶತಮಾನ — ರಾಜವಂಶ: ಬಾದಾಮಿ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ಎರಡು ಸ್ತರದ ತುರುಗೋಳ್ ವೀರಗಲ್ಲಾಗಿದೆ. ಇದು ಬಾದಾಮಿ ಚಾಲುಕ್ಯರ ಕಾಲದ್ದಾಗಿರುವ ಸಾಧ್ಯತೆ ಇದೆ. ಕೆಳಸ್ತರದಲ್ಲಿ ಎಡಗೈಯಲ್ಲಿ ಗುರಾಣಿ ಹಿಡಿದಂತೆ, ಬಲಗೈಯಲ್ಲಿ ಖಡ್ಗದಿಂದ ಶತ್ರುಗೆ ಇರಿಯುತ್ತಿದೆ. ಉದ್ದನೆ ಚಾಕು ಸೊಂಟದಲ್ಲಿಟ್ಟು ಕೂದಲು ಇಳಿಬಿಟ್ಟಂತಿದೆ. ಎರಡನೆ ಸ್ತರದ ಮೇಲಿನ ಒಂದು ಸಾಲಿನಲ್ಲಿ ಆಕಳುಗಳನ್ನು ಸಾಲಾಗಿ ತೋರಿಸಿದೆ. ಅದರ ಮೇಲೆ ಲಿಂಗೈಕ್ಯವಾದ ಅಂಜಲಿ ಮುದ್ರೆಯ ವೀರ ಮತ್ತು ಲಿಂಗದ ಶಿಲ್ಪವಿದೆ.

ಊರು: ಕೇಶಾವರ್ (ಗಡಿ) — ಸ್ಥಳ: ಹನುಮಂತನ ಗುಡಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ. ೧೯೭೭, ಪು.೭೦೨

ಇದೊಂದು ತುರುಗೋಳ್ ಶಿಲ್ಪವಾಗಿದೆ. ವೀರನು ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದೆ. ಶಿಲ್ಪದಲ್ಲಿ ಬಲಭಾಗಕ್ಕೆ ಗೋವಿನ ಮುಖಗಳ ಶಿಲ್ಪ ಇವೆ. ಶಿಲ್ಪದ ಮೇಲ್ಭಾಗದಲ್ಲಿ ಅಪ್ಸರೆಯರು ನಿಂತ ಭಂಗಿಯಲ್ಲಿವೆ, ದೇವರ ಸಾನಿಧ್ಯವನ್ನು ಪಡೆದ ವೀರನ ಎಡ ಮತ್ತು ಬಲಭಾಗದಲ್ಲಿ ನಿಂತಿದ್ದಾರೆ. ಶಿಲ್ಪ ಪ್ರಸ್ತುತ ತ್ರುಟಿತವಾಗಿದೆ. ಮೂರು ಸ್ತರಗಳಲ್ಲಿರುವ ಶಿಲ್ಪದಲ್ಲಿ ಗುರಾಣಿಗೆ ೫–೬ ಬಾಣ ನೆಟ್ಟು ಹೊರಬಂದಿದೆ.

ಊರು: ಕೋಡ್ಲಿ — ಸ್ಥಳ: ಗಣೇಶನ ಗುಡಿಯೊಳಗೆ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ.೧೯೮೭, ಪು.೭೦೬

ಕೋಡ್ಲಿಯ ಕ್ರಾಸ್‌ನಿಂದ ಸುಮಾರು ಮೂರು ಕಿ.ಮೀ. ದೂರವಿರುವ ಗಣೇಶನ ಗುಡಿಯೊಳಗೆ ಗಣೇಶನ ಮೂರ್ತಿಯ ಎಡಕ್ಕೆ ಈ ವೀರಗಲ್ಲಿದೆ. ಮೊದಲ ಸ್ತರದಲ್ಲಿ ವೀರನು ಹೋರಾಡುತ್ತಿರುವ ದೃಶ್ಯವಿದೆ. ಶತ್ರುವಿನ ಕೈಯಲ್ಲಿ ಕತ್ತಿ ಇದೆ. ಎರಡನೇ ಸ್ತರದಲ್ಲಿ ಸುರಾಂಗನೆಯರಿಬ್ಬರು ವೀರನನ್ನು ಒಯ್ಯುವ ದೃಶ್ಯವಿದೆ. ವೀರನ ಎಡ ಪಕ್ಕಕ್ಕೆ ಕುದುರೆ ನಿಂತಿರುವ ಶಿಲ್ಪವಿದೆ. ವೀರ ಮುಡಿ ಧರಿಸಿರುವನು.

ಊರು: ಕೋಡ್ಲಿ — ಸ್ಥಳ: ಅಗಸಿ ದ್ವಾರ

ಕಾಲ: ಸು.೧೧–೧೨ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ಆಯುಧ ಹಿಡಿದು ಹೋರಾಡುವ ವೀರನ ಶಿಲ್ಪವಿದೆ. ವೀರನು ಬಲಗೈಯಲ್ಲಿ ಭರ್ಚಿ ಮತ್ತು ಎಡಗೈಯಲ್ಲಿ ಗುರಾಣಿ ಹಿಡಿದಿರುವನು. ಮೇಲಿನ ಸ್ತರ ತ್ರುಟಿತವಾಗಿದೆ.

ಊರು: ಕೋಡ್ಲಿ — ಸ್ಥಳ: ಮಲ್ಲಿಕಾರ್ಜುನ ಗುಡಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ಒಂದು ಸ್ತರದ ತ್ರುಟಿತ ಶಿಲ್ಪವು ಗುಡಿಯೊಳಗಿನ ಕಂಬದ ಬಳಿ ಇದೆ. ಆಯುಧ ಹಿಡಿದ ವೀರನ ಶಿಲ್ಪವಿದೆ.

ಊರು: ರುಮ್ಮನಗೂಡು — ಸ್ಥಳ: ಅಗಸಿಯ ಬಾಗಿಲ ಬಳಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ಮಹಾಸತಿಕಲ್ಲು ಮೂರು ಸ್ತರದಲ್ಲಿದೆ. ಇದರ ಹಿಂಭಾಗವು ಶಿಲ್ಪಾವಳಿಯಿಂದ ಕೂಡಿದೆ. ಮೊದಲನೆಯ ಸ್ತರದಲ್ಲಿ ಸತಿಯು ಪತಿಯ ಶವದೊಂದಿಗೆ ಕುಳಿತ ಶಿಲ್ಪವಿದೆ. ಎರಡನೆಯ ಸ್ತರದಲ್ಲಿ ಒಕ್ಕೈ ಮಾಸ್ತಿ ಇದೆ. ಮೂರನೆಯ ಸ್ತರದಲ್ಲಿ ಲಿಂಗೈಕ್ಯದ ದೃಶ್ಯಾವಳಿಯಿದೆ. ಎಡ ಭಾಗದಲ್ಲಿ ಚಂದ್ರ ಮತ್ತು ಸ್ತ್ರೀಯ ಶಿಲ್ಪಗಳಿವೆ. ಸ್ತ್ರೀಯ ಶಿಲ್ಪ ಮಹಾಸತಿಯದ್ದಾಗಿದ್ದು ಅಂಜಲಿ ಹಸ್ತದಲ್ಲಿ ಕುಳಿತಿರುವಂತೆ ಶಿಲ್ಪಾವಳಿಯಲ್ಲಿದೆ. ಮಧ್ಯದಲ್ಲಿ ಲಿಂಗ ಬಲಕ್ಕೆ ಆಕಳು ಮತ್ತು ಸೂರ್ಯನ ಶಿಲ್ಪವಿದ್ದು ಶಾಪಾಶಯವನ್ನು ಸೂಚಿಸುತ್ತದೆ.

ಊರು: ರುಮ್ಮನಗೂಡು	ಸ್ಥಳ: ಅಗಸಿಯ ದ್ವಾರ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ಒಂದು ಸ್ತರದ ಒಕ್ಕೈ ಮಾಸ್ತಿಯ ಶಿಲ್ಪ ಕೈ ಬಳೆಯಿಂದ ಅಲಂಕೃತವಾಗಿದೆ. ಇದರ ಮೇಲ್ಭಾಗಕ್ಕೆ ಸತಿ ಮತ್ತು ಪತಿ ಇಬ್ಬರು ಅಂಜಲಿ ಹಸ್ತದಲ್ಲಿ ಕುಳಿತಿರುವ ಶಿಲ್ಪಗಳಿವೆ. ಶಿಲ್ಪದಲ್ಲಿ ಬಲಕ್ಕೆ ಸೂರ್ಯ ಮತ್ತು ಎಡಕ್ಕೆ ಚಂದ್ರನ ಶಿಲ್ಪಗಳಿವೆ.

ಊರು: ಮೋಘಾ	ಸ್ಥಳ: ಹನುಮಾನ ಮಂದಿರ
ಕಾಲ: ಸು.೧೨ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ಹನುಮಾನ ಗುಡಿಯ ಪ್ರವೇಶದ ಬಲಭಾಗಕ್ಕೆ ಎರಡು ಸ್ತರದ ವೀರಗಲ್ಲು ಶಿಲ್ಪವಿದೆ. ಮೊದಲ ಸ್ತರದಲ್ಲಿ ವೀರ ಹೋರಾಡುತ್ತಿರುವುದು ಎರಡನೇ ಸ್ತರದಲ್ಲಿ ವೀರನನ್ನು ವಿಮಾನದಲ್ಲಿ ಸುರಾಂಗನೆಯರು ಒಯ್ಯುವ ದೃಶ್ಯವಿದೆ. ಬಲಕ್ಕೆ ಲಿಂಗೈಕ್ಯವಾದ ವೀರನ ಶಿಲ್ಪ ಮತ್ತು ಲಿಂಗವಿದೆ.

ಊರು: ಸುಲೇಪೇಟೆ	ಸ್ಥಳ: ಪೋಚಮ್ಮನ ಗುಡಿ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ಮೂರು ಸ್ತರದ ವೀರಗಲ್ಲು ಶಿಲ್ಪದ ಮೊದಲ ಸ್ತರದಲ್ಲಿ ಶತ್ರುವಿನೊಂದಿಗೆ ಹೋರಾಡುವ ದೃಶ್ಯಾವಳಿ ಮೂಡಿದೆ. ಎರಡನೆಯ ಸ್ತರದಲ್ಲಿ ಸುರಾಂಗನೆಯರು ವೀರನನ್ನು ವಿಮಾನದಲ್ಲಿ ದೇವಲೋಕಕ್ಕೆ ಒಯ್ಯುವ ಶಿಲ್ಪವಿದೆ. ಮೂರನೆಯ ಸ್ತರದಲ್ಲಿ ಲಿಂಗದ ಮುಂದೆ ನಮಸ್ಕರಿಸುತ್ತ ಕುಳಿತ ವೀರನ ಶಿಲ್ಪವಿದ್ದು, ಇದು ಲಿಂಗೈಕ್ಯವನ್ನು ಸೂಚಿಸುತ್ತದೆ.

ಊರು: ಸುಲೇಪೇಟೆ ಸ್ಥಳ: ಪೋಚಮ್ಮನ ಗುಡಿ

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ ಉಲ್ಲೇಖ: ಅಪ್ರಕಟಿತ

ಒಂದು ಅಡಿ ಎತ್ತರದಲ್ಲಿರುವ ಈ ಶಿಲ್ಪದಲ್ಲಿ ಇಬ್ಬರು ವೀರರು ಆಯುಧ ಹಿಡಿದು ನಿಂತಿರುವರು. ಪ್ರಸ್ತುತ ವೀರಗಲ್ಲು ಶಿಲ್ಪ ತ್ರುಟಿತವಾಗಿದೆ.

ಊರು: ಭೂತಪುರ ಸ್ಥಳ: ಸ.ಹಿ.ಪ್ರಾ.ಶಾಲೆ ಹಿಂಬದಿ

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೪೭

ಒಕ್ಕೈ ಮಾಸ್ತಿಗಲ್ಲು ಎರಡು ಸ್ತರದಲ್ಲಿದೆ. ಒಂದನೇ ಸ್ತರದಲ್ಲಿ ಮಾಸ್ತಿಗೈ ಮತ್ತು ಮೇಲ್‌ಸ್ತರದಲ್ಲಿ ಲಿಂಗೈಕ್ಯವಾದ ಸತಿ ಅಂಜಲಿ ಹಸ್ತದಲ್ಲಿ ಲಿಂಗದ ಮುಂದೆ ಕುಳಿತ ಶಿಲ್ಪಾವಳಿಯಿದೆ.

ಊರು: ಶಿರೋಳ್ಳಿ ಸ್ಥಳ: ಅಗಸಿಯ ಮರಗಮ್ಮನ ಗುಡಿ

ಕಾಲ: ಸು.೧೦-೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ ಉಲ್ಲೇಖ: ಅಪ್ರಕಟಿತ

ಎರಡು ಸ್ತರದ ವೀರಗಲ್ಲಿನಲ್ಲಿ ವೀರ ಹೋರಾಡುತ್ತಿರುವ ದೃಶ್ಯ ಮೊದಲ ಸ್ತರದಲ್ಲಿದೆ. ಎರಡನೆ ಸ್ತರದಲ್ಲಿ ಸುರಾಂಗನೆಯರು ದೇವಲೋಕಕ್ಕೆ ಒಯ್ಯುವ ದೃಶ್ಯವಿದೆ. ಲಿಂಗೈಕ್ಯದ ಶಿಲ್ಪವಿದೆ.

ಊರು: ಭೂತಪುರ ಸ್ಥಳ: ಮಲ್ಲಿಕಾರ್ಜುನ ಗುಡಿ

ಕಾಲ: ಸು.೧೦-೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೪೭

ವೀರಗಲ್ಲು ಶಿಲ್ಪ ಮೂರು ಸ್ತರದಲ್ಲಿದೆ. ಹೋರಾಡುತ್ತಿರುವ ವೀರನ ಕೈಗಳಲ್ಲಿ ಗುರಾಣಿ ಮತ್ತು ಖಡ್ಗವಿದೆ. ಶತ್ರುವಿರುವ ಭಾಗ ತ್ರುಟಿತವಾಗಿದೆ. ಸುರಾಂಗನೆಯರು ವಿಮಾನದಲ್ಲಿ ವೀರನಿಗೆ ದೇವಲೋಕಕ್ಕೆ ಒಯ್ಯುತ್ತಿರುವ ದೃಶ್ಯವಿದೆ. ಮೇಲ್‌ಸ್ತರದಲ್ಲಿ ಎಡಕ್ಕೆ ವೀರ ಕೈ ಮುಗಿದು ಲಿಂಗದ ಬಳಿ ಕುಳಿತ ಲಿಂಗೈಕ್ಯದ ದೃಶ್ಯಾವಳಿ ಇದೆ.

ಊರು: ನಿಡಗುಂದ ಸ್ಥಳನವಕೋಟಿ ನಾರಾಯಣನ ಗುಡಿ(ಊರ ಮಧ್ಯೆ)

ಕಾಲ: ಸು.೧೧ನೇ ಶತಮಾನ ರಾಜವಂಶ: ರಾಷ್ಟ್ರಕೂಟರ ಕಾಲ

ವಸ್ತು: ಕಪ್ಪುಶಿಲೆ ಉಲ್ಲೇಖ: ಅಪ್ರಕಟಿತ

ನವಕೋಟಿ ನಾರಾಯಣನ ಗುಡಿಯ ಪ್ರವೇಶ ದ್ವಾರದ ಎಡಭಾಗಕ್ಕೆ ಎರಡು ಸ್ತರದಲ್ಲಿರುವ ವೀರಗಲ್ಲಿದೆ. ಕುದುರೆಯ ಮೇಲೆ ಕುಳಿತು ಆಕ್ರಮಣ ಮಾಡುತ್ತಿರುವ ಶತ್ರುವಿನ ವಿರುದ್ಧ ನೆಲದ ಮೇಲೆ ನಿಂತು ಭರ್ಚಿ ಹಿಡಿದು ಹೋರಾಡುತ್ತಿರುವ ವೀರನ ಶಿಲ್ಪವಿದೆ. ಎರಡನೆ ಸ್ತರದಲ್ಲಿ ಸುರಾಂಗನೆಯರು ವೀರನನ್ನು ವಿಮಾನದಲ್ಲಿ ದೇವಲೋಕಕ್ಕೆ ಒಯ್ಯುವ ಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ಲಿಂಗದ ಮುಂದೆ ನಮಸ್ಕರಿಸುತ್ತಾ ಕುಳಿತ ವೀರನ ಶಿಲ್ಪವಿದೆ. ಇದು ಲಿಂಗೈಕ್ಯವನ್ನು ಸೂಚಿಸುತ್ತದೆ.

ಊರು: ಹುಲಸಗೂಡು — ಸ್ಥಳ: ಅಗಸಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ತ್ರುಟಿತವಾಗಿರುವ ವೀರಗಲ್ಲು ಶಿಲ್ಪ ಒಂದು ಸ್ತರದಲ್ಲಿದೆ. ವೀರನು ಬಲಗೈಯಲ್ಲಿ ಖಡ್ಗ ಹಿಡಿದು ಕಾಡುಹಂದಿಯೊಂದಿಗೆ ಹೋರಾಡುತ್ತಿರುವಂತೆ ತೋರುತ್ತದೆ.

ಊರು: ರಟಕಲ್ — ಸ್ಥಳ: ಮುಕ್ರಂಬಿ ಅಗಸಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ಯುದ್ಧದಲ್ಲಿ ಹೋರಾಡುತ್ತಿರುವ ವೀರನ ಬಗ್ಗೆ ವಿವರಿಸುವ ಮೂರು ಸ್ತರದ ವೀರಗಲ್ಲಿದೆ. ಖಡ್ಗ ಮತ್ತು ಗುರಾಣಿ ಹಿಡಿದು ಹೋರಾಡುತ್ತಿರುವ ವೀರನ ಶಿಲ್ಪ ಮೊದಲ ಸ್ತರದಲ್ಲಿದೆ. ಸುರಾಂಗನೆಯರು ದೇವಲೋಕಕ್ಕೆ ವೀರನನ್ನು ವಿಮಾನದಲ್ಲಿ ಒಯುತ್ತಿರುವ ಶಿಲ್ಪ ಎರಡನೆಯ ಸ್ತರದಲ್ಲಿದೆ. ಮೇಲ್‌ಸ್ತರದಲ್ಲಿ ಲಿಂಗೈಕ್ಯದ ದೃಶ್ಯಾವಳಿ ಇದೆ. ಪ್ರಸ್ತುತ ತ್ರುಟಿತವಾಗಿದೆ.

ಊರು: ರಟಕಲ್ — ಸ್ಥಳ: ಮಕ್ರಂಬಿ ಅಗಸಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ಮೂರು ಸ್ತರದ ವೀರಗಲ್ಲಿನ ಕೆಳಸ್ತರದಲ್ಲಿ ವೀರ ಹೋರಾಡುತ್ತಿರುವ ಶಿಲ್ಪವಿದೆ. ಸುರಾಂಗನೆಯರು ವೀರನನ್ನು ವಿಮಾನದಲ್ಲಿ ಒಯ್ಯುತ್ತಿರುವ ದೃಶ್ಯಾವಳಿ ಎರಡನೆ ಸ್ತರದಲ್ಲಿದೆ. ಲಿಂಗೈಕ್ಯವಾಗಿರುವ ವೀರನ ಶಿಲ್ಪ ಮೇಲ್‌ಸ್ತರದಲ್ಲಿದೆ.

ಊರು: ರಟಕಲ್ — ಸ್ಥಳ: ಮಕ್ರಂಬಿ ಅಗಸಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ಈ ವೀರಗಲ್ಲು ಮೂರು ಸ್ತರಗಳನ್ನೊಳಗೊಂಡಿದೆ. ವೀರನು ಹೋರಾಡುತ್ತಿರುವ ಶಿಲ್ಪವಿದೆ. ಖಡ್ಗ ಮತ್ತು ಗುರಾಣಿ ಕೈಯಲ್ಲಿ ಹಿಡಿದಿದೆ. ಎರಡನೆ ಸ್ತರದಲ್ಲಿ ಸುರಾಂಗನೆಯರು ವಿಮಾನದಲ್ಲಿ ವೀರನನ್ನು ದೇವಲೋಕಕ್ಕೆ ಒಯ್ಯುತ್ತಿರುವ ಬಿಂಬವಿದೆ. ಮತ್ತು ಮೂರನೇ ಸ್ತರದಲ್ಲಿ ಲಿಂಗೈಕ್ಯದ ದೃಶ್ಯವಿದೆ.

ಊರು: ರಟಕಲ್ | ಸ್ಥಳ: ಮಕ್ರಂಬಿ ಅಗಸಿ

ಕಾಲ: ಸು.೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ವೀರಗಲ್ಲು ಶಿಲ್ಪ ಮೂರು ಸ್ತರದಲ್ಲಿದೆ. ವೀರ ಹೋರಾಡುತ್ತಿರುವ ಮೊದಲ ಸ್ತರದ ಶಿಲ್ಪ ಪ್ರಸ್ತುತ ಹಾಳಾಗಿದೆ. ಎರಡನೆ ಸ್ತರದಲ್ಲಿ ಸುರಾಂಗನೆಯರು ದೇವಲೋಕಕ್ಕೆ ವೀರನನ್ನು ಒಯ್ಯುತ್ತಿರುವರು. ಮೂರನೆ ಸ್ತರದಲ್ಲಿ ಲಿಂಗೈಕ್ಯದ ದೃಶ್ಯವಿದೆ.

ಊರು: ರಟಕಲ್ | ಸ್ಥಳ:ಬಂಕನಾಥ ದೇವಾಲಯ(ಊರೊಳಗೆ)

ಕಾಲ: ಸು.೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ಆಲದ ಮರದ ಕಟ್ಟೆಯ ಮೇಲಿರುವ ಈ ಶಿಲ್ಪ ಒಂದು ಸ್ತರದಲ್ಲಿದೆ. ಆಯುಧ ಹಿಡಿದು ನಿಂತಿರುವ ವೀರನ ಶಿಲ್ಪಾವಳಿಯಿದೆ.

ಊರು: ರಟಕಲ್ | ಸ್ಥಳ: ಬಂಕನಾಥ ಗುಡಿ (ಊರೊಳಗೆ)

ಕಾಲ: ಸು.೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ದೇವಾಲಯದ ಪ್ರಮುಖ ಪ್ರವೇಶ ದ್ವಾರದ ಎಡಭಾಗಕ್ಕೆ ತ್ರುಟಿತ ವೀರಗಲ್ಲಿದೆ. ಮೂರು ಸ್ತರದ ಈ ಶಿಲ್ಪದ ಮೇಲ್ ಸ್ತರ ಪ್ರಸ್ತುತ ಹಾಳಾಗಿದೆ. ಎರಡು ಸ್ತರ ಮಾತ್ರ ಉಳಿದಿವೆ. ವೀರ ಹೋರಾಡುತ್ತಿರುವ ಶಿಲ್ಪ ಮತ್ತು ಸುರಾಂಗನೆಯರು ವಿಮಾನದಲ್ಲಿ ದೇವಲೋಕಕ್ಕೆ ಒಯ್ಯುತ್ತಿರುವ ಶಿಲ್ಪಾವಳಿಯನ್ನೊಳಗೊಂಡಿದೆ.

ಊರು: ರಟಕಲ್ | ಸ್ಥಳ: ರಾಮಲಿಂಗೇಶ್ವರ (ಊರೊಳಗೆ)

ಕಾಲ: ಸು.೧೦-೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ: ಅಪ್ರಕಟಿತ

ವೀರಗಲ್ಲು ಶಿಲ್ಪ ಒಂದು ಸ್ತರದಲ್ಲಿದೆ. ಗುರಾಣಿ ಮತ್ತು ಈಟಿ ಹಿಡಿದು ನಿಂತಿರುವ ವೀರನ ಶಿಲ್ಪವಿದೆ.

ಊರು: ಮಿರ್‍ಯಾಣ | ಸ್ಥಳ: ಮೂರು ದೇವರಗುಡಿ(ಊರ ಮಧ್ಯೆ)

ಕಾಲ: ಸು.೧೦ನೇ ಶತಮಾನ | ರಾಜವಂಶ: ರಾಷ್ಟ್ರಕೂಟರು

ವಸ್ತು: ಕಪ್ಪುಶಿಲೆ | ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೫೭

ವೀರಗಲ್ಲು ಶಿಲ್ಪ ಕೇವಲ ಕೆಳಸ್ತರ ಮಾತ್ರ ಪ್ರಸ್ತುತ ಉಳಿದಿದೆ. ಇದು ದೇವಾಲಯದ ಬಲಕ್ಕೆ ಇದೆ. ವೀರ ಭರ್ಚಿಯಿಂದ ಶತ್ರುವನ್ನು ಇರಿಯುವ ದೃಶ್ಯವಿದೆ.

ಊರು: ಮಿರ್‍ಯಾಣ | ಸ್ಥಳ: ಮೂರು ದೇವರಗುಡಿ(ಊರ ಮಧ್ಯೆ)

ಕಾಲ: ಸು.೧೦ನೇ ಶತಮಾನ | ರಾಜವಂಶ: ರಾಷ್ಟ್ರಕೂಟರು

ವಸ್ತು: ಕಪ್ಪುಶಿಲೆ | ಉಲ್ಲೇಖ: ಅಪ್ರಕಟಿತ

ವೀರಗಲ್ಲು ಶಿಲ್ಪ ಬಹಳಷ್ಟು ತ್ರುಟಿತವಾಗಿದೆ. ಗರ್ಭಗುಡಿಯ ಎಡಕ್ಕೆ ಇದೆ. ಸುರಾಂಗನೆಯರು ವೀರನಿಗೆ ದೇವಲೋಕಕ್ಕೆ ಒಯ್ಯುವ ಶಿಲ್ಪ ಮಾತ್ರ ಪ್ರಸ್ತುತ ಉಳಿದಿದೆ.

ಊರು: ರಟಕಲ್ | ಸ್ಥಳ:ಬಂಕನಾಥ ದೇವಾಲಯ (ಊರೊಳಗೆ)

ಕಾಲ: ಸು.೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ದೇವಾಲಯದ ಎರಡನೆಯ ಪ್ರವೇಶ ದ್ವಾರದ ಎಡಕ್ಕೆ ಈ ವೀರಗಲ್ಲು ಇದೆ. ಕೆಳಸ್ತರ ಸಂಪೂರ್ಣ ಹಾಳಾಗಿದೆ. ಮೂರು ಸ್ತರದ ವೀರಗಲ್ಲಿನ ಎರಡನೆಯ ಸ್ತರದಲ್ಲಿ ಸುರಾಂಗನೆಯರು ವೀರನಿಗೆ ಚಾಮರ ಬೀಸುತ್ತಾ, ವಿಮಾನದಲ್ಲಿ ದೇವಲೋಕಕ್ಕೆ ಒಯ್ಯುತ್ತಿರುವ ಶಿಲ್ಪವಿದೆ. ಮೇಲ್ ಸ್ತರದಲ್ಲಿ ವೀರ ಲಿಂಗಕ್ಕೆ ನಮಸ್ಕರಿಸುತ್ತಾ ಕುಳಿತಿರುವ ದೃಶ್ಯಾವಳಿಯನ್ನೊಳಗೊಂಡಿದೆ.

ಊರು: ರಟಕಲ್ | ಸ್ಥಳ:ಬಂಕನಾಥ ದೇವಾಲಯ(ಊರೊಳಗೆ)

ಕಾಲ: ಸು.೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೬೯

ದೇವಾಲಯದ ಎರಡನೆ ಪ್ರವೇಶ ದ್ವಾರದ ಬಲಕ್ಕೆ ಈ ವೀರಗಲ್ಲು ಇದೆ. ಮೂರು ಸ್ತರದ ಶಿಲ್ಪದಲ್ಲಿ ಮೊದಲ ಸ್ತರದಲ್ಲಿ ವೀರ ಹೋರಾಡುತ್ತಿರುವ ದೃಶ್ಯಾವಳಿಯಿದೆ. ಭರ್ಚಿ ಮತ್ತು ಗುರಾಣಿ ಹಿಡಿದ ವೀರ ನೆಲದ ಮೇಲೆ ನಿಂತು ಕುದುರೆ ಮೇಲಿರುವ ಶತ್ರುವನ್ನು ಚುಚ್ಚಲು

ಹೋಗುತ್ತಿರುವ ದೃಶ್ಯ ಮತ್ತು ಶತ್ರು ತನ್ನ ಭರ್ಚಿಯಿಂದ ವೀರನಿಗೆ ತಿವಿಯಲು ಬರುತ್ತಿರುವ ದೃಶ್ಯಾವಳಿಯನ್ನೊಳಗೊಂಡಿದೆ. ಎರಡನೆಯ ಸ್ತರದಲ್ಲಿ ವೀರನಿಗೆ ಸುರಾಂಗನೆಯರು ಚಾಮರ ಬೀಸುತ್ತಾ ದೇವಲೋಕಕ್ಕೆ ಒಯ್ಯುತ್ತಿರುವ ಶಿಲ್ಪವಿದೆ. ಮೇಲ್‌ಸ್ತರದಲ್ಲಿ ಲಿಂಗೈಕ್ಯವಾದ ವೀರ ಲಿಂಗವನ್ನು ನಮಸ್ಕರಿಸುತ್ತಾ ಕುಳಿತ ಶಿಲ್ಪವಿದೆ. ವೀರನು ತಲೆಯ ಹಿಂಬದಿಯಲ್ಲಿ ಮುಡಿ ಕಟ್ಟಿರುವನು.

ಊರು: ರಟಕಲ್ — ಸ್ಥಳ:ಅಗಸಿ ಬಳಿಯ ಹಿರೋಡ್ಯಾನ ಗುಡಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ವೀರಗಲ್ಲು ಶಿಲ್ಪದ ಕೆಳಸ್ತರ ತ್ರುಟಿತವಾಗಿದ್ದು ಎರಡನೆಯ ಸ್ತರದಲ್ಲಿ ಚಾಮರಧಾರಿ ಸುರಾಂಗನೆಯರು ವೀರನನ್ನು ದೇವಲೋಕಕ್ಕೆ ಒಯ್ಯುತ್ತಿರುವ ದೃಶ್ಯ ಮೂರನೆಯ ಸ್ತರದಲ್ಲಿ ಲಿಂಗದ ಮುಂದೆ ನಮಸ್ಕರಿಸುತ್ತ ಕುಳಿತ ವೀರನ ದೃಶ್ಯಾವಳಿ ಇದೆ.

ಊರು: ಮಿರ್‍ಯಾಣ — ಸ್ಥಳ: ಈಶ್ವರ ದೇವಾಲಯ

ಕಾಲ: ಸು.೧೦ನೇ ಶತಮಾನ — ರಾಜವಂಶ: ರಾಷ್ಟ್ರಕೂಟರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೫೭

ಕೆಳಗಿನ ಎರಡು ಸ್ತರದಲ್ಲಿ ವೀರರು ಹೋರಾಡುತ್ತಿರುವ ದೃಶ್ಯಾವಳಿ ಮೂಡಿಬಂದದ್ದು ವಿಶೇಷವಾಗಿದೆ. ವೀರಗಲ್ಲಿನ ಮೂರು ಸ್ತರದ ಕೆಳಸ್ತರದಲ್ಲಿ ಇಬ್ಬರು ವೀರರು ಖಡ್ಗ ಹಿಡಿದ ಶತ್ರುವನ್ನು ಭರ್ಚಿಯಿಂದ ಇರಿಯುವ ಕೆತ್ತನೆಯನ್ನೊಳಗೊಂಡಿದೆ. ವೀರರ ಕಾಲಿನ ಕೆಳಗೆ ಶತ್ರು ಒಬ್ಬ ಉರುಳಿ ಬಿದ್ದಂತೆ ಎರಡೂ ಸ್ತರದಲ್ಲಿದೆ. ಇನ್ನೊಂದು ಸ್ತರದಲ್ಲಿ ಆ ಇಬ್ಬರು ವೀರರು ಕುದುರೆ ಮೇಲೆ ಖಡ್ಗ ಹಿಡಿದು ಇರಿಯಲು ಬಂದವನಿಗೆ ಭರ್ಚಿಯಿಂದ ತಿವಿಯುವ ಶಿಲ್ಪವಿದೆ. ಮೇಲ್ಭಾಗದಲ್ಲಿ ಒಬ್ಬ ವೀರನನ್ನು ಚಾಮರಧಾರಿ ಸುರಾಂಗನೆಯರು ವಿಮಾನದಲ್ಲಿ ಒಯ್ಯುತ್ತಿರುವ ಶಿಲ್ಪವಿದೆ.

ಊರು: ಕೇಶಾವರ್ (ಗಡಿ) — ಸ್ಥಳ: ಹನುಮಾನ ಗುಡಿ (ಊರ ಹೊರಗೆ)

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ:ಕ.ಸ.ಗೆ.ಕ.ಜಿ. ೧೯೯೭, ಪು.೭೦೨

ತುರುಗೋಳ್ ವೀರಗಲ್ಲಿನ ಕೆಳಸ್ತರದಲ್ಲಿ ಹೋರಾಡುತ್ತಿರುವ ವೀರನ ಶಿಲ್ಪವಿದೆ. ವೀರನು ಇದರಲ್ಲಿ ತಲವಾರವನ್ನು ಬಲಗೈಯಲ್ಲಿ ಹಿಡಿದು, ಎಡಗೈಯಲ್ಲಿ ಗುರಾಣಿ ಹಿಡಿದಿರುವ

ಶಿಲ್ಪಾವಳಿಯನ್ನೊಳಗೊಂಡಿದೆ. ವೀರನ ಹಿಂದೆ ಆಕಳುಗಳ ಶಿಲ್ಪಗಳಿವೆ. ನಂತರ ಸುರಾಂಗನೆಯರು ವಿಮಾನದಲ್ಲಿ ವೀರನನ್ನು ಒಯ್ಯುತ್ತಿರುವುದು ದೃಶ್ಯಾವಳಿ ಇದೆ ಮತ್ತು ಮೇಲ್‌ಸ್ತರದಲ್ಲಿ ಲಿಂಗೈಕ್ಯವಾದ ವೀರ ಲಿಂಗದ ಮುಂದೆ ವಂದಿಸುತ್ತಾ ಕುಳಿತಿರುವಂತಿದೆ.

ಊರು: ಕುಪನೂರು	ಸ್ಥಳ: ರಾಮಲಿಂಗೇಶ್ವರ ಗುಡಿ
ಕಾಲ: ಸು.೯ನೇ ಶತಮಾನ	ರಾಜವಂಶ: ರಾಷ್ಟ್ರಕೂಟ
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ಎರಡು ಸ್ತರದ ವೀರಗಲ್ಲಿನಲ್ಲಿ ವೀರ ಹೋರಾಡುತ್ತಿರುವ ದೃಶ್ಯ ಮತ್ತು ಮೇಲ್ ಸ್ತರದಲ್ಲಿ ಲಿಂಗೈಕ್ಯವಾಗಿರುವ ವೀರನು ಲಿಂಗದ ಮುಂದೆ ಅಂಜಲಿ ಹಸ್ತದಿಂದ ಕುಳಿತ ಶಿಲ್ಪವಿದೆ.

ಊರು: ಚಿಕ್ಕನಿಂಗದ ಹಳ್ಳಿ	ಸ್ಥಳ:ಹನುಮಾನ ಗುಡಿ(ಊರ ಪ್ರವೇಶದಲ್ಲಿ)
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ವೀರಗಲ್ಲು ಶಿಲ್ಪದ ಕೆಳಸ್ತರದಲ್ಲಿ ಹೋರಾಡುತ್ತಿರುವ ವೀರನ ದೃಶ್ಯಾವಳಿಯಿದೆ. ಚಾಮರಧಾರಿ ಸುರಾಂಗನೆಯರು ದೇವಲೋಕಕ್ಕೆ ಒಯ್ಯುವ ದೃಶ್ಯ ಎರಡನೆ ಸ್ತರದಲ್ಲಿದೆ.

ಊರು: ಮಿರ್‍ಯಾಣ	ಸ್ಥಳ: ಹನುಮಾನ ಗುಡಿ (ಊರೊಳಗೆ)
ಕಾಲ: ಸು.೮ನೇ ಶತಮಾನ	ರಾಜವಂಶ: ರಾಷ್ಟ್ರಕೂಟರು
ವಸ್ತು: ಕಪ್ಪುಶಿಲೆ	ಉಲ್ಲೇಖ:ಕ.ಸ.ಗೆ.ಕ.ಜಿ. ೧೯೭೭, ಪು.೭೫೭

ಕರ್ನಾಟಕ ಸರ್ಕಾರ ಗೆಜೆಟಿಯರ್‌ನಲ್ಲಿ (ಕಲ್ಬುರ್ಗಿ ಜಿಲ್ಲೆ) ಇದು ವೀರಗಲ್ಲು ಎಂದಿದ್ದಾರೆ. ಆದರೆ ಇದೊಂದು ತುರುಗೋಳ್ ವೀರಗಲ್ಲಾಗಿದೆ. ಕೆಳಸ್ತರದ ವೀರನ ಎಡಕ್ಕೆ ಮೇಲ್ ಭಾಗದ ಮೂಲೆಗೆ ಗೋವುಗಳ ಶಿಲ್ಪಗಳಿವೆ. ವೀರನು ತಲೆ ಹಿಂಬದಿಯಲ್ಲಿ ಮುಡಿ ಕಟ್ಟಿಕೊಂಡಿರುವ, ಕಂಠಾಭರಣ, ಸೊಂಟಕ್ಕೆ ಕತ್ತಿ, ಕಟಿವಸ್ತ್ರ ಮತ್ತು ಕಾಚಾ ಧರಿಸಿರುವನು. ವೀರಖಡ್ಗ ಮತ್ತು ಗುರಾಣಿ ಹಿಡಿದಂತೆ ತೋರುತ್ತದೆ. ಎರಡನೆ ಸ್ತರದಲ್ಲಿ ಚಾಮರ ಹಿಡಿದ ಸುರಾಂಗನೆಯರು ವಿಮಾನದಲ್ಲಿ ವೀರನಿಗೆ ದೇವಲೋಕಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ. ಮೇಲ್ ಸ್ತರದಲ್ಲಿ ಲಿಂಗೈಕ್ಯವಾದ ವೀರನನ್ನು ಬಿಂಬಿಸಿದೆ.

ಊರು: ಬೇಡಕ್‌ಪಳ್ಳಿ	ಸ್ಥಳ: ಅಗಸಿಯ ಬಳಿ
ಕಾಲ: ಸು.೮-೯ನೇ ಶತಮಾನ	ರಾಜವಂಶ: ರಾಷ್ಟ್ರಕೂಟರು
ವಸ್ತು: ಕೆಂಪು ಮಿಶ್ರಿತ ಕಪ್ಪುಶಿಲೆ	ಉಲ್ಲೇಖ:ಪ್ರಕಟಿತ (ಪ್ರಜಾವಾಣಿ ಪತ್ರಿಕೆಯ ಲೇಖನ, ಜಗನ್ನಾಥ ಡಿ.ಶೇರಿಕಾರ, ೦೨.೧೨.೨೦೧೧)[೪೯]

ಕೆಳಸ್ತರದಲ್ಲಿ ಗುರಾಣಿ ಹಿಡಿದು ನಿಂತ ವೀರ ತುರುಗೋಳ್‌ಗಾಗಿ ಹೋರಾಡುತ್ತಿರುವಂತಿದೆ. ಮೇಲ್ ಸ್ತರದಲ್ಲಿ ಚಾಮರಧಾರಿ ಸುರಾಂಗನೆಯರು ವಿಮಾನದಲ್ಲಿ ವೀರನಿಗೆ ಒಯ್ಯುತ್ತಿರುವ ದೃಶ್ಯವಿದೆ.

ಊರು: ಬೇಡಕ್‌ಪಳ್ಳಿ	ಸ್ಥಳ: ಅಗಸಿಯ ಬಳಿ
ಕಾಲ: ಸು.೯ನೇ ಶತಮಾನ	ರಾಜವಂಶ: ರಾಷ್ಟ್ರಕೂಟರು
ವಸ್ತು: ಕಪ್ಪುಶಿಲೆ	ಉಲ್ಲೇಖ:ಪ್ರಕಟಿತ(ಪ್ರಜಾವಾಣಿ ಪತ್ರಿಕೆಯ ಲೇಖನ, ಜಗನ್ನಾಥ ಡಿ.ಶೇರಿಕಾರ, ೦೨.೧೨.೨೦೧೧)

ಬೇಡಕಪಳ್ಳಿಯ ವೀರಗಲ್ಲು ಎರಡು ಸ್ತರದಲ್ಲಿದೆ. ಇದು ತುರುಗೋಳಗಳನ್ನು ಸೂಚಿಸುವ ವೀರಗಲ್ಲಾಗಿದೆ. ಮೊದಲನೆಯ ಸ್ತರದಲ್ಲಿ ವೀರ ಹೋರಾಡುತ್ತಿರುವ ದೃಶ್ಯಾವಳಿ ಇದೆ. ಮತ್ತು ಎರಡನೆಯ ಸ್ತರದಲ್ಲಿ ಸುರಾಂಗನೆಯರು ವೀರನಿಗೆ ವಿಮಾನದಲ್ಲಿ ಒಯ್ಯುತ್ತಿರುವ ದೃಶ್ಯಾವಳಿಯನ್ನೊಳಗೊಂಡಿದೆ.

ಈ ಶಿಲ್ಪದಲ್ಲಿ ವೀರ ಮತ್ತು ಶತ್ರು ಇಬ್ಬರು ಮಲ್ಲಯುದ್ಧ ಮಾಡುತ್ತಿರುವುದು ವಿಶೇಷವಾಗಿದೆ. ವೀರನು ಶತ್ರುವಿನ ಜಟ್ಟಿ ಹಿಡಿದು ಬಲಗಾಲನ್ನು ಅವನ ಸೊಂಟದ ಮೇಲಿಟ್ಟಿದ್ದಾನೆ. ವೀರನ ಬಲಕ್ಕೆ ಮೇಲಿನ ಮೂಲೆಯಲ್ಲಿ ಮತ್ತು ಎಡ ಹಿಂಬದಿಯಲ್ಲಿ ಗೋವುಗಳ ಶಿಲ್ಪವಿದೆ.

ಊರು: ಚಿಂಚೋಳಿ	ಸ್ಥಳ: ಅಗಸಿ
ಕಾಲ: ಸು.೧೦–೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ತುರುಗೋಳ್ ಸೂಚಿಸುವ ವೀರಗಲ್ಲಾಗಿದೆ. ಬಿಲ್ಲು ಬಾಣಗಳನ್ನು ಹಿಡಿದ ವೀರನು, ಶತ್ರುವಿನ ವಿರುದ್ಧ ಹೋರಾಡುತ್ತಿರುವಂತೆ ಕೆಳಸ್ತರದಲ್ಲಿ ಮೂಡಿ ಬಂದಿದೆ. ಚಾಮರಧಾರಿ ಸುರಾಂಗನೆಯರು ವೀರನನ್ನು ವಿಮಾನದಲ್ಲಿ ದೇವಲೋಕಕ್ಕೆ ಒಯ್ಯುವ ದೃಶ್ಯ, ಎರಡನೆಯ ಸ್ತರದಲ್ಲಿದೆ.

ವೀರನ ಗುರಾಣಿಗೆ ಅನೇಕ ಬಾಣಗಳು ಚುಚ್ಚಿ ಆ ಗುರಾಣಿ ಸೀಳಿ ವೀರನ ಹೊಟ್ಟೆಯಿಂದ ಬೆನ್ನಿಗೆ ತೂರಿಕೊಂಡು ಬಂದ ಎರಡು ಬಾಣಗಳು ಶಿಲ್ಪದಲ್ಲಿ ಬಿಂಬಿಸಲಾಗಿದೆ. ಒಬ್ಬ ಶತ್ರುವಿನ ಶವ ಕಾಲ ಕೆಳಗೆ ಬಿದ್ದಂತಿದೆ. ವೀರನ ಹಿಂದೆ ನಾಲ್ಕು ಆಕಳುಗಳ ಶಿಲ್ಪಗಳಿವೆ.

ಊರು: ಕೂಡ್‌ಹಳ್ಳಿ	ಸ್ಥಳ: ಹನುಮಾನ ಮಂದಿರ
ಕಾಲ: ಸು.೧೦ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ಒಂದು ಸ್ತರದ ವೀರಗಲ್ಲಿನಲ್ಲಿ ವೀರನು ಕುದುರೆ ಮೇಲೆ ಕುಳಿತ ಶತ್ರುವಿಗೆ ಖಡ್ಗದಿಂದ ಇರಿಯುತ್ತಿರುವಂತೆ ಬಿಂಬಿಸಲಾಗಿದೆ. ಮತ್ತು ಎರಡನೆಯ ಸ್ತರದಲ್ಲಿ ಲಿಂಗೈಕ್ಯದ ಶಿಲ್ಪಾವಳಿಯಿದೆ.

ಊರು: ಚಿಮ್ಮಾ ಇದಲಾಯಿ	ಸ್ಥಳ: ಬಸವನ ಕಟ್ಟೆ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ (ತ್ರುಟಿತ)	ಉಲ್ಲೇಖ: ಅಪ್ರಕಟಿತ

ಎರಡು ಸ್ತರದ ಈ ವೀರಗಲ್ಲು ಮೊದಲನೇ ಸ್ತರದಲ್ಲಿ ಯೋಧನು ಕುದುರೆಯ ಮೇಲೆ ಕುಳಿತು ಯುದ್ಧ ಮಾಡುವುದನ್ನು ಬಿಂಬಿಸಿದೆ. ಸುರಾಂಗನೆಯರು ಚಾಮರ ಹಿಡಿದು ದೇವಲೋಕಕ್ಕೆ ವಿಮಾನದಲ್ಲಿ ವೀರನನ್ನು ಒಯ್ಯುವ ದೃಶ್ಯಾವಳಿ ಮೇಲ್ ಸ್ತರದಲ್ಲಿದೆ.

ಗ್ರಾಮ: ಹಲಚೇರಾ	ಸ್ಥಳ: ಈಶ್ವರ ಗುಡಿ
ಕಾಲ: ಸು.೧೧ನೇ ಶತಮಾನ	ಸ್ಥಿತಿ: ಉತ್ತಮ
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ದೇವಾಲಯದ ಗೋಡೆಯಲ್ಲಿ ಮೂರು ಸ್ತರದ ಒಂದು ವೀರಗಲ್ಲಿದೆ. ವೀರಗುರಾಣಿ, ಭರ್ಚಿ ಹಿಡಿದಂತೆ ಬಿಂಬಿಸಲಾಗಿದೆ. ವೀರ ಭರ್ಚಿಯಿಂದ ಕುದುರೆಯನ್ನು ತಿವಿಯುತ್ತಿರುವ ಶಿಲ್ಪಾವಳಿಯನ್ನೊಳಗೊಂಡಿದೆ. ವೀರನು ಯಜ್ಞೋಪವೀತ, ಕಿರೀಟ ಧರಿಸಿರುವ ಮತ್ತು ಕುದುರೆ ಮೇಲೆ ಕುಳಿತು ಹೋರಾಡುತ್ತಿರುವ ಶಿಲ್ಪಾವಳಿಯಿದೆ. ನಂತರ ಸ್ತರದಲ್ಲಿ ಚಾಮರಧಾರಿ ದೇವಕನ್ಯೆಯರು ದೇವಲೋಕಕ್ಕೆ ಒಯ್ಯುವ ದೃಶ್ಯ ಮತ್ತು ಮೂರನೇ ಸ್ತರದಲ್ಲಿ ಲಿಂಗೈಕ್ಯದ ಶಿಲ್ಪಾವಳಿಯನ್ನೊಳಗೊಂಡಿದೆ.

ಊರು: ಗೌಡನಹಳ್ಳಿ	ಸ್ಥಳ: ಮಲ್ಲಿಕಾರ್ಜುನ ದೇವಾಲಯದ ಹತ್ತಿರ
ಕಾಲ: ಸು.೧೦-೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ (ತ್ರುಟಿತ)	ಉಲ್ಲೇಖ: ಅಪ್ರಕಟಿತ

ಈ ಶಾಸನ ಮೂರು ಸ್ತರದಲ್ಲಿದೆ. ಶಾಸನವನ್ನು ಒಳಗೊಂಡ ವೀರಗಲ್ಲು ಇದಾಗಿದೆ.

ಊರು: ಹುಡದಳ್ಳಿ	ಸ್ಥಳ: ಮಲ್ಲಿಕಾರ್ಜುನ ಮಂದಿರ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಅಪ್ರಕಟಿತ

ವೀರಗಲ್ಲು ತ್ರುಟಿತವಾಗಿದೆ.

ಊರು: ಐನಾಪುರ | ಸ್ಥಳ: ಹಿರೇಮಠದ ಬೆನ್ನಿನ ಗೋಡೆಗೆ

ಕಾಲ: ಸು.೧೦ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ: ಅಪ್ರಕಟಿತ

ಒಕ್ಕೈ ಮಾಸ್ತಿಗಲ್ಲು (ವ್ಯಾಸನ ತೋಳು) ಸತಿಪತಿಯರು ಅಂಜಲಿ ಹಸ್ತದಲ್ಲಿ ಕುಳಿತಿರುವ ಶಿಲ್ಪವನ್ನೊಳಗೊಂಡಿದೆ. ಮೇಲ್ಭಾಗದಲ್ಲಿ ಚಂದ್ರ, ಲಿಂಗ ಮತ್ತು ಸೂರ್ಯನ ಶಿಲ್ಪವಿದೆ.

ಊರು: ಎತ್ಬಾಪುರ | ಸ್ಥಳ: ಹನುಮಾನ ಮಂದಿರ

ಕಾಲ: ಸು.೭ನೇ ಶತಮಾನ | ರಾಜವಂಶ: ಬಾದಾಮಿ ಚಾಲುಕ್ಯರು

ವಸ್ತು: ಬಿಳಿ ಶಿಲೆ | ಉಲ್ಲೇಖ: ಅಪ್ರಕಟಿತ

ಹೆಣ್ಣಿನ ಮೂರ್ತಿಶಿಲ್ಪ ಈ ಊರಲ್ಲಿದೆ. ಇದು ಪುರಾತನ ಶಿಲ್ಪವಾಗಿದೆ. ವೀರಮಹಿಳೆಯೊಬ್ಬಳ ಶಿಲ್ಪವಿದೆ. ನಗ್ನವಾಗಿದೆ. ತಲೆಯ ಮೇಲೆ ಕೂದಲುಗಳಿಲ್ಲದಂತೆ ತೋರಿಸಿದೆ. ಕಾಲು ಅತಿ ಚಿಕ್ಕವಾಗಿ ಕೆತ್ತಲ್ಪಟ್ಟಿವೆ. ಕೈ ಮುಗಿದು ನಿಂತಿದೆ. ಇದು ವೀರಸತಿಯಂತೆ ತೋರುತ್ತದೆ?

ಊರು: ಎತ್ಬಾಪುರ | ಸ್ಥಳ: ಹನುಮಾನ ಮಂದಿರ

ಕಾಲ: ಸು.೯ನೇ ಶತಮಾನ | ರಾಜವಂಶ: ರಾಷ್ಟ್ರಕೂಟರು

ವಸ್ತು: ಕೆಂಪು ಮಿಶ್ರಿತ ಕಲ್ಲು | ಉಲ್ಲೇಖ: ಅಪ್ರಕಟಿತ

ಜೈನ ಧರ್ಮದ ವ್ಯಕ್ತಿಯೊಬ್ಬ ಸಲ್ಲೇಖ ವ್ರತ ಮಾಡಿ ನಿಷಿಧಿ ಹೋಗಿರುವ ಬಗ್ಗೆ ಈ ಶಿಲ್ಪದಿಂದ ತಿಳಿದುಬರುತ್ತದೆ. ಅದಕ್ಕೆ ಕುರುಹಾಗಿ ಜೋಡಿ ಪಾದಗಳುಳ್ಳ ಸ್ಮಾರಕವಿದೆ.

ಊರು: ಸೋಮನಿಂಗದ ಹಳ್ಳಿ | ಸ್ಥಳ: ಮಂದಗಡ್ಡಿ

ಕಾಲ: ಸು.೧೧ನೇ ಶತಮಾನ | ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ | ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ ಶೇರಿಕಾರ್ ಡಿ. (೨೪.೧೦.೨೦೧೦)

ಸೋಮನಿಂಗದಳ್ಳಿಯ ಮೂರು ಸ್ತರದ ಒಂದು ವೀರಗಲ್ಲಿನಲ್ಲಿ ವೀರನು ತಲೆಯ ಹಿಂಭಾಗದಲ್ಲಿ ಮುಡಿ ಕಟ್ಟಿರುವಂತೆ, ಸೊಂಟದಿಂದ ತೊಡೆಯವರೆಗೂ ಅರ್ಧೋರು ಉಡುಪು ಧರಿಸಿರುವ ಶಿಲ್ಪವಿದೆ. ಯುದ್ಧದಲ್ಲಿ ವೀರ ಬಿಲ್ಲು ಬಾಣ ಹಿಡಿದು ನಿಂತು ಹಲವು ಶತ್ರುಗಳೊಂದಿಗೆ ಹೋರಾಡುವ ದೃಶ್ಯಾವಳಿ ಶಿಲ್ಪದಲ್ಲಿ ಕೆತ್ತಿದ್ದಾರೆ. ಕುದುರೆಯ ಮೆಲೆ ಕುಳಿತು ಹೋರಾಡುವ ಶತ್ರುಗಳನ್ನು ಬಿಂಬಿಸಲಾಗಿದೆ. ವೀರನು ಹಾರ, ತೋಳ್ಬಂದಿ ಹಾಕಿರುವಂತೆ ದೃಶ್ಯಾವಳಿಯಲ್ಲಿದೆ. ಕುದುರೆ ಮೇಲಿರುವ ಶತ್ರುಗಳು ಭರ್ಚಿ ಎಸೆಯುತ್ತಿರುವ ದೃಶ್ಯ ಶಿಲ್ಪಾವಳಿಯಲ್ಲಿದೆ.

ಎರಡನೆಯ ಸ್ತರದಲ್ಲಿ ಸುರಾಂಗನೆಯರು ವೀರನಿಗೆ ಚಾಮರ ಬೀಸುತ್ತಾ ದೇವಲೋಕಕ್ಕೆ ವಿಮಾನದಲ್ಲಿ ಒಯ್ಯುತ್ತಿರುವ ಕೆತ್ತನೆಯನ್ನೊಳಗೊಂಡಿದೆ. ಮೂರನೆಯ ಸ್ತರದಲ್ಲಿ ಐಕ್ಯವಾದ ವೀರ ಅಂಜಲಿ ಹಸ್ತದಲ್ಲಿ ಲಿಂಗದ ಮುಂದೆ ಕುಳಿತಿದೆ. ವೀರಗಲ್ಲು ಉತ್ತಮ ಸ್ಥಿತಿಯಲ್ಲಿದೆ.

ಊರು: ಸೋಮನಿಂಗದ ಹಳ್ಳಿ — ಸ್ಥಳ: ಮಂದಗಡ್ಡಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಮೂರು ಸ್ತರದ ವೀರಗಲ್ಲಿನಲ್ಲಿ ಶತ್ರುಗಳು ಕುದುರೆ ಮೇಲೆ ಕುಳಿತು ಭರ್ಚಿ ಎಸೆಯುವ ದೃಶ್ಯಾವಳಿಯನ್ನು ಬಿಂಬಿಸಲಾಗಿದೆ. ವೀರನು ಅವರ ವಿರುದ್ಧ ಹೋರಾಡುತ್ತಿರುವ ದೃಶ್ಯ ಶಿಲ್ಪದಲ್ಲಿದೆ. ವೀರನು ವೀರ ಮುಡಿ ಧರಿಸಿರುವನು. ಎರಡನೆಯ ಸ್ತರದಲ್ಲಿ ಸುರಾಂಗನೆಯರು ದೇವಲೋಕಕ್ಕೆ ವೀರನನ್ನು ವಿಮಾನದಲ್ಲಿ ಒಯ್ಯುವ ದೃಶ್ಯವಿದೆ. ಮೂರನೆಯ ಸ್ತರದಲ್ಲಿ ಲಿಂಗೈಕ್ಯವಾದ ವೀರ ಲಿಂಗದ ಮುಂದೆ ಅಂಜಲಿ ಹಸ್ತದಲ್ಲಿ ಕುಳಿತಿರುವಂತೆ ಬಿಂಬಿಸಲಾಗಿದೆ.

ಊರು: ಸೋಮನಿಂಗದ ಹಳ್ಳಿ — ಸ್ಥಳ: ಮಂದಗಡ್ಡಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಎರಡು ಸ್ತರದ ಈ ವೀರಗಲ್ಲು ಗುರಾಣಿ ಮತ್ತು ಭರ್ಚಿ ಹಿಡಿದ ವೀರನ ಶಿಲ್ಪವಿದೆ. ಸೊಂಟದಲ್ಲೊಂದು ಖಡ್ಗವಿಟ್ಟಿರುವುದು. ವೀರನು ಮುಡಿ, ಹಾರ, ಕರ್ಣಕುಂಡಲ ಮತ್ತು ಸ್ಕರ್ಟ್‌ನಂತಹ ಕೆಳ ಉಡುಪು ಧರಿಸಿರುವುದು ಈ ಶಿಲ್ಪದಲ್ಲಿದೆ. ನಿಂತ ಭಂಗಿಯಲ್ಲಿ ವೀರ ಹೋರಾಡುತ್ತಿರುವಂತೆ ಕೆಳಸ್ತರದ ಶಿಲ್ಪದಲ್ಲಿದೆ. ಮೇಲ್‌ಸ್ತರದಲ್ಲಿ ಲಿಂಗೈಕ್ಯವಾದ ದೃಶ್ಯವಿದೆ.

ಊರು: ಸೋಮನಿಂಗದ ಹಳ್ಳಿ — ಸ್ಥಳ: ಮಂದಗಡ್ಡಿ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಬಿಳಿ ಶಿಲೆ — ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ವೀರಗಲ್ಲು ತ್ರುಟಿತವಾಗಿದೆ. ಮೂರು ಸ್ತರದ ಈ ವೀರಗಲ್ಲಿನ ಕೆಳಸ್ತರದಲ್ಲಿ ವೀರ ಹೋರಾಡುತ್ತಿರುವ ಶಿಲ್ಪ ದೊರೆತಿಲ್ಲ. ಸುರಾಂಗನೆಯರು ವೀರನಿಗೆ ಒಯ್ಯುವ ಮತ್ತು

ಲಿಂಗೈಕ್ಯವಾದ ವೀರನು ಅಂಜಲಿ ಹಸ್ತದಲ್ಲಿ ಲಿಂಗದ ಮುಂದೆ ಕುಳಿತಿರುವ ದೃಶ್ಯಾವಳಿಯ ನ್ನೊಳಗೊಂಡಿದೆ.

ಊರು: ಸೋಮನಿಂಗದ ಹಳ್ಳಿ	ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಮೂರು ಸ್ತರದ ವೀರಗಲ್ಲಿನಲ್ಲಿ ವೀರ ಮುಡಿ ಕಟ್ಟಿಕೊಂಡಿದ್ದಾನೆ. ಕರ್ಣಕುಂಡಲ, ಅರ್ಧೋರುಕ ರೂಪದ ಉಡುಪು ಧರಿಸಿದ್ದಾನೆ. ಸೊಂಟದಲ್ಲಿ ಆಯುಧವಿಟ್ಟು ಕೊಂಡಿರುವನು. ಬಲಗೈಯಲ್ಲಿ ಭರ್ಚಿ, ಎಡಗೈಯಲ್ಲಿ ಗುರಾಣಿ ಹಿಡಿದು ಹೋರಾಡುತ್ತಿರುವಂತಿದೆ. ಎರಡನೆಯ ಸ್ತರದಲ್ಲಿ ಸುರಾಂಗನೆಯರು ವೀರನಿಗೆ ದೇವಲೋಕಕ್ಕೆ ಒಯ್ಯುತ್ತಿರುವಂತೆ ಬಿಂಬಿಸಲಾಗಿದೆ. ತ್ರುಟಿತವಾಗಿರುವ ಶಿಲ್ಪದ ಮೇಲ್ಭಾಗ ಎಡಕ್ಕೆ ಮುರಿದು ಬಿದ್ದಿದೆ. ಅದರಲ್ಲಿ ಲಿಂಗದ ಮುಂದೆ ಅಂಜಲಿ ಹಸ್ತದ ಪದ್ಮಾಸನ ಭಂಗಿಯಲ್ಲಿ ಕುಳಿತ ವೀರನನ್ನು ಚಿತ್ರಿಸಲಾಗಿದೆ. ಇದು ಲಿಂಗೈಕ್ಯವನ್ನು ಸೂಚಿಸುತ್ತದೆ.

ಊರು: ಸೋಮನಿಂಗದ ಹಳ್ಳಿ	ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ (ಬಿಳಿ ಮಿಶ್ರಿತ)	ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಒಂದು ಸ್ತರದ ವೀರಗಲ್ಲಿನಲ್ಲಿ ಹೋರಾಡುತ್ತಿರುವ ವೀರ ಭರ್ಚಿಯಿಂದ ಶತ್ರುವಿಗೆ ಇರಿಯಲು ಮುಂದಾದಂತೆ ಕೆತ್ತಲ್ಪಟ್ಟಿದೆ. ಅದರ ಮೇಲೆ ಲಿಂಗೈಕ್ಯವನ್ನು ಸೂಚಿಸುವ ಅಂಜಲಿ ಹಸ್ತದ ವೀರ ಮತ್ತು ಲಿಂಗದ ಶಿಲ್ಪವಿದೆ.

ಊರು: ಸೋಮನಿಂಗದ ಹಳ್ಳಿ	ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ	ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ	ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಎರಡು ಸ್ತರಗಳನ್ನು ಹೊಂದಿದ ಈ ವೀರಗಲ್ಲು ಎಡಗೈಯಲ್ಲಿ ವೀರ ಗುರಾಣಿ ಹಿಡಿದಿದೆ. ಬಲಗೈಯಲ್ಲಿ ಖಡ್ಗ ಹಿಡಿದು ಕುದುರೆ ಮೇಲೆ ಕುಳಿತ ಶತ್ರುವಿಗೆ ಇರಿಯುತ್ತಿರುವ ದೃಶ್ಯವಿದೆ.

ಕಂಠ ಮಾಲೆ, ವಕ್ಷ ಕವಚ, ಕೊರಳ ಹಾರ, ವೀರ ಮುಡಿ ಹಾಕಿಕೊಂಡಂತಿದೆ. ಅಲ್ಲದೆ ಕರ್ಣಕುಂಡಲ, ಸೊಂಟಪಟ್ಟಿ, ಅರ್ಧೋರುಕ ಉಡುಪು ಧರಿಸಿರುವ ಕೆತ್ತನೆ ಶಿಲ್ಪಾವಳಿಯಲ್ಲಿದೆ. ಮೇಲ್ ಸ್ತರದಲ್ಲಿ ಲಿಂಗೈಕ್ಯವನ್ನು ತಿಳಿಸುವ ಅಂಜಲಿ ಹಸ್ತದ ವೀರ ಲಿಂಗದ ಮುಂದೆ ಕುಳಿತಿರುವಂತೆ ಬಿಂಬಿಸಲಾಗಿದೆ.

ಊರು: ಸೋಮನಿಂಗದ ಹಳ್ಳಿ
ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ
ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ
ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಒಂದು ಸ್ತರದ ವೀರಗಲ್ಲಿನಲ್ಲಿ ವೀರನು ಭರ್ಚಿಯನ್ನು ಹಿಡಿದು ಹೋರಾಡುತ್ತಿರುವನು. ವೀರನ ತಲೆ ಭಾಗದ ಶಿಲ್ಪ ತ್ರುಟಿತವಾಗಿದೆ.

ಊರು: ಸೋಮನಿಂಗದ ಹಳ್ಳಿ
ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ
ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ
ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಯುದ್ಧದಲ್ಲಿ ಹೋರಾಡುತ್ತಿರುವ ವೀರನ ಶಿಲ್ಪವಿದೆ. ಇದರಲ್ಲಿ ಶತ್ರು ಕುದುರೆಯ ಮೇಲೆ ಕುಳಿತು ಹೋರಾಡುತ್ತಿರುವ ಮತ್ತು ವೀರ ನಿಂತು ಹೋರಾಡುವ ದೃಶ್ಯವಿದೆ. ಎರಡನೆ ಸ್ತರದಲ್ಲಿ ಸುರಾಂಗನೆಯರು ವೀರನನ್ನು ವಿಮಾನದಲ್ಲಿ ದೇವಲೋಕಕ್ಕೆ ಒಯ್ಯುತ್ತಿರುವಂತೆ ಶಿಲ್ಪದಲ್ಲಿ ಬಿಂಬಿಸಲಾಗಿದೆ. ಮೂರನೆ ಸ್ತರದಲ್ಲಿ ಲಿಂಗೈಕ್ಯ ಹೊಂದಿದ ವೀರ ಅಂಜಲಿ ಹಸ್ತದಲ್ಲಿ ಲಿಂಗದ ಮುಂದೆ ಕುಳಿತ ಭಂಗಿಯಲ್ಲಿರುವ ಶಿಲ್ಪವಿದೆ.

ಊರು: ಸೋಮನಿಂಗದ ಹಳ್ಳಿ
ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ
ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ
ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ: ಶೇರಿಕಾರ್ ಡಿ.(೨೪.೧೦.೨೦೧೦)

ಈ ಶಿಲ್ಪದಲ್ಲಿ ವೀರನು ಹೋರಾಡುತ್ತಿರುವ ದೃಶ್ಯಾವಳಿಯಿದೆ. ಸುರಾಂಗನೆಯರು ವೀರನಿಗೆ ವಿಮಾನದಲ್ಲಿ ಒಯ್ಯುತ್ತಿರುವ ದೃಶ್ಯಾವಳಿ ಮತ್ತು ಮೂರನೆ ಸ್ತರದಲ್ಲಿ ಲಿಂಗೈಕ್ಯದ ದೃಶ್ಯಾವಳಿಯನ್ನು ಬಿಂಬಿಸಲಾಗಿದೆ.

ಊರು: ಸೋಮನಿಂಗದ ಹಳ್ಳಿ
ಸ್ಥಳ: ಮಂದಗಡ್ಡಿ
ಕಾಲ: ಸು.೧೧ನೇ ಶತಮಾನ
ರಾಜವಂಶ: ಕಲ್ಯಾಣ ಚಾಲುಕ್ಯರು
ವಸ್ತು: ಕಪ್ಪುಶಿಲೆ
ಉಲ್ಲೇಖ: ಪ್ರಜಾವಾಣಿ ಪತ್ರಿಕೆಯ ಲೇಖನ ಶೇರಿಕಾರ್ ಡಿ.(೨೪.೧೦.೨೦೧೦)

ಮೂರು ಸ್ತರದ ಈ ಶಿಲ್ಪದಲ್ಲಿ ನಿಂತ ಭಂಗಿಯಲ್ಲಿ ವೀರ ಹೋರಾಡುತ್ತಿರುವ ದೃಶ್ಯಾವಳಿ ಮೊದಲ ಸ್ತರದಲ್ಲಿ ಬಿಂಬಿಸಲಾಗಿದೆ. ಎರಡನೆ ಸ್ತರವು ಸುರಾಂಗನೆಯರು ವಿಮಾನದಲ್ಲಿ ವೀರನನ್ನು ಒಯ್ಯುತ್ತಿರುವ ದೃಶ್ಯಾವಳಿಯನ್ನೊಳಗೊಂಡಿದೆ. ಮೂರನೆ ಸ್ತರದಲ್ಲಿ ನಮಸ್ಕರಿಸುತ್ತ ಲಿಂಗದ ಮುಂದೆ ಕುಳಿತ ವೀರನ ಶಿಲ್ಪವಿದೆ. ಇದು ಲಿಂಗೈಕ್ಯವನ್ನು ಸೂಚಿಸುತ್ತದೆ. ಈ ಊರಿನ ವೀರಗಲ್ಲು ಸ್ಮಾರಕಗಳಲ್ಲಿ ಹೆಚ್ಚಾಗಿ ಯುದ್ಧದಲ್ಲಿ ವೀರ ಕೆಳಗೆ ನಿಂತು ಖಡ್ಗ ಗುರಾಣಿ ಮತ್ತು ಭರ್ಚಿಗಳಿಂದ ಹೋರಾಡುತ್ತಿರುವ ಶಿಲ್ಪ ಕೆತ್ತಲ್ಪಟ್ಟಿವೆ.

ಊರು: ಬೇಡಕಪಳ್ಳಿ
ಸ್ಥಳ: ಅಗಸಿಯ ಬಳಿ
ಕಾಲ: ಸು.೯ನೇ ಶತಮಾನ
ರಾಜವಂಶ: ರಾಷ್ಟ್ರಕೂಟರು
ವಸ್ತು: ಬಿಳಿ ಶಿಲೆ
ಉಲ್ಲೇಖ: ಅಪ್ರಕಟಿತ

ಗಡಿಕಲ್ಲು ಸೂಚಿಸುವ ಶಿಲ್ಪವಾಗಿದೆ. ಗಡಿ ಕಾಯುವ ವೀರ ಉದ್ದನೆಯ ಭರ್ಚಿ ಹಿಡಿದು ತಲೆಯ ಮೆಲೆ ಶಂಖಾಕೃತಿಯ ವೀರ ಮುಡಿ ಕಟ್ಟಿದಂತೆ ಕೊರೆಯಲ್ಪಟ್ಟಿದೆ. ನಗುಮುಖದಲ್ಲಿ ಉದ್ದನೆಯ ಮೀಸೆ ಕೊರೆದಿದೆ. ದೊಡ್ಡದಾದ ಕಣ್ಣು ಮತ್ತು ಕಿವಿಯನ್ನೊಳಗೊಂಡಿದೆ. ಸೊಂಟದಿಂದ ಹಿಂದೆ ಉದ್ದವಾದ ತುಂಡುಬಟ್ಟೆ ಜೋತು ಹಾಕಿದೆ. ಮುಂದಿನ ಭಾಗ ಮಿನಿ ಪ್ಯಾಂಟ್‌ನಂತಹ ಉಡುಪು ಧರಿಸಿದೆ. ಕಂಠಕ್ಕೆ ಪಟ್ಟಿ ಆಕಾರದ ಹಾರ ಹಾಕಿದೆ. ಕಾಳಾಮುಖ ಶೈವರ ಗಡಿಗಲ್ಲಿನಂತೆ ತೋರುತ್ತದೆ.

ಊರು: ಬೇಡಕಪಳ್ಳಿ
ಸ್ಥಳ: ಅಗಸಿ ಬಳಿ
ಕಾಲ: ಸು.೭ನೇ ಶತಮಾನ
ರಾಜವಂಶ: ಬಾದಾಮಿ ಚಾಲುಕ್ಯರು
ವಸ್ತು: ಕಪ್ಪುಶಿಲೆ
ಉಲ್ಲೇಖ: ಅಪ್ರಕಟಿತ

ಇದೊಂದು ವಿಶಿಷ್ಟವಾದ ವೀರಗಲ್ಲು ಶಿಲ್ಪವಾಗಿದೆ. ಇದರ ಕಾಲ ಸು. ಕ್ರಿ.ಶ.೬-೭ನೇ ಶತಮಾನವಾಗಿದೆ. ಇದು ಎರಡು ಸ್ತರದಲ್ಲಿದೆ. ಸುಮಾರು ಐದು ಅಡಿ ಎತ್ತರದ ಈ ಶಿಲ್ಪದಲ್ಲಿ ಕುಬ್ಜ ವ್ಯಕ್ತಿಯನ್ನು ಎಡಕ್ಕೆ ಮತ್ತು ಎತ್ತರದ ವ್ಯಕ್ತಿಯನ್ನು ಬಲಕ್ಕೆ ಕೆತ್ತಲ್ಪಟ್ಟಿದೆ. ವೀರನ ಸೊಂಟದಲ್ಲಿ ಖಡ್ಗವಿದ್ದು ಕುಬ್ಜ ವ್ಯಕ್ತಿಯೊಂದಿಗೆ ಮಲ್ಲಯುದ್ಧ ಮಾಡುತ್ತಿರುವ ಶಿಲ್ಪ ಕೆತ್ತಲ್ಪಟ್ಟಿದೆ.

ವೀರನ ಎಡಕ್ಕೆ ಅರ್ಧಚಂದ್ರನನ್ನು ಕೆತ್ತಿದ್ದಾರೆ. ಎರಡನೆಯ ಸ್ತರದಲ್ಲಿ ಚಾಮರಧಾರಿಗಳು ಎಡಕ್ಕೆ ಕುಳಿತು ಮತ್ತು ಬಲಕ್ಕಿರುವ ಚಾಮರಧಾರಿ ನಿಂತು ಲಿಂಗಕ್ಕೆ ಚಾಮರ ಬೀಸುವ ದೃಶ್ಯಾವಳಿಯನ್ನೊಳಗೊಂಡಿದೆ.

ಊರು: ಹಲ್‌ಚೇರಾ — ಸ್ಥಳ: ಅಂಬಿಗರ ಚೌಡಯ್ಯ

ಕಾಲ: ಸು.೧೧ನೇ ಶತಮಾನ — ರಾಜವಂಶ: ಕಲ್ಯಾಣ ಚಾಲುಕ್ಯರು

ವಸ್ತು: ಕಪ್ಪುಶಿಲೆ — ಉಲ್ಲೇಖ: ಅಪ್ರಕಟಿತ

ಒಕ್ಕೈ ಮಾಸ್ತಿಗಲ್ಲಾಗಿದೆ. ಇದರ ಮೇಲ್ಭಾಗದಲ್ಲಿ ಲಿಂಗೈಕ್ಯದ ದೃಶ್ಯಾವಳಿ ಬಿಂಬಿಸಲಾಗಿದೆ.

♦ ♦ ♦

ಅಧ್ಯಾಯ ೪

ದೇವಾಲಯಗಳ ಅಧ್ಯಯನ

ಅಧ್ಯಾಯ ೪

ದೇವಾಲಯಗಳ ಅಧ್ಯಯನ

೪.೧. ಪೀಠಿಕೆ, ಅರ್ಥ, ಮಹತ್ವ

ದೇವರ ಆಲಯ ದೇವಾಲಯ ಎಂದರ್ಥ. ಆಲಯ ಎಂಬುದು ಕಟ್ಟಡ ಎಂದಾಗುತ್ತಿದೆ. ಮನುಷ್ಯನ ಇರುವಿಕೆಗೆ ಇರುವ ಕಟ್ಟಡ ಹೇಗೋ ಹಾಗೆ ದೇವರ ಇರುವಿಕೆಗೆ ಕಟ್ಟಡವೇ ಮಂದಿರ, ದೇವಾಲಯ. ದೇವಾಲಯಗಳು ಜನರಲ್ಲಿ ಸಾಮಾಜಿಕ, ನೈತಿಕ, ಧಾರ್ಮಿಕ ಮೌಲ್ಯಗಳನ್ನು ಬೆಳೆಸುವುದಲ್ಲದೆ ಅವರನ್ನು ಕರ್ತವ್ಯ ಬದ್ಧರಾಗಿ ಪಾಪ ಎನ್ನುವ ಭಾವದಿಂದ ಕೆಟ್ಟ ಕರ್ಮಗಳು ಮಾಡದಂತೆ ನಿರ್ಬಂಧ ಹೇರುತ್ತದೆ. ಪುಣ್ಯ ಎನ್ನುವ ಭಾವ ಸತ್ಕರ್ಮ ಮಾಡಲು ಉತ್ತೇಜಿಸುತ್ತದೆ. ಆದ್ದರಿಂದ ದೇವಾಲಯಗಳು ಧಾರ್ಮಿಕ ಮೌಲ್ಯಗಳೊಂದಿಗೆ, ಸಂಸ್ಕೃತಿ ಬೆಳೆಸುತ್ತದೆ. ದೇವಾಲಯ ಮತ್ತು ಧಾರ್ಮಿಕತೆ, ದೇವರ ಹಿನ್ನಲೆಯಲ್ಲಿ ಕಲೆ, ವಾಸ್ತುಶಿಲ್ಪಗಳು ಹುಟ್ಟಿ ಭವ್ಯ ಮತ್ತು ಅಲಂಕೃತ ಕಟ್ಟಡ ನಿರ್ಮಾಣವಾದವು. ದೇವಾಲಯಗಳು ಶೈಕ್ಷಣಿಕ ಕೇಂದ್ರಗಳಾದವು. ದಾನ ದತ್ತಿ ಪಡೆದು ಸಮೃದ್ಧವಾಗಿ ಅನೇಕ ಜನರಿಗೆ ಅನ್ನ, ವಸತಿ ನೀಡುವ ಅನಾಥ ರಕ್ಷಕಗಳಾದವು ಎನ್ನಬಹುದು. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕಗಳಾಗಿವೆ (ಕ.ಶಾ.ಸಾಂ.ಅ, ಚಿದಾನಂದಮೂರ್ತಿ ಎಂ.೧೯೬೬,ಪು.೧೭೫).

ಪ್ರಸ್ತುತ ಚಿಂಚೋಳಿ ತಾಲೂಕು ಐತಿಹಾಸಿಕ ಮಹತ್ವ ಹೊಂದಿದ ತಾಣವಾಗಿದೆ. ಈ ತಾಲೂಕಿನ ದೇವಾಲಯಗಳು ಕಲ್ಲು, ಗಾರೆ, ಗಚ್ಚು ಮತ್ತು ಬಿಸ್ಪಲ್ ಶಿಲೆಗಳಿಂದ ನಿರ್ಮಿತವಾಗಿವೆ. ಪ್ರಾಚೀನ ದೇವಾಲಯಗಳಲ್ಲಿ ಕೆಲವು ಜೈನ ಬಸದಿಗಳು ಶೈವ ದೇವಾಲಯಗಳಾದ ಉದಾಹರಣೆಗಳಿವೆ. ಸುಲೇಪೇಟೆಯ ಶಂಭುಲಿಂಗ ಗುಡಿ ಮೊದಲಿಗೆ ಜೈನ ದೇವಾಲಯವಾಗಿತ್ತು. ಅಲ್ಲಿ ದೊರೆತ ಲಲಾಟದ ಜಿನಬಿಂಬ, ದೇವಕೋಷ್ಠದಲ್ಲಿನ ಜೈನ ಮೂರ್ತಿಗಳ ಶಿಲ್ಪ ಈ ದೇವಾಲಯ ಜೈನ ದೇವಾಲಯವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ.

ದೇವಾಲಯಗಳಲ್ಲಿ ಆ"ಸ್ಥಾನ"ದ ಒಡೆಯರನ್ನು ಸ್ಥಾನಿಕರು ಎನ್ನುತ್ತಿದ್ದರು. ಇವರು ದೇವಾಲಯದ ಸಮಸ್ತ ಜವಾಬ್ದಾರಿಯನ್ನು ಹೋರುತ್ತಿದ್ದರು. ಬಹುಪಾಲು ದೇವಾಲಯಗಳು "ನೈಷ್ಠಿಕ ಸ್ಥಾನಗಳೇ" ಆಗಿದ್ದವು. ಅಲ್ಲಿದ್ದ ಸ್ಥಾನಿಕರು ನೈಷ್ಠಿಕರೇ ಆಗಿದ್ದರು. ನೈಷ್ಠಿಕ ತಪೋಧನರು ಎಂದು ಶಾಸನಗಳು ಗುರುತಿಸುತ್ತವೆ. ಕಾಳಾಮುಖ ಯತಿಗಳು, ಶೈವ ದೇವಾಲಯ ಸ್ಥಾನಿಕರಾಗಿದ್ದರು

(ಗು.ಜಿ.ಇ ಮತ್ತು ಪು.೨೦೦೭,ಪು-೩೩೦). ಮೈಗೆಹದ ಶಾಸನ ಸ್ಥಾನಪತಿ "ಪಾಲ ಪಂಡಿತ" ಎಂದು ಉಲ್ಲೇಖಿಸಿದೆ(ನಾಗಲಿಂಗೇಶ್ವರ ಗುಡಿ ಶಾಸನ).

ಸತ್ರಗಳು ದೇವಾಲಯಕ್ಕೆ ಸೇರಿದ ಮತ್ತೊಂದು ಅಂಗ. ಇವುಗಳ ಉಲ್ಲೇಖ ಸು.೧೧ನೇ ಶತಮಾನದ ಶಾಸನಗಳಲ್ಲಿ ದೊರೆಯುತ್ತವೆ. ಮೋಘಾದ ನಾಗಲಿಂಗೇಶ್ವರ ಗುಡಿಯ ಶಾಸನದಲ್ಲಿ ರಾಮತೀರ್ಥ ಪರಿಸತ್ರ ಎಂಬ ಉಲ್ಲೇಖವಿದೆ. ಮತ್ತು ಶಿರೋಳ್ಳಿಯ ಹೂಡ್ಯಾ ಶಾಸನದಲ್ಲಿ ಸತ್ರ ಕಟ್ಟಿಸಿದ ಮಾಹಿತಿ ಇದೆ (ಕ.ಜಿ.ಶಾ.೧೯೯೬, ಪು-೨೬೪).

ಶಾತವಾಹನರ ಕಾಲದಿಂದ ನಿಜಾಮರವರೆಗಿನ ಆಳ್ವಿಕೆ ಈ ತಾಲೂಕಿನ ಚಾರಿತ್ರಿಕ ವಿವರ ಒಳಗೊಂಡಿದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅನೇಕ ಕುರುಹುಗಳು ದೊರೆತಿವೆ. ನಂತರ ಬಂದ ರಾಷ್ಟ್ರಕೂಟರ ಕಾಲದಿಂದ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯ ಮತ್ತು ವಾಸ್ತುಶಿಲ್ಪ ಪರಾಕಾಷ್ಠತೆ ತಲುಪಿತು. ಕಲ್ಯಾಣ ಚಾಲುಕ್ಯರ ನಂತರ ಈ ಪ್ರದೇಶದಲ್ಲಿ ವಾಸ್ತುಶಿಲ್ಪದ ಅವನತಿ ಕಾಲವಾಗಿ ಪರಿಣಮಿಸಿತು ಎಂದು ಹೇಳಬಹುದು. ಕಲಚೂರಿಗಳು ನಂತರ ಬಹುಮನಿ ಮತ್ತು ನಿಜಾಮರ ಕಾಲದಲ್ಲಿ ದೇವಾಲಯಗಳ ಕಟ್ಟುವಿಕೆ ಕಡಿಮೆಯಾಯಿತು.

ಇಲ್ಲಿ ಅನೇಕ ದೇವಾಲಯಗಳು, ಬಾವಿಗಳು, ಕೆರೆ, ಮಠಗಳು, ಬಸದಿಗಳು ಅಗ್ರಹಾರಗಳು ರಾಜರ ಆಳ್ವಿಕೆ ಕಾಲದಲ್ಲಿ ಕಟ್ಟಲ್ಪಟ್ಟಿವೆ. ಗುಡಿಗಳು ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಾಗಿ ಬೆಳೆದವು. ಜನರಲ್ಲಿ ಧಾರ್ಮಿಕ ಭಾವನೆ ಅಡಿಪಾಯ ಹಾಕಿದವಲ್ಲದೆ ಅವು ಅದರ ಬೆಳವಣಿಗೆಗೆ ಕಾರಣವಾದವು.

೪.೨. ದೇವಾಲಯಗಳ ವೈವಿಧ್ಯತೆ :

ವಿವಿಧ ರಾಜ ಮನೆತನದ ಕಾಲದಲ್ಲಿ ವಿಭಿನ್ನ ರೀತಿಯ ಕಲೆ ಮತ್ತು ವಾಸ್ತುಶಿಲ್ಪದ ಶೈಲಿ ಬೆಳೆದು ಬಂದಿದೆ. ಇದರಿಂದ ಆಯಾ ಕಾಲಘಟ್ಟದ ಕಲೆಯೆಂದು ಗುರ್ತಿಸಲು ಸುಲಭವಾಗಿದೆ. ಇಲ್ಲಿನ ದೇವಾಲಯಗಳನ್ನು ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳೆಂದು ವಿಂಗಡಿಸಬಹುದು.

ಗುಲ್ಬರ್ಗ ಜಿಲ್ಲೆಯಲ್ಲಿ ಈ ತಾಲೂಕು ಕಾಳಾಮುಖ ಶೈವರ ಕೇಂದ್ರವಾಗಿದ್ದಕ್ಕೆ ಇಲ್ಲಿನ ಮೋಘಾ ರಾಮಲಿಂಗೇಶ್ವರ, ಪಸ್ತಾಪುರ ಮತ್ತು ರುಮ್ಮನಗೂಡಿನ ರಾಮಲಿಂಗೇಶ್ವರ ಗುಡಿಗಳು, ರಟ್ಕಲ್ ಬಂಕನಾಥಗುಡಿ ಇತ್ಯಾದಿ ಶೈವ ಧರ್ಮ ಪ್ರಚಾರದ ಮತ್ತು ಬೆಳವಣಿಗೆಯ ಕುರುಹುಗಳಾಗಿವೆ. ಈ ತಾಲೂಕಿನಲ್ಲಿ ಅತ್ಯಧಿಕ ಶೈವ ದೇವಾಲಯಗಳಿರುವುದು ಇದು ಶೈವ ಧರ್ಮದ ಕೇಂದ್ರವಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಶೈವರ ಪ್ರಭಾವದಿಂದ ಅನೇಕ ಬಸದಿಗಳು ಮತ್ತು ಶಂಕರನಾರಾಯಣ ಗುಡಿ ಶೈವ ದೇವಾಲಯಗಳಾದವು. ವೈಷ್ಣವರು

ಇವರೊಂದಿಗೆ ಸೇರಿ, 'ಹರಿಹರ', ಎಂಬ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯಗಳಿಂದ ಅಲ್ಲಿನ ಧಾರ್ಮಿಕ, ಜನ ಜೀವನ ಶೈಲಿ, ವೇಷಭೂಷಣ, ಆಚರಣೆ, ಪದ್ದತಿಗಳನ್ನು ತಿಳಿಯಲು ಸಹಾಯಕವಾಗಿದೆ.

ವೈಷ್ಣವ ಧರ್ಮದ ಪ್ರಭಾವ ಕಡಿಮೆಯಾಗಿದ್ದು, ಇಲ್ಲಿ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ಶೈವರೊಂದಿಗೆ ಸಹಿಷ್ಣುತೆಯಿಂದ ಸಮ್ಮಿಳಿತಗೊಳ್ಳಬೇಕಾಯಿತು. ಇದರಿಂದ ಶೈವ ಮತ್ತು ವೈಷ್ಣವರಲ್ಲಿ ಐಕ್ಯತೆ ಉಂಟಾಗಿ ಧಾರ್ಮಿಕ ಸಹಿಷ್ಣುತೆ ಮತ್ತು ವಿಶಾಲ ಮನೋಭಾವದಿಂದ ಇದ್ದರು ಎನ್ನುವುದಕ್ಕೆ ಶಿರೋಳ್ಳಿ ಮತ್ತು ರುಮ್ಮನ್‌ಗೂಡದ ಹರಿಹರ ಮತ್ತು ಶಂಕರನಾರಾಯಣ ದೇವಾಲಯಗಳು ಸಾಕ್ಷಿಯಾಗಿವೆ.

ಚಿಂಚೋಳಿ, ತಿರುಮಲಾಪುರ, ಕೇಶವಾರ್(ಗಡಿ) ಮತ್ತು ರಾಮತೀರ್ಥದ ವೆಂಕಟೇಶ್ವರ ಮಂದಿರಗಳು ಇಲ್ಲಿನ ವೈಷ್ಣವ ಧರ್ಮದ ಇರುವಿಕೆಗೆ ಕುರುಹುಗಳಾಗಿವೆ. ಜೈನ ಬಸದಿಗಳು ಈ ಪ್ರದೇಶ ಜೈನರ ಪ್ರಮುಖ ನೆಲೆಯಾಗಿತ್ತು ಎನ್ನುವುದಕ್ಕೆ ಸಾಕ್ಷ್ಯಗಳಾಗಿವೆ. ಸುಲೇಪೇಟೆ, ಕೇಶಾವರ್(ಗಡಿ), ಮಿರ್ಯಾಣ ಪ್ರದೇಶಗಳು ಪ್ರಾಚೀನ ಜೈನ ಕೇಂದ್ರಗಳಾಗಿದ್ದವು. ಪ್ರತಿಯೊಂದು ಹಳ್ಳಿಗಳಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಕುರುಹುಗಳು ದೊರೆಯುವುದು ಜೈನಧರ್ಮದ ಪ್ರಾಮುಖ್ಯತೆಯನ್ನು ತೋರಿಸುತ್ತವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿನ ಅನೇಕ ವಾಸ್ತುಶಿಲ್ಪದ ಕುರುಹುಗಳನ್ನು ನಾವು ಗಡಿ ಕೇಶಾವರ್‌ನಲ್ಲಿ ನೋಡಬಹುದು. ನಂತರ ಬಂದ ರಾಷ್ಟ್ರಕೂಟರ ಕಾಲದಲ್ಲಿ ಅನೇಕ ಶೈವ ದೇವಾಲಯಗಳು ಕಟ್ಟಲ್ಪಟ್ಟವು. ಮಿರ್ಯಾಣದ ಈಶ್ವರ ದೇವಾಲಯಗಳು ರಾಷ್ಟ್ರಕೂಟರ ದೇವಾಲಯಗಳಿಗೆ ಮಾದರಿಯಾಗಿವೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವ, ವೈಷ್ಣವ, ಜೈನ ದೇವಾಲಯಗಳು ಕಟ್ಟಲ್ಪಟ್ಟಿದ್ದವು. ವಾಸ್ತುಶಿಲ್ಪ ಮತ್ತು ತೋರಣಗಳು ಭವ್ಯ ಅಲಂಕರಣೆ, ಸ್ತಂಭಗಳ ಅಲಂಕರಣೆ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪವು ಪರಾಕಾಷ್ಠತೆಗೆ ತಲುಪಿತ್ತು. ಒಟ್ಟಾರೆ ಚಿಂಚೊಳಿ ತಾಲೂಕಿನ ದೇವಾಲಯಗಳ ಪ್ರಸ್ತಾವನೆಯನ್ನು ಮಾಡಲಾಗಿದೆ.

ಅ. ಶೈವ ದೇವಾಲಯಗಳು:

ದೇವಾಲಯದ ಹೆಸರು: ಶಂಕರನಾರಾಯಣ ಗ್ರಾಮ: ರುಮ್ಮನಗೂಡು

ಸ್ಥಳ: ಊರ ಮಧ್ಯೆ ಕಾಲ: ಸು.೧೦-೧೧ನೇ ಶತಮಾನ

ಸ್ಥಿತಿ: ಅವಸಾನ

ಎತ್ತರದ ಜಗತಿಯ ಮೇಲೆ ನಿರ್ಮಿತ ದೇವಾಲಯ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟು ಕುಮುದ, ಶಿಲ್ಪಪಟ್ಟಿಕೆ ಮತ್ತು ಕಪೋತವನ್ನೊಳಗೊಂಡಿದೆ. ಭಿತ್ತಿಭಾಗದಲ್ಲಿ ಮದನಿಕೆಯರ

ಶಿಲ್ಪಗಳಿವೆ. ಪ್ರಸ್ತುತ ಶಿಖರ ಹಾಳಾಗಿದೆ. ಪ್ರವೇಶ ದ್ವಾರದ ಇಕ್ಕೆಲುಗಳಲ್ಲಿ ಸ್ತ್ರೀ ಶಿಲ್ಪಗಳಿವೆ. ಶೈವ, ವೈಷ್ಣವ ದ್ವಾರಪಾಲಕರಿದ್ದಾರೆ. ಹೊರಭಿತ್ತಿಯಲ್ಲಿ ಮೂರು ದೇವಕೋಷ್ಠಕದಲ್ಲಿ ವಾಮನ, ಉಗ್ರನರಸಿಂಹರ ಶಿಲ್ಪಗಳಿವೆ.

ಪೀಠ, ದಂಡ, ದಂಡಾಗ್ರ, ಗಳ, ಫಲಕ ಮತ್ತು ವೃತ್ತಾಕಾರ ಬೋದಿಗೆಯನ್ನೊಳಗೊಂಡ ಕಂಬಗಳಿವೆ. ಪೀಠದಲ್ಲಿ ಪ್ರಭಾವಳಿ ಹೊಂದಿರುವ ಶಿಲ್ಪ ಮತ್ತು ಫಲಕಗಳ ಮೇಲೆ ಶಿಲ್ಪ ಮುತ್ತಿನ ಮಾಲೆಗಳು, ಹೂಬಳ್ಳಿ ಕೆತ್ತನೆಯನ್ನೊಳಗೊಂಡ ವೇಸರ ಶೈಲಿ ಸ್ತಂಭಗಳಿವೆ. ಪ್ರವೇಶದ ಭಾಗದಲ್ಲಿ ಚಿಕ್ಕ ಕಂಬಗಳಿವೆ. ಸ್ತಂಭಗಳ ಕೆಳಭಾಗದ ದೇವಕೋಷ್ಠಕಗಳಲ್ಲಿ ದೇವಶಿಲ್ಪಗಳು ಕೆತ್ತಲ್ಪಟ್ಟಿವೆ. ಸ್ತಂಭದ ಬೋದಿಗೆಗಳ ಮೇಲೆ ಶಿಲಾಭಂಜಿಕೆಯರ ಶಿಲ್ಪಗಳಿವೆ.

ಮೇಲ್ಛಾವಣಿ ಅಲ್ಪಸ್ವಲ್ಪ ಮಾತ್ರ ಉಳಿದಿದೆ. ಅವುಗಳ ಮೇಲೆ ಅಷ್ಟದಿಕ್ಪಾಲಕರನ್ನು ಕೆತ್ತಲ್ಪಟ್ಟಂತೆ ತೋರುತ್ತದೆ. ಮೂರು ಕಡೆಯಿಂದಲೂ ಪ್ರವೇಶ ದ್ವಾರಗಳಿವೆ. ಮುಖಮಂಟಪವಿದೆ. ಗರ್ಭಗುಡಿಯ ಬಾಗಿಲವಾಡ ಪಂಚ ಶಾಖಾಲಂಕೃತವಾಗಿದೆ. ಹೊಸ್ತಿಲ ಬಳಿ ಚಂದ್ರಶಿಲೆ ಇದೆ. ಅಂತರಾಳದ ತೋರಣ ಆಕರ್ಷಕವಾಗಿದೆ. ಉತ್ತರದಲ್ಲಿ ಕಿರುಮಂಟಪಗಳಿವೆ. ನವರಂಗ ಕಂಬದ ಮೇಲೆ ಮಿಥುನ ಶಿಲ್ಪಗಳು, ಶಿಲಾಭಂಜಿಕೆಯರ ಶಿಲ್ಪಗಳಿವೆ. ಕಕ್ಷಾಸನ ಭಾಗಗಳಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ಉಗ್ರನರಸಿಂಹನ ಮತ್ತು ವಾಮನ ಶಿಲ್ಪಗಳಿವೆ. ಭುವನೇಶ್ವರಿ, ಐದಾರು ಮಾದರಿ ಸ್ತಂಭಗಳನ್ನೊಳಗೊಂಡಿದೆ. ನವರಂಗದ ಹೊರಗೆ ಅಧಿಷ್ಠಾನ ಭಾಗದಲ್ಲಿ ರಾಮಾಯಣದ ಕಥಾವಳಿ ಶಿಲ್ಪಗಳಿವೆ (ಕ.ಸ.ಗೆ.ಕ.ಜಿ.೧೯೭೭, ಪು.೭೭೧) ಎಂದು ನೀಡಿದೆ. ಆದರೆ ಇದು ಚತುರ್ವಿಂಶತಿ ಶಿಲ್ಪಗಳನ್ನೊಳಗೊಂಡಿದೆ.

ಗರ್ಭಗುಡಿಯ ಪ್ರವೇಶ ದ್ವಾರದ ಲಲಾಟದ ಮೇಲೆ ಉಗ್ರನರಸಿಂಹನ ಶಿಲ್ಪವಿದೆ. ಒಳ ಗರ್ಭಗುಡಿಯ ಲಲಾಟದ ಮೇಲೆ ಗಣೇಶನ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಹಿಂದಿನ ಭಾಗದಲ್ಲಿ ನಟರಾಜ (ಶಿವ) ಮತ್ತು ಕೇಶವ (ವಿಷ್ಣು)ವಿನ ಮೂರ್ತಿಶಿಲ್ಪಗಳಿವೆ. ಆದ್ದರಿಂದ ಈ ಶಿಲ್ಪಗಳು ಮತ್ತು ಲಲಾಟದ ಶಿಲ್ಪಗಳು ಮತ್ತು ದ್ವಾರಪಾಲಕ ಶಿಲ್ಪಗಳ ಕುರುಹುಗಳನ್ನಾಧರಿಸಿ ಶಂಕರನಾರಾಯಣ ಗುಡಿ ಎಂದು ಹೇಳಬಹುದು. ಕರ್ನಾಟಕ ಸರ್ಕಾರ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ ೧೯೭೭ರಲ್ಲಿ ಹೊರಡಿಸಿದ ಗೆಜೆಟಿಯರ್‌ನಲ್ಲಿ ನೀಲಕಂಠೇಶ್ವರ ದೇವಾಲಯವೆಂದು ಹೇಳಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ೨೦೦೭ರ ಸಂಪಾದಿತ ಕೃತಿಯಲ್ಲಿ ಸಿ. ಮಹದೇವರವರ ಲೇಖನದಲ್ಲಿ ಲಲಾಟದಲ್ಲಿ ಉಗ್ರನರಸಿಂಹನ ಬಿಂಬವಿದ್ದು, ಇದು ವೈಷ್ಣವ ದೇವಾಲಯ ಎಂದು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಗರ್ಭಗುಡಿಯಲ್ಲಿರುವ ಶಿವ ಮತ್ತು ನಾರಾಯಣನ ಮೂರ್ತಿಗಳು ಹೊರ ಗರ್ಭಗುಡಿ ಲಲಾಟ ಮತ್ತು ಒಳಗರ್ಭಗುಡಿ

ಲಲಾಟದ ಉಗ್ರನರಸಿಂಹ ಮತ್ತು ಗಣೇಶನ ಶಿಲ್ಪಗಳಿಂದ ಶೈವ ಮತ್ತು ವೈಷ್ಣವರ ಸಮ್ಮಿಳಿತಗೊಂಡ ಶಂಕರನಾರಾಯಣ ದೇವಾಲಯವಾಗಿದೆ ಎಂದು ತಿಳಿದುಬರುತ್ತದೆ. ಆರಂಭದಲ್ಲಿ ವೈಷ್ಣವ ದೇವಾಲಯವಾಗಿದ್ದು ನಂತರ ಶೈವ ಪ್ರಭಾವಕ್ಕೊಳಗಾಗಿದೆ.

ದೇವಾಲಯದ ಹೆಸರು: ರಾಮಲಿಂಗೇಶ್ವರ ದೇವಾಲಯ

ಊರು: ಮೋಘಾ ಸ್ಥಳ: ಊರ ಹೊರಗಿನ ಕೊಳ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯ ಪೂರ್ವಾಭಿಮುಖವಾಗಿದೆ. ರಾಮಲಿಂಗೇಶ್ವರ ದೇವಾಲಯ ಶಾಸನೋಕ್ತ ದೇವಾಲಯವಾಗಿದೆ. ಈ ದೇವಾಲಯ ರೇಖಾ ಮಾದರಿ ನಾಗರಶೈಲಿಯಲ್ಲಿದೆ. ಭವ್ಯ ಶಿಲ್ಪಗಳನ್ನು ಹೊಂದಿದ ೨೮ ಕಂಬಗಳಿವೆ. ಈ ಸ್ತಂಭಗಳಲ್ಲಿ ಸಿಂಹ (ಕೀರ್ತಿ) ಮುಖಗಳಿವೆ. ಹೂ, ಬಳ್ಳಿ, ದೇವಶಿಲ್ಪಗಳಿವೆ. ನವರಂಗದ ಕಂಬಗಳಲ್ಲಿ ವಿವಿಧ ದೇವರ ಶಿಲ್ಪಗಳಿವೆ. ಶಿವ, ವಿಷ್ಣು, ಗಣಪತಿ, ಆದಿಶಕ್ತಿ ಶಿಲ್ಪಗಳಿವೆ. ನಟರಾಜ, ಭಿಕ್ಷಾಟನಮೂರ್ತಿ, ಸೂರ್ಯ, ಭೈರವಿ, ಸರಸ್ವತಿ, ನರ್ತಕಿಯರ ಶಿಲ್ಪಗಳಿವೆ (ಕ.ಸ.ಗೆ.ಕ.ಜಿ. ೧೯೯೭, ಪು.೭೬೩). ನವರಂಗದ ಅಂಚಿನ ಉದ್ದಕ್ಕೂ ಕಕ್ಷಾಸನಗಳಿವೆ. ಮೂರು ಕಡೆಯಿಂದಲೂ ಪ್ರವೇಶ ದ್ವಾರಗಳಿವೆ. ದೇವಕೋಷ್ಠಗಳಲ್ಲಿ ಸಪ್ತಮಾತೃಕೆ ಮತ್ತು ಮಹಿಷಮರ್ದಿನಿ ಶಿಲ್ಪಗಳಿವೆ. ಒಳಭಿತ್ತಿಯಲ್ಲಿ ನಾಲ್ಕು ದೇವಕೋಷ್ಠಗಳಿವೆ. ಅಧಿಷ್ಠಾನ ಭಿತ್ತಿ, ಸುಕನಾಸಿ ಶಿಖರವನ್ನೊಳಗೊಂಡಿದೆ. ಪುಷ್ಕರಣಿಗಳಲ್ಲಿ ಅನಂತ ಪದ್ಮನಾಭ ಮತ್ತು ಲಕ್ಷ್ಮಿ ಶಿಲ್ಪಗಳಿವೆ. ವಿಷ್ಣುವಿನ ಎರಡು ಮತ್ತು ಆಸೀನ ವಿಷ್ಣುವಿನ ಶಿಲ್ಪ ಒಂದು ಇದೆ. ಹೊರಭಿತ್ತಿಯ ನಾಲ್ಕು ದೇವಕೋಷ್ಠಗಳಲ್ಲಿ ಈ ಶಿಲ್ಪಗಳಿವೆ (ಕ.ಸ.ಗೆ.ಕ.ಜಿ.೧೯೯೭, ಪು–೭೬೩). ಪಂಚಶಾಖಾಲಂಕೃತ ಬಾಗಿಲವಾಡವಿದೆ. ಹೊಸ್ತಿಲ ಬಳಿ ಸುಂದರ ಚಂದ್ರಶಿಲೆ ಇದೆ. ಅಂತರಾಳದ ಎರಡು ದೇವಕೋಷ್ಠಗಳಲ್ಲಿ ಗಣಪತಿಗಳಿವೆ.

ಅಧಿಷ್ಠಾನ ಮತ್ತು ಭಿತ್ತಿ ಭಾಗಗಳು ಶಿಲ್ಪಗಳಿಂದ ಕೂಡಿವೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ. ದೇವಾಲಯದ ಹೊರಭಾಗವು ಮುಖಮಂಟಪ (ಸುಕನಾಸಿ), ಪ್ರಸ್ತರ, ಗ್ರೀವ, ಭೂಮಿಜ ಶೈಲಿಯ ಶಿಖರವನ್ನೊಳಗೊಂಡಿದೆ. ಶಿಖರ ವೃತ್ತಾಕಾರ ಹೂವಿನ ದಳದಂತೆ ಅಲಂಕೃತವಾಗಿದೆ.

ಕ್ರಿ.ಶ. ೯೧೮ರ ತ್ರುಟಿತ ಶಾಸನ ಇಲ್ಲಿದೆ. ಚಂಡಿಗನೆಂಬುವನು ಮೊರಘೆಯ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿದನೆಂದು ಉಲ್ಲೇಖವಿದೆ (ಗು.ಜಿ.ಇ.ಮತ್ತು ಪು.,೨೦೦೭,ಪು.೩೫೦).

ದೇವಾಲಯದ ಹೆಸರು: ಸಂಗಮೇಶ್ವರ ದೇವಾಲಯ

ಊರು: ದೇಗಲ್ಮಡಿ ಸ್ಥಳ: ಊರ ಮಧ್ಯೆ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯ ಪೂರ್ವಾಭಿಮುಖವಾಗಿದ್ದು, ಎತ್ತರವಾದ ಜಗತಿಯ ಮೇಲೆ ಸಂಗಮೇಶ್ವರ ದೇವಾಲಯ ಕಟ್ಟಲ್ಪಟ್ಟಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ ಮತ್ತು ಶಿಖರವನ್ನೊಳಗೊಂಡಿದೆ. ಅಧಿಷ್ಠಾನದಲ್ಲಿ ಅಲಂಕಾರಿಕ ಕೆತ್ತನೆಗಳಿವೆ. ಪ್ರವೇಶದ್ವಾರದ ಎಡಕ್ಕೆ ಬ್ರಹ್ಮನ ಮೂರ್ತಿ ಶಿಲ್ಪ ಮತ್ತು ದ್ವಾರಪಾಲಕರ ಶಿಲ್ಪವಿದೆ.

ತ್ರಿಕೂಟ ದೇವಾಲಯದಲ್ಲಿ ಪ್ರತ್ಯೇಕ ಗರ್ಭಗುಡಿಗಳಿವೆ. ಒಂದು ಗರ್ಭಗುಡಿ ಶಿಥಿಲವಾಗಿದೆ. ಆ ಕಾರಣ ಪ್ರಸ್ತುತ ಒಂದು ಗರ್ಭಗುಡಿ ಮುಚ್ಚಿದೆ. ಗರ್ಭಗುಡಿಗಳಲ್ಲಿ ಬ್ರಹ್ಮಸೂತ್ರ ಲಿಂಗಗಳಿವೆ. ಒಳಭಾಗ ಗರ್ಭಗೃಹಗಳ ಅಂತರಾಳಗಳು ಮತ್ತು ನವರಂಗವನ್ನೊಳಗೊಂಡಿದೆ. ಬಾಗಿಲವಾಡ ಪಂಚಶಾಖಾಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿವೆ. ಅವುಗಳಲ್ಲಿ ಸಪ್ತಮಾತೃಕಾ, ಮಹಿಷಮರ್ದಿನಿ ಹಾಗೂ ಬ್ರಹ್ಮನ ಶಿಲ್ಪಗಳಿವೆ. ನವರಂಗದ ಕಂಬಗಳು ಅಲಂಕೃತವಾಗಿವೆ (ಕ.ಸ.ಗೆ.ಕ.ಜಿ. ೧೯೯೭, ಪು.೭೨೯). ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಭುವನೇಶ್ವರಿಯಿದೆ. ಅಷ್ಟದಿಕ್ಪಾಲಕರ ಶಿಲ್ಪ ಮೇಲ್ಛಾವಣಿಯಲ್ಲಿವೆ. ಕರ್ನಾಟಕ ಸರ್ಕಾರ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ, ೧೯೯೭, ಪು.೭೨೯ರಲ್ಲಿ ಸಪ್ತಮಾತೃಕೆ ಇದೆ ಎಂದು ಉಲ್ಲೇಖಿಸಲಾಗಿದೆ. ಆದರೆ ಇಲ್ಲಿ ಗಣಪತಿ ಮತ್ತು ಸ್ಕಂದರನ್ನೊಳಗೊಂಡ ನವಮಾತೃಕೆಯರ ಶಿಲ್ಪಗಳನ್ನೊಳಗೊಂಡಿದೆ.

ದೇವಾಲಯದ ಹೆಸರು: ಸೋಮೇಶ್ವರ ದೇವಾಲಯ

ಊರು: ಸೋಮನಿಂಗದ ಹಳ್ಳಿ   ಸ್ಥಳ: ಮಂದಗಡ್ಡಿ

ಕಾಲ: ಸು. ೧೧ನೇ ಶತಮಾನ   ಸ್ಥಿತಿ: ಜೀರ್ಣ

ಪೂರ್ವಾಭಿಮುಖವಾಗಿರುವ ಈ ದೇವಾಲಯ ಸೋಮೇಶ್ವರ ದೇವಾಲಯವಾಗಿದೆ. ಗರ್ಭಗುಡಿ, ಅಂತರಾಳಗಳಿವೆ. ಚಂದ್ರಶಿಲೆಯ ಲಿಂಗವಿದೆ. ಇದು ಎತ್ತರ ಜಗತಿಯ ಮೇಲೆ ನಿರ್ಮಾಣವಾಗಿದೆ.

ದೇವಾಲಯದ ಹೆಸರು: ಸೋಮೇಶ್ವರ ದೇವಾಲಯ

ಊರು: ಚೇಂಗಟಾ   ಸ್ಥಳ: ಊರೊಳಗೆ

ಕಾಲ: ಸು.೧೦ನೇ ಶತಮಾನ   ಸ್ಥಿತಿ: ಜೀರ್ಣ

ಎತ್ತರವಾದ ಜಗತಿ ಮೇಲೆ ಅಧಿಷ್ಠಾನವಿದ್ದು ಇದು ಬಹುಕೋನಾಕೃತಿಯಲ್ಲಿ ನಿರ್ಮಾಣವಾಗಿದೆ. ದೇವಾಲಯ ನಕ್ಷತ್ರಾಕಾರದ ತಳವಿನ್ಯಾಸವನ್ನೊಳಗೊಂಡಿದೆ. ಅಧಿಷ್ಠಾನದಲ್ಲಿ ಚಿಕ್ಕ ಕೋಷ್ಠಗಳಿವೆ. ಭಿತ್ತಿ ಭಾಗದಲ್ಲಿ ಕುಡ್ಯ ಸ್ತಂಭಗಳಿವೆ ಮತ್ತು ದೇವಕೋಷ್ಠಗಳಿವೆ. ಅದರಲ್ಲಿ ಭೈರವಿ, ಭೈರವ, 'ತ್ರಿಪುರಾಂತರಕ ಶಿವ' ಎಂದು (ಕರ್ನಾಟಕ ಸರ್ಕಾರದ ಗೆಜೆಟಿಯರ್

೧೯೯೭ರ ಕಲ್ಬುರ್ಗಿ ಜಿಲ್ಲೆ, ಪು.೭೨೨) ವಿವರಿಸಲಾಗಿದೆ. ಆದರೆ ಅಲ್ಲಿ ಅಂಧಕಾಸುರ-ವಧಾ-ಮೂರ್ತಿ ಶಿಲ್ಪವಿದೆ. ಈ ದೇವಕೋಷ್ಠ ನಾಲ್ಕು ಕೂಡ್ಯ ಸ್ತಂಭ, ಶಾಲಾ ಮಾದರಿ ಶಿಖರ, ಕರ್ಣ, ಕಪೋತಬಂಧ ಒಳಗೊಂಡಿದೆ. ದೇವಾಲಯದ ಮೇಲ್ಭಾವಣಿ ಇಳಿಜಾರಾಗಿದೆ. ಪ್ರಸ್ತುತ ಶಿಖರ ಹಾಳಾಗಿದೆ.

ಎರಡು ಗರ್ಭಗುಡಿಯನ್ನೊಳಗೊಂಡ ಈ ದೇವಾಲಯ ಒಂದು ಚತುರ್ ಶಾಖಾಲಂಕೃತ. ಮತ್ತೊಂದು ಸಪ್ತ ಶಾಖಾಲಂಕೃತವಾಗಿದೆ. ಎರಡರಲ್ಲೂ ಲಿಂಗಗಳಿವೆ. ಭುವನೇಶ್ವರಿ ಇದೆ. ಲಲಾಟದ ಮೇಲೆ ನಟರಾಜನ ಶಿಲ್ಪವಿದೆ. ಸಪ್ತಶಾಖಾಲಂಕೃತ ಬಾಗಿಲವಾಡದ ಕೆಳಭಾಗದಲ್ಲಿ ಗಂಗೆ,ಯಮುನೆಯರ ಎತ್ತರ ಶಿಲ್ಪ, ಚಾಮರಧಾರಿ ದೇವತೆಯರ ಶಿಲ್ಪ, ಶೈವ ದ್ವಾರಪಾಲಕರು ಮತ್ತು ಸ್ತ್ರೀ ದೇವತೆಯ ಶಿಲ್ಪಗಳಿವೆ. ಲಲಾಟದ ಮೇಲೆ ದೇವಕೋಷ್ಠದಲ್ಲಿ ಮಹೇಶ್ವರನ ಶಿಲ್ಪಗಳಿವೆ. ಅವುಗಳ ಮೇಲೆ ಗಣಗಳ ಪಟ್ಟಿ ಇದೆ. ಬಾಗಿಲವಾಡವು ಹೂಬಳ್ಳಿಯ ಪಟ್ಟಿಕೆ ಮತ್ತು ದಂಪತಿ ಶಿಲ್ಪ, ಸುಂದರಿಯರು ನಿಂತ ಶಿಲ್ಪ ಪಟ್ಟಿಕೆ ಮತ್ತು ಕುಡ್ಯಸ್ತಂಭವನ್ನೊಳಗೊಂಡಿದೆ. ಲಲಾಟದ ಮೇಲೆ ವಿಘ್ನೇಶ್ವರನ ಶಿಲ್ಪವಿದೆ. ಸುರಳಿ ಬಳ್ಳಿಗಳನ್ನೊಳಗೊಂಡ ಇನ್ನೊಂದು ಗರ್ಭಗುಡಿಯ ಬಾಗಿಲವಾಡದಲ್ಲಿ ಶೈವದ್ವಾರಪಾಲಕರಿರುವ ಸ್ತಂಭ (ಕುಡ್ಯಸ್ತಂಭ), ಹೂಗಳ ದ್ವಾರಪಟ್ಟಿಕೆಯನ್ನೊಳಗೊಂಡಿದೆ. ಅದರ ಮೇಲೆ ದೇವಕೋಷ್ಠಗಳಿವೆ.

ಸೋಮೇಶ್ವರ ದೇವಾಲಯದ ನವರಂಗದಲ್ಲಿ ತೊಲೆ ಮಕರತೋರಣದಿಂದ ಅಲಂಕೃತವಾಗಿದೆ. ದೇವಾಲಯ ಹೊರ ಆವರಣದಲ್ಲಿ ಗಜಪಟ್ಟಿಕೆ, ಬಾಗಿಲವಾಡ ಲಲಾಟಗಳ ಭಾಗಗಳು ಬಿದ್ದಿವೆ.

ದೇವಾಲಯದ ಹೆಸರು: ರಾಮಲಿಂಗೇಶ್ವರ ದೇವಾಲಯ

ಊರು: ಕೋಡ್ಲಿ　　　　ಸ್ಥಳ: ಕೊಳ್ಳದ ಕೆಳಭಾಗ (ಅಗಸಿ ಬಳಿ)

ಕಾಲ: ಸು.೧೨ನೆಯ ಶತಮಾನ　　　　ಸ್ಥಿತಿ: ಅವಸಾನ ಹಂತದಲ್ಲಿದೆ.

ದೇವಾಲಯವು ಪೂರ್ವಾಭಿಮುಖವಾಗಿದೆ. ಎತ್ತರದ ಜಗತಿಯ ಮೇಲೆ ನಿರ್ಮಾಣವಾದ ದೇವಾಲಯ ಚಾಲುಕ್ಯ ಶೈಲಿಯ ಸ್ತಂಭಗಳನ್ನೊಳಗೊಂಡಿದೆ. ದೇವಾಲಯದ ಒಳಭಾಗವು ಗರ್ಭಗುಡಿ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ದೇವಾಲಯದ ಮುಂದೆ ಪುಷ್ಕರಣಿ ಇದೆ. ಶಿವಲಿಂಗ ಗರ್ಭಗುಡಿಯಲ್ಲಿದೆ.

ಗಜಲಕ್ಷ್ಮಿ ಲಲಾಟವಿದೆ. ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಅಂತರಾಳದಲ್ಲಿ ಜಾಲಂಧ್ರ ಮತ್ತು ಮಕರ ತೋರಣಗಳಿವೆ. ತೆರೆದ ನವರಂಗದಲ್ಲಿ ಕಕ್ಷಾಸನವಿದೆ. ನವರಂಗವನ್ನು ಪ್ರವೇಶಿಸಲು ಮೂರು ಕಡೆಗಳಿಂದಲೂ ಮಾರ್ಗಗಳಿವೆ (ಕ.ಸ.ಗೆ.ಕ.ಜಿ.೧೯೯೭,ಪು.೭೦೬). ಕರಿಕಲ್ಲನ್ನು ದೇವಾಲಯದ ಸ್ತಂಭ, ಬಾಗಿಲು ಮತ್ತು ಛತ್ತಿಗಾಗಿ, ಕಲ್ಲುಗಾರೆ ದೇವಾಲಯದ

ನಿರ್ಮಾಣಕ್ಕೆ ಉಪಯೋಗಿಸಲಾಗಿದೆ. ದೇವಾಲಯವು ಅಧಿಷ್ಠಾನ, ಭಿತ್ತಿ ಮತ್ತು ಮೇಲ್ಛಾವಣಿ ವನ್ನೊಳಗೊಂಡಿದೆ.

ದೇವಾಲಯದ ಹೆಸರು: ರಾಮಲಿಂಗೇಶ್ವರ ದೇವಾಲಯ

ಊರು: ಪಸ್ತಾಪೂರ ಸ್ಥಳ: ಊರ ಮಧ್ಯ

ಕಾಲ: ಸು.೧೨ನೆಯ ಶತಮಾನ ಸ್ಥಿತಿ: ಜೀರ್ಣೋದ್ಧಾರಗೊಂಡಿದೆ.

ರಾಮಲಿಂಗೇಶ್ವರ ದೇವಾಲಯ ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಪಾರ್ಶ್ವದ್ವಾರವಿದೆ (ಕ.ಸ.ಗೆ.ಕ.ಜಿ.೧೯೭೭,ಪು.೭೪೧). ತ್ರಿಶಾಖಾಲಂಕೃತ ಬಾಗಿಲವಾಡವಿದೆ. ಲಲಾಟದಲ್ಲಿ ಗಣಪತಿ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿವೆ. ಅವುಗಳಲ್ಲಿ ಗಣಪತಿ, ನಾಗ ಮತ್ತು ಭೈರವ ಶಿಲ್ಪಗಳಿವೆ. ಚಾಲುಕ್ಯ ಶೈಲಿಯಲ್ಲಿ ನವರಂಗದ ಸ್ತಂಭಗಳಿವೆ. ಇದರ ಮೇಲ್ಛಾವಣಿಯಲ್ಲಿ ತ್ರಿದಳ ಭುವನೇಶ್ವರಿಯಿದೆ. ನವರಂಗದ ಪ್ರವೇಶ ಭಾಗದಲ್ಲಿ ಕಕ್ಷಾಸನವಿದೆ (ಕ.ಸ.ಗೆ.ಕ.ಜಿ.೧೯೭೭, ಪು.೭೪೧). ಸ್ತಂಭಗಳು ಹೂ, ಮುತ್ತಿನ ಸರ, ಬಳ್ಳಿಗಳಿಂದ ಅಲಂಕೃತವಾಗಿವೆ. ಸ್ತಂಭ ಭಾಗಗಳ ಮೇಲೆ ಬೋದಿಗೆಗಳಿವೆ. ಕುಬ್ಜ ಕಂಬಗಳಿವೆ.

ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ, ಶಿಖರ, ಸ್ತೂಪಿ ಒಳಗೊಂಡಿದೆ. ಇದು ಷಡ್ವರ್ಗ ದೇವಾಲಯವಾಗಿದೆ.

ದೇವಾಲಯದ ಹೆಸರು: ಈಶ್ವರ ದೇವಾಲಯ

ಊರು: ಹಲ್‌ಚೇರಾ ಸ್ಥಳ: ಊರ ಒಳಗೆ

ಕಾಲ: ಸು.೧೨ನೆಯ ಶತಮಾನ ಸ್ಥಿತಿ: ಜೀರ್ಣೋದ್ಧಾರಗೊಂಡಿದೆ.

ದೇವಾಲಯದ ಬಾಗಿಲವಾಡ ಪಂಚಶಾಖಾಲಂಕೃತವಾಗಿದೆ. ಬಾಗಿಲವಾಡದ ಕೆಳಭಾಗದಲ್ಲಿ ದ್ವಾರಪಾಲಕಿಯರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ಹೊರ ಬಾಗಿಲವಾಡ ತ್ರಿಶಾಖಾಲಂಕೃತವಾಗಿದೆ. ಶೈವ ದ್ವಾರಪಾಲಕರ ಶಿಲ್ಪಗಳಿವೆ. ಗಜತೋರಣ ಮತ್ತು ಗಜಸವಾರರ ಶಿಲ್ಪವಿದೆ. ತೋರಣದಲ್ಲಿ ಸಂಗೀತ ವಾದ್ಯಗಾರರ ಶಿಲ್ಪ, ಮಧ್ಯಭಾಗದಲ್ಲಿ ಮಹೇಶ್ವರನ ಶಿಲ್ಪವಿದೆ. ಕಲ್ಲು, ಗಚ್ಚು, ಗಾರೆ, ಕರಿಕಲ್ಲು ದೇವಾಲಯ ನಿರ್ಮಾಣಕ್ಕೆ ಬಳಸಿದ ವಸ್ತುಗಳಾಗಿವೆ.

ದೇವಾಲಯದ ಹೆಸರು: ಈಶ್ವರ ದೇವಾಲಯ

ಊರು: ಕುಪನೂರು ಸ್ಥಳ: ಊರ ಪ್ರವೇಶ ಭಾಗ

ಕಾಲ: ಸು.೧೦ನೇ ಶತಮಾನ ಸ್ಥಿತಿ: ಹಾಳಾಗಿದೆ.

ಈಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ದ್ವಿಕೂಟ ದೇವಾಲಯವಾಗಿತ್ತು. ಆದರೆ ಈಗ ಒಂದು ಗರ್ಭಗೃಹ ಮಾತ್ರವಿದ್ದು, ಅದು ಹಾಳಾಗಿದೆ. ಶಿವಲಿಂಗ ಮತ್ತು ೧ ವೀರಗಲ್ಲು ಮತ್ತು ನೇಗಿಲು ಹಿಡಿದು ನಿಂತ ವ್ಯಕ್ತಿ ಶಿಲ್ಪವಿದೆ. ನೇಗಿಲು ರಾಷ್ಟ್ರಕೂಟರ ಲಾಂಛನವಾಗಿದ್ದು ಈ ಶಿಲ್ಪ ರಾಷ್ಟ್ರಕೂಟರ ಕಾಲದ್ದಾಗಿದೆ. ಇನ್ನೊಂದು ಲಿಂಗ ತ್ರುಟಿತವಾಗಿದ್ದು, ಪಕ್ಕದ ಕಸದ ತೊಟ್ಟಿಯಲ್ಲಿದೆ. ಪೂರ್ವಕ್ಕೊಂದು ಮತ್ತು ಪಶ್ಚಿಮಕ್ಕೊಂದು ದ್ವಾರವಿದೆ. ಈ ದೇವಾಲಯ ನಿರ್ಮಾಣಕ್ಕೆ ಕಲ್ಲು, ಗಚ್ಚು, ಗಾರೆ, ಕರಿಕಲ್ಲುಗಳ ಉಪಯೋಗ ಮಾಡಲಾಗಿದೆ.

ದೇವಾಲಯದ ಹೆಸರು: ಮಲ್ಲಿಕಾರ್ಜುನ ದೇವಾಲಯ

ಊರು: ಕೋಡ್ಲಿ ಸ್ಥಳ: ಬನಶಂಕರಿ ಗುಡಿ ಹತ್ತಿರ

ಕಾಲ: ಸು.೧೨ನೇ ಶತಮಾನ ಸ್ಥಿತಿ: ಅವಸಾನ ಹಂತ

ದೇವಾಲಯ ಉತ್ತರಾಭಿಮುಖವಾಗಿದ್ದು, ವಿಶಾಲವಾದ ಪ್ರಾಂಗಣವನ್ನೊಳಗೊಂಡಿದೆ. ಅಲ್ಲಿ ಅನೇಕ ತ್ರುಟಿತ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪದ ಶಿಲ್ಪಗಳು ಬಾಗಿಲವಾಡ, ತೋರಣದ ಭಾಗ ಬಿದ್ದಿವೆ. ದೇವಾಲಯ ಗರ್ಭಗುಡಿ ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ನವರಂಗದಲ್ಲಿ ಒಂದು ವೀರಗಲ್ಲು ಮತ್ತು ಅಷ್ಟಭುಜ ಮಹಿಷಮರ್ದಿನಿಯ ಶಿಲ್ಪವಿದೆ. ದೇವಾಲಯ ಚಾಲುಕ್ಯ ಶೈಲಿಯದ್ದಾಗಿದೆ (ಕ.ಸ.ಗೆ.ಕ.ಜಿ.೧೯೯೭, ಪು.೭೦೬). ಗರ್ಭಗುಡಿಯೊಳಗೆ ಶಿವಲಿಂಗವಿದೆ. ದ್ವಾದಶ ಕೋನಕಂಬಗಳಿವೆ. ಕಲ್ಲು, ಗಚ್ಚು, ಗಾರೆಯಿಂದ ದೇವಾಲಯ ನಿರ್ಮಾಣವಾಗಿದೆ. ಗರ್ಭಗುಡಿ, ಸ್ತಂಭ, ಬಾಗಿಲು ಕರಿಕಲ್ಲಿನಿಂದ ಕೂಡಿವೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠವನ್ನೊಳಗೊಂಡಿದೆ.

ದೇವಾಲಯದ ಹೆಸರು: ಮಲ್ಲಿಕಾರ್ಜುನ ದೇವಾಲಯ

ಊರು: ಕೇಶಾವರ್ (ಗಡಿ) ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಜೀರ್ಣೋದ್ಧಾರಗೊಂಡಿದೆ.

ದೇವಾಲಯವು ಪೂರ್ವಾಭಿಮುಖವಾಗಿದೆ. ಜೀರ್ಣಗೊಂಡ ಮಲ್ಲಿಕಾರ್ಜುನ ದೇವಾಲಯ ದ್ವಿಕೂಟ ದೇವಾಲಯವಾಗಿದ್ದಂತೆ ತೋರುತ್ತದೆ. ಗರ್ಭಗುಡಿಯಲ್ಲಿ ಎರಡು ಲಿಂಗಗಳಿವೆ. ಎತ್ತರದ ಜಗತಿಯ ಮೇಲೆ ಅಧಿಷ್ಠಾನ, ಭಿತ್ತಿ, ಶಿಖರವನ್ನೊಳಗೊಂಡಿದೆ.

ಗರ್ಭಗೃಹ ಮತ್ತು ತೆರೆದ ಅಂತರಾಳವನ್ನೊಳಗೊಂಡಿದೆ. ನಕ್ಷತ್ರಾಕಾರದ ಭುವನೇಶ್ವರಿಯ ಮಧ್ಯದಲ್ಲಿ ಕುಮುದ ಇಳಿಬಿಟ್ಟಂತಿದೆ. ಕೀರ್ತಿಮುಖ ಮತ್ತು ಆಯುಧ ಹಿಡಿದುನಿಂತ ದೇವತೆಗಳು, ಹೂಬಳ್ಳಿಗಳು ಮೇಲ್ಬಾವಣಿಯಲ್ಲಿವೆ. ಬಾಗಿಲವಾಡದ ಕೆಳಸ್ತರದಲ್ಲಿ ಶೈವ ದ್ವಾರಪಾಲಕರ ಮೂರ್ತಿಶಿಲ್ಪಗಳಿವೆ. ಲಲಾಟದ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಷಡ್ ಶಾಖಾಲಂಕೃತ ಬಾಗಿಲ ವಾಡವಿದೆ. ಗರ್ಭಗುಡಿಯಲ್ಲಿ ಬ್ರಹ್ಮಸೂತ್ರ ಶಿವಲಿಂಗವಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೦೨).

ದೇವಾಲಯದ ಹೆಸರು: ಕರಿಸಿದ್ದೇಶ್ವರ ದೇವಾಲಯ

ಊರು: ಕೇಶಾವರ್ (ಗಡಿ) ಸ್ಥಳ: ಊರ ಹೊರಗೆ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಸಿದ್ದೇಶ್ವರ ಗುಡಿ ಹಾಳು ಬಿದ್ದ ಕಾರಣ ಪಾಳು ಸಿದ್ದಪ್ಪನ ಗುಡಿ ಎಂದೇ ಇಲ್ಲಿನ ಜನ ಕರೆಯುತ್ತಾರೆ. ಈ ದೇವಾಲಯ ಗರ್ಭಗೃಹ ತೆರೆದ ಅಂತರಾಳ, ನವರಂಗವನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನವರಂಗದ ಉತ್ತರಕ್ಕೆ ಒಂದಂಕಣದ ಮಂಟಪವಿದೆ. ಈ ಭಾಗದಿಂದಲೇ ಪ್ರವೇಶವಿದೆ (ಕ.ಸ.ಗೆ.ಕ.ಜಿ. ೧೯೯೭, ಪು.೭೦೨). ಹೊರಭಾಗ ಭಿತ್ತಿ, ಅಧಿಷ್ಠಾನವನ್ನೊಳಗೊಂಡಿದೆ. ಪ್ರಸ್ತುತ ಶಿಖರ ನಾಶವಾಗಿ ಚಪ್ಪಟೆ ಮೇಲ್ಛಾವಣಿ ಮಾತ್ರ ಉಳಿದಿದೆ.

ದೇವಾಲಯದ ಹೆಸರು: ಕರಿದೇವರ ಗುಡಿ

ಊರು: ಕೇಶಾವರ್ (ಗಡಿ) ಸ್ಥಳ: ಊರ ಹೊರಗೆ

ಕಾಲ: ಸು.೧೦-೧೧ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಕರಿದೇವರ ಗುಡಿ ದ್ವಿಕೂಟವಾಗಿದೆ. ಎದುರು ಬದುರಾಗಿ ಎರಡು ಗರ್ಭಗೃಹಗಳಿವೆ. ಅಂತರಾಳವಿದೆ(ಕ.ಸ.ಗೆ.ಕ.ಜಿ.೧೯೯೭,ಪು.೭೦೨). ನವರಂಗ ವಿದ್ದು, ಇದನ್ನು ಪ್ರವೇಶಿಸಲು ಉತ್ತರ ಮತ್ತು ದಕ್ಷಿಣಾಭಿಮುಖ ದ್ವಾರಗಳಿವೆ. ದೇವಾಲಯದ ಅಧಿಷ್ಠಾನ ಮತ್ತು ಭಿತ್ತಿ ಭಾಗ ಮಾತ್ರ ಉಳಿದಿವೆ. ಗರ್ಭಗುಡಿ ಬಾಗಿಲುಗಳು ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿವೆ.

ದೇವಾಲಯದ ಹೆಸರು: ಸಂಗಮನಾಥ ದೇವಾಲಯ

ಊರು: ಕೇಶಾವರ್ (ಗಡಿ) ಸ್ಥಳ: ಊರ ಹೊರಗೆ

ಕಾಲ: ಸು. ೮-೯ನೇ ಶತಮಾನ ಸ್ಥಿತಿ: ಅವಸಾನ

ಸಂಗಮನಾಥ ದೇವಾಲಯದಲ್ಲಿ ನಂದಿಯ ಮೂರ್ತಿಶಿಲ್ಪವಿದೆ. ಮತ್ತು ಕದಂಬ ನಾಗರ ಶಿಖರವಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೦೨).

ದೇವಾಲಯದ ಹೆಸರು: ರಾಮಲಿಂಗೇಶ್ವರ ದೇವಾಲಯ

ಊರು: ರಾಮತೀರ್ಥ ಸ್ಥಳ: ಊರ ಒಳಗೆ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಜೀರ್ಣಾವಸ್ಥೆಯಲ್ಲಿದೆ.

ದೇವಾಲಯವು ಉತ್ತರಾಭಿಮುಖವಾಗಿದೆ. ಪ್ರಾಚೀನವಾಗಿರುವ ರಾಮಲಿಂಗೇಶ್ವರ ದೇವಾಲಯ ದ್ವಿಕೂಟ ದೇವಾಲಯವಾಗಿದೆ. ಪೂರ್ವ ಪಶ್ಚಿಮಕ್ಕೆ ಎದುರು ಬದುರಾಗಿ ಒಂದೊಂದು

ಗರ್ಭಗೃಹ ಮತ್ತು ಅಂತರಾಳಗಳನ್ನೊಳಗೊಂಡಿದೆ. ಪ್ರಧಾನ ಗರ್ಭಗೃಹ ಪೂರ್ವಾಭಿಮುಖವಾಗಿದೆ. ಇದರಲ್ಲಿ ಶಿವಲಿಂಗವಿದೆ. ಇದರ ಎದುರಿನ ಗರ್ಭಗೃಹದಲ್ಲಿ ಕೇವಲ ಸೂರ್ಯ ಪೀಠವಷ್ಟೇ ಉಳಿದಿದೆ. ಹಿಂದೆ ಸೂರ್ಯ ಮೂರ್ತಿ ಇತ್ತು. ಗರ್ಭಗುಡಿಗಳ ಬಾಗಿಲುವಾಡಗಳು ಅಲಂಕಾರ ಇರದೆ ಮೂಲರೂಪದಲ್ಲಿವೆ. ಭಿತ್ತಿನಲ್ಲಿ ತ್ರಿದಳ ಭುವನೇಶ್ವರಿ ಇದೆ. ನವರಂಗದ ಅಂಚಿನಲ್ಲಿ ಕಕ್ಷಾಸನಗಳಿವೆ. ಇದನ್ನು ಪ್ರವೇಶಿಸಲು ಉತ್ತರ ದಕ್ಷಿಣಗಳಿಂದ ಪ್ರವೇಶ ದ್ವಾರವಿದೆ (ಕ.ಸ.ಗೆ.ಕ.ಜಿ. ೧೯೯೭,ಪು.೭೭೦). ದ್ವಿಶಾಖಾಲಂಕೃತ ಬಾಗಿಲವಾಡವು ಹೂದಳ ಮತ್ತು ಬಳ್ಳಿಗಳಿಂದ ಕೂಡಿದೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ (ಕಂಠ)ಗಳನ್ನೊಳಗೊಂಡಿದೆ. ಶಿಖರ ಹಾಳಾಗಿದೆ. ಮಂಟಪ ಮೇಲ್ಛಾವಣಿ ಇಳಿಜಾರಾಗಿದ್ದು ಸಪಾಟಾಗಿದೆ.

ದೇವಾಲಯದ ಹೆಸರು: ರಾಮಲಿಂಗೇಶ್ವರ ದೇವಾಲಯ

ಊರು: ರಟ್ಕಲ್ ಸ್ಥಳ: ಊರ ಮಧ್ಯೆ

ಕಾಲ: ಸು.೧೨ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯವು ಉತ್ತರಾಭಿಮುಖವಾಗಿದೆ. ತ್ರಿಕೂಟ ದೇವಾಲಯವಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗಗಳಿವೆ. ನವರಂಗವಿದೆ. ಪ್ರವೇಶ ದ್ವಾರದಲ್ಲಿ ಉಬ್ಬುಶಿಲ್ಪಗಳಿವೆ (ಕ.ಸ.ಗೆ.ಕ.ಜಿ. ೧೯೯೭, ಪು.೭೬೯). ದೇವಾಲಯವು ಗಾರೆ, ಕಲ್ಲುಗಳಿಂದ ನಿರ್ಮಾಣವಾಗಿದೆ. ನವರಂಗದಲ್ಲಿ ಒಂದು ವೀರಗಲ್ಲಿದೆ. ಪ್ರಸ್ತುತ ದೇವಾಲಯದ ಎತ್ತರ ಅಧಿಷ್ಠಾನ, ಭಿತ್ತಿ ಭಾಗ ಮಾತ್ರ ಉಳಿದಿವೆ. ಪ್ರಸ್ತರ, ಗ್ರೀವ ಮತ್ತು ಶಿಖರ ಹಾಳಾಗಿವೆ.

ದೇವಾಲಯದ ಹೆಸರು: ಈಶ್ವರ ದೇವಾಲಯ

ಊರು: ಭೂತಪುರ ಸ್ಥಳ: ಊರ ಪ್ರವೇಶದಲ್ಲಿ

ಕಾಲ: ಸು.೧೨ನೇ ಶತಮಾನ ಸ್ಥಿತಿ: ಜೀರ್ಣೋದ್ಧಾರಗೊಂಡಿದೆ.

ಈಶ್ವರ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ಶಿವಲಿಂಗವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದರ ದ್ವಾರಬಂದವು ಸರಳ ತ್ರಿಶಾಖ ಪಟ್ಟಿಕೆಯನ್ನೊಳಗೊಂಡಿದೆ. ಅಂತರಾಳದಲ್ಲಿ ನಂದಿ ಇದೆ. ಛಾವಣಿ ಚಪ್ಪಟೆಯಾಗಿದೆ (ಕ.ಸ.ಗೆ.ಕ.ಜಿ. ೧೯೯೭,ಪು.೭೪೭).

ದೇವಾಲಯದ ಹೆಸರು: ಮಲ್ಲಿಕಾರ್ಜುನ ದೇವಾಲಯ

ಊರು: ಭೂತಪುರ ಸ್ಥಳ: ಊರ ಹೊರಗೆ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ ಅಂಚಿನಲ್ಲಿದೆ.

ಮಲ್ಲಿಕಾರ್ಜುನ ಗುಡಿಯ ಗರ್ಭಗುಡಿಯಲ್ಲಿ ಸಪ್ತಾಶ್ವ ಸಾರಥಿ ಮತ್ತು ಅರುಣರಿರುವ ಆದಿತ್ಯ ಪೀಠವಿದೆ. ತೊಲೆಯ ಮೇಲೆ ಸಪ್ತಮಾತೃಕೆಯರ ಶಿಲ್ಪವಿದೆ (ಕ.ಸ.ಗೆ.ಕ.ಜಿ.೧೯೭೭, ಪು.೭೪೭). ಪ್ರಾರಂಭದಲ್ಲಿ ಸೂರ್ಯ ದೇವಾಲಯವಾಗಿದ್ದಂತೆ ತೋರುತ್ತದೆ.

ದೇವಾಲಯದ ಹೆಸರು: ವೀರಭದ್ರೇಶ್ವರ ದೇವಾಲಯ

ಊರು: ನಿಡಗುಂದ ಸ್ಥಳ: ಊರ ಮಧ್ಯ

ಕಾಲ: ಸು.೧೦ನೇ ಶತಮಾನ ಸ್ಥಿತಿ: ಜೀರ್ಣ

ವೀರಭದ್ರೇಶ್ವರ ಗುಡಿ ಗರ್ಭಗುಡಿ ಮತ್ತು ನವರಂಗವನ್ನೊಳಗೊಂಡಿದೆ. ಶಿವಲಿಂಗವಿದೆ. ನವರಂಗದ ಮೇಲ್ಭಾಗದಲ್ಲಿ ಆಕರ್ಷಕವಾದ ಗಾರೆ ಶಿಲ್ಪಗಳಿದ್ದು, ಮಿಥುನ ಶಿಲ್ಪಗಳಿವೆ. ನವರಂಗದಲ್ಲಿ ನಂದಿ ಮೂರ್ತಿಶಿಲ್ಪವಿದೆ (ಕ.ಸ.ಗೆ.ಕ.ಜಿ.೧೯೭೭,ಪು.೭೪೯). ದ್ರಾವಿಡ ಶೈಲಿಯ ಶಿಖರ ಕಂಠ, ಪ್ರಸ್ತರ, ಭಿತ್ತಿ ಮತ್ತು ಅಧಿಷ್ಠಾನವನ್ನೊಳಗೊಂಡಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ.

ದೇವಾಲಯದ ಹೆಸರು: ಬಂಕನಾಥ ದೇವಾಲಯ

ಊರು: ರಟ್ಕಲ್ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಮಧ್ಯಮ

ದೇವಾಲಯವು ಪೂರ್ವಾಭಿಮುಖವಾಗಿದೆ. ದ್ವಿಕೂಟ ದೇವಾಲಯವಾಗಿದ್ದ ಈ ದೇವಾಲಯದ ಪ್ರವೇಶದ ಬಲಕ್ಕಿರುವ ಗುಡಿಯ ಶಿಖರ ಹಾಳಾಗಿದೆ. ಕೇವಲ ಗರ್ಭಗುಡಿ ಮಾತ್ರ ಉಳಿದಿದೆ. ಎರಡು ಗರ್ಭಗೃಹಗಳ ದ್ವಾರ ಉತ್ತರಾಭಿಮುಖವಾಗಿವೆ. ಭಿತ್ತಿ, ಪ್ರಸ್ತರ, ಕಂಠ, ಶಿಖರ, ಸ್ತೂಪಿ ಹೊಂದಿದ ಷಡ್ವರ್ಗ ದೇವಾಲಯವಾಗಿದೆ. ಅಧಿಷ್ಠಾನವು ಉಪಾನ, ಜಗತಿ, ಪಟ್ಟಿಕೆ, ಕಪೋತ ವನ್ನೊಳಗೊಂಡಿದೆ. ಎತ್ತರದ ಬೀಟ್ (ಜಗತಿ) ಮೇಲೆ ನಿರ್ಮಿತ ಅಧಿಷ್ಠಾನ, ಭಿತ್ತಿಯಲ್ಲಿ ಪದ್ಮ, ಹೂಗಳು, ಹಂಸಗಳ ಪಟ್ಟಿಕೆಗಳಿಂದ ಅಲಂಕೃತವಾಗಿದೆ. ಶಿಖರ ಗಚ್ಚು, ಗಾರೆಯಿಂದ ನಿರ್ಮಿತ ವಾಗಿದ್ದು, ವೇಸರ ಶೈಲಿಯಲ್ಲಿದೆ. ಅಧಿಷ್ಠಾನ, ತ್ರಿಪಟ್ಟ ಕುಮುದ ಮತ್ತು ಪ್ರಸ್ತರ ಕಲ್ಲಿನಿಂದ ನಿರ್ಮಾಣ, ಶಿಖರಕ್ಕೆ ಮಾತ್ರ ಗಚ್ಚು ಗಾರೆ ಉಪಯೋಗ ಮಾಡಿದ್ದಾರೆ. ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಮೂರು ದಿಕ್ಕಿನಲ್ಲಿ ನವರಂಗಕ್ಕೆ ಹೋಗಲು ಮೂರು ದ್ವಾರಗಳಿವೆ.

ಗರ್ಭಗುಡಿ, ಅಂತರಾಳ, ನವರಂಗಗಳನ್ನೊಳಗೊಂಡಿದೆ. ಬಾಗಿಲವಾಡ ತ್ರಿಶಾಖಾಲಂಕೃತ ವಾಗಿದೆ. ಭುವನೇಶ್ವರಿ ಮತ್ತು ಅಷ್ಟದಿಕ್ಪಾಲಕರ ಫಲಕಗಳಿಂದ ಕೂಡಿದ ಮೇಲ್ಛಾವಣಿ ಇದೆ. ಮಕರ ತೋರಣ ಅಂತರಾಳದ ತೊಲೆಯಲ್ಲಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿವೆ. ಕಂಬಗಳು ಅಲಂಕೃತವಾಗಿವೆ. ದೇವಾಲಯದ ಹೊರ ಭಿತ್ತಿಯು ವಜ್ರಪಟ್ಟಿಕೆ ಫಲಕಗಳಿಂದ ಕೂಡಿದೆ ಮತ್ತು ನವರಂಗದಲ್ಲಿ ಕಕ್ಷಾಸನಗಳಿವೆ (ಕ.ಸ.ಗೆ.ಕ.ಜಿ.೧೯೭೭,ಪು.೭೬೯). ಗರ್ಭಗುಡಿಯಲ್ಲಿ ಎರಡು ಲಿಂಗಗಳಿವೆ. ಇನ್ನೊಂದು ಗರ್ಭಗುಡಿ ಪ್ರಸ್ತುತ ಖಾಲಿ ಇದೆ.

ದೇವಾಲಯದ ಹೆಸರು: ಮಲ್ಲಿಕಾರ್ಜುನ ದೇವಾಲಯ

ಊರು: ನಿಡಗುಂದ ಸ್ಥಳ: ಊರ ಹೊರಗೆ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ಕಪಾಳರ ಹೊಲದಲ್ಲಿರುವ ಕದಂಬನಾಗರ ಶಿಖರನ್ನೊಳಗೊಂಡಿದ್ದು, ಪ್ರಸ್ತುತ ದೇವಾಲಯದ ಗರ್ಭಗುಡಿ ಭಾಗ ಮಾತ್ರ ಉಳಿದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಬಾಗಿಲುವಾಡ ತ್ರಿಶಾಖಾ ಲಂಕೃತವಾಗಿದೆ. ಹಂಸಾವಳಿ ಕೆತ್ತನೆಯನ್ನೊಳಗೊಂಡಿರುವುದು ಇಲ್ಲಿನ ಇನ್ನೊಂದು ವೈಶಿಷ್ಟ್ಯತೆಯಾಗಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೩೯).

ದೇವಾಲಯದ ಹೆಸರು: ಈಶ್ವರ ದೇವಾಲಯ

ಊರು: ಮಿರ್‍ಯಾಣ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ಈಶ್ವರಲಿಂಗ ದೇವಾಲಯದ ಗರ್ಭಗುಡಿಯ ಬಾಗಿಲುವಾಡವು ಚತುರ್ ಶಾಖೆಯಲ್ಲಿದ್ದು ಹೂ ಬಳ್ಳಿಯಿಂದ ಅಲಂಕೃತಗೊಂಡಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ಲಲಾಟದ ಮೇಲ್ಭಾಗದಲ್ಲಿ ದಾನ ಶಾಸನವಿದೆ. ಅದರ ಮೇಲ್ಬಾಗದ ನಾಸಿ ಕೋಷ್ಠಗಳೆರಡರಲ್ಲಿ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯದ ಪ್ರವೇಶದ ಪ್ರಾಂಗಣದಲ್ಲಿ ಗಣಪತಿ ಮೂರ್ತಿಶಿಲ್ಪ ಮತ್ತು ಸಿಂಹ ಸ್ತಂಭ ಶಿಲ್ಪವಿದೆ.

ದೇವಾಲಯದ ಹೆಸರು: ಹರಿಹರ/ನಾಗಲಿಂಗೇಶ್ವರ ದೇವಾಲಯ

ಊರು: ಶಿರೋಳ್ಳಿ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಶಿಥಿಲ

ಕಲ್ಯಾಣ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಈ ದೇವಾಲಯವು ಶಾಸನೋಕ್ತ ಹರಿಹರ ದೇವಾಲಯವಾಗಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೮೦). ತ್ರಿಕೂಟ ದೇವಾಲಯ ವಾಗಿದ್ದು, ಇದರ ಎರಡು ಗರ್ಭಗುಡಿಗಳು ಎದುರು ಬದುರಾಗಿ ಮತ್ತೊಂದು ಅವುಗಳ ಪಕ್ಕದಲ್ಲಿದೆ. ಪಂಚ ಶಾಖಾಲಂಕೃತ ಬಾಗಿಲವಾಡವಿದೆ. ಹೂಬಳ್ಳಿಗಳಿಂದ ಬಾಗಿಲವಾಡ ಅಲಂಕೃತವಾಗಿದೆ. ಅಂತರಾಳವನ್ನೊಳಗೊಂಡಿದೆ. ನವರಂಗ ಹಾಳಾಗಿದೆ. ಭುವನೇಶ್ವರಿ, ಮೇಲ್ಛಾವಣಿ ಶಿಲ್ಪಗಳು ದೇವಾಲಯ ಪಕ್ಕದಲ್ಲಿ ಮುರಿದು ಬಿದ್ದಿವೆ. ಗರ್ಭಗುಡಿ ಬಾಗಿಲ ಬಲಭಾಗದ ಬಳಿ ಒಂದು ಶಾಸನ ಶಿಲ್ಪವಿದೆ. ಇದು ಹರಿಹರ ದೇವಾಲಯಕ್ಕೆ ನೀಡಿದ ದಾನವನ್ನು ಸೂಚಿಸುತ್ತದೆ. ಉಳಿದೆರಡು ಗರ್ಭಗುಡಿ ಶಿಥಿಲವಾಗಿವೆ. ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದೆ.

ದೇವಾಲಯದ ಹೆಸರು: ಶಂಭುಲಿಂಗ ಗುಡಿ

ಊರು: ಸುಲೇಪೇಟೆ ಸ್ಥಳ: ಒಕ್ಕಲಿಗರ ಓಣಿ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ ಭಾಗಗಳಿದ್ದು ಶಿಖರ ಹಾಳಾಗಿದೆ. ಎತ್ತರವಾದ ಜಗತಿಯ ಮೇಲೆ ಈ ದೇವಾಲಯ ನಿರ್ಮಾಣವಾಗಿದೆ. ಇದು ತ್ರಿಕೂಟ ದೇವಾಲಯವಾಗಿದೆ. ಬಹು ಕೋನಾಕಾರ ತಳವಿನ್ಯಾಸವನ್ನೊಳಗೊಂಡಿದೆ.

ಮೂರು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನೊಳಗೊಂಡಿದೆ. ಇದರ ಮುಂದಿನ ರಂಗಮಂಟಪ ಹಾಳಾಗಿದೆ. ಗರ್ಭಗೃಹಗಳು ಪ್ರಸ್ತುತ ಖಾಲಿಯಿವೆ. ಪ್ರಧಾನ ಗರ್ಭಗೃಹದ ತೀರ್ಥಂಕರ ಪೀಠ ಮಾತ್ರ ಉಳಿದಿದೆ. ಮತ್ತು ಇಲ್ಲಿ ಶಿವಲಿಂಗ ನಂತರ ಪ್ರತಿಷ್ಠಾಪಿಸಲಾಗಿದೆ. ಇಲ್ಲಿಯ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಲಲಾಟದಲ್ಲಿ ಜಿನಬಿಂಬಗಳ ಕಿರುಕೆತ್ತನೆಗಳಿವೆ. ನವರಂಗ ಕಂಬಗಳು ಅಲಂಕೃತವಾಗಿ ಕೆತ್ತಲ್ಪಟ್ಟಿವೆ. ನವರಂಗದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮುಕ್ಕಾಗಿರುವ ಪದ್ಮಾಸೀನ ಶಿಲ್ಪವಿದೆ. ನವರಂಗಕ್ಕೆ ಹೋಗುವ ದ್ವಾರ ಪಂಚಶಾಖಾಲಂಕೃತವಾಗಿದೆ. ಜಿನ ಬಿಂಬ ಹೊಂದಿದ ಲಲಾಟವಿದೆ (ಕ.ಸ.ಗೆ.ಗು.ಜಿ.೧೯೯೭,ಪು.೭೮೯). ನವರಂಗದ ಮೇಲ್ಛಾವಣಿಯ ಮೇಲೆ ಭುವನೇಶ್ವರಿ ಕೆತ್ತಲ್ಪಟ್ಟಿದೆ. ಆರಂಭದಲ್ಲಿ ಜೈನ ದೇವಾಲಯವಾಗಿತ್ತು. ನಂತರ ಶೈವ ಪ್ರಭಾವದಿಂದ ಶೈವ ದೇವಾಲಯವಾಗಿ ಮಾರ್ಪಡಿಸಲ್ಪಟ್ಟಿದೆ. ಚಾಲುಕ್ಯ ಶೈಲಿ ಸ್ತಂಭಗಳನ್ನು ಹೊಂದಿದೆ. ಅದರ ಕೆಳಗೆ ನಂದಿ ಶಿಲ್ಪವಿದೆ. ಸ್ತಂಭಗಳು ವೃತ್ತಾಕಾರ ಮತ್ತು ತರಂಗಬೋದಿಗೆಗಳಿಂದ ಕೂಡಿವೆ. ಎತ್ತರದ ಜಗತಿಯ ಮೇಲೆ ದೇವಾಲಯ ಕಟ್ಟಲ್ಪಟ್ಟಿದೆ. ಹೊರಬಾಗಿಲು ಪಂಚ ಶಾಖಾಲಂಕೃತವಾಗಿದೆ. ಶೈವ ದ್ವಾರಪಾಲಕರು, ದೇವಕನ್ಯೆಯರು ಮತ್ತು ಚಾಮರಧಾರಿಗಳಿವೆ.

ದೇವಾಲಯದ ಹೆಸರು: ಈಶ್ವರ ಗುಡಿ

ಊರು: ಸುಲೇಪೇಟೆ ಸ್ಥಳ: ಊರ ಮಧ್ಯ

ಕಾಲ: ಸು.೧೦ನೇ ಶತಮಾನ ಸ್ಥಿತಿ: ಶಿಥಿಲ

ಅಂತರಾಳದ ಸ್ತಂಭಗಳಲ್ಲಿ ಒಂದೊಂದು ಮಾಲೆಯೊಳಗೆ ಒಂದೊಂದು ಉಬ್ಬುಶಿಲ್ಪಗಳಿವೆ. ಮಧ್ಯ ಸ್ತಂಭಗಳು ದಶಾಷ್ಟಕೋನ, ವಜ್ರಾಲಂಕರಣೆ, ವೃತ್ತಬೋದಿಗೆ, ಹೂ ಬಳ್ಳಿಗಳ ಅಲಂಕರಣೆಗಳಿಂದ ಕೂಡಿದೆ. ಸ್ತಂಭಗಳು ರಾಷ್ಟ್ರಕೂಟರ ಶೈಲಿಯಲ್ಲಿವೆ. ಬಾಗಿಲವಾಡದ ತಳಭಾಗದಲ್ಲಿ ಚಾಮರಧಾರಿಗಳು, ಭಕ್ತ ಮತ್ತು ಶೈವ ದ್ವಾರಪಾಲಕರ ಶಿಲ್ಪಗಳಿವೆ. ಚತುರ್ಷಾಶಾಖಲಂಕೃತ ಬಾಗಿಲವಾಡವಿದೆ. ಇದರಲ್ಲಿ ಗಂಧರ್ವ ಶಿಲ್ಪ, ಹೂದಳ, ಕುಡ್ಯಸ್ತಂಭ ಹೂಬಳ್ಳಿಗಳ ಶಿಲ್ಪಗಳಿವೆ.

ಎತ್ತರವಾದ ಜಗತಿ ಮೇಲೆ ಕಟ್ಟಲ್ಪಟ್ಟ ಈಶ್ವರ ದೇವಾಲಯದಲ್ಲಿ ಅಧಿಷ್ಠಾನ, ಭಿತ್ತಿ ಮಾತ್ರ ಪ್ರಸ್ತುತ ಉಳಿದಿವೆ. ಗರ್ಭಗೃಹ ಅಂತರಾಳ ಭಾಗ ಮಾತ್ರ ತಿರಸ್ಮುಖದಲ್ಲಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಪಂಚ ಶಾಖಾಲಂಕೃತ ಬಾಗಿಲವಾಡ ಹಂಸಾವಳಿಯ ಅಲಂಕರಣೆಯಿಂದ ಕೂಡಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೭೯). ಶೈವ ದ್ವಾರಪಾಲಕರ ಶಿಲ್ಪ ಬಾಗಿಲವಾಡದ ತಳ ಭಾಗದಲ್ಲಿವೆ. ದೇವಾಲಯವು ಬಿಟ್, ಉಪಾನ, ಅಧಿಷ್ಠನದಲ್ಲಿ ಉಪಾನ, ಗಳ, ಕಪೋತ, ಕುಮುದಾಕಾರ ಕಪೋತಗಳನ್ನೊಳಗೊಂಡಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ. ಗಳಭಾಗದಲ್ಲಿ ಅಲಂಕರಣೆ ಶಿಲ್ಪಗಳಿವೆ. ದೇವಾಲಯದ ಮೇಲ್ಭಾಗದಲ್ಲಿ ಪ್ರಸ್ತರ, ಕಪೋತ ಗಳಭಾಗದಲ್ಲಿ ಅಲಂಕರಣೆ ಮತ್ತು ಕಂಠ, ಪಂಜರಗಳನ್ನೊಳಗೊಂಡಿದೆ. ಪ್ರಸ್ತುತ ಶಿಖರ ಹಾಳಾಗಿದೆ. ಕಂಠದ ಕರ್ಣಭಾಗದಲ್ಲಿ ಸಿಂಹ ಮುಖವಿದೆ.

ದೇವಾಲಯದ ಹೆಸರು: ಶಂಕರಲಿಂಗ ಗುಡಿ

ಊರು: ಸುಲೇಪೇಟೆ　　　　ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ　　　　ಸ್ಥಿತಿ: ಶಿಥಿಲ

ಸೋಮಸೂತ್ರ ಲಿಂಗವಿರುವ ಶಂಕರಲಿಂಗ ಗುಡಿ ಗರ್ಭಗೃಹ ಮತ್ತು ಅಂತರಾಳಗಳಷ್ಟೇ ಈಗ ಉಳಿದಿವೆ. ವಿಶಾಲ ಗರ್ಭಗೃಹವಿದೆ. ಷಡ್ ಶಾಖಾಲಂಕೃತ ಬಾಗಿಲವಾಡವಿದೆ. ಮೇಲೆ ಹಂಸಾವಳಿ ಅಲಂಕಾರಗಳಿವೆ. ಇದರ ಮೇಲೆ ಮಾವಿನ ತೋರಣ ಗಮನಾರ್ಹವಾಗಿದೆ. ತೆರೆದ ಅಂತರಾಳ ಮತ್ತು ಇದರ ತೊಲೆ ಮೇಲೆ ಮಕರ ತೋರಣಗಳ ಅಲಂಕರಣೆಯಿಂದ ಕೂಡಿದೆ. ಭಿತ್ತಿ ಭಾಗದಲ್ಲಿ ನವಿಲು, ಮಿಥುನ ಶಿಲ್ಪಗಳ ಕಿರುಕೆತ್ತನೆಗಳಿವೆ (ಕ.ಸ.ಗೆ.ಕ.ಜಿ.೧೯೯೭,ಪು.೭೭೯).

ಅಧಿಷ್ಠಾನ ಭಿತ್ತಿಯನ್ನೊಳಗೊಂಡಿದೆ. ದಶಾಷ್ಠಕೋನಾಕೃತಿ ಸ್ತಂಭಗಳಿವೆ. ಸ್ತಂಭ ರಾಷ್ಟ್ರಕೂಟ ಶೈಲಿಯಲ್ಲಿದೆ. ಭಿತ್ತಿಯ ಭಾಗದಲ್ಲಿ ಕುಡ್ಯ ಸ್ತಂಭಗಳಿವೆ. ಕುಡ್ಯಸ್ತಂಭದ ಬೋದಿಗೆ ಮೇಲೆ ಪ್ರಸ್ತರವಿದೆ. ಮೇಲ್ಛಾವಣಿ ಮತ್ತು ಶಿಖರ ಹಾಳಾಗಿದೆ. ಅಂತರಾಳದಲ್ಲಿ ಬೃಹತ್ ನಂದಿಯ ಮೂರ್ತಿಶಿಲ್ಪವಿದೆ. ಬಾಗಿಲವಾಡದ ಕೆಳಸ್ತರದಲ್ಲಿ ಗಂಗೆ ಯಮುನೆ, ಭಕ್ತ, ಚಾಮರಧಾರಿ ಮತ್ತು ಶೈವ ದ್ವಾರಪಾಲಕರ ಶಿಲ್ಪಗಳಿವೆ.

ದೇವಾಲಯದ ಹೆಸರು: ರಾಮಲಿಂಗೇಶ್ವರ ಗುಡಿ

ಊರು: ರುಮ್ಮನಗೂಡು　　　　ಸ್ಥಳ: ಊರ ಹೊರಗೆ

ಕಾಲ: ಸು.೧೨ನೇ ಶತಮಾನ　　　　ಸ್ಥಿತಿ: ಅವಸಾನ

ರಾಮಲಿಂಗೇಶ್ವರ ಗುಡಿಯು ದ್ವಿಕೂಟವಾಗಿದ್ದು, ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಗರ್ಭಗೃಹಗಳಿವೆ. ತೆರೆದ ಅಂತರಾಳ ಮತ್ತು ನವರಂಗವಿದೆ. ಎರಡು ಗರ್ಭಗುಡಿಯಲ್ಲಿ

ಶಿವಲಿಂಗಗಳಿವೆ. ಅವುಗಳಲ್ಲಿ ಒಂದು ಚಂದ್ರಶಿಲೆಯದ್ದಾಗಿದೆ. ನವರಂಗದಲ್ಲಿ ವಿಷ್ಣು ಹಾಗೂ ಕಾಳಿಯ ಶಿಲ್ಪಗಳಿವೆ (ಕ.ಸ.ಗೆ.ಕ.ಜಿ. ೧೯೯೭, ಪು.೭೭೧). ಶೈವ ದ್ವಾರಪಾಲಕರ ಶಿಲ್ಪಗಳಿವೆ. ದೇವಾಲಯದ ಎಡಕ್ಕೆ ಪುಷ್ಕರಣಿಯಿದೆ. ಹೊರಭಿತ್ತಿ ಭಾಗದಲ್ಲಿ ಮಾಧವ, ವೈಷ್ಣವ ಶಿಲ್ಪಗಳಿವೆ.

ದೇವಾಲಯದ ಹೆಸರು: ಮಲ್ಲಿಕಾರ್ಜುನ ದೇವಾಲಯ

ಊರು: ಕರಕ್‌ಮುಕ್ಕಿ ಸ್ಥಳ: ಊರ ಒಳಗೆ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ಮಲ್ಲಿಕಾರ್ಜುನ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿದೆ. ಪ್ರಸ್ತುತ ಗರ್ಭಗುಡಿ, ಅಂತರಾಳ, ದ್ವಿಶಾಖಾಲಂಕೃತ ಬಾಗಿಲವಾಡ ಮತ್ತು ನವರಂಗವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ (ಕ.ಸ.ಗೆ.ಕ.ಜಿ.೧೯೯೭,ಪು.೬೯೭). ದೇವಾಲಯವು ಅಧಿಷ್ಠಾನ, ಭಿತ್ತಿ ಭಾಗವನ್ನೊಳಗೊಂಡಿದೆ. ದ್ವಿಶಾಖಾಲಂಕೃತ ಬಾಗಿಲವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪವಿದೆ ಮತ್ತು ವಜ್ರಾಲಂಕರಣೆಯಿದೆ. ಲಲಾಟದ ಮೇಲೆ ಗಜಲಕ್ಷ್ಮಿ ಬಿಂಬವಿದೆ. ಕದಂಬ ನಾಗರ ಶೈಲಿಯ ದೇವಾಲಯ ಇದಾಗಿದೆ.

ದೇವಾಲಯದ ಹೆಸರು: ಈಶ್ವರ ದೇವಾಲಯ

ಊರು: ಹುಲುಸುಗೂಡು ಸ್ಥಳ: ಊರೊಳಗೆ

ಕಾಲ: ಸು.೧೧-೧೨ನೇ ಶತಮಾನ ಸ್ಥಿತಿ: ಅವಸಾನ

ಹುಲುಸುಗೂಡಿನ ಈಶ್ವರ ದೇವಾಲಯದಲ್ಲಿ ಗರ್ಭಗುಡಿ ಅಂತರಾಳ ಮಾತ್ರ ಉಳಿದಿವೆ. ದೇವಾಲಯ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ಅಂತರಾಳದಲ್ಲಿ ಅಲಂಕೃತ ಕಂಬಗಳಿವೆ. ಭಿತ್ತಿ ಭಾಗವು ಕುಡ್ಯ ಸ್ತಂಭಗಳನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಚಿಕ್ಕದಾದ ಶಿವಲಿಂಗವಿದೆ. ದೇವಾಲಯ ಅಧಿಷ್ಠಾನ, ಭಿತ್ತಿ, ಪ್ರಸ್ತರವನ್ನೊಳಗೊಂಡಿದೆ. ಇಲ್ಲಿನ ಗರ್ಭಗುಡಿಯ ಬಾಗಿಲವಾಡ ದ್ವಿಶಾಖಾಲಂಕೃತವಾಗಿದೆ. ಇದರ ಕೆಳಭಾಗದಲ್ಲಿ ಚಾಮರಧಾರಿ ಮತ್ತು ಶೈವ ದ್ವಾರಪಾಲಕರ ಶಿಲ್ಪವಿದೆ. ಹೂಬಳ್ಳಿ ಅಲಂಕೃತ ಬಾಗಿಲವಾಡವಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ಇದರ ಮೇಲ್ಭಾಗದ ತೊಲೆ ಮೇಲೆ ಕದಂಬ ನಾಗರ ಶೈಲಿಯ ಶಿಖರದ ಮಾದರಿಯಲ್ಲಿದೆ.

ದೇವಾಲಯದ ಹೆಸರು: ವೀರಭದ್ರೇಶ್ವರ ಗುಡಿ

ಊರು: ಸುಲೇಪೇಟೆ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಜೀರ್ಣ

ವೀರಭದ್ರೇಶ್ವರ ಗುಡಿ ದ್ವಿಕೂಟ ದೇವಾಲಯವಾಗಿದ್ದು ಗರ್ಭಗೃಹದ ಒಂದರಲ್ಲಿ ಶಿವಲಿಂಗ, ಇನ್ನೊಂದರಲ್ಲಿ ವೀರಭದ್ರೇಶ್ವರ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಬಿಂಬವಿದೆ. ನವರಂಗ ದೇವಕೋಷ್ಠಗಳಲ್ಲಿ ಸರಸ್ವತಿ, ಮಹಿಷ ಮರ್ದಿನಿ ಶಿಲ್ಪಗಳಿವೆ (ಕ.ಸ.ಗೆ.ಕ.ಜಿ.೧೯೯೭, ಪು.೭೭೯). ಇಲ್ಲಿಯ ಕಂಬಗಳು ಅಲಂಕೃತ ಮತ್ತೆ ಕೆಲವು ನಿರಾಡಂಬರವಾಗಿವೆ. ಒಳಭಿತ್ತಿಯಲ್ಲಿ ಅರ್ಧ ಸ್ತಂಭ (ಕುಡ್ಯ ಸ್ತಂಭ)ಗಳು ಅಲಂಕೃತ ಶಿಲ್ಪಗಳಿಂದ ಕೂಡಿವೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ, ಒಳಭಾಗ ಗರ್ಭಗೃಹ, ಅಂತರಾಳ, ನವರಂಗವನ್ನೊಳಗೊಂಡಿದೆ. ವಿಶಾಲ ಪ್ರಾಂಗಣದಲ್ಲಿ ನಿರ್ಮಿಸಲ್ಪಟ್ಟಿದೆ. ನಕ್ಷತ್ರ ಭಿತ್ತಿಯಿಂದ ಕೂಡಿದ ದ್ರಾವಿಡ ಶೈಲಿಯ ದೇವಾಲಯವಾಗಿದೆ. ದುಂಡನೆಯ ಶಿಖರ ಮತ್ತು ಸ್ತೂಪಿ ಇದೆ. ವೃತ್ತಾಕಾರದಲ್ಲಿ ದೇವಾಲಯ ನಿರ್ಮಾಣಗೊಂಡಿದೆ. ಶಿಖರ, ಕಪೋತ, ಪ್ರಸ್ತರಗಳಲ್ಲಿ ಜಾಲಾಂಧ್ರಗಳಿವೆ.

ದೇವಾಲಯದ ಹೆಸರು: ಪಾಪನಾಥ ದೇವಾಲಯ

ಊರು: ಮಿರ್ಯಾಣ ಸ್ಥಳ: ತಾಂಡೂರು ರಸ್ತೆಯ ಬಳಿ(ಎಡಕ್ಕೆ)

ಕಾಲ: ಸು.೧೦ನೇ ಶತಮಾನ ಸ್ಥಿತಿ: ಜೀರ್ಣ

ದೇವಾಲಯವು ಪೂರ್ವಾಭಿಮುಖವಾಗಿದೆ. ಪಾಪನಾಥ ದೇವಾಲಯದಲ್ಲಿ ಗರ್ಭಗುಡಿ, ಅಂತರಾಳ, ತ್ರಿದಳ ತರಂಗ ಬೋದಿಗೆಯ ನವರಂಗದ ಸ್ತಂಭಗಳು ಇವೆ. ಕೀರ್ತಿಮುಖ, ನೃತ್ಯ ಮಾಡುತ್ತಿರುವ ಶಿಲ್ಪಗಳು, ಪಂಜರಗಳು, ಹೂಬಳ್ಳಿಗಳಿಂದ ಅಲಂಕೃತವಾಗಿವೆ. ಊರ್ಧ್ವಮುಖವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಂಠ ಮತ್ತು ಶಿಖರವನ್ನೊಳಗೊಂಡಿದೆ. ದೇವಾಲಯ ಪ್ರಾಂಗಣದಲ್ಲಿ ನಾಗ ಶಿಲ್ಪಗಳು, ಕುಂಭ ಕಲಶವಿದೆ. ಚತುರ್ ಶಾಖಾಲಂಕೃತ ಬಾಗಿಲವಾಡವಿದೆ. ದೇವಕೋಷ್ಠಗಳಲ್ಲಿ ಸೂರ್ಯ, ಗಣಪತಿ ಮತ್ತು ಮಹಿಷ ಮರ್ದಿನಿಯ ಶಿಲ್ಪಗಳಿವೆ. ಪಂಚ ಶಾಖಾಲಂಕೃತ ಬಾಗಿಲವಾಡವಿದೆ (ಕ.ಸ.ಗೆ.ಕ.ಜಿ.೧೯೯೭, ಪು.೭೫೭).

ದೇವಾಲಯದ ಹೆಸರು: ಈಶ್ವರ ದೇವಾಲಯ

ಊರು: ಮಿರ್ಯಾಣ ಸ್ಥಳ: ಊರ ಹೊರಭಾಗ

ಕಾಲ: ಸು.೧೦ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯವು ಉತ್ತರಾಭಿಮುಖವಾಗಿದೆ. ಈಶ್ವರ ದೇವಾಲಯ ಪಂಚಶಾಖೆಯ ಬಾಗಿಲ ವಾಡವನ್ನೊಳಗೊಂಡಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೫೭). ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಅಂತರಾಳದ ಭಾಗದ ಭಿತ್ತಿಯಲ್ಲಿ ಕುಡ್ಯ ಸ್ತಂಭಗಳಿವೆ. ಅಂತರಾಳದ ಕಂಬಗಳು ಅಲಂಕೃತವಾಗಿದ್ದು ಮುತ್ತಿನ ಮಾಲೆಯಂತೆ ಕೆತ್ತಿದ್ದು ಅದರೊಳಗೆ ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ತೆರೆದ ಅಂತರಾಳದ ತೊಲೆಯ ಮೇಲೆ ಮಕರ ತೋರಣವಿದೆ. ಕಮಲಗಳನ್ನು ಇಳಿಬಿಟ್ಟಂತಿದೆ. ಗಿರಿಜಾ ಕಲ್ಯಾಣದ ಶಿಲ್ಪಗಳು ಈ ತೋರಣದಲ್ಲಿವೆ. ಕೆಳ ತೋರಣ ಮಕರ ಮತ್ತು ಅದರ ನಾಲಿಗೆ ಮೇಲೆ ಎಡಭಾಗಕ್ಕೆ ವಾದ್ಯಗಾರರು, ಗಿರಿಜಾ ಕಲ್ಯಾಣ, ನಟರಾಜ, ಭೃಂಗಿ, ಅಂಧಕಾಸುರ ವಧಿಸುವ ಶಿಲ್ಪವಿದೆ. ಇದರ ಮೇಲಿನ ಪಟ್ಟಿಕೆಯಲ್ಲಿ ಗಣಗಳ ಸಾಲುಗಳಿವೆ. ಬಾಗಿಲವಾಡ ಪಂಚ ಶಾಖಾವಿದ್ದು ಅದರ ಮಧ್ಯಭಾಗದಲ್ಲಿ ಸ್ತಂಭಗಳಿವೆ.

ದೇವಾಲಯದ ಹೆಸರು: ತ್ರಿಕೂಟೇಶ್ವರ (ಮೂರು ದೇವರ ಗುಡಿ)

ಊರು: ಮಿರ್ರ್ಯಾಣ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ಸ್ಥಿತಿ: ಅವಸಾನ

ದೇವಾಲಯವು ಉತ್ತರ ಮತ್ತು ದಕ್ಷಿಣಾಭಿಮುಖವಾಗಿದೆ. ಕದಂಬ ನಾಗರ ಶೈಲಿಯ ಶಿಖರ ಹೊಂದಿದ ತ್ರಿಕೂಟ ದೇವಾಲಯ ಶಿಖರವನ್ನೊಳಗೊಂಡಿದೆ. ಇವು ಮಂಟಪ ಶೈಲಿಯ ದೇವಾಲಯಗಳಾಗಿದ್ದು, ಮಧ್ಯದ ಗುಡಿ ಇಳಿಜಾರು ಛಾವಣಿಯಿಂದ ಕೂಡಿದೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗಳ, ಗ್ರೀವ ಮತ್ತು ಶಿಖರವನ್ನೊಳಗೊಂಡಿರುವುದು ವಿಶೇಷ ಲಕ್ಷಣಗಳಾಗಿವೆ.

ಮೂರು ಗರ್ಭಗುಡಿ ಪ್ರತ್ಯೇಕವಾಗಿ ಕಟ್ಟಲ್ಪಟ್ಟಿವೆ. ಎರಡು ಗರ್ಭಗುಡಿಗಳು ಪಶ್ಚಿಮಾಭಿಮುಖ ಮತ್ತೊಂದು ಪೂರ್ವಾಭಿಮುಖವಾಗಿದೆ ಎಂದು ಗೆಜೆಟಿಯರ್‌ನಲ್ಲಿದೆ (ಕ.ಸ.ಗೆ.ಕ.ಜಿ.೧೯೯೭, ಪು.೭೫೭). ಆದರೆ ಒಂದು ದಕ್ಷಿಣಾಭಿಮುಖ ಮತ್ತು ಉಳಿದೆರಡು ಉತ್ತರಾಭಿಮುಖವಾಗಿವೆ. ಒಂದು ಗರ್ಭಗುಡಿಯ ಎದುರುಗಡೆ ನಂದಿ ಶಿಲ್ಪವಿದೆ. ಅದರ ಬಾಗಿಲವಾಡಕ್ಕೆ ಗಂಗೆ ಮತ್ತು ಯಮುನೆಯರ ಎತ್ತರವಾದ ಶಿಲ್ಪಗಳಿವೆ. ತ್ರಿಶಾಖೆಯ ಬಾಗಿಲವಾಡವಿದೆ. ಬಾಗಿಲ ಇಕ್ಕೆಲಗಳಲ್ಲಿ ತ್ರುಟಿತ ಎರಡು ವೀರಗಲ್ಲುಗಳಿದ್ದು, ಬ್ರಹ್ಮಸೂತ್ರ ಲಿಂಗವಿದೆ. ಇದು ಅಧಿಷ್ಠಾನ, ಭಿತ್ತಿ, ವೇದಿ, ಘಂಟಾ, ಗಳ, ಶಿಖರವನ್ನೊಳಗೊಂಡಿದೆ. ಮೇಲ್ಗಡೆಯ ಕಪೋತದಲ್ಲಿ ಹಂಸಗಳ ಸಾಲಿದೆ (ಗು.ಜಿ.ಇ.ಮತ್ತು ಪು.,೨೦೦೭,ಪು.೩೫೦). ಈ ದೇವಾಲಯದ ಪಕ್ಕಕ್ಕೆ ಇನ್ನೆರಡು ಗರ್ಭಗುಡಿಗಳಿವೆ.

ಗರ್ಭಗುಡಿ ಉತ್ತರಾಭಿಮುಖವಾಗಿದ್ದು, ನವರಂಗ, ಅಂತರಾಳ ಮತ್ತು ಗರ್ಭಗುಡಿಯನ್ನೊಳಗೊಂಡಿದೆ. ಅಂತರಾಳದ ಕಂಬಗಳ ಮೇಲೆ ಮಕರ ತೋರಣವಿದೆ. ದಕ್ಷಿಣಾಭಿಮುಖ ದ್ವಾರ ಹೊಂದಿರುವ ಮತ್ತೊಂದು ಗರ್ಭಗುಡಿ ಬಾಗಿಲ ಬಳಿ ನಾಗದೇವತೆ ಶಿಲ್ಪವಿದೆ. ಎದುರುಗಡೆ ತ್ರುಟಿತ ನಂದಿ ಶಿಲ್ಪಗಳಿವೆ. ಇದು ಕದಂಬ ನಾಗರ ಶೈಲಿಯಲ್ಲಿದೆ.

ಬ. ವೈಷ್ಣವ ದೇವಾಲಯಗಳು

ದೇವಾಲಯದ ಹೆಸರು: ನವಕೋಟಿ ನಾರಾಯಣನ ಗುಡಿ

ಊರು: ನಿಡಗುಂದ   ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ   ಸ್ಥಿತಿ: ಜೀರ್ಣಾವಸ್ಥೆ

ನವಕೋಟಿ ನಾರಾಯಣ ದೇವಾಲಯದ ಮುಖ್ಯ ದ್ವಾರದ ಇಕ್ಕೆಲುಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಎಡಭಾಗಕ್ಕೆ ಪಾರ್ಶ್ವನಾಥ, ಲಕ್ಷ್ಮಿನರಸಿಂಹ, ಸೂರ್ಯನ ಮೂರ್ತಿಶಿಲ್ಪಗಳಿವೆ. ಹೊರ ಪ್ರವೇಶ ದ್ವಾರದ ಗೋಡೆಗಳ ಭಿತ್ತಿ ಭಾಗದಲ್ಲಿ ಕುಡ್ಯ ಸ್ತಂಭಗಳಿವೆ. ನಂತರ ಪ್ರವೇಶದ ಒಳಭಾಗದ ಪ್ರಾಂಗಣದ ಬಲಕ್ಕೆ ನವಕೋಟಿ ನಾರಾಯಣನ ಗುಡಿ ಇದೆ. ಹಿಂದೆ ಇದು ಸೂರ್ಯ ದೇವಾಲಯವಾಗಿತ್ತು (ಕ.ಸ.ಗೆ.ಕ.ಜಿ.೧೯೯೭,ಪು.೭೩೯). ಇದು ದ್ವಿಕೂಟ ದೇವಾಲಯವಾಗಿದೆ. ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ ಭಾಗಗಳನ್ನು ಒಳಗೊಂಡಿದ್ದು, ದ್ರಾವಿಡ ವಿಮಾನ ಮಾದರಿ ಶೈಲಿಯಲ್ಲಿ ಕೆತ್ತಲ್ಪಟ್ಟಿದೆ. ಇದೊಂದು ಷಡ್ವರ್ಗ ದೇವಾಲಯವಾಗಿದೆ.

ಅಧಿಷ್ಠಾನವು ಉಪಾನ, ಜಗತಿಯಿಂದ ಕೂಡಿದೆ. ಭಿತ್ತಿ ಭಾಗವು ಕುಡ್ಯ ಸ್ತಂಭ ಮತ್ತು ಅದರ ಮೇಲೆ ವೃತ್ತಾಕಾರ ಬೋದಿಗೆಗಳನ್ನೊಳಗೊಂಡಿದೆ. ಪ್ರಸ್ತರವು ಉತ್ತರ ವಾಜನ ಮತ್ತು ವಲ್ಲಭವನ್ನೊಳಗೊಂಡಿದೆ. ಗ್ರೀವ ಅಥವಾ ಕಂಠ ಭಾಗದ ಮೇಲೆ ಆಮಲಕ ಮಾದರಿಯ ಶಿಖರವಿದೆ. ಇದು ಮುಚ್ಚಿದ ಬೊಗಣಿಯಾಕಾರದಲ್ಲಿದ್ದು ಅದರ ಮೇಲೆ ಸ್ತೂಪಿ ಇದೆ. ದೇವಾಲಯದ ಮುಖ್ಯ ದ್ವಾರದ ಎದುರುಗಡೆ ಹಾಳಾದ ದೇಗುಲವಿದೆ. ಇದು ಎಂಟು ಸ್ತಂಭಗಳ ಮೇಲೆ ಸೂಕ್ಷ್ಮ ಶಿಲ್ಪಗಳ ಕೆತ್ತನೆಯಿವೆ.

ವೀರಭದ್ರೇಶ್ವರ ಗುಡಿಯ ಪಕ್ಕದಲ್ಲಿರುವ ಈ ದೇವಾಲಯ ಮುಖಮಂಟಪ, ನವರಂಗ, ಅಂತರಾಳ (ಅರ್ಧಮಂಟಪ) ಮತ್ತು ಗರ್ಭಗುಡಿಯನ್ನೊಳಗೊಂಡಿದೆ. ಈ ಗರ್ಭಗುಡಿಯ ಎದುರಿಗೆ ಇನ್ನೊಂದು ಗರ್ಭಗುಡಿ ಇದೆ. ಮುಖಮಂಟಪ ಕಂಬಗಳು ಸರಳವಾಗಿವೆ. ನವರಂಗಕ್ಕೆ ಹೋಗುವ ಪ್ರವೇಶ ದ್ವಾರದ ಬಾಗಿಲವಾಡ ಪಂಚ ಶಾಖಾಲಂಕೃತವಾಗಿದೆ. ಲಲಾಟ ಗಜಲಕ್ಷ್ಮಿಯಿಂದ ಕೂಡಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು ಶಿವಲಿಂಗ ಮತ್ತು ಭೈರವರ ಶಿಲ್ಪಗಳಿವೆ (ಗು.ಜಿ.ಇ.ಮತ್ತುಪು.,೨೦೦೭,ಪು.೩೭೬). ನವರಂಗದ ಮೊದಲ ಕಂಬದ ಮೇಲೆ ಅಕಾಲವರ್ಷನ ಕ್ರಿ.ಶ. ೯೩೯ರ ಅಪೂರ್ಣ ಶಾಸನವಿದೆ. ಅಂತರಾಳದ (ಅರ್ಧ ಮಂಟಪ) ಎರಡು ಸ್ತಂಭಗಳ ಮೇಲೆ ಮಕರ ತೋರಣವಿದೆ. ಈ ಸ್ತಂಭಗಳು ರಾಷ್ಟ್ರಕೂಟರ ಶೈಲಿಯದ್ದಾಗಿದೆ. ಗರ್ಭಗುಡಿಯ ಬಾಗಿಲವಾಡ ಚತುರ್ ಶಾಖಾಲಂಕೃತವಾಗಿದೆ. ಇದು ಜೋಡಿ ಹಂಸಾವಳಿ ಪಟ್ಟಿಕೆಯನ್ನೊಳಗೊಂಡಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೩೯).

ಅಲ್ಲದೆ, ಹೂಬಳ್ಳಿಯಿಂದ ಅಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಬಾಗಿಲವಾಡದ ತಳದಲ್ಲಿ ವೈಷ್ಣವ ದ್ವಾರಪಾಲಕರು (ಜಯ, ವಿಜಯ) ಮೂರ್ತಿಶಿಲ್ಪಗಳಿವೆ. ಗರ್ಭಗುಡಿಯೊಳಗೆ ನಾರಾಯಣನ ಮೂರ್ತಿ ಇದೆ. ಇನ್ನೊಂದು ಗರ್ಭಗುಡಿಯಲ್ಲಿ ಶಿವಲಿಂಗವಿದೆ.

ನವರಂಗದಲ್ಲಿ ಸೂರ್ಯನ ಮೂರ್ತಿಶಿಲ್ಪ ಮತ್ತು ಮುಖಮಂಟಪದಲ್ಲಿ ಪ್ರಸ್ತುತ ಹಾಳಾಗಿರುವ ನಂದಿ ಶಿಲ್ಪವಿದೆ. ಕಲ್ಲು, ಗಾರೆಗಳಿಂದ ದೇವಾಲಯ ನಿರ್ಮಾಣವಾಗಿದೆ. ಶಿಖರವು ಕಲ್ಲಿನಿಂದ ರಚಿತವಾಗಿದೆ. ಮುಖಮಂಟಪದ ದೇವಕೋಷ್ಠದಲ್ಲಿ ವಿಷ್ಣುವಿನ ಶಿಲ್ಪವಿದೆ.

ದೇವಾಲಯದ ಹೆಸರು: ವೆಂಕಟೇಶ್ವರ ದೇವಾಲಯ

ಊರು: ರಾಣಾಪುರ ಸ್ಥಳ: ಊರೊಳಗೆ

ಕಾಲ: ಸು.೧೪–೧೫ನೇ ಶತಮಾನ ಸ್ಥಿತಿ: ಜೀರ್ಣ

ವೆಂಕಟೇಶ್ವರ ಮೂರ್ತಿ ಗರ್ಭಗುಡಿಯಲ್ಲಿದೆ. ದೇವಾಲಯ ದ್ರಾವಿಡ ಮಾದರಿ ಶಿಖರ ಹೊಂದಿದೆ. ಮುಖಮಂಟಪ, ನವರಂಗ, ಕಂಬಗಳು ಮತ್ತು ಕಮಾನುಗಳನ್ನೊಳಗೊಂಡಿದೆ.

ದೇವಾಲಯದ ಹೆಸರು: ವೆಂಕಟೇಶ್ವರ ದೇವಾಲಯ

ಊರು: ಚಿಂಚೋಳಿ ಸ್ಥಳ: ಊರ ಮಧ್ಯ

ಕಾಲ: ಸು.೧೪–೧೫ನೇ ಶತಮಾನ ಸ್ಥಿತಿ: ಉತ್ತಮ

ದೇವಾಲಯವು ದಕ್ಷಿಣಾಭಿಮುಖವಾಗಿದೆ. ಲಕ್ಷ್ಮೀಬಾಯಿ ವಾಡೆಯ (ರಾಣಿ ಮಹಲ್) ಪಕ್ಕದಲ್ಲಿ ವೆಂಕಟೇಶ್ವರ ದೇವಾಲಯವಿದೆ (ಕ.ಸ.ಗೆ.ಕ.ಜಿ.೧೯೯೭,ಪು.೭೧೯). ಗರ್ಭಗೃಹ, ಅಂತರಾಳ ಹಾಗೂ ನವರಂಗ ಒಳಗೊಂಡಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಜಾಲಂಧ್ರ, ಕಂಠ, ಶಿಖರವನ್ನೊಳಗೊಂಡಿದೆ. ಅಧಿಷ್ಠಾನ ವಿವಿಧ ಶಿಲ್ಪಗಳಿಂದ ಹೂವುಗಳಿಂದ ಅಲಂಕೃತವಾಗಿದೆ. ಭಿತ್ತಿಯಲ್ಲಿ ಯಾವುದೇ ಅಲಂಕರಣೆಗೆ ಪ್ರಾಧಾನ್ಯತೆ ನೀಡಿಲ್ಲ. ವೆಂಕಟೇಶ್ವರನ ಮೂರ್ತಿ ಗರ್ಭಗೃಹದಲ್ಲಿದ್ದು, ಇಕ್ಕೆಲಲ್ಲಿ ಪದ್ಮಾವತಿ ಮತ್ತು ಲಕ್ಷ್ಮೀಯರ ಶಿಲ್ಪಗಳಿವೆ. ಗರ್ಭಗುಡಿ ಪೂರ್ವಾಭಿಮುಖವಾಗಿದೆ. ಗರ್ಭಗುಡಿ ಎದುರು ಮೂರು ಚಿಕ್ಕ ಮಂಟಪಗಳನ್ನೊಳಗೊಂಡಿದೆ. ಅದರೊಳಗೆ ಲಿಂಗಗಳಿವೆ. ಗರ್ಭಗುಡಿ ಎದುರಿನ ಪ್ರಾಂಗಣದಲ್ಲಿ ದೀಪಮಾಲಾ ಸ್ತಂಭ ಮತ್ತು ಗರುಡ ಸ್ತಂಭಗಳಿವೆ.

ದೇವಾಲಯದ ಹೆಸರು: ಕೇಶವ ನಾರಾಯಣನ ಗುಡಿ

ಊರು: ಕೇಶಾವರ್ (ಗಡಿ) ಸ್ಥಳ: ಊರ ಮಧ್ಯ

ಕಾಲ: ಸು.೧೦ನೇ ಶತಮಾನ ಸ್ಥಿತಿ: ಅವಸಾನ

ಕೇಶವ ನಾರಾಯಣ ಗುಡಿಯ ಗರ್ಭಗೃಹವು ನವರಂಗದಲ್ಲಿಯೇ ಇದೆ. ಇದು ಅಂತರಾಳ ಮತ್ತು ಮುಖಮಂಟಪದಿಂದ ಕೂಡಿದೆ. ಎತ್ತರದ ಜಗತಿಯ ಮೇಲೆ ಕಟ್ಟಲ್ಪಟ್ಟ ಈ ದೇವಾಲಯ ಬಿಟ್, ಉಪಾನವನ್ನು ಹೊಂದಿದ ಅಧಿಷ್ಠಾನವನ್ನು ಒಳಗೊಂಡಿದೆ. ಕಕ್ಷಾಸನಗಳಿವೆ. ಭಿತ್ತಿ, ಪ್ರಸ್ತಾರವನ್ನೊಳಗೊಂಡಿದೆ. ಮತ್ತು ಪ್ರಸ್ತುತ ಶಿಖರ ಹಾಳಾಗಿದೆ. ಗರ್ಭಗೃಹದಲ್ಲಿ ಕೇಶವನ ಮೂರ್ತಿಗಳಿವೆ.

ಕ. ಜೈನ ದೇವಾಲಯಗಳು

ದೇವಾಲಯದ ಹೆಸರು: ಜೈನ ದೇವಾಲಯ

ಊರು: ಸುಲೇಪೇಟೆ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ಸ್ಥಿತಿ: ಅವಸಾನ

ದೇವಾಲಯವು ಪೂರ್ವಾಭಿಮುಖವಾಗಿದೆ. ನವರಂಗದಲ್ಲಿಯೇ ಗರ್ಭಪೀಠವಿದ್ದು ಮೂರು ದೇವಕೋಷ್ಠಗಳನ್ನು ಒಳಗೊಂಡಿದೆ. ಜೈನ ದೇವಾಲಯ ಸರಳವಾಗಿ ನಿರ್ಮಿತವಾಗಿದೆ. ಆದರೆ ಗರ್ಭದ ಮೂರು ಮೂರ್ತಿಗಳ ಕೆತ್ತನೆ ಭವ್ಯವಾಗಿವೆ. ಭಿತ್ತಿ ಮತ್ತು ಇಳಿಜಾರ ಮೇಲ್ಛಾವಣಿ ಯನ್ನೊಳಗೊಂಡಿದೆ. ಮೂರು ದೇವಕೋಷ್ಠದಲ್ಲಿ ಒಂದು ಪ್ರಸ್ತುತ ಖಾಲಿ ಇದೆ. ಇನ್ನೆರಡು ನಿಂತ ಭಂಗಿಯಲ್ಲಿರುವ ಶಿಲ್ಪಗಳನ್ನು ಒಳಗೊಂಡಿದೆ. ಗರ್ಭಪೀಠದಲ್ಲಿ ಪಾರ್ಶ್ವನಾಥ ಶಿಲ್ಪವಿದೆ.

ದೇವಾಲಯದ ಹೆಸರು: ಜೈನ ದೇವಾಲಯ

ಊರು: ಮಿರ್‍ಯಾಣ ಸ್ಥಳ: ಊರ ಪ್ರವೇಶದಲ್ಲಿ

ಕಾಲ: ಸು.೧೦ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ಸ್ಥಿತಿ: ಅವಸಾನ

ಉತ್ತರಾಭಿಮುಖ ಜೈನ ದೇವಾಲಯವು ಗರ್ಭಗುಡಿ ಮತ್ತು ಅಂತರಾಳವನ್ನೊಳಗೊಂಡಿದೆ. ಎತ್ತರದ ಜಗತಿಯ ಮೇಲೆ ಈ ಬಸದಿ ನಿರ್ಮಾಣವಾಗಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ ವನ್ನೊಳಗೊಂಡಿದೆ. ಗರ್ಭಗುಡಿಯೊಳಗೆ ಪಾರ್ಶ್ವನಾಥ ಮೂರ್ತಿ ಇದೆ. ನವರಂಗ ಭಾಗ ನಶಿಸಿದೆ. ಎತ್ತರವಾದ ಸಿಂಹ ಪೀಠದ ಮೇಲೆ ಪದ್ಮಾಸೀನ ಮತ್ತು ಧ್ಯಾನ ಭಂಗಿಯಲ್ಲಿರುವ ತೀರ್ಥಂಕರನ ಶಿಲ್ಪವಿದೆ. ಇದು ಸು.೧೦ ಅಡಿ ಎತ್ತರದ ಶಿಲ್ಪವಾಗಿದೆ. ಪ್ರಭಾವಳಿಯಲ್ಲಿ ಜಿನಬಿಂಬಗಳಿವೆ (ಕ.ಸ.ಗೆ.ಕ.ಜಿ.೧೯೯೭,ಪು.೭೫೭).

ದೇವಾಲಯದ ಹೆಸರು: ಜೈನ ದೇವಾಲಯ

ಊರು: ದೇಗಲ್ಮಡಿ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ಸ್ಥಿತಿ: ಅವಸಾನ

ದೇವಾಲಯ ಪೂರ್ವಾಭಿಮುಖವಾಗಿದೆ. ದೇಗಲ್ಮಡಿ ಜೈನ ದೇವಾಲಯದಲ್ಲಿ ತ್ರಿಶಾಖ ಬಾಗಿಲವಾಡವಿದೆ. ಅದರ ಕೆಳಗಿನ ಭಾಗದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟದ ಮೇಲೆ ಜಿನಬಿಂಬವಿದೆ. ಸ್ತಂಭ ಸರಳವಾಗಿವೆ. ಗರ್ಭಗುಡಿಯ ಪಾರ್ಶ್ವನಾಥ ನುಣುಪಾದ ಶಿಲೆಯಲ್ಲಿದೆ. ಈ ಶಿಲ್ಪ ಪದ್ಮಾಸೀನ ಮತ್ತು ಧ್ಯಾನ ಭಂಗಿಯಲ್ಲಿದೆ. ಉಳಿದ ಜೈನ ತೀರ್ಥಂಕರರ ಮೂರ್ತಿಶಿಲ್ಪಗಳು ಬಿಳಿ ಅಮೃತ ಶಿಲೆಯಲ್ಲಿವೆ. ತಲೆಭಾಗ ಗುಂಗುರು ಕೂದಲುಗಳನ್ನು ಹೊಂದಿದ್ದು ಗಾಂಧಾರ ಮತ್ತು ಮಥುರಾ ಶೈಲಿಯ ಪ್ರಭಾವ ನಾವು ಈ ಶಿಲ್ಪಗಳಲ್ಲಿ ಕಾಣಬಹುದು. ಗರ್ಭಗುಡಿಯ ಲಲಾಟದ ಮೇಲೆ ಜಿನಬಿಂಬವಿದೆ. ಗರ್ಭಗುಡಿಯಲ್ಲಿ ಪದ್ಮಾವತಿ ಶಿಲ್ಪ ಮತ್ತು ಕಂಚು, ಹಿತ್ತಾಳೆ ಜಿನಬಿಂಬಗಳು ಇವೆ (ಕ.ಸ.ಗೆ.ಕ.ಜಿ.೧೯೯೭,ಪು.೭೨೯). ದೇವಾಲಯದ ಹೊರಭಾಗದಲ್ಲಿ ಜೈನ ಯಕ್ಷ ಧರಣೇಂದ್ರನ ಶಿಲ್ಪವಿದೆ. ಜೈನ ಪಾದಗಳು, ಹನುಮಂತನ ಮೂರ್ತಿ ಶಿಲ್ಪಗಳಿವೆ. ದೇವಾಲಯದೊಳಗೆ ವೃಷಭನಾಥ, ಪಾರ್ಶ್ವನಾಥರ ಶಿಲ್ಪಗಳಿವೆ.

ದೇವಾಲಯದ ಹೆಸರು: ಪಾರ್ಶ್ವನಾಥ ಜೈನ ಬಸದಿ

ಊರು: ಗಡಿ ಕೇಶಾವರ್ ಸ್ಥಳ: ಊರ ಮಧ್ಯ

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ಸ್ಥಿತಿ: ಅವಸಾನ

ಬಸದಿಯು ಗರ್ಭಗುಡಿ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನೊಳಗೊಂಡಿದೆ. ಮುಖಮಂಟಪದಲ್ಲಿ ಶಾಸನವಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ ಒಳಗೊಂಡಿದೆ. ಶಿಖರ ಪ್ರಸ್ತುತ ಹಾಳಾಗಿದೆ. ದೇವಾಲಯದ ಸ್ತಂಭಗಳು ಬಾದಾಮಿ ಚಾಲುಕ್ಯರ ಕಾಲದ ಶೈಲಿಯಲ್ಲಿವೆ. ಕಪೋತಬಂಧದ ಅಧಿಷ್ಠಾನದ ಮೇಲೆ ರಾಷ್ಟ್ರಕೂಟರ ಕಾಲದ ವಾಸ್ತುವನ್ನೊಳಗೊಂಡಿದೆ (ಗು.ಜಿ.ಇ.ಮತ್ತು ಪು.,೨೦೦೭, ಪು.೩೦೭). ಗರ್ಭಗುಡಿಯಲ್ಲಿ ಪದ್ಮಾಸೀನ ಭಂಗಿಯಲ್ಲಿ ಸಿಂಹ ಪೀಠದ ಮೇಲೆ ಧ್ಯಾನಸಕ್ತ ಪಾರ್ಶ್ವನಾಥನ ಮೂರ್ತಿ ಇದೆ. ಈ ದೇವಾಲಯವನ್ನು ಮಾಘನಂದಿಯ ಶಿಷ್ಯನಾದ ಮತಿಸೆಟ್ಟಿಯಿಂದ ಜೀರ್ಣೋದ್ಧಾರ ಮಾಡಿದ ವಿಷಯವನ್ನು ಇಲ್ಲಿನ ಶಾಸನ ಉಲ್ಲೇಖಿಸುತ್ತದೆ (ಕ.ಸ.ಗೆ.ಕ.ಜಿ.,೧೯೯೬,ಪು.೭೦೨).

ಡ. ಶಾಕ್ತ ದೇವಾಲಯ

ದೇವಾಲಯದ ಹೆಸರು: ಕಾಳಮ್ಮನ ಗುಡಿ ಗ್ರಾಮ: ನಿಡಗುಂದ

ಸ್ಥಳ: ಊರ ಮಧ್ಯೆ ಕಾಲ: ಸು.೧೧ನೇ ಶತಮಾನ

ಸ್ಥಿತಿ: ಅವಸಾನ

ಶಾಲಾ ಮಾದರಿ ಶಿಖರವುಳ್ಳ ಈ ದೇವಾಲಯ ಒಂದೇ ಸಾಲಿನಲ್ಲಿ ಎರಡು ಗರ್ಭಗೃಹಗಳಿವೆ. ಎರಡು ಪ್ರವೇಶ ದ್ವಾರಗಳನ್ನೊಳಗೊಂಡಿದೆ. ಆದರೆ ಪ್ರಸ್ತುತ ಒಂದೇ ದ್ವಾರ ತೆರೆದಿದ್ದು, ದಕ್ಷಿಣಾಭಿಮುಖ ದ್ವಾರ ಮುಚ್ಚಲ್ಪಟ್ಟಿದೆ. ದೇವಾಲಯದ ಭಿತ್ತಿಭಾಗ ಕಿಟಕಿಗಳಿಂದ ಕೂಡಿದೆ. ಶಿಖರವು ಸುಣ್ಣದ ಕಲ್ಲಿನಿಂದ ರಚಿಸಲ್ಪಟ್ಟಿದೆ.

ಕಾಳಮ್ಮ ದೇವಿಯ ಗುಡಿ ತಳಭಾಗದಲ್ಲಿದೆ. ಸುಂದರವಾದ ಶಿಲ್ಪಗಳುಳ್ಳ ನವರಂಗದ ೨೪ ಕಂಬಗಳು ಮೂರು ಸಾಲಿನಲ್ಲಿವೆ. ಆಯತಾಕಾರದ ನವರಂಗದ ಕಂಬಗಳಲ್ಲಿ ರಾಮಾಯಣ, ಮಹಾಭಾರತದ ಕಿರಾತಾರ್ಜುನ ವಿಜಯ ಕಥಾವಳಿ ಪ್ರಸಂಗ, ಸಮುದ್ರ ಮಂಥನ ಶಿಲ್ಪ ಲಕ್ಷ್ಮಿ ಉದ್ಭವ, ಲಕ್ಷ್ಮಿ ಮತ್ತು ವಿಷ್ಣುವಿನ ಕಲ್ಯಾಣ ತೋರಿಸುವ ಶಿಲ್ಪಗಳಿವೆ. ಪಂಚತಂತ್ರ ಕಥೆಗಳು ಮತ್ತು ಮಿಥುನ ಶಿಲ್ಪಗಳು ಕುಡ್ಯಸ್ತಂಭದಲ್ಲಿವೆ. ಅಲ್ಲದೆ ಕಮಲದ ಮೇಲೆ ಹಂಸದ ಮತ್ತು ಮೀನಿನ ಕೆತ್ತನೆಗಳಿವೆ. ಪ್ರವೇಶ ದ್ವಾರದಲ್ಲಿ ನವರಂಗದ ಬಲಕಂಬದ ಕೆಳಭಾಗದಲ್ಲಿ ಒಂದು ಶಾಸನವಿದೆ. ಈ ಶಾಸನ ದತ್ತಿ ನೀಡಿದ ಬಗ್ಗೆ ತಿಳಿಸುತ್ತವೆ (ಕ.ಸ.ಗೆ.ಕ.ಜಿ.೧೯೭೭,ಪು-೭೩೯). ಕಂಬಗಳ ಮೇಲೆ ಮುತ್ತಿನ ಮಾಲೆ, ಹೂ, ಬಳ್ಳಿ, ದೇವರ ಮತ್ತು ಕಥಾವಳಿ ಶಿಲ್ಪಗಳಿವೆ. ಅಲ್ಲದೆ ಗರುಡ, ಆನೆ, ಸ್ತ್ರೀ ದೇವಕನ್ಯೆಯರ, ದುರ್ಗಾಮಾತೆ, ರಾಮಲಕ್ಷ್ಮಣ, ಸುಗ್ರೀವರೊಂದಿಗಿನ ಭೇಟಿ, ರಾಮ ಬಾಣ ಹಿಡಿದು ನಿಂತಂತೆ, ಪಕ್ಕದ ಮಾಲೆಯ ಹತ್ತು ಕೈಗಳ ರಾವಣ ತಲೆ ಕೆಳಗಾಗಿ ಬೀಳುತ್ತಿರುವಂತಿದೆ. ರಾಮಸೀತೆಯರಿಗೆ ನಮಸ್ಕರಿಸುತ್ತಿರುವ ಹನುಮಂತ ಕೆತ್ತನೆ ಹೀಗೆ ನವರಂಗದ ಕಂಬಗಳಲ್ಲಿ ಕಥಾವಳಿ ಶಿಲ್ಪಗಳಿವೆ. ಎರಡು ಗರ್ಭಗುಡಿಯೊಳಗೆ ಒಂದರಲ್ಲಿ ಕಾಳಿಕಾಮೂರ್ತಿ ಮತ್ತೊಂದರಲ್ಲಿ ಶಿವಲಿಂಗವಿದೆ. ಕಾಳಮ್ಮನ ಗರ್ಭಗುಡಿಯ ಬಾಗಿಲವಾಡ, ಚತುರ್ ಶಾಖೆಯಿಂದ ಕೂಡಿದೆ. ನವರಂಗದಲ್ಲಿ ಒಂದು ಪೀಠ ಮತ್ತು ಜೈನ ತೀರ್ಥಂಕರ ಶಿಲ್ಪವಿದೆ.

ಇಲ್ಲಿ ದುರ್ಗಾ, ಸಪ್ತಮಾತೃಕಾ ಮತ್ತು ಸೂರ್ಯ ಶಿಲ್ಪಗಳಿವೆ (ಕ.ಸ.ಗೆ.ಕ.ಜಿ.೧೯೭೭, ಪು.೭೩೯). ಆದರೆ ಈಗ ಅವುಗಳು ಅಲ್ಲಿ ಇಲ್ಲ.

♦ ♦ ♦

ಅಧ್ಯಾಯ ೫

ಮೂರ್ತಿಶಿಲ್ಪಗಳ ಅಧ್ಯಯನ

ಅಧ್ಯಾಯ ೫

ಮೂರ್ತಿಶಿಲ್ಪಗಳ ಅಧ್ಯಯನ

೫.೧. ಅರ್ಥ, ಮಹತ್ವ :

ಶಿಲ್ಪ ಎಂಬ ಪದವು ಬಹು ಪ್ರಾಚೀನ ಕಾಲದಿಂದ ಬಂದಿದೆ. ಶೀಲಸಮೂಧೌ ಎಂಬ ಧಾತುವಿನಿಂದ ಬಂದಿದೆ. ಶಿಲ್ಪ ಎಂಬ ಪದಕ್ಕೆ ಪರ್ಯಾಯ ಪದವಾದ ಬಿಂಬ, ಪ್ರತಿಬಿಂಬ, ವಿಗ್ರಹ, ಮೂರ್ತಿ ಈ ಎಲ್ಲ ಪದಗಳನ್ನು ಹೊಂದಿ, ಮೂರ್ತಿಶಿಲ್ಪ ವಿಜ್ಞಾನದಲ್ಲಿ ಬಹು ವ್ಯಾಪಕವಾದ ವೈಶಾಲ್ಯವನ್ನು ಪಡೆದ ಜ್ಞಾನದ ಶಾಖೆ ಇದಾಗಿದೆ. ಮೂರ್ತಿಶಿಲ್ಪಗಳು ತನ್ನದೆಯಾದ ಪ್ರತಿಮಾ ಲಕ್ಷಣಗಳು, ಶೈಲಿ, ಭಂಗಿ, ಆಯುಧ ಮತ್ತು ಲಾಂಛನಗಳನ್ನೊಳಗೊಂಡಿರುತ್ತವೆ. ಇವುಗಳನ್ನು ಶೈವ, ವೈಷ್ಣವ, ಜೈನ, ಶಾಕ್ತ ಮತ್ತು ಇತರೆ ಶಿಲ್ಪಗಳೆಂದು ವಿಂಗಡಿಸಲಾಗಿದೆ.

ಮೂರ್ತಿ ಎಂದರೆ, ಕಣ್ಣಿಗೆ ಕಾಣುವ ಅಥವಾ ಪಾರದರ್ಶಕವಾದ ಶರೀರ, ರೂಪವಾಗಿದೆ. ಮೂರ್ತಿಗಳು ಮಾನವನ ಭಾವನೆ ಮತ್ತು ಕಲ್ಪನೆಗಳಿಂದ ಬೆಳೆದು ಬಂದವುಗಳಾಗಿವೆ. ಇವುಗಳಿಗೆ ಪ್ರಕೃತಿ ಪ್ರೇರಿತವಾಗಿತ್ತು. ಸಿಂಧೂ ನಾಗರಿಕತೆಯ ಪಶುಪತಿ ಶಿಲ್ಪ, ನೃತ್ಯಾಭಂಗಿಯಲ್ಲಿರುವ ಕಂಚಿನ ಮೂರ್ತಿ, ಮುದ್ರೆಗಳಲ್ಲಿರುವ ಕೆತ್ತನೆಗಳು ನಮ್ಮ ಪ್ರಾಚೀನ ಮೂರ್ತಿಶಿಲ್ಪದ ಕುರುಹುಗಳಾಗಿವೆ.

ಸಿಂಧೂ ನಾಗರಿಕತೆಯಲ್ಲಿ ದೊರೆತ ಲಿಂಗವು ಶಿವಲಿಂಗದ ಪ್ರಾಚೀನತೆ ಮತ್ತು ಅದರ ಬೆಳವಣಿಗೆ ಸೂಚಿಸುತ್ತದೆ. ಕ್ರಿ.ಪೂ.೨ನೇ ಶತಮಾನದಲ್ಲಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಗುಡಿಮಲ್ಲಮ್ ಎಂಬಲ್ಲಿ ಪ್ರಾಚೀನ ಶಿವನ ಶಿಲ್ಪ ದೊರಕಿದೆ. ವೇದಗಳ ಕಾಲದಲ್ಲಿ ಕ್ರಮೇಣ ವಿವಿಧ ಆಯುಧ ಹಿಡಿದ ವೈವಿಧ್ಯಮಯ ಮೂರ್ತಿಶಿಲ್ಪಗಳು ಬೆಳೆದು ಬಂದವು. ನಿಸರ್ಗದಲ್ಲಿರುವ ಪ್ರಾಣಿ, ಪಕ್ಷಿ, ಸರಿಸೃಪಗಳು, ಅಗ್ನಿ, ವಾಯು, ಜಲ, ಗಿಡ–ಮರಗಳನ್ನು ದೇವರನ್ನಾಗಿ ಪೂಜಿಸುತ್ತಿದ್ದರು. ಮುಂದೆ ಇವುಗಳ ಮೂರ್ತಿ ಹುಟ್ಟಿ ರೂಪ ತಳೆದವು.

೪.೨. ಮೂರ್ತಿಶಿಲ್ಪಗಳ ವೈವಿಧ್ಯತೆ :

ಮೂರ್ತಿಶಿಲ್ಪಗಳನ್ನು ಶೈವ, ವೈಷ್ಣವ, ಶಾಕ್ತ, ಜೈನ ಮತ್ತು ಇತರೆ ಎಂದು ವಿಂಗಡಿಸಿಕೊಳ್ಳಲಾಗಿದೆ. ಬ್ರಹ್ಮನನ್ನು ಸೃಷ್ಟಿಕರ್ತನನ್ನಾಗಿ, ವಿಷ್ಣುವನ್ನು ರಕ್ಷಕನನ್ನಾಗಿ, ಶಿವನನ್ನು ಲಯಕಾರನನ್ನಾಗಿ ಸೃಷ್ಟಿಯ ಹುಟ್ಟು, ಬೆಳವಣಿಗೆ ಮತ್ತು ನಾಶದ ಮೂರು ಸ್ತರದಲ್ಲಿ ದೈವೀಶಕ್ತಿಯನ್ನು ಪ್ರತಿಮೆಯನ್ನಾಗಿ ಪೂಜಿಸಲಾರಂಭಿಸಿದರು. ಹೀಗೆ ಜನಾಂಗಗಳು ತಮ್ಮ ಇಷ್ಟ ದೇವತೆಯನ್ನು ಇತರ ದೇವತೆಗಳಿಗಿಂತ ಹೆಚ್ಚು ಶಕ್ತಿಶಾಲಿ, ಪ್ರಭಾವಿ ಎಂದು ತೋರಿಸಲು ಮೂರ್ತಿಗಳಲ್ಲಿ ಅತ್ಯಧಿಕ ಪ್ರಭಾವಿ ಪ್ರಾಣಿಗಳ ಶಿಲ್ಪವನ್ನಾಗಿ, ಇಲ್ಲವೆ ಮಾನವನ ನಾಲ್ಕು ತಲೆ, ನಾಲ್ಕು ಭುಜವನ್ನಾಗಿಸಿ ಮುಂದೆ ಅವುಗಳನ್ನು ದ್ವಿಗುಣ, ತ್ರಿಗುಣವಾಗಿ ಬೆಳೆಸುತ್ತಾ ಬಂದವು. ಈ ರೀತಿಯಾಗಿ ಮೂರ್ತಿಶಿಲ್ಪಗಳು ಮಾನವ ತನ್ನದೇಯಾದ ಕಲ್ಪನೆ, ವೈಚಾರಿಕತೆಗೊಳಪಡಿಸಿ, ಕಥೆಗಳನ್ನು ಕಟ್ಟಿ ಆ ಮೂಲಕ ಶಿಲ್ಪದಲ್ಲಿ ಮೂರ್ತಿ ಕೆತ್ತಲಾರಂಭಿಸಿದನು. ಕರ್ನಾಟಕದ ಅತೀ ಪ್ರಾಚೀನವಾದ ವಿಷ್ಣು ಶಿಲ್ಪವು ಚತುರ್ವಿಂಶತಿಯ ರೂಪಗಳಲ್ಲಿ ಹದಿನಾಲ್ಕನೆ ರೂಪವಾದ ವಾಸುದೇವನ ಮಾನುಷ ರೂಪದ ಅತ್ಯಂತ ಪ್ರಾಚೀನ ಶಿಲ್ಪ ಕೊಂತಪಾಲದಲ್ಲಿ ಸಿಕ್ಕಿದೆ.

ನಾರದ ಪಾಂಚರಾತ್ರಗಮವು ವಿಷ್ಣುವಿನ ಕೆಲ ಚತುರ್ವಿಂಶತಿ ರೂಪಗಳ ಜೊತೆಗೆ ಶಕ್ತಿಗಳನ್ನು ಗುರ್ತಿಸಿದೆ. ಕೇಶವ–ಕೀರ್ತಿ, ನಾರಾಯಣ–ಕಾಂತಿ, ಮಾಧವ–ತುಷ್ಠಿ, ತ್ರಿವಿಕ್ರಮ–ಶಾಂತಿ, ವಾಮನ–ಕ್ರಿಯಾ, ಅಚ್ಯುತ್–ದಯ, ಶ್ರೀಧರ–ಮೇಧ, ಹೃಷಿಕೇಶ–ಹರ್ಷ, ದಾಮೋದರ–ಲಜ್ಜಾ, ವಾಸುದೇವ–ಲಕ್ಷ್ಮಿ, ಸಂಕರ್ಷನ–ಸರಸ್ವತಿ, ಪ್ರದ್ಯುಮ್ನ–ಪ್ರೀತಿ, ಅನಿರುದ್ಧ–ರತಿ (ಎ.ಆ.ಹಿ.ಐ. ೧೯೯೩, ಸಂ.೨,ಪು.೨೩೩). ಗೋವಿಂದ, ವಿಷ್ಣು, ಮಧುಸೂಧನ, ಪದ್ಮನಾಭ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಜನಾರ್ಧನ, ಉಪೇಂದ್ರ, ಹರಿ, ಶ್ರೀಕೃಷ್ಣ (ಎ.ಆ.ಹಿ.ಐ,೧೯೯೩, ಸಂ.೨,ಪು.೨೩೧–೨೩೨) ಇವು ವಿಷ್ಣುವಿನ ಚತುರ್ವಿಂಶತಿ ರೂಪಗಳಾಗಿವೆ. ಇದೇ ರೀತಿಯಾಗಿ, ಶಕ್ತಿ ರೂಪ ಸಹ ಮಾನವ ಭಕ್ತಿ, ಭಯ ಮತ್ತು ಕಲ್ಪನೆಗಳೊಂದಿಗೆ ತಮ್ಮ ಧರ್ಮಕ್ಕನುಸಾರವಾಗಿ ಶಕ್ತಿಯ ಶಿಲ್ಪಾವಳಿಗಳನ್ನು ಬೆಳವಣಿಗೆಗೆ ತಂದರು. ಮೂರ್ತಿಶಿಲ್ಪಗಳ ಆಧಾರದ ಮೇಲೆ ಪ್ರಸ್ತುತ ಚಿಂಚೋಳಿ ತಾಲೂಕಿನ ಮೂರ್ತಿಶಿಲ್ಪಗಳ ವಿವರಣೆ ನೀಡುವ ಪ್ರಯತ್ನ ಇದಾಗಿದೆ.

ಅ. ಶೈವ ಮೂರ್ತಿಶಿಲ್ಪಗಳು

ಗ್ರಾಮ: ಕೋಡ್ಲಿ — ಸ್ಥಳ: ರಾಮಲಿಂಗೇಶ್ವರ ದೇವಾಲಯ

ಕಾಲ: ಸು. ೧೦ನೇ ಶತಮಾನ — ಶಿಲ್ಪ: ಭೈರವ

ಗರ್ಭಗುಡಿಯ ಶಿವನ ಶಿಲ್ಪ ನೃತ್ಯ ಭಂಗಿಯಲ್ಲಿದೆ. ಚತುರ್ಭುಜಧಾರಿಯಾದ ಭೈರವನ ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲ ಹಿಡಿದಿದೆ. ಮುಂದಿನ ಕೈಗಳು ಮತ್ತು ಕಾಲುಗಳು

ತ್ರಿಭಂಗಿಯಲ್ಲಿದೆ. ಜಟಾಮುಕುಟದಾರಿ, ತೋಳ್ಬಂದಿ, ಮಣಿಕಂಠ, ಕರ್ಣಕುಂಡಲ, ಯಜ್ಞೋಪವೀತ, ಆರೋಪ್ಯಮಾಲ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ.

ಗ್ರಾಮ: ಚೇಂಗಟಾ ಸ್ಥಳ: ಸೋಮೇಶ್ವರ ದೇವಾಲಯ

ಕಾಲ: ಸು. ೧೧ನೇ ಶತಮಾನ ಶಿಲ್ಪ: ಅಂಧಕಾಸುರ-ವಧಾ-ಮೂರ್ತಿ

ಕಲಬುರ್ಗಿ ಜಿಲ್ಲೆ ಗೆಜೆಟಿಯರ್‌ನಲ್ಲಿ ತ್ರಿಪುರಾಂತಕನನ್ನು ಕೊಲ್ಲುತ್ತಿರುವ ಮೂರ್ತಿ ಇದೆ ಎಂದು ಪು.೭೨೨ರಲ್ಲಿದೆ. ಆದರೆ ಇದು ಅಂಧಕಾಸುರ-ವಧಾ-ಮೂರ್ತಿಯಾಗಿದೆ. ಸೋಮೇಶ್ವರ ದೇವಾಲಯದ ಭಿತ್ತಿ ಭಾಗದ ದೇವಕೋಷ್ಠದಲ್ಲಿ ಅಂಧಕಾಸುರನನ್ನು ವಧೆ ಮಾಡುತ್ತಿರುವಂತೆ ಬಿಂಬಿಸಲಾಗಿದೆ. ಹಿಂದಿನ ಕೈಗಳಲ್ಲಿ ಡಮರು ಇದೆ. ಎಡಕ್ಕೆ ಯೋಗೀಶ್ವರಿಯ ಚಿಕ್ಕ ಶಿಲ್ಪವಿದೆ. ಮುಂದಿನ ಬಲಗೈ ತಿಶ್ರೂಲ ದಂಡದ ಕೆಳಭಾಗ ಮತ್ತು ಎಡಗೈ ಮೇಲಿನ ತ್ರಿಶೂಲ ಭಾಗವನ್ನು ಹಿಡಿದು ಅಂಧಕಾಸುರನ ಹೊಟ್ಟೆಗೆ ತಿವಿಯುತ್ತಿರುವನು. ಶಿವನ ಹಿಂದಿನ ಎಡಗೈಯಲ್ಲಿ ಕಪಾಲ ಹಿಡಿದು ರಕ್ತ ಸಂಗ್ರಹಿಸಿರುವಂತೆ ತೋರುತ್ತದೆ.

ಗ್ರಾಮ: ಚೇಂಗಟಾ ಸ್ಥಳ: ಸೋಮೇಶ್ವರ ದೇವಾಲಯ

ಕಾಲ: ಸು. ೧೧ನೇ ಶತಮಾನ ಶಿಲ್ಪ: ಭಿಕ್ಷಾಟನಾ ಶಿವ

ಕರ್ನಾಟಕ ಸರ್ಕಾರ ಗೆಜೆಟಿಯರ್ ಕಲಬುರ್ಗಿ ಜಿಲ್ಲೆಯಲ್ಲಿ ಭೈರವ ಶಿಲ್ಪ ಎಂದು ಪುಟ ೭೨೨ರಲ್ಲಿದೆ. ಆದರೆ ಇದು ಭಿಕ್ಷಾಟನಾ ಶಿವನ ಮೂರ್ತಿಯಾಗಿದೆ. ಸೋಮೇಶ್ವರ ಗುಡಿಯ ಹೊರ ಭಿತ್ತಿ ಭಾಗ ದೇವಕೋಷ್ಠದಲ್ಲಿ ಚತುರ್ಭುಜಧಾರಿ ಭಿಕ್ಷಾಟನಾ ಶಿವ ಹಿಂದಿನ ಕೈಯಲ್ಲಿ ಡಮರು ಮತ್ತು ತ್ರಿಶೂಲ ಮುಂದಿನ ಬಲಗೈ ಅಭಯ ಹಸ್ತ ಎಡಗೈಯಲ್ಲಿ ರುಂಡವಿದೆ. ಹಿಂದೆ ನಾಯಿ ಶಿಲ್ಪ ಶಿಲ್ಪವಿದೆ. ಭೈರವ ಶಿಲ್ಪದ ಇಕ್ಕೆಲುಗಳಲ್ಲಿ ನೃತ್ಯ ಮಾಡುತ್ತಿರುವ ಪ್ರೇತ ಶಿಲ್ಪಗಳಿವೆ. ಮಕುಟ, ತಲೆಯ ಹಿಂದೆ ವೃತ್ತಾಕಾರ ಚಕ್ರ, ಮಣಿಕಂಠ, ಉಪವಿತ, ಸೊಂಟಪಟ್ಟಿ, ಆರೋಪ್ಯಮಾಲಾ, ಕಾಲ್ಗಡಗ, ಪಾದರಕ್ಷೆ ಧರಿಸಿದೆ. ನಗ್ನ ಮತ್ತು ಸ್ಥಾನಿಕ ಭೈರವ ಶಿಲ್ಪ ಇದಾಗಿದೆ.

ಗ್ರಾಮ: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು. ೧೦ನೇ ಶತಮಾನ ಶಿಲ್ಪ: ಭೈರವ

ಚತುರ್ಭುಜಧಾರಿ ಭೈರವ ಕಪ್ಪುಶಿಲೆಯಲ್ಲಿದೆ. ಹಿಂದಿನ ಕೈಯಲ್ಲಿ ಡಮರು, ತ್ರಿಶೂಲ ಹಿಡಿದಿದೆ. ಮುಂದಿನ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ರುಂಡ? (ತ್ರುಟಿತ), ಸೊಂಟಕ್ಕೆ ಗೆಜ್ಜೆ

ಪಟ್ಟಿ, ಮೊಳಕಾಲಿಗೆ ಸರ್ಪಬಂಧ, ಮಣಿಕಂಠ, ಕಾಲ್ಗಡಗ, ಮಕುಟ, ಎದೆಹಾರ, ಬಾಹುವಲ್ಯ, ಪಾದರಕ್ಷೆ ಧರಿಸಿದೆ. ಇಕ್ಕೆಲುಗಳಲ್ಲಿ ಪ್ರೇತಗಳ ಶಿಲ್ಪಗಳಿವೆ.

ಗ್ರಾಮ: ಮೋಘಾ ಸ್ಥಳ: ರಾಮಲಿಂಗೇಶ್ವರ ದೇವಾಲಯ

ಕಾಲ: ಸು. ೧೧ನೇ ಶತಮಾನ ಶಿಲ್ಪ: ಭೈರವ

ಚತುರ್ಭುಜಧಾರಿ ಮೂರು ಮುಖಗಳುಳ್ಳ ಭೈರವ ಶಿಲ್ಪದಲ್ಲಿ ಹಿಂದಿನ ಕೈಗಳಲ್ಲಿ ತ್ರಿಶೂಲ ಮತ್ತು ಸರ್ಪಾಯುಧವಿದೆ. ಮುಂದಿನ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈಯಲ್ಲಿ ರುಂಡ ಹಿಡಿದಿದೆ. ಎಡಕ್ಕೆ ನಾಯಿ ಕುಳಿತಿದೆ (ಪ್ರಸ್ತುತ ತ್ರುಟಿತ). ಬಲಕ್ಕೆ ಚಾಮರಧಾರಿಯಿದೆ. ಜಟಾ ಮುಕುಟಧಾರಿ, ಕಂಠಹಾರ, ಕರ್ಣಕುಂಡಲ, ಕೊರಳಹಾರ, ಮಣಿಕಂಠ, ತೋಳ್ಬಂದಿ, ವಕ್ಷಬಂದ, ಯಜ್ಞೋಪವೀತ, ಆರೋಪ್ಯಮಾಲ, ಕುಚಹಾರ, ಕಟಿವಸ್ತ್ರ ಧರಿಸಿದೆ.

ಗ್ರಾಮ: ಮೋಘಾ ಸ್ಥಳ: ರಾಮಲಿಂಗೇಶ್ವರ ದೇವಾಲಯ

ಕಾಲ: ಸು. ೧೧ನೇ ಶತಮಾನ ಶಿಲ್ಪ: ಶಿವ

ಶಿವನ ಮೂರ್ತಿಶಿಲ್ಪದ ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲವನ್ನು ಹಿಡಿದಿದೆ. ಮುಂದಿನ ಎಡಗೈಯಲ್ಲಿ ಬೀಜಪುರ, ಬಲಗೈ ಅಭಯ ಮುದ್ರೆಯಲ್ಲಿದೆ. ಶಿವನ ಬಲಕ್ಕೆ ನಂದಿ ಶಿಲ್ಪವಿದೆ. ಎಡಕ್ಕೆ ಚಾಮರಧಾರಿ ದೇವಕನ್ಯೆಯರ ಶಿಲ್ಪಗಳಿವೆ.

ಗ್ರಾಮ: ಭೋಗಲಿಂಗ ಹಳ್ಳಿ ಸ್ಥಳ: ಭೋಗಲಿಂಗೇಶ್ವರ ಗುಡ್ಡ

ಕಾಲ: ಸು. ೧೧ನೇ ಶತಮಾನ ಶಿಲ್ಪ: ವೀರಭದ್ರೇಶ್ವರ

ವೀರಭದ್ರ ಶಿಲ್ಪವು ಕಿರೀಟ ಮಕುಟ ಧರಿಸಿದೆ. ಹಿಂದಿನ ಬಲಗೈಯಲ್ಲಿ ತ್ರಿಶೂಲವಿದೆ. ಡಮರು ಎಡಗೈಯ ಕರ್ತರಿ ಬೆರಳಲ್ಲಿದೆ. ಕೊರಳಹಾರ, ಕಂಠಹಾರ, ಸೊಂಟಪಟ್ಟಿ, ಕಟಿವಸ್ತ್ರ, ಮಣಿಕಂಠ, ತೋಳ್ಬಂದಿ, ಕಾಲ್ಗಡಗ ಧರಿಸಿದೆ. ಚತುರ್ಭುಜಧಾರಿಯ ಮುಂದಿನ ಕೈಗಳಲ್ಲಿ ಬಲಕ್ಕೆ ಖಡ್ಗ, ಎಡಗೈಯಲ್ಲಿ ಖೇಟಕ ಹಿಡಿದಂತಿದೆ. ಕೆಳಭಾಗದ ಬಲಕ್ಕೆ ಸ್ಥಾನಿಕ ಟಗರು(ದಕ್ಷ) ಅಂಜಲಿ ಮುದ್ರೆಯಲ್ಲಿದೆ.

ಗ್ರಾಮ: ದೇಗಲ್ಮಡಿ ಸ್ಥಳ: ಊರ ಪ್ರವೇಶದ ಗುಡಿ

ಕಾಲ: ಸು. ೧೨ನೇ ಶತಮಾನ ಶಿಲ್ಪ: ವೀರಭದ್ರೇಶ್ವರ

ದೇಗಲ್ಮಡಿಯಲ್ಲಿ ವೀರಭದ್ರೇಶ್ವರ ಮೂರ್ತಿಶಿಲ್ಪವಿದೆ. ಇದರ ಕೆಳಬದಿಯ ಬಲಕ್ಕೆ ಟಗರು ಅಂಜಲಿ ಮುದ್ರೆಯಲ್ಲಿದೆ. ಬಲಗೈ ಖಡ್ಗಧಾರಿ, ಎಡಗೈಯಲ್ಲಿ ಖೇಟಕವಿದೆ. ಷಡ್ಭುಜಧಾರಿಯ ಈ

ಶಿಲ್ಪ ತ್ರುಟಿತವಾಗಿದೆ. ಮಣಿಕಂಠ, ಕಿರೀಟಧಾರಿ, ಕೊರಳಹಾರ, ಯಜ್ಞೋಪವೀತ ಮತ್ತು ಕಾಲ್ಗಡಗ ಧರಿಸಿದೆ.

ಗ್ರಾಮ: ಸುಲೇಪೇಟೆ ಸ್ಥಳ: ವೀರಭದ್ರೇಶ್ವರ ದೇವಾಲಯ

ಕಾಲ: ಸು. ೧೧ನೇ ಶತಮಾನ ಶಿಲ್ಪ: ವೀರಭದ್ರೇಶ್ವರ

ಈ ಮೂರ್ತಿಶಿಲ್ಪದ ಹಿಂದಿನ ಕೈಯಲ್ಲಿ ತ್ರಿಶೂಲ, ಡಮರು ಮುಂದಿನ ಕೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಖೇಟಕ ಇದೆ. ಕಿರೀಟಧಾರಿ ಶಿಲ್ಪದ ಪ್ರಭಾವಳಿಯಲ್ಲಿ ಸೂರ್ಯ ಮತ್ತು ಚಂದ್ರರ ಚಿನ್ನೆಯಿದೆ. ಕರ್ಣಕುಂಡಲ, ತೊಳ್ಬಂದಿ, ಮಣಿಕಂಠ, ಎದೆಹಾರ, ಯಜ್ಞೋಪವೀತ, ಬಾಹುವಲ್ಯ, ಆರೋಪ್ಯಮಾಲಾ, ಕಾಲ್ಗಡಗ, ಕಟಿವಸ್ತ್ರವನ್ನೊಳಗೊಂಡಿದೆ.

ರುಮ್ಮನಗೂಡುನಲ್ಲಿ ಶಂಕರನಾರಾಯಣ ದೇವಾಲಯದ ಪ್ರವೇಶ ದ್ವಾರದ ಗೋಡೆಯ ಮೇಲೆ ಅಷ್ಟಭುಜದಾರಿ ನಾಟ್ಯ ಶಿವನ ಶಿಲ್ಪವಿದೆ. ರಟ್ಕಲ್‌ನ ಗೌರಿಶಂಕರ ಗುಡ್ಡದಲ್ಲಿರುವ ವೀರಭದ್ರೇಶ್ವರ ಶಿಲ್ಪ ಖಡ್ಗ, ಬಿಲ್ಲು ಬಾಣ, ಖೇಟಕ ಹಿಡಿದಿದೆ. ಬಲಕ್ಕೆ ನಿಂತ ಟಗರು (ದಕ್ಷ) ಅಂಜಲಿ ಮುದ್ರೆಯಲ್ಲಿದೆ.

* **ಶಿವಲಿಂಗಗಳು** : ಚಿಂಚೋಳಿಯಲ್ಲಿನ ಪುರಾತನ ಪಂಚಲಿಂಗೇಶ್ವರ ದೇವಾಲಯವಿದೆ. ನೀರಿನ ಚಿಲುಮೆಯಲ್ಲಿವೆ. ಐದು ಲಿಂಗಗಳು ಐದು ಸ್ತರ ನೀರಿನ ಮಟ್ಟ ಸೂಚಿಸುವಂತಿದೆ. ನಂದಿಯೊಂದನ್ನೊಳಗೊಂಡಿದೆ. ಭೋಗಲಿಂಗದ ಗುಡ್ಡದಲ್ಲಿ ಶಿವಲಿಂಗಗಳು ಇವೆ. ಹಲವು ಚಿಕ್ಕ ಚಿಕ್ಕ ಲಿಂಗಗಳು ಮತ್ತು ಕೆಲ ದೊಡ್ಡ ಲಿಂಗಗಳಿವೆ. ಇಲ್ಲಿ ಹಲವು ನಂದಿ ಶಿಲ್ಪ ಮತ್ತು ಒಂದು ಯಜ್ಞ ಕುಂಡವನ್ನೊಳಗೊಂಡಿದೆ.

ಚಿಂಚೋಳಿ ತಾಲೂಕಿನಲ್ಲಿ ಅಧಿಕವಾಗಿ ಬ್ರಹ್ಮಸೂತ್ರ ಲಿಂಗಗಳು ದೇವಾಲಯಗಳಲ್ಲಿವೆ. ಅವುಗಳೆಂದರೆ ಮಿರ್ಯಾಣದ ಈಶ್ವರ ದೇವಾಲಯ, ರಾಮತೀರ್ಥ, ಮೋಘ, ರಟ್ಕಲ್, ಸುಲೇಪೇಟೆಗಳಲ್ಲಿವೆ. ಸಾಮಾನ್ಯವಾಗಿ ಶಿವಲಿಂಗಗಳು ಬ್ರಹ್ಮಪೀಠ, ವಿಷ್ಣುಪೀಠ, ರುದ್ರಪೀಠ ಎಂದು ಮೂರು ಸ್ತರದಲ್ಲಿ ಕೆತ್ತಲ್ಪಟ್ಟಿರುತ್ತವೆ. ಹೆಚ್ಚಾಗಿ ವಿಷ್ಣು ಪೀಠದಲ್ಲಿ ಲಿಂಗ ಪ್ರತಿಷ್ಠಾಪಿಸಲಾಗಿರುತ್ತದೆ.

ಇತರೆ ಶೈವ ಮೂರ್ತಿಶಿಲ್ಪಗಳು:

* **ನಂದಿ ಶಿಲ್ಪ** : ಭೋಗಲಿಂಗೇಶ್ವರ ಗುಡ್ಡದಲ್ಲಿ ಹಲವು ನಂದಿ ಮೂರ್ತಿಶಿಲ್ಪಗಳು ಕುಳಿತ ಭಂಗಿಯಲ್ಲಿವೆ. ಅದರಲ್ಲಿ ಚಿಕ್ಕ ಮತ್ತು ದೊಡ್ಡ ನಂದಿ ಮೂರ್ತಿಶಿಲ್ಪಗಳಿವೆ. ಗೆಜ್ಜೆ ಹಾರ, ಡುಬ್ಬದ ಹಾರ, ಡುಬ್ಬದಿಂದ ಕೊರಳವರೆಗೆ ಗೆಜ್ಜೆಹಾರದಿಂದ ಅಲಂಕರಣೆ ಮಾಡಿದ ಶಿಲ್ಪಗಳಿವೆ.

ದೇಗಲ್ಮಡಿಯ ಬಕ್ಕಪ್ರಭು ಗುಡಿಯ ಬಳಿ ಕಪ್ಪುಶಿಲೆಯ ಬೃಹದಾಕಾರ ನಂದಿ ಮೂರ್ತಿ ಶಿಲ್ಪವಿದೆ. ಸುಮಾರು ನಾಲ್ಕು ಅಡಿ ಎತ್ತರವಿರುವ ಈ ಶಿಲ್ಪದಲ್ಲಿ ಹಣೆಪಟ್ಟಿ, ಕೊರಳಿಗೆ ಗಂಟೆಯ ಹಾರವಿದೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಅಭಂಗ ಮುದ್ರೆ (ಕುಳಿತ ಭಂಗಿಯ) ನಂದಿಶಿಲ್ಪವು ಹಣೆಪಟ್ಟಿ, ಡುಬ್ಬದಿಂದ ಕೊರಳವರೆಗೆ ಗೆಜ್ಜೆಹಾರ, ಕೊರಳಿಗೆ ಗಂಟೆಹಾರ, ಬೆನ್ನುಪಟ್ಟಿ, ಡುಬ್ಬದ ಅಲಂಕರಣೆಯನ್ನೊಳಗೊಂಡಿದೆ. ಹೀಗೆ ನಂದಿ ಮೂರ್ತಿಶಿಲ್ಪಗಳು ನಿಡಗುಂದ, ಸುಲೇಪೇಟೆ, ಶಿರೋಳ್ಳಿ, ಸೋಮಲಿಂಗದಹಳ್ಳಿ, ರುಮ್ಮನಗೂಡು, ಪಸ್ತಾಪುರ, ಚಿಂಚೋಳಿ, ಮಿರ್ಯಾಣದ ಶೈವ ದೇವಾಲಯಗಳಲ್ಲಿವೆ.

* **ಶೈವ ದ್ವಾರಪಾಲಕರು :** ಶಿವನ ಗುಡಿಗಳ ಪ್ರವೇಶ ದ್ವಾರದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳು ಕಾವಲಿಗಾಗಿ ನಿಲ್ಲಿಸಿದಂತೆ ಇರುತ್ತವೆ. ಶಿವನ ಆಯುಧ ಹಿಡಿದಿವೆ. ಚೇಂಗಟಾದ ಬಾಗಿಲವಾಡಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ರುಮ್ಮನಗೂಡ ರಾಮಲಿಂಗೇಶ್ವರ ಬಾಗಿಲವಾಡದ ಶೈವ ದ್ವಾರಪಾಲಕರ ಹಿಂದಿನ ಕೈಯಲ್ಲಿ ಚಿಕ್ಕ ಭರ್ಚಿ ಮತ್ತು ಸರ್ಪದಂಡ, ಮುಂದಿನ ಬಲಗೈ ಅಭಯ ಮುದ್ರೆಯಲ್ಲಿದೆ. ಮತ್ತು ಎಡಗೈಯಲ್ಲಿ ಗದೆ ಇದೆ. ಕಿರೀಟ, ಆರೋಪ್ಯಮಾಲಾ, ಕೊರಳಹಾರ, ಕಂಠಹಾರ, ಎದೆಪಟ್ಟಿ, ಸೊಂಟಪಟ್ಟಿ ಧರಿಸಿದ್ದಾರೆ. ನಿಂತ ದೇವಕನ್ಯೆಯರು ಫಲ, ಕಾಯಿ, ಹಾರವನ್ನು ಹಿಡಿದಿವೆ. ಮತ್ತು ದೇವ ಪುರುಷರು ಚಂದ್ರಕೋನಾಕಾರದ ದಂಡ ಹಿಡಿದಿವೆ.

ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಚತುರ್ಭುಜದಾರಿ ಶೈವ ದ್ವಾರಪಾಲಕರು ದಂಡ, ಗಧಾ, ಡಮರು ಹಿಡಿದಿವೆ. ಎಡಗೈ ಪ್ರಸ್ತುತ ತ್ರುಟಿತವಾಗಿದೆ. ಕಿರೀಟಧಾರಿ, ವಕ್ಷಬಂಧ, ಕೊರಳಹಾರ, ಕಾಲ್ಗಡಗ, ಕರ್ಣಕುಂಡಲ ಧರಿಸಿವೆ. ಮಲ್ಲಿಕಾರ್ಜುನ ಗುಡಿಯ ಬಾಗಿಲವಾಡ ಕರಕಮುಕ್ಕಿ ಮತ್ತು ಭೋಗಲಿಂಗ ಗುಡ್ಡದ ಪ್ರಸ್ತುತ ತ್ರುಟಿತ ಬಾಗಿಲವಾಡಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ರುಮ್ಮನಗೂಡು, ಮೋಘಾ, ಮತ್ತು ಹುಲುಸುಗೂಡಿನ ರಾಮಲಿಂಗೇಶ್ವರ ದೇವಾಲಯಗಳ ಬಾಗಿಲವಾಡಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಸುಲೇಪೇಟೆಯ ಈಶ್ವರ ದೇವಾಲಯದ ಬಾಗಿವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಮತ್ತು ವೀರಭದ್ರೇಶ್ವರ ಗರ್ಭಗುಡಿಯ ಬಾಗಿಲವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಕೆಲವು ಕಡೆ ಡಮರು, ತ್ರಿಶೂಲ ಮುಂದಿನ ಎಡಗೈಯಲ್ಲಿ ಗದೆ ಇದೆ. ಬಲಗೈ ಅಭಯ ಮುದ್ರೆಯಲ್ಲಿದೆ. ಮುಕುಲ

ಹಸ್ತ ಹೊಂದಿರುವಂತೆ ಕೆತ್ತಲ್ಪಟ್ಟಿವೆ. ನಿಡಗುಂದದ ಶೈವ ದ್ವಾರಪಾಲಕರ ಶಿಲ್ಪ ಸೊಂಟದಿಂದ ಕಿರೀಟದವರೆಗೆ ಸು.೫ ಅಡಿ ಎತ್ತರವಾಗಿದೆ. ಕೆಳಭಾಗ ಪ್ರಸ್ತುತ ಭೂಮಿಯಲ್ಲಿ ಮುಚ್ಚಿದೆ. ಹಿಂದಿನ ಕೈಗಳು ಡಮರು, ತ್ರಿಶೂಲ, ಮುಂದಿನ ಬಲಗೈ ಅಭಯ ಮುದ್ರೆ, ಎಡಗೈಯಲ್ಲಿ ಗದೆ ಇದೆ. ಎಡಕ್ಕಿರುವ ಹಿಂದಿನ ಬಲಗೈ ಪ್ರಸ್ತುತ ತ್ರುಟಿತ ಎಡಗೈಯಲ್ಲಿ ಅಂಕುಶ ಬಲಗೈ ಕುಮುದ ಮುದ್ರೆಯಲ್ಲಿದೆ. ಜಟಾಮುಕುಟ, ವಕ್ಷಬಂದ, ಯಜ್ಞೋಪವೀತ, ಎದೆಹಾರ, ಬಾಹುವಲ್ಯ, ತೊಳ್ಬಂದಿ, ಮಣಿಕಂಠ, ಹೆಬ್ಬೆರೆಳುಂಗುರ, ಕಿರಿಬೆರಳುಂಗುರ, ಕಟಿವಸ್ತ್ರ, ಕರ್ಣಕುಂಡಲ ಧರಿಸಿವೆ.

* **ಗಂಗೆ ಯಮುನೆಯರ ಶಿಲ್ಪ** : ಸಾಮಾನ್ಯವಾಗಿ ಶೈವ ದ್ವಾರಗಳ ಬಾಗಿಲುವಾಡದ ಮೇಲೆ ಇಬ್ಬರು ಸ್ತ್ರೀಯರು ಬಿಂದಿಗೆಯಲ್ಲಿ ನೀರು ಹಿಡಿದು ನಿಂತಿರುವ ಶಿಲ್ಪ ಇರುತ್ತವೆ.

ರುಮ್ಮನಗೂಡಿನ ರಾಮಲಿಂಗೇಶ್ವರ ದೇವಾಲಯದಲ್ಲಿ ಕರ್ಣಕುಂಡಲ, ತಲೆಗೂದಲಿನ ಅಲಂಕರಣೆ, ಎದೆಹಾರ, ಕೊರಳಹಾರ, ಸೊಂಟದಪಟ್ಟಿ, ಕಟಿವಸ್ತ್ರ, ಕಾಲ್ಗಡಗ, ಕೈಬಳೆ, ತೊಳ್ಬಂದಿ, ಆಭರಣಗಳನ್ನು ಧರಿಸಿವೆ. ಕೈಯಲ್ಲಿ ಬಿಂದಿಗೆ ಹಿಡಿದು ನಿಂತಿರುವ ಭಂಗಿಯಲ್ಲಿವೆ.

ಮಿರ್ಯಾಣದ ಮೂರು ದೇವರ ಗುಡಿಯ ಒಂದು ಗರ್ಭಗುಡಿ ಬಾಗಿಲವಾಡದ ಮೇಲೆ ಗಂಗೆ, ಯಮುನೆಯರ ಶಿಲ್ಪಗಳು ಪ್ರಧಾನವಾಗಿದೆ. ನೀರಿನ ಬಿಂದಿಗೆ ಹಿಡಿದು ಕೈಬಳೆ, ತೊಳ್ಬಂದಿ, ಹಾರ, ಕಟಿವಸ್ತ್ರ, ಸೊಂಟಪಟ್ಟಿ, ಕಾಲ್ಗಡಗ, ಧಮ್ಮಿಲ, ಮಕರ ಕುಂಡಲ ಧರಿಸಿದೆ. ಎಡಗೈಯಲ್ಲಿ ಕಮಲ ಹಿಡಿದಿದೆ. ಇಳಿಬಿಟ್ಟ ಲಂಗದ ವಸ್ತ್ರವಿದೆ. ಚೇಂಗಟಾದ ಸೋಮೇಶ್ವರ ಗುಡಿಯಲ್ಲಿ ಈ ರೀತಿಯ ಗಂಗೆ ಯಮುನೆಯರ ಶಿಲ್ಪಗಳಿವೆ.

* **ಚಾಮರಧಾರಿಗಳ ಶಿಲ್ಪ** : ಭೋಗಲಿಂಗ, ಕರಕಮುಕ್ಲಿ, ಚೇಂಗಟಾ, ರುಮ್ಮನಗೂಡು, ಮೋಘಾ, ಪಸ್ತಾಪೂರು, ಸುಲೇಪೇಟೆ, ನಿಡಗುಂದ, ಶಿರೊಳ್ಳಿಯ ಶೈವ ದೇವಾಲಯಗಳಲ್ಲಿ ಸ್ತ್ರೀ ಚಾಮರಧಾರಿಗಳಿವೆ. ಈ ಚಾಮರಧಾರಿಗಳಲ್ಲಿ ಬಲ ಭಾಗಕ್ಕಿರುವವಳು ಬಲಗೈಯಲ್ಲಿ, ಎಡಭಾಗಕ್ಕಿರುವವಳು ಎಡಗೈಯಲ್ಲಿ ಚಾಮರ ಹಿಡಿದು ನಿಂತಿರುತ್ತಾರೆ. ಅವರ ಇನ್ನೊಂದು ಕೈ ಕಟಿಹಸ್ತ ಇಲ್ಲವೆ ಕಮಲ ಹಿಡಿದಿವೆ. ಮಕುಟ, ಬಳೆ, ಸೊಂಟಪಟ್ಟಿ, ಕುಚಹಾರ, ಕಟಿವಸ್ತ್ರ, ಕಾಲ್ಗಡಗ, ಯಜ್ಞೋಪವೀತ, ಆರೋಪ್ಯಮಾಲಾ ಧರಿಸಿರುತ್ತಾರೆ.

* **ದೇವಕನ್ಯೆಯರು, ದೇವಪುರುಷ ಮತ್ತು ಭಕ್ತರ ಶಿಲ್ಪಗಳು** : ಚೇಂಗಟಾ, ರುಮ್ಮನಗೂಡು, ಮೋಘಾ, ಶೈವ ದೇವಾಲಯಗಳಲ್ಲಿ ಹೆಚ್ಚಾಗಿ ಈ ರೀತಿಯ ದೇವಪುರುಷ ಮತ್ತು ದೇವಕನ್ಯೆಯರ ಮತ್ತು ಭಕ್ತರ ಶಿಲ್ಪಗಳಿವೆ. ಕೆಲ ಗುಡಿಗಳ ಬಾಗಿಲವಾಡದ ಮುಂದೆ ಅಂಜಲಿ

ಹಸ್ತದಲ್ಲಿ ನಿಂತ ಭಕ್ತರ ಶಿಲ್ಪಗಳಿವೆ. ಚಾಮರಧಾರಿಗಳ ಹಿಂದೆ ಹಣ್ಣಿನ ಗೊಂಚಲು, ಹೂ, ಕಾಯಿ ಹಿಡಿದ ದೇವ ಸ್ತ್ರೀಯರು ಕುಂತಲ ಮುಕುಟ, ಬಾಹುವಲ್ಯ, ತೋಳ್ಬಂದಿ, ಸ್ತನಹಾರ, ಕೊರಳಹಾರ, ಕೈಬಳೆ, ಕಾಲ್ಗಡಗ, ಆಭರಣಗಳ ಅಲಂಕರಣೆ ಮಾಡಿಕೊಂಡು ನಿಂತಿರುತ್ತಾರೆ. ಅವರ ಹಿಂದೆ ನಿಂತ ದೇವಪುರುಷ ಚಂದ್ರಾಕೃತಿಯ ದಂಡವೊಂದನ್ನು ಎರಡು ಕೈಯಲ್ಲಿ ಅದರ ಕೊನೆಯ ಎರಡೂ ತುದಿಗಳನ್ನು ಹಿಡಿದು ನಿಂತಿರುತ್ತಾನೆ. ಪುರುಷ ಮಣಿಕಂಠ, ಮುಂಗೈಪಟ್ಟಿ, ತೋಳ್ಬಂದಿ, ಬಾಹುವಲ್ಯ, ಎದೆಹಾರ, ಯಜ್ಞೋಪವೀತ, ಆರೋಪ್ಯಮಾಲಾ, ಕಟಿವಸ್ತ್ರ, ಕಾಲ್ಗಡಗ, ಕಿರೀಟ ಧರಿಸಿರುತ್ತಾರೆ.

ಬ. ವೈಷ್ಣವ ಶಿಲ್ಪಗಳು

ಊರು: ಕೇಶಾವರ್ (ಗಡಿ) ಸ್ಥಳ: ಕೇಶವ ನಾರಾಯಣ ಗುಡಿ

ಕಾಲ: ಸು.೧೧ನೇ ಶತಮಾನ ಶಿಲ್ಪ: ಕೇಶವ

ಸ್ಥಾನಿಕ ಭಂಗಿಯಲ್ಲಿರುವ ಕೇಶವ ಮೂರ್ತಿಯ ಹಣೆ ಮೇಲೆ ನಾಮವಿದೆ. ಚತುರ್ಭುಜಧಾರಿಯಾದ ಕೇಶವನ ಹಿಂದಿನ ಕೈಗಳಲ್ಲಿ ಶಂಖ, ವೃತ್ತಾಕಾರ ಪ್ರಯೋಗ ಚಕ್ರವನ್ನು ಕರ್ತರಿ ಬೆರಳಲ್ಲಿ ಹಿಡಿದಿರುವಂತೆ ಕೆತ್ತಿದೆ. ಮುಂದಿನ ಬಲಗೈ ಅಭಯಹಸ್ತ, ಎಡಗೈಯನ್ನು ಗದೆಯ ಮೇಲಿಟ್ಟಿದೆ. ಬಲಭಾಗಕ್ಕೆ ಕೆಳಸ್ತರ ಪ್ರಭಾವಳಿಯಲ್ಲಿ ಗರುಡ ಅಂಜಲಿ ಹಸ್ತದಲ್ಲಿ ಕುಳಿತಿದೆ. ಇಕ್ಕೆಲಲ್ಲಿ ಚಾಮರಧಾರಿಗಳಿದ್ದಾರೆ. ಕೇಶವ ಧರಿಸಿದ ಆಭರಣಗಳು–ಮುಕುಟ ಕಿರೀಟ, ಕರ್ಣಕುಂಡಲ, ಕಂಠಹಾರ, ಎದೆಹಾರ, ಯಜ್ಞೋಪವೀತ, ತೋಳ್ಬಂದಿ, ಕಡಗ (ಕೈ), ವೈಜಯಂತಿ ಹಾರ, ಕಾಲ್ಗಡಗಗಳಾಗಿವೆ. ಶಿಲ್ಪದ ಪ್ರಭಾವಳಿಯಲ್ಲಿ ಮುತ್ತಿನ ಸರದ ಅಲಂಕರಣೆ ಇದೆ. ಅಭಯ ಹಸ್ತದಲ್ಲಿ ಕಮಲವನ್ನು ಹಿಡಿದಂತಿದೆ.

ಊರು: ಕೇಶಾವರ್ (ಗಡಿ) ಸ್ಥಳ: ಕೇಶವ ನಾರಾಯಣ ಗುಡಿ

ಕಾಲ: ಸು.೧೧ನೇ ಶತಮಾನ ಶಿಲ್ಪ: ಕೇಶವ

ಕೇಶವನ ತ್ರುಟಿತ ಮೂರ್ತಿಯು ಚತುರ್ಭುಜಧಾರಿ ಸ್ಥಾನಿಕ ಭಂಗಿಯಲ್ಲಿದೆ. ಹಿಂದಿನ ಕೈಯಲ್ಲಿ ಶಂಖ, ಪ್ರಯೋಗ ಚಕ್ರ ಮುಂದಿನ ಬಲಗೈ ಅಭಯ ಹಸ್ತ ಎಡಗೈಯನ್ನು ಗದೆಯ ತುದಿಯ ಮೇಲೆ ಇಟ್ಟಂತಿದೆ. ಕೆಳಭಾಗದಲ್ಲಿ ಬಲಕ್ಕೆ ಗರುಡ ಅಂಜಲಿ ಹಸ್ತದಲ್ಲಿ ಕುಳಿತಿದೆ. ಮತ್ತು ಇಕ್ಕೆಲಗಳಲ್ಲಿ ಚಾಮರಧಾರಿಗಳ ಶಿಲ್ಪವಿದೆ.

ಮುಕುಟ ಕಿರೀಟ, ಕರ್ಣಕುಂಡಲ, ಕೊರಳ ಹಾರ, ಬಾಹುವಲ್ಯ, ತೋಳ್ಬಂದಿ, ಕಂಕಣ (ಕೈಗಡಗ), ಯಜ್ಞೋಪವೀತ, ವೈಜಯಂತಿ ಹಾರ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ. ಅಭಯ ಹಸ್ತದಲ್ಲಿ ಪದ್ಮ ಹಿಡಿದಂತಿದೆ. ಪ್ರಸ್ತುತ ತ್ರುಟಿತವಾಗಿದೆ.

ಊರು: ಹಲಚೇರಾ ಸ್ಥಳ: ಈಶ್ವರ ದೇವಾಲಯ

ಕಾಲ: ಸು.೧೧ನೇ ಶತಮಾನ ಶಿಲ್ಪ: ಕೇಶವ (ವಿಷ್ಣು)

ಚತುರ್ಭುಜಧಾರಿ ವಿಷ್ಣುವಿನ ಶಿಲ್ಪ ಹಿಂದಿನ ಕೈಯಲ್ಲಿ ಶಂಖ, ಮುಂದಿನ ಕೈ ಅಭಯ ಹಸ್ತ, ಎಡಗೈಯಲ್ಲಿ ಗದೆಯನ್ನು ಹಿಡಿದಂತಿದೆ. ಮುಕುಟ ಕಿರೀಟಧಾರಣೆ, ಮುಂಗೈ ಕಂಕಣ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಸೊಂಟಪಟ್ಟಿ, ಯಜ್ಞೋಪವೀತ, ಕಾಲ್ಗಡಗ ಆಭರಣಗಳನ್ನು ಧರಿಸಿದ್ದಾನೆ.

ಊರು: ಮೋಘಾ ಸ್ಥಳ: ರಾಮಲಿಂಗೇಶ್ವರ

ಕಾಲ: ಸು.೧೧ನೇ ಶತಮಾನ ಶಿಲ್ಪ: ವಿಷ್ಣು

ಪುಷ್ಕರಣಿಯೊಂದರ ದೇವಕೋಷ್ಠದಲ್ಲಿ ವಿಷ್ಣುವಿನ ಶಿಲ್ಪ ಸ್ಥಾನಿಕ ಭಂಗಿಯಲ್ಲಿದೆ. ಕೈಯಲ್ಲಿ ಶಂಖ, ಪದ್ಮ ಹಿಡಿದ ದ್ವಿಭುಜಧಾರಿಯ ಶಿಲ್ಪವಿದೆ. ವೈಜಯಂತಿ ಹಾರ, ಯಜ್ಞೋಪವೀತ, ಕಿರೀಟ, ಕಟಿವಸ್ತ್ರ, ಕಾಲ್ಗಡಗ, ಮುಂಗೈ ಕಂಕಣ (ಮಣಿಕಂಠ) ಧರಿಸಿರುವ ಶಿಲ್ಪ ಕೆತ್ತಲಾಗಿದ್ದು, ಬಲಭಾಗಕ್ಕೆ ಅಂಜಲಿ ಹಸ್ತದ ಗರುಡ ಕುಳಿತಿರುವ ಶಿಲ್ಪ ಕೆಳಭಾಗದ ಪ್ರಭಾವಳಿಯಲ್ಲಿದೆ.

ಊರು: ಮೋಘಾ ಸ್ಥಳ: ರಾಮಲಿಂಗೇಶ್ವರ

ಕಾಲ: ಸು.೧೧ನೇ ಶತಮಾನ ಶಿಲ್ಪ: ಅನಂತ ಪದ್ಮನಾಭ

ಪುಷ್ಕರಣಿಯೊಂದರ ದೇವಕೋಷ್ಠದಲ್ಲಿ ಅನಂತ ಪದ್ಮನಾಭನ ಶಿಲ್ಪವಿದೆ. ಶಯನಾಸನ ಭಂಗಿಯಲ್ಲಿರುವ ವಿಷ್ಣು ಐದು ಹೆಡೆಯ ನಾಗನ ಮೇಲೆ ಮಲಗಿದ ಶಿಲ್ಪವಿದೆ. ಕಮಲದಲ್ಲಿ ಕುಳಿತ ಬ್ರಹ್ಮ ಶಿಲ್ಪ ವಿಷ್ಣುವಿನ ನಾಭಿಯಿಂದ ಹೊರಬಂದಂತಿದೆ. ಹಿಂದಿನ ಬಲಗೈ ಮಡಚಿ ಮುಂಗೈಯನ್ನು ತಲೆಗೆ ಆಧಾರವಾಗಿಟ್ಟು ಧ್ಯಾನದಲ್ಲಿ ಮಗ್ನನಾಗಿರುವಂತೆ ಕೆತ್ತಲಾಗಿದೆ. ಮುಂದಿನ ಬಲಗೈ ಅಭಯ ಹಸ್ತ, ಮುಂದಿನ ಎಡಗೈ ಉದ್ದನೆ ತೊಡೆಯವರೆಗೆ ಚಾಚಲ್ಪಟ್ಟಿದೆ. ಹಿಂದಿನ ಎಡಗೈಯಲ್ಲಿ ಶಂಖ ವೈಜಯಂತಿ ಹಾರ ಹಿಡಿದಂತಿದೆ. ತೋಳ್ಬಂದಿ, ಮುಂಗೈಪಟ್ಟಿ, ಕಿರೀಟಧಾರಣೆ, ಎಡಗಾಲು ಉದ್ದಗೆ ಚಾಚಿದ್ದು ಲಕ್ಷ್ಮಿ ಕುಳಿತ ಭಂಗಿಯಲ್ಲಿ ಆ ಪಾದವನ್ನು ಹಿಡಿದು ಒತ್ತುವಂತೆ ಕೆತ್ತಲಾಗಿದೆ. ವೃತ್ತಾಕಾರ ಕುಂಡಲ, ಕಿರೀಟ, ಬಾಹುವಲ್ಯ, ತೊಳ್ಬಂದಿ,

ಎದೆಹಾರ, ಕಾಲ್ಗಡಗ, ಕೊರಳಹಾರ ಲಕ್ಷ್ಮಿಯು ಧರಿಸಿರುವಂತಿದೆ. ಲಕ್ಷ್ಮಿಯ ಹಿಂದೆ ಅನಂತ ಪದ್ಮನ ಕಾಲ ಬಳಿ ಸ್ಥಾನಿಕ ಗರುಡ ಅಂಜಲಿ ಹಸ್ತದಲ್ಲಿದ್ದಾನೆ.

ಊರು: ಕೋಡ್ಲಿ   ಸ್ಥಳ: ರಾಮಲಿಂಗೇಶ್ವರ

ಕಾಲ: ಸು.೧೧ನೇ ಶತಮಾನ   ಶಿಲ್ಪ: ವಿಷ್ಣು

ಚತುರ್ಭುಜಧಾರಿ ವಿಷ್ಣುವಿನ ಹಿಂದಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಮುಂದಿನ ಬಲಗೈ ಅಭಯಹಸ್ತ, ಎಡಗೈ ಗದೆಯ ಮೇಲೆ ಇಟ್ಟಂತಿದೆ. ಬಲಭಾಗದ ಪ್ರಭಾವಳಿಯಲ್ಲಿ ಅಂಜಲಿ ಹಸ್ತದ ಗರುಡನ ಶಿಲ್ಪ ಕುಳಿತ ಭಂಗಿಯಲ್ಲಿದೆ. ಇಕ್ಕೆಲಗಳಲ್ಲಿ ಚಾಮರಧಾರಿ ದೇವ ಕನ್ಯೆಯರ ಶಿಲ್ಪವಿದೆ. ಮುಕುಟ ಕಿರೀಟ, ಮಣಿಕಂಠ, ಕಂಠಹಾರ, ಯಜ್ಞೋಪವೀತ, ಕರ್ಣ ಕುಂಡಲ, ವೈಜಯಂತಿ ಹಾರ, ಕುಚಹಾರ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ. ಶಿಲ್ಪದ ಪ್ರಭಾವಳಿ ಯಲ್ಲಿ ಮಕರತೋರಣವಿದೆ.

ಊರು: ಹಲ್‌ಚೇರಾ   ಸ್ಥಳ: ಈಶ್ವರ ದೇವಾಲಯ

ಕಾಲ: ಸು.೧೧ನೇ ಶತಮಾನ   ಶಿಲ್ಪ: ವಿಷ್ಣು

ವಿಷ್ಣುವಿನ ಶಿಲ್ಪದ ಹಿಂದಿನ ಎಡಗೈಯಲ್ಲಿ ಶಂಖ, ಬಲಗೈ ಪ್ರಸ್ತುತ ತ್ರುಟಿತವಾಗಿದೆ. ಮುಂದಿನ ಬಲಗೈ ಅಭಯಹಸ್ತ, ಎಡಗೈಯನ್ನು ಗದೆಯ ಮೇಲಿಟ್ಟಿರುವಂತೆ ಕೆತ್ತಲ್ಪಟ್ಟಿದೆ. ಕಿರೀಟ ಮುಕುಟಧಾರಿ, ತೊಳ್ಬಂದಿ, ಮಣಿಕಂಠ, ಕಾಲ್ಗಡಗ, ಕೊರಳಹಾರ, ಸೊಂಟಪಟ್ಟಿ, ಯಜ್ಞೋಪವೀತ, ವೈಜಯಂತಿ ಹಾರ ಧರಿಸಿದೆ.

ಊರು: ನಿಡಗುಂದ   ಸ್ಥಳ: ನವಕೋಟಿ ನಾರಾಯಣ ಗುಡಿ

ಕಾಲ: ಸು.೧೦ನೇ ಶತಮಾನ   ಶಿಲ್ಪ: ಲಕ್ಷ್ಮೀ ನರಸಿಂಹ

ನವಕೋಟಿ ನಾರಾಯಣ ಗುಡಿ ಎಡಭಾಗಕ್ಕೆ ಲಕ್ಷ್ಮೀ ನರಸಿಂಹ ಶಿಲ್ಪವಿದೆ. ಎರಡೂ ಮೂರ್ತಿಶಿಲ್ಪಗಳು ನಿಂತಿದ್ದು, ಲಕ್ಷ್ಮಿಯ ಕಟಿಯ ಮೇಲೆ ನರಸಿಂಹನ ಎಡಗಾಲು ಆವರಿಸಿದೆ. ನರಸಿಂಹ ಚತುರ್ಭುಜಧಾರಿಯಂತೆ ತೋರುವ ಈ ಶಿಲ್ಪ ಬಹಳ ತ್ರುಟಿತವಾಗಿದೆ.

ಊರು: ನಿಡಗುಂದ   ಸ್ಥಳ: ನವಕೋಟಿ ನಾರಾಯಣ ಗುಡಿ

ಕಾಲ: ಸು.೧೦ನೇ ಶತಮಾನ   ಶಿಲ್ಪ: ಕೇಶವ

ಗರ್ಭಗುಡಿಯ ಕೇಶವ ಶಿಲ್ಪ ಚತುರ್ಭುಜಧಾರಿಯಾಗಿದ್ದು ಮುಂದಿನ ಬಲಗೈ ಅಭಯ ಹಸ್ತದಲ್ಲಿದೆ. ಎಡಗೈಯನ್ನು ಗದೆಯ ಮೇಲಿಟ್ಟಿದೆ. ಹಿಂದಿನ ಕೈಗಳಲ್ಲಿ ಶಂಖ, ಚಕ್ರಗಳು

ಹಿಡಿದಿದೆ. ಮುಕುಟಧಾರಿ, ಕೊರಳಹಾರ, ಎದೆಹಾರ, ಸೊಂಟಪಟ್ಟಿ, ಕಟಿವಸ್ತ್ರ, ಮಣಿಕಂಠ, ತೋಳ್ಬಂದಿ, ಕಾಲ್ಗಡಗ ಧರಿಸಿದಂತಿದೆ. ಯಜ್ಞೋಪವೀತ ಮತ್ತು ವೈಜಯಂತಿ ಹಾರ ಧರಿಸಿದಂತೆ ಶಿಲ್ಪಾವಳಿಯಲ್ಲಿ ಮೂಡಿದೆ.

ಊರು: ರುಮ್ಮನಗೂಡು ಸ್ಥಳ: ಶಂಕರ ನಾರಾಯಣ ದೇವಾಲಯ

ಕಾಲ: ಸು.೧೧ನೇ ಶತಮಾನ ಶಿಲ್ಪ: ಮಾಧವ

ಚತುರ್ಭುಜಧಾರಿ ಮಾಧವನ ಶಿಲ್ಪ ದೇವಾಲಯದ ಗರ್ಭಗುಡಿಯಲ್ಲಿದೆ. ಹಿಂದಿನ ಕೈಗಳಲ್ಲಿ ದಂಡವುಳ್ಳ ವೃತ್ತಕಾರ ಚಕ್ರ ಮತ್ತು ಶಂಖ ಮುಂದಿನ ಬಲಗೈಯಲ್ಲಿ ಗದೆ, ಎಡಗೈ ವರದ ಮುದ್ರೆಯಲ್ಲಿದೆ. ಕಿರೀಟ ಮುಕುಟ, ಬಾಹುವಲ್ಯ, ತೋಳ್ಬಂದಿ, ಎದೆಪಟ್ಟಿ, ಕೊರಳಹಾರ, ಕರ್ಣಕುಂಡಲ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಸೊಂಟಪಟ್ಟಿ ಧರಿಸಿದ್ದಾನೆ.

ಮೋಘಾದ ರಾಮಲಿಂಗೇಶ್ವರ ಗುಡಿಯ ಸು.೧೧ನೇ ಶತಮಾನದ ಪೀಠದ ಮೇಲೆ ಆಸೀನ ವಿಷ್ಣು ಶಿಲ್ಪ ಮತ್ತು ಸ್ಥಾನಿಕ ವಿಷ್ಣು ಶಿಲ್ಪವಿದೆ (ಕ.ಸ.ಗೆ.ಕ.ಜಿ.೧೯೭೭,ಪು.೭೬೩). ರುಮ್ಮನಗೂಡು ರಾಮಲಿಂಗೇಶ್ವರ ಸು.೧೧ನೇ ಶತಮಾನದ ವಿಷ್ಣು ಶಿಲ್ಪವಿದೆ (ಕ.ಸ.ಗೆ.ಕ.ಜಿ. ೧೯೭೭,ಪು.೭೭೧). ಕರಕ್‌ಮುಕ್ಲಿಯ ಮಲ್ಲಿಕಾರ್ಜುನ ಗುಡಿಯಲ್ಲಿ ಸು.೧೧ನೇ ಶತಮಾನದ ವಿಷ್ಣು ಮತ್ತು ಕೇಶವ ಶಿಲ್ಪಗಳು ನವರಂಗದಲ್ಲಿವೆ (ಕ.ಸ.ಗೆ.ಕ.ಜಿ.೧೯೭೭,ಪು.೬೯೪).

ಶಿರೋಳ್ಳಿ ಹರಿಹರ ದೇವಾಲಯ ಗುಡಿಯ ನಾರಾಯಣ ಶಿಲ್ಪ ಶಾಸನದ ಮೇಲಿದೆ. ರುಮ್ಮನಗೂಡದ ಶಂಕರನಾರಾಯಣ ದೇವಾಲಯದಲ್ಲಿನ ವಿಷ್ಣು, ಕೇಶವ, ಉಗ್ರನರಸಿಂಹ, ವಾಮನ ಶಿಲ್ಪಗಳಿವೆ. ಇಲ್ಲಿಯ ಅಧಿಷ್ಠಾನದಲ್ಲಿರುವ ಚತುರ್ವಿಂಶತಿ ವಿಷ್ಣು ರೂಪಗಳು ಲಕ್ಷ್ಮಿ ಶಿಲ್ಪಸಹಿತ ಪಟ್ಟಿಕೆಯಲ್ಲಿದೆ. ಚಕ್ರ ಹಿಡಿದು ಲಕ್ಷ್ಮಿಯನ್ನು ಎಡಗೈಯಿಂದ ಬಳಸಿ ಆಕೆಯ ಬಲಭುಜದ ಮೇಲೆ ಹಾಕಿರುವಂತಿದೆ. ಗದೆಯ ಮೇಲೆ ತನ್ನ ಎಡಗೈಯನ್ನು ಇಟ್ಟಂತಿದೆ. ಎತ್ತರದ ಕಿರೀಟ, ಎದೆಹಾರ, ಯಜ್ಞೋಪವೀತ, ಸೊಂಟಪಟ್ಟಿ, ವೈಜಯಂತಿ ಹಾರ, ಕಾಲ್ಗಡಗ, ಕಟಿವಸ್ತ್ರ, ಕಂಠಾಭರಣ ಧರಿಸಿದೆ. ಲಕ್ಷ್ಮಿ ಎಡಕ್ಕೆ ತ್ರಿಭಂಗಿ ಸ್ಥಿತಿಯಲ್ಲಿ ನಿಂತಿದೆ. ಅವಳ ಬಲಗೈಯನ್ನು ವಿಷ್ಣುವಿನ ಭುಜಕ್ಕೆ ಆವರಿಸಿದಂತೆ ಎಡಗೈಯಲ್ಲಿ ಕಮಲ ಹಿಡಿದಿದೆ. ಕುಂತಲ ಕಿರೀಟ ಧರಿಸಿದೆ. ಹೀಗೆ ಅಧಿಷ್ಠಾನ ಪಟ್ಟಿಯಲ್ಲಿ ವಿಷ್ಣು ಮತ್ತು ಲಕ್ಷ್ಮಿಯ ಶಿಲ್ಪಗಳು ಮೂಡಿಬಂದಿವೆ. ಪ್ರಭಾವಳಿಯಲ್ಲಿ ಕೀರ್ತಿಮುಖ, ಹೂಬಳ್ಳಿ ಮತ್ತು ಮಕರತೋರಣವಿದೆ. ವಿಷ್ಣು ಲಕ್ಷ್ಮಿ ಶಿಲ್ಪದ ನಂತರ ಕುಡ್ಯಸ್ತಂಭ ಮತ್ತೆ ವಿಷ್ಣು ಲಕ್ಷ್ಮಿ ಶಿಲ್ಪವಿದೆ. ಅಗಸಿಯ ಗೋಡೆಯ ಮೇಲಿನ ಶಿಲ್ಪದಲ್ಲಿ ಲಕ್ಷ್ಮಿಯ ಎಡಕ್ಕೆ ವಿಷ್ಣುವಿನ ಶಿಲ್ಪ ತೋರಿಸಿರುವುದು ವಿಶೇಷವಾಗಿದೆ.[೯೩]

ರುಮ್ಮನಗೂಡಿನ ಶಂಕರನಾರಾಯಣ ದೇವಾಲಯದ ಸ್ತಂಭಗಳ ಮೇಲೆ ಹೂಬಳ್ಳಿ ಅಲಂಕರಣೆಯಲ್ಲದೆ, ವಿಷ್ಣುವಿನ ಅಷ್ಟಭುಜಧಾರಿ ಶಿಲ್ಪವಿದೆ. ಉಗ್ರನರಸಿಂಹನ ಶಿಲ್ಪಗಳು, ವಾಮನ ಮತ್ತು ವಿಷ್ಣುವಿನ ಶಿಲ್ಪಗಳಿವೆ. ಒಂದು ಸ್ತಂಭದಲ್ಲಿ ನೃತ್ಯ ಮಾಡುತ್ತಿರುವ ವಿಷ್ಣುವಿನ ಶಿಲ್ಪವಿದೆ. ಇನ್ನೊಂದು ಸ್ತಂಭ ಶಿಲ್ಪದಲ್ಲಿ ಅಷ್ಟಭುಜಧಾರಿ ಉಗ್ರನರಸಿಂಹ ತನ್ನ ತೊಡೆಯ ಮೇಲೆ ಹಿರಣ್ಯಕಶ್ಯಪನನ್ನು ಮಲಗಿಸಿ ಉದ್ದನೆ ಉಗುರುಗಳಿಂದ ಹೊಟ್ಟೆ ಸೀಳುವ ಶಿಲ್ಪವಿದೆ. ಭಕ್ತಪ್ರಹ್ಲಾದ ಮತ್ತು ಲಕ್ಷ್ಮಿ ಶಿಲ್ಪದ ಮಧ್ಯದಲ್ಲಿ ನರಸಿಂಹನ ಶಿಲ್ಪವಿದೆ. ಮತ್ತೊಂದು ಸ್ತಂಭದಲ್ಲಿ ಕೀರ್ತಿಮುಖ ಮಾಲೆಯೊಳಗೆ ಪೀಠಸ್ತ ಮೂರು ವಿಷ್ಣುವಿನ ಶಿಲ್ಪಗಳಿವೆ. ಹೊರ ಗರ್ಭಗುಡಿ ಲಲಾಟದ ಮೇಲೆ ಚತುರ್ಭುಜಧಾರಿ ಉಗ್ರನರಸಿಂಹ ಹಿರಣ್ಯ ಕಶ್ಯಪನ ಹೊಟ್ಟೆ ಬಗೆಯುವ ಕಥಾನಕ ದೃಶ್ಯವಿದೆ.

ನಿಡಗುಂದದ ಕಾಳಮ್ಮ ದೇವಾಲಯದಲ್ಲಿ ವಿಷ್ಣುವಿನ ದಶಾವತಾರಗಳ ಶಿಲ್ಪವಿದೆ. ವಿಷ್ಣುವಿನ ನಾಭಿಯಿಂದ ಬ್ರಹ್ಮನ ಉದ್ಭವ, ಸಮುದ್ರ ಮಂಥನದಲ್ಲಿ ಲಕ್ಷ್ಮಿ ಉದ್ಭವ, ಕೂರ್ಮಾವತಾರ, ವಾಮನ ಅವತಾರ, ರಾಮನ, ಕೃಷ್ಣನ, ಹೈಗ್ರೀವನ, ಬಲರಾಮನ ಅವತಾರಗಳ ಶಿಲ್ಪಗಳು ಹೀಗೆ ನವರಂಗದ ಸ್ತಂಭಗಳ ಮೇಲಿವೆ.

ಊರು: ದೇಗಲ್ಮಡಿ ಸ್ಥಳ: ಜೈನ ದೇವಾಲಯ

ಕಾಲ: ಸು.೧೧ನೇ ಶತಮಾನ ಶಿಲ್ಪ: ಹನುಮಾನ

ಹನುಮಾನ ಶಿಲ್ಪ ಸು.೧.೫ ಅಡಿ ಎತ್ತರ ಇದ್ದು, ಈ ಶಿಲ್ಪ ಪೀಠದಲ್ಲಿದೆ. ಅಭಯಹಸ್ತ, ಸೊಂಟದ ಮೇಲೆ ಎಡಗೈಯನ್ನು ಅದರೊಳಗೆ ಗದೆ ಹಿಡಿದಿದೆ. ನಿಂತ ಭಂಗಿಯಲ್ಲಿದೆ.

ಊರು: ಕರಕ್‌ಮುಕ್ಲಿ ಸ್ಥಳ: ಹನುಮಾನ ಮಂದಿರ

ಕಾಲ: ಸು.೯ನೇ ಶತಮಾನ ಶಿಲ್ಪ: ಹನುಮಾನ

ಶಿಲ್ಪ ಸು.೫.೮ ಅಡಿ ಎತ್ತರವಾಗಿದೆ. ಕಪ್ಪುಶಿಲೆಯಲ್ಲಿದೆ. ಎತ್ತರ ಪಾದವನ್ನುಳ್ಳ ಶಿಲ್ಪದಲ್ಲಿ ಗದೆಯನ್ನು ಎಡಗೈಯಲ್ಲಿ ಹಿಡಿದುಕೊಂಡ ಕಟಿಹಸ್ತ ಇದೆ. ಬಲಗೈ ಅಭಯ ಮುದ್ರೆಯಲ್ಲಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೧೦ನೇ ಶತಮಾನ ಶಿಲ್ಪ: ಹನುಮಾನ

ಪುರಾತನ ಹನುಮಂತ ತ್ರುಟಿತವಾಗಿದೆ. ಬಲಗೈ ಅಭಯಹಸ್ತ, ಎಡಗೈಯಲ್ಲಿ ಗದೆ ಹಿಡಿದು ಸೊಂಟದ ಮೇಲೆ ಇಟ್ಟುಕೊಂಡಂತಿದೆ. ಕಿರೀಟಧಾರಿ, ಯಜ್ಞೋಪವೀತ, ಕಾಲ್ಗಡಗ, ಮಣಿಕಂಠ, ಕಂಠಹಾರ ಧರಿಸಿದಂತಿದೆ.

ಊರು: ಗೊಟ್ಟಂಗೊಟ್ಟಿ ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು.೧೦ನೇ ಶತಮಾನ ಶಿಲ್ಪ: ಹನುಮಾನ

ಗುಡ್ಡದ ಮೇಲಿರುವ ಇನ್ನೊಂದು ಪುರಾತನ ಹನುಮಾನ ಶಿಲ್ಪ ಬ್ರಾಹ್ಮಣ ವೇಷದಲ್ಲಿದೆ. ಅಂಜಲಿ ಹಸ್ತದಲ್ಲಿದೆ. ಅದರ ಎದುರು ಜೋಡಿ ಪಾದುಕೆಗಳಿವೆ. ಮುಡಿ ಕಟ್ಟಿನಿಂತಂತೆ ಶಿಲ್ಪಾವಳಿಯಲ್ಲಿ ಮೂಡಿಬಂದಿದೆ. ರುದ್ರಾಕ್ಷಿ ಮಾಲೆಗಳು, ಮಣಿಕಂಠ, ತೊಳ್ಬಂದಿ, ಕರ್ಣಕುಂಡಲ ಧರಿಸಿದೆ.

ದೇಗಲ್ಮಡಿ ಊರ ಹೊರಗಿನ ಗುಡಿಯ ಪ್ರಾಂಗಣದಲ್ಲಿ ತ್ರುಟಿತ ಹನುಮಾನ ಶಿಲ್ಪವಿದೆ. ಮೂರು ಪಟ್ಟಿಯ ಕಂಠಮಾಲೆ ಧರಿಸಿದೆ. ಕರ್ಣಕುಂಡಲ, ಅಭಯಹಸ್ತ?(ತ್ರುಟಿತ), ಎಡಗೈಯಲ್ಲಿ ಗದೆ, ಮಣಿಕಂಠಧಾರಿ ಹಣೆಪಟ್ಟಿಕೆ? (ತ್ರುಟಿತ), ಕಾಲ್ಗಡಗ, ಪೈಜಾಮ ಧರಿಸಿದೆ. ಕಾಲ ಕೆಳಗೆ ಶನಿಯು ಬೊರಲು ಬಿದ್ದಂತೆ ಕೆತ್ತಿದೆ. ಶನಿಯ ತಲೆಯ ಮೇಲೆ ಹನುಮಂತ ತನ್ನ ಎಡಗಾಲು ಇಟ್ಟಿದೆ. ಶನಿ ಚಾಕು ಮತ್ತು ಗುರಾಣಿ ಹಿಡಿದಂತೆ ಕೆತ್ತಿದೆ. ಚಿಂಚೋಳಿಯ ವೆಂಕಟೇಶ್ವರ ದೇವಾಲಯದಲ್ಲಿ ವೆಂಕಟೇಶ್ವರ ಮೂರ್ತಿ ಮತ್ತು ರಾಣಾಪುರದಲ್ಲಿ ವೆಂಕಟೇಶ್ವರನ ಮೂರ್ತಿಶಿಲ್ಪಗಳಿವೆ.

ಇತರೆ ವೈಷ್ಣವ ಶಿಲ್ಪಗಳು:

* **ವೈಷ್ಣವ ದ್ವಾರಪಾಲಕರು** : ವೈಷ್ಣವ ದ್ವಾರಪಾಲಕರಾದ ಜಯ, ವಿಜಯರ ಶಿಲ್ಪ ಸಾಮಾನ್ಯವಾಗಿ ವೈಷ್ಣವ ದೇವಾಲಯಗಳಲ್ಲಿರುತ್ತವೆ. ಉದಾ: ರುಮ್ಮನಗೂಡಿನ ಶಂಕರ ನಾರಾಯಣ ಗುಡಿಯಲ್ಲಿ ವೈಷ್ಣವ ದ್ವಾರಪಾಲಕರ ಸು.೪ ಅಡಿ ಎತ್ತರದ ಶಿಲ್ಪವಿದೆ (ಕ.ಸ.ಗೆ.ಕ.ಜಿ.೧೯೭೭ಪು.೭೭೧). ಆದರೆ ಈಗ ತ್ರುಟಿತವಾಗಿದೆ. ಈ ದೇವಾಲಯದ ಮೊದಲ ಗರ್ಭಗುಡಿ ಪ್ರವೇಶ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಾದ ಜಯ ವಿಜಯರ ಶಿಲ್ಪಗಳಿವೆ. ರುಮ್ಮನಗೂಡಿನ ಶಂಕರ ನಾರಾಯಣ ದೇವಾಲಯದಲ್ಲಿ ಚತುರ್ಭುಜಧಾರಿಗಳು ಹಿಂದಿನ ಕೈಯಲ್ಲಿ ವೃತ್ತಾಕಾರ ದಂಡವುಳ್ಳ ಚಕ್ರ, ಶಂಖ, ಗದೆ ಮತ್ತು ವರದ ಮುದ್ರೆಯಿದೆ. ಎದೆಪಟ್ಟಿ, ಕೊರಳಹಾರ, ಸೊಂಟಪಟ್ಟಿ, ಕಟಿವಸ್ತ್ರ, ಯಜ್ಞೋಪವೀತ, ವೈಜಯಂತಿ ಹಾರ, ಕಾಲ್ಗಡಗ, ಕಿರೀಟ ಧರಿಸಿರುವುದು ಈ ಶಿಲ್ಪದ ಲಕ್ಷಣಗಳಾಗಿವೆ.

* **ಚಾಮರಧಾರಿಗಳು:** ಹೆಚ್ಚಾಗಿ ದೇವಕನ್ಯೆಯರನ್ನು ಚಾಮರಧಾರಿಗಳಾಗಿ ತೋರಿಸಿದೆ. ಕುಂತಲ, ತೊಳ್ಬಂದಿ, ಮಣಿಕಂಠ, ಕಾಲ್ಗಡಗ, ಕುಚಹಾರ, ಕಂಠಹಾರ, ಕೊರಳಹಾರ, ಯಜ್ಞೋಪವೀತ, ಕಟಿವಸ್ತ್ರ ಧರಿಸಿದಂತಿದೆ. ಚಾಮರ ಹಿಡಿದು ದೇವಕನ್ಯೆಯರು ತ್ರಿಭಂಗಿಯಲ್ಲಿ ನಿಂತಂತಿದೆ. ಉದಾ: ರುಮ್ಮನಗೂಡಿನ ಶಂಕರ ನಾರಾಯಣ ಗುಡಿ.

* **ಗರುಡ:** ವಿಷ್ಣುವಿನ ಬಲಭಾಗಕ್ಕೆ ಕೆಳಬದಿಯಲ್ಲಿ ಆತನ ವಾಹನವಾದ ಗರುಡ ಶಿಲ್ಪವಿದೆ. ಮಾನವ ರೂಪದಲ್ಲಿ ಹೆಚ್ಚಾಗಿ ಈ ಶಿಲ್ಪವಿದ್ದು ಅಂಜಲಿ ಹಸ್ತದಲ್ಲಿ ಕುಳಿತಿದೆ. ಉದಾ: ಗಡಿ ಕೇಶವಾರದ ಕೇಶವ ನಾರಾಯಣ ಗುಡಿ. ಸಾಮಾನ್ಯವಾಗಿ ದೇವಾಲಯದ ಗರ್ಭಗುಡಿ ಎದುರಿನ ಪ್ರಾಂಗಣದಲ್ಲಿ ಗರುಡ ಕೆತ್ತನೆ ಇರುವ ಗರುಡ ಸ್ತಂಭ ಸ್ಥಾಪಿತವಾಗಿರುತ್ತದೆ. ಉದಾ: ಚಿಂಚೋಳಿ ವೆಂಕಟೇಶ್ವರ ದೇವಾಲಯ.

ಕ. ಜೈನ ಮೂರ್ತಿಶಿಲ್ಪಗಳು

ಊರು: ಮಿರ್ಯಾಣ ಸ್ಥಳ: ಊರ ಪ್ರವೇಶದಲ್ಲಿ

ಕಾಲ: ಸು.೧೧ನೇ ಶತಮಾನ ರಾಜವಂಶ: ಕಲ್ಯಾಣ ಚಾಲುಕ್ಯರು

ಶಿಲ್ಪ: ಪಾರ್ಶ್ವನಾಥ

ಪಾರ್ಶ್ವನಾಥನ ಮೂರ್ತಿಶಿಲ್ಪವು ಕಪ್ಪುಶಿಲೆಯಲ್ಲಿದೆ. ಪೀಠದಲ್ಲಿ ಪದ್ಮಾಸನ ಭಂಗಿಯಲ್ಲಿ ಧ್ಯಾನಸ್ಥನಾಗಿದ್ದಾನೆ. ಗುಂಗುರು ಕೂದಲಿನ ಜಟಾ ತಲೆ ಮೇಲಿದೆ. ಹಿಂದೆ ಒಂಬತ್ತು ಹೆಡೆ ನಾಗಶಿಲ್ಪವಿದೆ. ಮೇಲೆ ಮುಕ್ಕೊಡೆ ಜೈನ ಪ್ರಭಾವನ್ನು ತೋರಿಸುತ್ತದೆ. ಈ ಶಿಲ್ಪದ ಇಕ್ಕೆಲಗಳಲ್ಲಿ ಯಕ್ಷ ಧರಣೇಂಧ್ರ ಮತ್ತು ಯಕ್ಷಿ ಪದ್ಮಾವತಿಯ ಶಿಲ್ಪಗಳಿವೆ. ಪ್ರಭಾವಳಿಯ ಸ್ತಂಭದ ಮೇಲೆ ನಿಂತು ಚಾಮರಧಾರಿಗಳು ಚಾಮರ ಬೀಸುತ್ತಿರುವ ಶಿಲ್ಪ ಪ್ರಭಾವಳಿಯಲ್ಲಿ ಲಲಾಟದ ಮೇಲೆ ಮತ್ತು ಸ್ತಂಭದಲ್ಲಿ ಚವ್ವೀಸ್ ತೀರ್ಥಂಕರ ಬಿಂಬಗಳಿವೆ.

ಊರು: ಕೇಶವಾರ್ (ಗಡಿ) ಸ್ಥಳ: ಊರ ಮಧ್ಯ (ಪಾರ್ಶ್ವನಾಥ ಬಸದಿ)

ಕಾಲ: ಸು.೧೧ನೇ ಶತಮಾನ ಶಿಲ್ಪ: ಪಾರ್ಶ್ವನಾಥ

ಪದ್ಮಾಸೀನನಾದ ಪಾರ್ಶ್ವನಾಥ ಧ್ಯಾನದಲ್ಲಿ ತೊಡಗಿದಂತಿದೆ. ಗುಂಗುರು ಕೂದಲಿನ ಜಟೆ, ತಲೆ ಹಿಂದೆ ಏಳು ಹೆಡೆಯ ನಾಗಶಿಲ್ಪ ಮತ್ತು ಮೇಲ್ಭಾಗದಲ್ಲಿ ಮುಕ್ಕೊಡೆಗಳು ಇವೆ. ಕಪ್ಪುಶಿಲೆಯ ಈ ಶಿಲ್ಪದ ಪ್ರಭಾವಳಿ ಸರಳವಾಗಿದೆ. ಚಾಮರಧಾರಿಗಳು ಸ್ತಂಭದ ಮೇಲೆ ನಿಂತಿವೆ.

ಊರು: ಕೇಶಾವರ್ (ಗಡಿ) ಸ್ಥಳ: ಪಾರ್ಶ್ವನಾಥ ಬಸದಿ (ಊರ ಮಧ್ಯ)

ಕಾಲ: ಸು.೧೧ನೇ ಶತಮಾನ ಶಿಲ್ಪ: ಪಾರ್ಶ್ವನಾಥ

ಗರ್ಭಗುಡಿಯ ಬಾಗಿಲ ಬಳಿ ಸ್ಥಾನಿಕ ಪಾರ್ಶ್ವನಾಥ ಶಿಲ್ಪವಿದೆ. ಏಳು ಹೆಡೆ ಅದರ ಮೇಲೆ ಮುಕ್ಕೊಡೆಯನ್ನು ಕೆತ್ತಲ್ಪಟ್ಟಿದೆ. ಗುಂಗುರು ಕೂದಲಿನ ಜಟೆ ಧರಿಸಿದೆ. ಪಾರ್ಶ್ವನಾಥನ

ಹಿಂದೆ ಜೋಡಿ ನಾಗಗಳು ಸುರುಳಿಸುತ್ತಿ ತಲೆ ಮೇಲೆ ಹೆಡೆ ತೆಗೆದು ನಿಂತಿವೆ. ಇದು ಸು. ೫.೮ ಅಡಿ ಉದ್ದ ಎತ್ತರವಾಗಿದೆ.

ಊರು: ಸುಲೇಪೇಟೆ ಸ್ಥಳ: ಜೈನ ಬಸದಿ (ಊರ ಮಧ್ಯ)

ಕಾಲ: ಸು.೧೧ನೇ ಶತಮಾನ ಶಿಲ್ಪ: ಪಾರ್ಶ್ವನಾಥ

ಈ ಶಿಲ್ಪದಲ್ಲಿ ಏಳು ಹೆಡೆಯ ನಾಗಶಿಲ್ಪ, ಪ್ರಭಾವಳಿಯಲ್ಲಿ ತೇಜಸ್ಸಿನ ವೃತ್ತಕಾರ ಚಕ್ರ, ಹೆಡೆಯ ಮೇಲೆ ಮುಕ್ಕೊಡೆ ಕೆತ್ತಲ್ಪಟ್ಟಿವೆ. ಪಾರ್ಶ್ವನಾಥ ಸ್ಥಾನಿಕ ಭಂಗಿಯಲ್ಲಿದ್ದು ಹಿಂದೆ ಸುರುಳಿ ಸುತ್ತಿದ ಹಾವಿನ ಶಿಲ್ಪ ಕೆತ್ತಲ್ಪಟ್ಟಿದೆ. ಸು.೬ ಅಡಿ ಎತ್ತರವಾಗಿದೆ. ಶಿಲ್ಪದಲ್ಲಿ ಗುಂಗುರು ಇಳಿಬಿಟ್ಟ ಕೂದಲು, ತೀರ್ಥಂಕರರ ನಗುಮುಖವಿದೆ.

ಊರು: ಸುಲೇಪೇಟೆ ಸ್ಥಳ: ಜೈನ ಬಸದಿ (ಊರ ಮಧ್ಯ)

ಕಾಲ: ಸು.೧೧ನೇ ಶತಮಾನ ಶಿಲ್ಪ: ವೃಷಭನಾಥ

ಇಲ್ಲಿ ಮತ್ತೊಂದು ಜೈನ ತೀರ್ಥಂಕರನಾದ ವೃಷಭನಾಥನ ಶಿಲ್ಪವಿದೆ. ಇದು ಸ್ಥಾನಿಕ ಭಂಗಿಯಲ್ಲಿ ಸು. ಆರು ಅಡಿ ಎತ್ತರವಾಗಿದೆ. ಗುಂಗುರು ಕೂದಲು, ಎದೆಯ ಮೇಲೆ ಶ್ರೀವತ್ಸ ಚಿಹ್ನೆ, ತಳಭಾಗದ ಇಕ್ಕೆಲಲ್ಲಿ ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಜೈನ ಬಿಂಬಗಳಿವೆ. ಇವು ಈ ಶಿಲ್ಪದ ವೈಶಿಷ್ಟ್ಯತೆಯಾಗಿದೆ. ಮುಕ್ಕೊಡೆ ಶಿಲ್ಪದ ಪ್ರಭಾವಳಿಯಲ್ಲಿದೆ. ಶಿಲ್ಪದ ಭುಜಗಳ ಬಳಿ ಪ್ರಭಾವಳಿಯಲ್ಲಿ (ಇಕ್ಕೆಲಲ್ಲಿ) ಚಾಮರಗಳನ್ನು ಕೆತ್ತಲ್ಪಟ್ಟಿದೆ. ಶಿಲ್ಪದ ಲಲಾಟದ ಮೇಲೆ ಎರಡು ಜೈನ ತೀರ್ಥಂಕರರು ಪದ್ಮಾಸೀನ ಮತ್ತು ಧ್ಯಾನವಸ್ಥೆಯಲ್ಲಿರುವಂತೆ ಕೊರೆಯಲ್ಪಟ್ಟಿದೆ.

ಊರು: ಸುಲೇಪೇಟೆ ಸ್ಥಳ: ಜೈನ ಬಸದಿ (ಊರ ಮಧ್ಯ)

ಕಾಲ: ಸು.೧೧ನೇ ಶತಮಾನ ಶಿಲ್ಪ: ಪಾರ್ಶ್ವನಾಥ

ಎರಡು ಸ್ಥಾನಿಕ ಜೈನ ತೀರ್ಥಂಕರ ಮಧ್ಯದಲ್ಲಿ ಪದ್ಮಾಸೀನ ಮತ್ತು ಧ್ಯಾನಾಸಕ್ತ ಭಂಗಿಯಲ್ಲಿ ಕುಳಿತ ಪಾರ್ಶ್ವನಾಥ ಶಿಲ್ಪವಿದೆ. ಇದು ಕಪ್ಪುಶಿಲೆಯಲ್ಲಿದೆ. ಅತೀ ಹೆಚ್ಚು ಅಲಂಕರಣೆಯಿಂದ ಈ ಶಿಲ್ಪ ಕೂಡಿದೆ. ಎತ್ತರ ಪೀಠದ ಮೇಲೆ ಮೂರ್ತಿಶಿಲ್ಪವಿದೆ. ಮೂರ್ತಿಶಿಲ್ಪ ಗಾಂಧಾರ ಮತ್ತು ಮಥುರಾ ಶೈಲಿಗಳ ಸಮ್ಮಿಳಿತತೆಯನ್ನೊಳಗೊಂಡಿದೆ. ಗುಂಗುರು ಕೂದಲು, ಮೂರು ಪದರದ ಕಂಠಾಭರಣ, ಕರ್ಣಕುಂಡಲ ಮತ್ತು ಕಿವಿಯನ್ನು ಸಂಪೂರ್ಣ ಅಲಂಕರಣೆ ಮಾಡಿದ ಆಭರಣ? ಎದೆಯ ಭಾಗದಲ್ಲಿ ಶ್ರೀವತ್ಸ ಚಿಹ್ನೆ. ಹಿಂಭಾಗದಲ್ಲಿ ಏಳು ಹೆಡೆಯ ನಾಗ ಮತ್ತು ಅದರ ಮೇಲೆ ಮುಕ್ಕೊಡೆ ಇದೆ.

ಸುಲೇಪೇಟೆಯ ಪಾರ್ಶ್ವನಾಥನ ಶಿಲ್ಪ ಒಂದಕ್ಕೊಂದು ಸೇರಿದ ಹುಬ್ಬಿನಿಂದ ಮತ್ತು ನಗುಮುಖದಿಂದ ಕೂಡಿದೆ. ಅರ್ಧತೆರೆದ ಕಣ್ಣುಗಳು? (ನೀಮಲಿಪ್ತ) ತಲೆಹಿಂದೆ ಪ್ರಭಾ ತೇಜಸ್ಸನ್ನು ವೃತ್ತಾಕಾರವಾಗಿ ಕೆತ್ತಿದೆ. ಇಕ್ಕೆಲುಗಳಲ್ಲಿ ಚಾಮರಧಾರಿಗಳ ಶಿಲ್ಪವಿದೆ. ಶಿಲ್ಪದಲ್ಲಿ ಮುಕ್ಕೊಡೆಯನ್ನು ಹಿಡಿದು ಅದರ ಮೇಲೆ ಎಡಕ್ಕಿರುವ ವ್ಯಕ್ತಿ ತನ್ನ ಬಲಗಾಲನ್ನು ಮತ್ತು ಬಲಕ್ಕಿರುವ ವ್ಯಕ್ತಿ ಶಿಲ್ಪ ತನ್ನ ಎಡಗಾಲನ್ನು ಇಟ್ಟು ನಿಂತಿರುವ ಶಿಲ್ಪಗಳಿವೆ. ಇವು ಕಿರೀಟಧಾರಿ, ಕಂಠಸರ, ಕಾಲ್ಗೆಜ್ಜೆ, ತೋಳ್ಬಂದಿ, ಕುಚಹಾರ ಧರಿಸಿವೆ.

ಮುಕ್ಕೊಡೆಯ ಈ ಶಿಲ್ಪಗಳ ಮೇಲೆ ಇಬ್ಬರು ಜೈನ ತೀರ್ಥಂಕರು ಧ್ಯಾನ ಭಂಗಿಯಲ್ಲಿ ಕುಳಿತಂತೆ ಕೆತ್ತಲ್ಪಟ್ಟಿದೆ. ಈ ಶಿಲ್ಪದ ಲಲಾಟದ ಮೇಲೆ ಕೀರ್ತಿಮುಖ ತೋರಣವಿದೆ. ಇದರಲ್ಲಿ ಮತ್ತು ಜೈನ ಪಾರ್ಶ್ವನಾಥ ಶಿಲ್ಪದ ಇಕ್ಕೆಲಗಳ ಪ್ರಭಾವಳಿಯಲ್ಲಿ ೨೪ ತೀರ್ಥಂಕರ ಶಿಲ್ಪಗಳಿವೆ. ಸ್ತಂಭದ ಕೆಳಭಾಗದಲ್ಲಿ ಎರಡು ನಿಂತ ಶಿಲ್ಪಗಳಿವೆ. ಅವು ಪಾರ್ಶ್ವನಾಥ ಮತ್ತು ವೃಷಭನಾಥ ಶಿಲ್ಪಗಳಾಗಿವೆ. ಅವುಗಳ ಪಕ್ಕದಲ್ಲಿ ಅಂಜಲಿ ಹಸ್ತದಲ್ಲಿರುವ ಭಕ್ತರ ಶಿಲ್ಪವಿದೆ. ಧರಣೇಂದ್ರ ಮತ್ತು ಪದ್ಮಾವತಿಯರ ಶಿಲ್ಪಗಳು ಇಲ್ಲಿವೆ.

ಊರು: ದೇಗಲ್ಮಡಿ — ಸ್ಥಳ: ಜೈನ ದೇವಾಲಯ (ಊರ ಮಧ್ಯ)

ಕಾಲ: ಸು.೧೦ನೇ ಶತಮಾನ — ಶಿಲ್ಪ: ಪಾರ್ಶ್ವನಾಥ

ಗ್ರ್ಯಾನೇಟ್ ಶಿಲೆಯಲ್ಲಿದೆ. ಧ್ಯಾನಸಕ್ತನಾಗಿರುವ ಪಾರ್ಶ್ವನಾಥನ ಶಿಲ್ಪ ಪದ್ಮಾಸನ ಭಂಗಿಯಲ್ಲಿದೆ. ಇಕ್ಕೆಲಗಳಲ್ಲಿ ಇಬ್ಬರು ತೀರ್ಥಂಕರರ ನಿಂತ ಶಿಲ್ಪವಿದೆ (ಪ್ರಭಾವಳಿಯಲ್ಲಿ). ಶಿಲ್ಪದ ಲಲಾಟದ ಮೇಲೆ ಮುಕ್ಕೊಡೆ ಮತ್ತು ಇಕ್ಕೆಲಗಳಲ್ಲಿ ಚಾಮರವಿದೆ. ಚಿಕ್ಕ ಜೈನ ಬಿಂಬಗಳಿವೆ. ಸ್ಥಾನಿಕ ಪಾರ್ಶ್ವನಾಥನ ಶಿಲ್ಪವಿದೆ. ಯಕ್ಷ ಯಕ್ಷಿಯರ ಶಿಲ್ಪಗಳಿವೆ.

ಊರು: ದೇಗಲ್ಮಡಿ — ಸ್ಥಳ: ಜೈನ ದೇವಾಲಯ (ಊರ ಮಧ್ಯ)

ಕಾಲ: ಸು.೧೦ನೇ ಶತಮಾನ — ಶಿಲ್ಪ: ತೀರ್ಥಂಕರ

ಈ ದೇವಾಲಯದ ಹಲವು ತೀರ್ಥಂಕರರ ಶಿಲ್ಪಗಳು ಅಮೃತ ಶಿಲೆಯಲ್ಲಿವೆ. ಸ್ತಂಭ ಪೀಠದಂತಿರುವ ಎತ್ತರ ಪೀಠದ ಮೇಲೆ ಜೈನ ತೀರ್ಥಂಕರನ ಶಿಲ್ಪ ಬಿಳಿ ಅಮೃತಶಿಲೆಯಲ್ಲಿದೆ. ತಲೆಗೂದಲು ಗುಂಗುರವಾಗಿವೆ. ಕಿವಿ ನೀಳವಾಗಿ ಕೆತ್ತಿವೆ. ಧ್ಯಾನ ಮಾಡುತ್ತಿರುವ ತೀರ್ಥಂಕರನ ಶಿಲ್ಪ ಪದ್ಮಾಸನದಲ್ಲಿದೆ. ಇಲ್ಲಿಯ ಇನ್ನೊಂದು ಶಿಲ್ಪದ ತಲೆಯ ಹಿಂದೆ ಸೂರ್ಯನ ಪ್ರಭೆಯು ವೃತ್ತಾಕಾರವಾಗಿದೆ. ಪದ್ಮಾಸನ ಭಂಗಿ, ಗುಂಗುರು ಕೂದಲು, ನೀಳ ಕಿವಿಗಳು ಜೈನ

ತೀರ್ಥಂಕರನ ವೈಶಿಷ್ಟ್ಯತೆಯಾಗಿದೆ. ಮತ್ತೊಂದು ತೀರ್ಥಂಕರನ ಶಿಲ್ಪ ಪದ್ಮಾಸೀನ ಧ್ಯಾನಭಂಗಿಯಲ್ಲಿದೆ. ಇನ್ನೊಂದು ಶಿಲ್ಪ ತಲೆ ಮೇಲೆ ಮುಕ್ಕೊಡೆ ಗುಂಗುರು ಕೂದಲು, ನೀಳ ಕಿವಿಯನ್ನೊಳಗೊಂಡಿದೆ. ಇಂತಹ ಚಿಕ್ಕ ಚಿಕ್ಕ ಮೂರ್ತಿಶಿಲ್ಪಗಳು ಅಮೃತ ಶಿಲೆಯಲ್ಲಿ ಕಡೆದಿವೆ. ಈ ಶಿಲ್ಪಗಳೆಲ್ಲ ಗುಂಗುರು ಕೂದಲಿನ ಜಟೆ ಧರಿಸಿವೆ.

ಊರು: ದೇಗಲ್ಮಡಿ | ಸ್ಥಳ: ಜೈನ ದೇವಾಲಯ (ಊರ ಮಧ್ಯ)

ಕಾಲ: ಸು.೧೦ನೇ ಶತಮಾನ | ಶಿಲ್ಪ: ವೃಷಭನಾಥ

ಅಮೃತ ಶಿಲೆಯಲ್ಲಿ ಕೆತ್ತಿದಂತಿರುವ ಈ ಶಿಲ್ಪಕ್ಕೆ ಕಪ್ಪು ಬಣ್ಣ ಲೇಪಿಸಿದಂತೆ ತೋರುತ್ತದೆ. ಮುಕ್ಕೊಡೆ ಹೊಂದಿದ ಈ ಶಿಲ್ಪ ಪದ್ಮಾಸನದಲ್ಲಿದೆ. ಧ್ಯಾನಾಸಕ್ತನಾಗಿರುವ ಭಂಗಿಯಲ್ಲಿ ಕೆತ್ತಿದೆ. ಗುಂಗುರು ಕೂದಲು ನೀಳ ಕಿವಿ, ಪಾದದಡಿಯಲ್ಲಿ ಶಂಖದ ಶಿಲ್ಪವಿದೆ. ಇವು ಈ ಮೂರ್ತಿಯ ವಿಶೇಷತೆಯಾಗಿದೆ.

ಊರು: ದೇಗಲ್ಮಡಿ | ಸ್ಥಳ: ಜೈನ ದೇವಾಲಯ (ಊರ ಮಧ್ಯ)

ಕಾಲ: ಸು.೧೦ನೇ ಶತಮಾನ | ಸ್ಥಿತಿ: ಉತ್ತಮ

ಶಿಲ್ಪ: ಜೈನ ಪಾದಗಳು

ದ್ವಾರದ ಎದುರುಗಡೆ ಕಪ್ಪುಶಿಲೆಯ ಪೀಠದಲ್ಲಿ ಎರಡು ಪಾದಗಳಿವೆ. ಇದರ ಇಕ್ಕೆಲುಗಳಲ್ಲಿ ಶಂಖ ಮತ್ತು ಪದ್ಮಗಳು ಕೆತ್ತಲ್ಪಟ್ಟಿದೆ.

ಊರು: ದೇಗಲ್ಮಡಿ | ಸ್ಥಳ: ಜೈನ ದೇವಾಲಯ (ಊರ ಮಧ್ಯ)

ಕಾಲ: ಸು.೧೦ನೇ ಶತಮಾನ | ಶಿಲ್ಪ: ಧರಣೇಂದ್ರ

ಸವ್ಯ ಲಲಿತಾಸನದಲ್ಲಿ ಕುಳಿತ ಪಾರ್ಶ್ವನಾಥನ ಯಕ್ಷ ಧರಣೇಂದ್ರನ ಶಿಲ್ಪ ಈ ದೇವಾಲಯದ ಎದುರು ಗೋಡೆಯ ಬಳಿಯಿದೆ. ಚತುರ್ಭುಜಧಾರಿಯ ಈ ಶಿಲ್ಪದ ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲವಿದೆ. ಮುಂದಿನ ಬಲಗೈ ಅಭಯ ಹಸ್ತದಲ್ಲಿದ್ದು ಎಡಗೈಯಲ್ಲಿ ಬೀಜಪೂರವಿದೆ. ಇದು ಕಪ್ಪುಶಿಲೆಯಲ್ಲಿದೆ. ಕೊರಳಹಾರ, ವಕ್ಷಬಂಧ, ಮುಂಗೈ ಕಟ್ಟು, ತೋಳ್ಬಂದಿ, ಕಿರೀಟ, ಕಾಲ್ಗಡಗ, ಯಜ್ಞೋಪವೀತ ಮತ್ತು ಕಟಿವಸ್ತ್ರ ಆಭರಣಗಳನ್ನು ಧರಿಸಿದಂತಿದೆ.

ಊರು: ನಿಡಗುಂದ | ಸ್ಥಳ: ಕಾಳಮ್ಮನ ಗುಡಿ (ಊರ ಮಧ್ಯ)

ಕಾಲ: ಸು.೮ನೇ ಶತಮಾನ | ಶಿಲ್ಪ: ಪಾರ್ಶ್ವನಾಥ

ಕಾಳಮ್ಮನ ಗುಡಿ ನವರಂಗದಲ್ಲಿರುವ ಪಾರ್ಶ್ವನಾಥ ಪದ್ಮಾಸನದಲ್ಲಿದೆ. ಏಳು ಹೆಡೆಯ ಮೇಲೆ ಮುಕ್ಕೊಡೆ ಇದೆ. ಧ್ಯಾನಸಕ್ತನಾಗಿರುವ ಶಿಲ್ಪ ಕಪ್ಪುಶಿಲೆಯಲ್ಲಿದೆ (ಕ.ಸ.ಗೆ.ಕ.ಜಿ.೧೯೭೭, ಪು.೭೩೯).

ಊರು: ದೇಗಲ್ಮಡಿ | ಸ್ಥಳ: ಜೈನ ದೇವಾಲಯ (ಊರ ಮಧ್ಯ)

ಕಾಲ: ಸು.೧೧ನೇ ಶತಮಾನ | ಶಿಲ್ಪ: ಪದ್ಮಾವತಿ

ಜೈನ ದೇವಾಲಯದಲ್ಲಿರುವ ಈ ಶಿಲ್ಪ ನುಣುಪಾದ ಕಪ್ಪುಶಿಲೆಯಲ್ಲಿದೆ. ಈಗ ಇದನ್ನು ಮಾತೃದೇವತೆಯಂತೆ ಪೂಜಿಸುತ್ತಾರೆ. ಪದ್ಮಾವತಿ ೨೩ನೇ ತೀರ್ಥಂಕರನಾದ ಪಾರ್ಶ್ವನಾಥನ ಯಕ್ಷಿಣಿಯಾಗಿದ್ದಾಳೆ. ವೈದಿಕ ಧರ್ಮದ ಲಕ್ಷ್ಮಿಯಂತೆ ಜೈನ ಧರ್ಮದಲ್ಲಿ ಪದ್ಮಾವತಿಯ ಸ್ಥಾನವಿದೆ.

ಊರು: ನಿಡಗುಂದ | ಸ್ಥಳ:ವೀರಭದ್ರೇಶ್ವರ ದೇವಾಲಯ(ಊರ ಮಧ್ಯ)

ಕಾಲ: ಸು.೦೮ನೇ ಶತಮಾನ | ಶಿಲ್ಪ: ವೃಷಭನಾಥ

ಎತ್ತರದ ಪೀಠದ ಮೇಲೆ ಸ್ಥಾನಿಕ ಜೈನ ತೀರ್ಥಂಕರ ಶಿಲ್ಪ ದೇವಾಲಯದ ಎಡಭಾಗಕ್ಕೆ ಇದೆ. ಇದು ಕಪ್ಪುಶಿಲೆಯಲ್ಲಿದೆ. ಈ ಶಿಲ್ಪದ ಹಿಂದೆ ಸೂರ್ಯ ಪ್ರಭೆ ವೃತ್ತಾಕಾರವಾಗಿದೆ. ಗುಂಗುರು ಕೂದಲು ಇಳಿಬಿಟ್ಟಿದೆ. ಈ ಶಿಲ್ಪದ ಇಕ್ಕೆಲಲ್ಲಿ ಏಳು ಹೆಡೆಯನ್ನೊಳಗೊಂಡ ಸ್ಥಾನಿಕ ಪಾರ್ಶ್ವನಾಥರ ಶಿಲ್ಪ ಪೀಠದ ಮೇಲೆ ನಿಲ್ಲಿಸಲಾಗಿದೆ. ಪ್ರಭಾವಳಿಯ ಇಕ್ಕೆಲಲ್ಲಿ ಎರಡು ಚಾಮರಗಳನ್ನು ತೋರಿಸಲಾಗಿದೆ. ಲಲಾಟದ ಮೇಲೆ ಜೈನ ಪ್ರಭಾವ ಬೀರುವ ಮುಕ್ಕೊಡೆ ಮತ್ತು ಅದರ ಇಕ್ಕೆಲಲ್ಲಿ ಪೀಠದ ಮೇಲೆ ಪದ್ಮಾಸೀನ ಭಂಗಿಯಲ್ಲಿರುವ ಎರಡು ಜೈನ ತೀರ್ಥಂಕರರ ಶಿಲ್ಪವಿದೆ. ಸು.೪.೩ ಅಡಿ ಎತ್ತರವಾಗಿದೆ.

ಊರು: ಕೋಡ್ಲಿ | ಸ್ಥಳ: ಬನಶಂಕರಿ ದೇವಾಲಯ(ಅಗಸಿಯ ಬಳಿ)

ಕಾಲ: ಸು.೧೧ನೇ ಶತಮಾನ | ಶಿಲ್ಪ: ಪಾರ್ಶ್ವನಾಥ

ಪಾರ್ಶ್ವನಾಥ ಶಿಲ್ಪ, ಮುಕ್ಕೊಡೆಯನ್ನೊಳಗೊಂಡಿದೆ (ಕ.ಸ.ಗೆ.ಕ.ಜಿ.೧೯೭೭,ಪು.೭೦೬).

ಊರು: ಚಿಂಚೋಳಿ | ಸ್ಥಳ: ಊರ ಒಳಗೆ

ಕಾಲ: ಸು.೧೦ನೇ ಶತಮಾನ | ಶಿಲ್ಪ: ಪಾರ್ಶ್ವನಾಥ

ಚಿಂಚೋಳಿ ಊರ ಒಳಗೆ ಹೋಗುವ ದಾರಿಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಮೀಪ ಅಕ್ಕಸಾಲಿಗರ ಅಂಗಡಿಗಳ ಬಳಿ ಒಂದು ಎತ್ತರದ ಜಗತಿ ಇದೆ. ಇಲ್ಲಿ ಪಾರ್ಶ್ವನಾಥನ

ಶಿಲ್ಪವಿದೆ. ಜೈನ ತೀರ್ಥಂಕರ ತಲೆಯ ಮೇಲೆ ಮುಕ್ಕೊಡೆ, ಹೆಡೆಯನ್ನೊಳಗೊಂಡ ನಾಗಶಿಲ್ಪವನ್ನುಳ್ಳ ಪಾರ್ಶ್ವನಾಥನ ಶಿಲ್ಪವಿದೆ.

*** ಇತರೆ ಜೈನ ಮೂರ್ತಿಶಿಲ್ಪಗಳು:**

ಜೈನ ಚಾಮರಧಾರಿಗಳ ಶಿಲ್ಪಗಳು ಈ ಮೇಲಿನ ಎಲ್ಲ ಜೈನ ತೀರ್ಥಂಕರ ಚಾಮರಧಾರಿಗಳು ಪುರುಷರೇ ಆಗಿದ್ದು ಅವರು ಹಾಕುತ್ತಿದ್ದ ಆಭರಣ ಹೀಗಿವೆ. ಕೇಶವಾರ್‌ದಲ್ಲಿಯ ಚಾಮರಧಾರಿಗಳು ಸ್ತಂಭದ ಮೇಲೆ ನಿಂತಿವೆ. ಯಜ್ಞೋಪವೀತ, ಆರೋಪ್ಯಮಾಲಾ, ಎದೆಪಟ್ಟಿ, ಕೊರಳಹಾರ, ಕಂಠಹಾರ, ಕಟಿವಸ್ತ್ರ, ಬಾಹುವಲ್ಯ, ಮುಂಗೈ ಪಟ್ಟಿ (ಮಣಿಕಂಠ) ಕಿರೀಟ ಧರಿಸಿರುವಂತಿದೆ.

ಸುಲೇಪೇಟೆಯ ಜೈನ ತೀರ್ಥಂಕರ ಹಿಂದಿರುವ ಚಾಮರಧಾರಿಗಳು ಕಿರೀಟಧಾರಿ, ಕಂಠಾಭರಣ, ಬಾಹುವಲ್ಯ, ಭುಜಬಂದಿ, ಎದೆಹಾರ, ಎದೆಪಟ್ಟಿ, ಯಜ್ಞೋಪವೀತ, ಆರೋಪ್ಯಮಾಲಾ, ಕಟಿವಸ್ತ್ರ, ಕುಚಹಾರ, ಹಾಕಿಕೊಂಡಂತೆ ಕೆತ್ತಲ್ಪಟ್ಟಿವೆ. ಗಜ ಸ್ತಂಭದ ಮೇಲೆ ನಿಂತಿವೆ. ಎಡ ಚಾಮರಧಾರಿ ಎಡಗೈಯಲ್ಲಿ ಮತ್ತು ಬಲಚಾಮರಧಾರಿ ಬಲಗೈಯಲ್ಲಿ ಚಾಮರ ಹಿಡಿದಿವೆ. ಜೈನ ತೀರ್ಥಂಕರ ಶಿಲ್ಪದಲ್ಲಿ ಕೆತ್ತಲ್ಪಟ್ಟಿವೆ. ಮುಗುಳ್ನಗೆಯಿಂದ ಚಾಮರ ಬೀಸುತ್ತಿರುವಂತೆ ಚಾಮರಧಾರಿಗಳ ಶಿಲ್ಪ ಮೂಡಿಬಂದಿವೆ.

ಡ. ಶಾಕ್ತ ಮೂರ್ತಿಶಿಲ್ಪಗಳು

ಗ್ರಾಮ: ಪಸ್ತಾಪೂರ	ಸ್ಥಳ: ರಾಮಲಿಂಗೇಶ್ವರ
ಕಾಲ: ಸು.೧೧ನೇ ಶತಮಾನ	ಶಿಲ್ಪ: ಭೈರವಿ

ಗುಡಿಯ ಒಳಭಿತ್ತಿ ದೇವಕೋಷ್ಠದಲ್ಲಿ ಭೈರವಿ ಶಿಲ್ಪವಿದೆ. ಷಡ್ಭುಜಧಾರಿ ಭೈರವಿಯ ಶಿಲ್ಪದ ಬಲಕ್ಕೆ ಪ್ರೇತವೊಂದು ಕುಣಿಯುತ್ತಿದೆ. ಈ ಶಿಲ್ಪ ನಾಟ್ಯ ಭೈರವಿ ಶಿಲ್ಪವಾಗಿದ್ದು. ಹಿಂದಿನ ಕೈಗಳಲ್ಲಿ ಖಡ್ಗ, ಚಕ್ರದಂಡ ಮತ್ತು ಮಧ್ಯದ ಬಲಗೈಯಲ್ಲಿ ಡಮರು ಇನ್ನೊಂದು ಎಡಗೈ ಪ್ರಸ್ತುತ ತ್ರುಟಿತವಾಗಿದೆ. ಮುಂದಿನ ಎಡಗೈಯಲ್ಲಿ ರುಂಡವಿದ್ದು ಅದನ್ನು ನಾಯಿ ನೆಕ್ಕುತ್ತಿದೆ. ಎತ್ತರದ ಕೀರಿಟ, ಕಾಲ್ಗಡಗ, ಪೈಜಾಮ, ಮುಂಗೈಪಟ್ಟಿ, ತೋಳ್ಬಂದಿ, ಸೊಂಟಕ್ಕೆ ಸರ್ಪಬಂಧ ಧರಿಸಿದೆ.

ಗ್ರಾಮ: ರುಮ್ಮನಗೂಡು	ಸ್ಥಳ: ಶಂಕರನಾರಾಯಣ ದೇವಾಲಯ
ಕಾಲ: ಸು. ೧೧ನೇ ಶತಮಾನ	ಶಿಲ್ಪ: ಮಹಿಷಾಸುರಮರ್ದಿನಿ

ಶಂಕರನಾರಾಯಣ ದೇವಾಲಯದ ಎತ್ತರದ ಜಗತಿಯ ಮೇಲೆ ಈ ಶಿಲ್ಪವಿದೆ. ಅಷ್ಟಭುಜಧಾರಿಣಿ ಮುಂದಿನ ಎರಡು ಕೈಯಲ್ಲಿ ತ್ರಿಶೂಲ ಹಿಡಿದು ಎಡಗಾಲಿನಿಂದ ಮಹಿಷನ ತಲೆ ಮೇಲಿಟ್ಟು ಕುತ್ತಿಗೆಗೆ ತ್ರಿಶೂಲದಿಂದ ಚುಚ್ಚುತ್ತಿರುವಂತೆ ಕೆತ್ತಲ್ಪಟ್ಟಿದೆ. ಮಕುಟ ಕಿರೀಟ, ತೋಳ್ಬಂದಿ, ಕೊರಳಹಾರ, ಮಣಿಕಂಠ, ಉದರಬಂದ, ಕುಚಹಾರ, ಯಜ್ಞೋಪವೀತ ಧರಿಸಿದೆ.

ಗ್ರಾಮ: ರುಮ್ಮನಗೂಡು ಸ್ಥಳ: ಶಂಕರನಾರಾಯಣ ದೇವಾಲಯ

ಕಾಲ: ಸು. ೧೧ನೇ ಶತಮಾನ ಶಿಲ್ಪ: ವೈಷ್ಣವಿ

ಹೊರ ಜಗತಿಯ ದೇವಕೊಷ್ಠದಲ್ಲಿ ವೈಷ್ಣವಿ ಶಿಲ್ಪವಿದೆ. ಮೂರ್ತಿ ಶಿಲ್ಪದ ಇಕ್ಕೆಲಲ್ಲಿ ಚಾಮರಧಾರಿಯರ ಶಿಲ್ಪಗಳಿವೆ. ಚತುರ್ಭುಜಧಾರಿಣಿಯು ಗದೆ, ಚಕ್ರವನ್ನು ಹಿಂದಿನ ಕೈಗಳಲ್ಲಿ ಹಿಡಿದಿದ್ದಾಳೆ. ಆರೋಪ್ಯಮಾಲಾವನ್ನು ಮುಂದಿನ ಎರಡು ಕೈಗಳಿಗೆ ಸುತ್ತಿಕೊಂಡು ನಿಂತಿರುವಳು. ಉದರಬಂಧ, ಸೊಂಟಪಟ್ಟಿ, ಸ್ತನಹಾರ, ಮುಕುಟಧಾರಿ, ಕುಚಹಾರ ಧರಿಸಿದೆ. ಇಕ್ಕೆಲಲ್ಲಿ ಚಾಮಧಾರಿಗಳ ಚಿಕ್ಕದಾದ ಶಿಲ್ಪಗಳಿವೆ.

ಗ್ರಾಮ: ಭೋಗಲಿಂಗದ ಹಳ್ಳಿ ಸ್ಥಳ: ಭೋಗಲಿಂಗೇಶ್ವರ ಗುಡ್ಡ

ಕಾಲ: ಸು.೧೦ನೇ ಶತಮಾನ ಶಿಲ್ಪ: ಶಕ್ತಿ ದೇವತೆ

ಸವ್ಯ ಲಲಿತಾಸನದ ಈ ಮಾತೃಕೆ ಶಿಲ್ಪ ಚತುರ್ಭಜಧಾರಿಯಾಗಿದೆ. ಎಡಗೈಯಲ್ಲಿ ಬೀಜಪೂರ, ಬಲಗೈಯಲ್ಲಿ ಖಡ್ಗ, ಹಿಂದಿನ ಕೈಯಲ್ಲಿ ತ್ರಿಶೂಲ ಮತ್ತು ಡಮರು ಹಿಡಿದಿದೆ. ಕುಂತಲ ಕಿರೀಟ, ಕೊರಳಹಾರ, ಮಣಿಕಂಠ, ಕೈಬಳೆ, ತೋಳ್ಬಂದಿ, ಕಟಿವಸ್ತ್ರ, ಕಾಲ್ಗಡಗ ಮೂರ್ತಿಶಿಲ್ಪದಲ್ಲಿದೆ. ಶಿಲ್ಪದ ಬಲಕ್ಕೆ ತಬಲ ವಾದ್ಯ ಬಾರಿಸುತ್ತಿರುವ ಶಿಲ್ಪ ಇದೆ. ಪೀಠದ ಕೆಳಗೆ ಸಿಂಹ ನಿಂತಿದೆ.

ಗ್ರಾಮ: ದೇಗಲ್ಮಡಿ ಸ್ಥಳ: ಊರ ಪ್ರವೇಶದಲ್ಲಿ

ಕಾಲ: ಸು.೧೧ ನೇ ಶತಮಾನ ಶಿಲ್ಪ: ನವ ಮಾತೃಕೆಯರು

ಊರ ಪ್ರವೇಶಕ್ಕಿರುವ ಗುಡಿಯೊಂದರಲ್ಲಿ ನವಮಾತೃಕೆಯರ ಶಿಲ್ಪ ಪುರಾತನದ್ದಾಗಿದೆ. ಬಾಗಿಲದ ಇಕ್ಕೆಲಗಳಲ್ಲಿ ಐದು ಮತ್ತು ನಾಲ್ಕು ಒಟ್ಟು ಒಂಬತ್ತು ಮಾತೃಕೆಯರ ಶಿಲ್ಪ ಗೋಡೆಯೊಳಗೆ ಇವೆ. ಆರಂಭದಲ್ಲಿ ಸುಬ್ರಹ್ಮಣ್ಯ, ಕೊನೆಗೆ ಗಣೇಶ ಮತ್ತು ಮಧ್ಯದಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ. ಚತುರ್ಭುಜಧಾರಿಯರು ಆಭಯ ಹಸ್ತ ಮತ್ತು ಆಯುಧ ಹಿಡಿದಿವೆ. ವಾಹನಗಳು ಅಸ್ಪಷ್ಟವಾಗಿವೆ.

ಗ್ರಾಮ: ಚೇಂಗಟಾ ಸ್ಥಳ: ಸೋಮೇಶ್ವರ ದೇವಾಲಯ

ಕಾಲ: ಸು.೧೧ನೇ ಶತಮಾನ ಶಿಲ್ಪ: ಭೈರವಿ

ನಾಟ್ಯ ಭೈರವಿಯ ಶಿಲ್ಪ ಸೋಮೇಶ್ವರ ದೇವಾಲಯದ ಭಿತ್ತಿಯ ದೇವಕೋಷ್ಠದಲ್ಲಿದೆ. ಈ ಭೈರವಿಯ ಇಕ್ಕೆಲಲ್ಲಿ ಪ್ರೇತ ಶಿಲ್ಪಗಳಿವೆ. ನಾಟ್ಯ ಮಾಡುತ್ತಾ ಬಲಕ್ಕಿರುವ ಪ್ರೇತ ತನ್ನ ಎಡಗೈಯ ಚೂರಿಯಿಂದ ಭೈರವಿಯ ಬಲಗೈಯ ಚೂರಿಯನ್ನು ತಡೆಹಿಡಿದಿದೆ. ಇದು ಬಲಸೊಂಟಕ್ಕೆ ಖಡ್ಗವಿಟ್ಟುಕೊಂಡಿದೆ. ಎಡಕ್ಕಿರುವ ಪ್ರೇತ ತನ್ನ ಚೂರಿಯಿಂದ ನಾಯಿಯ ಹಿಂಭಾಗಕ್ಕೆ ಚುಚ್ಚುತ್ತಿದೆ. ಆ ನಾಯಿ ಆರ್ತಮುಖದಿಂದ ಭೈರವಿ ಕಡೆ ತಲೆ ಮಾಡಿದೆ.

ಭೈರವಿ ತನ್ನ ಹಿಂದಿನ ಎಡಗೈ ಕಿರಿಬೆರಳು ಬಾಯಿಯಲ್ಲಿಟ್ಟಂತೆ ಮತ್ತು ನಾಚಿದ ನಗು ಮುಖವಿದೆ. ಹಿಂದಿನ ಕೈಗಳಲ್ಲಿ ಡಮರು ಮತ್ತು ಚಕ್ರ ಹಿಡಿದಿರುವಳು. ಮುಂದಿನ ಬಲಗೈಯ ಚಾಕುವಿನಿಂದ ಪ್ರೇತಕ್ಕೆ ಇರಿಯಲು ಮುಂಚಾಚಿದಂತಿದೆ. ಎಡಗೈಯಲ್ಲಿ ರುಂಡ ಹಿಡಿದು ಕೊಂಡಿದ್ದಾಳೆ ಮತ್ತು ಆರೋಪ್ಯಮಲಾವನ್ನು ತನ್ನ ಎಡಗೈಗೆ ಸುತ್ತಿ ಕೊಂಡಿದೆ. ಕಾಲ್ಗಡಗ, ಕುಚಹಾರ, ಯಜ್ಞೋಪವೀತ, ಮಣಿಕಂಠ ಕೊರಳಹಾರ, ಮುಕುಟ ಕೀರಿಟ, ತೋಳ್ಬಂದಿ ಧರಿಸಿದೆ.

ಗ್ರಾಮ: ಮೋಘಾ ಸ್ಥಳ: ರಾಮಲಿಂಗೇಶ್ವರ ಗುಡಿ(ಊರ ಮಧ್ಯೆ)

ಕಾಲ: ಸು.೧೧ನೇ ಶತಮಾನ ಶಿಲ್ಪ: ಮಹಿಷ ಮರ್ದಿನಿ

ರಾಮಲಿಂಗೇಶ್ವರ ಗುಡಿಯ ದೇವಕೋಷ್ಠದಲ್ಲಿ ಅಷ್ಟಭುಜಧಾರಿ ಮಹಿಷಮರ್ದಿನಿ ಶಿಲ್ಪವಿದೆ. ಮುಂದಿನ ಎರಡು ಕೈಗಳಲ್ಲಿ ತ್ರಿಶೂಲ ಹಿಡಿದು ಅದರಿಂದ ಮಹಿಷನ ಕುತ್ತಿಗೆಯನ್ನು ತಿವಿಯುತ್ತಿದೆ. ಬಲಗೈ ಭಾಗಗಳು ಪ್ರಸ್ತುತ ತ್ರುಟಿತವಾಗಿವೆ. ಒಂದು ಕೈ ವರದ ಮುದ್ರೆಯಲ್ಲಿದೆ. ಬಲಕ್ಕೆ ಸಿಂಹ ಕುಳಿತ ಶಿಲ್ಪವಿದೆ. ಎಡಗೈಗಳಲ್ಲಿ ರುಂಡ, ಬಿಲ್ಲು ಮತ್ತು ಶಂಖ? ಹಿಡಿದಂತೆ ಕೆತ್ತಲ್ಪಟ್ಟಿದೆ. ಕೀರಿಟ ಧಾರಿಣಿ, ಕೊರಳಹಾರ, ಕಾಲ್ಗಡಗ, ತೋಲ್ಬಂದಿ, ಬಳೆ, ಕಂಕಣ, ಕುಚಹಾರ, ಸೊಂಟಪಟ್ಟಿ ಧರಿಸಿದೆ. ತಲೆ ಭಾಗದ ಪ್ರಭಾವಳಿಯಲ್ಲಿ ವೃತ್ತಾಕಾರ ಪ್ರಭೆ ಇದೆ.

ಗ್ರಾಮ: ಮೋಘಾ ಸ್ಥಳ: ರಾಮಲಿಂಗೇಶ್ವರ ಗುಡಿ

ಕಾಲ: ಸು.೧೧ನೇ ಶತಮಾನ ಶಿಲ್ಪ: ನವ ಮಾತೃಕೆಯರು

ಗುಡಿಯ ದೇವಕೋಷ್ಠದಲ್ಲಿ ನವಮಾತೃಕೆಯರ ಶಿಲ್ಪಗಳಿವೆ. ಆರಂಭದಲ್ಲಿ ಸ್ಕಂದ ಮತ್ತು ಕೊನೆಯಲ್ಲಿ ಗಣಪತಿ ಶಿಲ್ಪವಿದೆ. ಮಧ್ಯದಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ. ಎಡಗಾಲು ಮಡಚಿ

ಅದರ ಮೇಲಿಂದ ಬಲಗಾಲು ಇಳಿಬಿಟ್ಟು ಕುಳಿತಿದೆ. ಸ್ಕಂದನು ಉದ್ದನೆಯ ನವಿಲು ಗರಿಯ ದಂಡ ಹಿಡಿದಿರುವ? ಉಳಿದ ಎಂಟು ಮಾತೃಕೆಯರ ಬಲಗೈ ಅಭಯಹಸ್ತ, ಎಡಗೈಯಲ್ಲಿ ಬೀಜಪೂರ? ಮೊದಕವಿದ್ದಂತೆ ಕೆತ್ತಲ್ಪಟ್ಟಿದೆ. ಈ ನವ ಮಾತೃಕೆಯರು ಚತುರ್ಭುಜ ಹೊಂದಿದ್ದು ವಾಹನಗಳ ಸಮೇತ ಈ ಶಿಲ್ಪಗಳಿವೆ.

ಗ್ರಾಮ: ಗೊಟ್ಟಂಗೊಟಿ — ಸ್ಥಳ: ಗೊಟ್ಟಂಗೊಟಿ ಗುಡ್ಡ

ಕಾಲ: ಸು.೧೧೦ನೇ ಶತಮಾನ — ಶಿಲ್ಪ: ಮಹಿಷಾಸುರ ಮರ್ದಿನಿ

ಗುಡ್ಡದೊಳಗಿನ ಒಂದು ಚಿಕ್ಕ ಗುಡಿಯ ಬಳಿ ದ್ವಾರದ ಬಲಕ್ಕೆ ಶಿಲ್ಪವಿದೆ. ಪ್ರಸ್ತುತ ತ್ರುಟಿತವಾಗಿದೆ. ಎಡಗಾಲು ಮಹಿಷನ ಮೇಲಿಟ್ಟು ಮುಂದಿನ ಎರಡು ಕೈಗಳಲ್ಲಿ ತ್ರಿಶೂಲ ಹಿಡಿದು ಇರಿಯುತ್ತಿದೆ. ಚತುರ್ಭುಜಾಂಗಿನಿ ಶಿಲ್ಪದಲ್ಲಿ ಹಿಂದಿನ ಕೈಗಳಲ್ಲಿ ಪದ್ಮ ಮತ್ತು ಖಡ್ಗ ಹಿಡಿದಿದೆ. ಕಿರೀಟ ಮಕುಟ, ಕಂಠಹಾರ, ಕೊರಳಹಾರ, ತೊಳ್ಬಂದಿ, ಸೊಂಟ ಪಟ್ಟಿ ಧರಿಸಿದೆ. ಈ ಮೂರ್ತಿಯ ಬಲಕ್ಕೆ ಸಿಂಹದ ಶಿಲ್ಪವಿದೆ.

ಗ್ರಾಮ: ಗೊಟ್ಟಂಗೊಟ್ಟಿ — ಸ್ಥಳ: ಗೊಟ್ಟಂಗೊಟ್ಟಿ ಗುಡ್ಡ

ಕಾಲ: ಸು:೧೧೦ನೇ ಶತಮಾನ — ಶಿಲ್ಪ: ಶಾಕ್ತ ದೇವತೆ?

ಸವ್ಯಲಲಿತಾಸನದಲ್ಲಿರುವ ಮಾತೃಕೆಯ ಶಿಲ್ಪವಿದೆ. ಚತುರ್ಭುಜಧಾರಿಣಿ ಬಲಗೈಯಲ್ಲಿ ಖಡ್ಗ, ಪದ್ಮ? ಎಡಗೈಯಲ್ಲಿ ತ್ರಿಶೂಲ ಮತ್ತು ಭರ್ಚಿ ಹಿಡಿದಿದೆ. ಕಿರೀಟಧಾರಿಣಿ ಈ ಮೂರ್ತಿಯ ಇಕ್ಕೆಲಲ್ಲಿ ಎರಡು ಉದ್ದನೆ ಕುತ್ತಿಗೆಯ ರುಂಡಗಳಿವೆ. ಇವುಗಳು ಮುಡಿ ಕಟ್ಟಿವೆ.

ಗ್ರಾಮ: ನಿಡಗುಂದ — ಸ್ಥಳ: ಕಾಳಿಕಾ ಗುಡಿ

ಕಾಲ: ಸು.೧೧೦ನೇ ಶತಮಾನ — ಶಿಲ್ಪ: ಕಾಳಿಕಾ ದೇವಿ

ಕಾಳಿಕಾದೇವಿ ಮೂರ್ತಿ ಕಪ್ಪು ನುಣುಪಾದ ಶಿಲೆಯಲ್ಲಿದೆ. ಮಕುಟ ಕಿರೀಟಧಾರಿಣಿ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಳೆಗಳನ್ನು ಮುಂದಿನ ಕೈಗಳಲ್ಲಿ ಹಿಡಿದಿವೆ. ಹಿಂದಿನ ಬಲಗೈ ಅಭಯಹಸ್ತ, ಎಡಗೈಯಲ್ಲಿ ಲಿಂಗವಿದೆ.

ಗ್ರಾಮ: ಕೋಡ್ಲಿ — ಸ್ಥಳ: ಮಲ್ಲಿಕಾರ್ಜುನ ಗುಡಿ

ಕಾಲ: ಸು.೧೧ನೇ ಶತಮಾನ — ಶಿಲ್ಪ: ಮಹಿಷಾಸುರ ಮರ್ದಿನಿ

ಅಷ್ಟಭುಜಧಾರಿ ಮಹಿಷಾಸುರ ಮರ್ದಿನಿ ಶಿಲ್ಪವು ಕಪ್ಪುಶಿಲೆಯಲ್ಲಿದೆ. ಸಿಂಹವಾಹನ ಬಲಭಾಗಕ್ಕಿದೆ. ಎಡಗಾಲು ಮಹಿಷನ ಮೇಲಿಟ್ಟು ಎರಡು ಕೈಗಳಲ್ಲಿನ ತ್ರಿಶೂಲದಿಂದ ಇರಿಯುತ್ತಿದೆ. ಪ್ರಸ್ತುತ ತ್ರುಟಿತವಾಗಿದೆ.

* **ಇತರೆ ಶಾಕ್ತ ಮೂರ್ತಿಶಿಲ್ಪಗಳು:**

ದೇಗಲ್ಮಡಿಯ ಪ್ರವೇಶಕ್ಕಿರುವ ಗುಡಿ ಎದುರು ಎರಡು ಮಾತೃಕೆಗಳ ಶಿಲ್ಪ ತ್ರುಟಿತವಾಗಿವೆ. ಸು.೧೧ನೆ ಶತಮಾನದ್ದಾಗಿವೆ. ಪ್ರಸ್ತುತ ರುಂಡ ಮುರಿದ ಮಾತೃಕೆ ಶಿಲ್ಪ?ದ ಎಡಗೈ ಮತ್ತು ಮೊಳಕಾಲ ಬಳಿ ಸಿಗಿಬಿದ್ದಂತಿರುವ ಒಂದು ಮಗುವಿನ ಶಿಲ್ಪವಿದೆ. ಎಡಗಾಲಿನ ಮೇಲೆ ಬಲಗಾಲು ಹಾಕಿ ಕುಳಿತಿರುವ ಭಂಗಿಯಲ್ಲಿದೆ. ಕಾಲ್ಗಡಗ ಮತ್ತು ಪೈಜಾಮ ಧರಿಸಿರುವ ಕೆತ್ತನೆ ಇದೆ. ಇಲ್ಲಿಯ ಇನ್ನೊಂದು ಮಾತೃಕೆ? ಸವ್ಯ ಲಲಿತಾಸನದಲ್ಲಿದೆ. ಹಿಂದೆ ಮಾವಿನ ಎಲೆಗಳ ಗೊಂಚಲು ಪ್ರಭಾವಳಿಯಲ್ಲಿವೆ. ಕಿರೀಟಧಾರಿ, ಕರ್ಣಕುಂಡಲ ಮತ್ತು ಕಾಲ್ಗಡಗ ಧರಿಸಿದೆ. ಇದು ಪ್ರಸ್ತುತ ತ್ರುಟಿತವಾಗಿದೆ. ಸುಲೇಪೇಟೆಯ ವೀರಭದ್ರೇಶ್ವರ ಗುಡಿಯ ದೇವಕೊಷ್ಠದಲ್ಲಿ ಸು.೧೧ನೇ ಶತಮಾನದ ಎರಡು ಮಾತೃಕೆಯರ ಶಿಲ್ಪವಿದೆ. ಒಂದು ಎತ್ತರದ ಕಿರೀಟಧಾರಿಣಿ, ಚತುರ್ಭುಜಧಾರಿ ದೇವಿ ಶಿಲ್ಪವಿದೆ. ಅದರ ಪಕ್ಕದಲ್ಲಿ ಜ್ವಾಲಾಮಾಲಿನಿ ಉದ್ದನೆ ದಂಡ ಹಿಡಿದಿದೆ. ಹಿಂದೆ ಪ್ರಭಾವಳಿಯಲ್ಲಿ ಕಮಲದ ದಳದಂತ ಜ್ವಾಲೆಗಳಿವೆ. ಸಪ್ತಮಾತೃಕೆಯರ ಶಿಲ್ಪಗಳು ದೇಗಲ್ಮಡಿ, ಮೋಘಾ, ಕೋಡ್ಲಿ ಇತ್ಯಾದಿಯಲ್ಲಿವೆ.

* **ಲಲಾಟದ ಗಜಲಕ್ಷ್ಮಿಯ ಶಿಲ್ಪ** : ಲಕ್ಷ್ಮಿಯ ಇಕ್ಕೆಲಲ್ಲಿರುವ ಗಜಗಳು ಸೊಂಡಿಲನ್ನು ತೋರಣದಂತೆ ಮಾಡಿ ವಂದಿಸುತ್ತಿವೆ. ಮಧ್ಯದಲ್ಲಿರುವ ಲಕ್ಷ್ಮಿ ಶಿಲ್ಪ ಕಮಲವನ್ನು ಹಿಡಿದಿದೆ. ಅಭಯ ಹಸ್ತ ಲಕ್ಷ್ಮಿಯ ಚತುರ್ಭಾಹು ಶಿಲ್ಪವಿದೆ. ಕಿರೀಟಧಾರಿ, ಸೀರೆ, ಕುಪ್ಪಸ, ತೊಳ್ಬಂದಿ, ಕೈಬಳೆ, ಕಂಠಮಾಲೆ, ಎದೆಹಾರ, ಬಾಹುವಲ್ಯ, ಯಜ್ಞೋಪವೀತ, ಆರೋಪ್ಯಮಾಲಾ ಧರಿಸಿ ಕಮಲದ ಮೇಲೆ ಕುಳಿತಿರುವ ಶಿಲ್ಪವಿದೆ.

ಇ. ಗಾಣಪತ್ಯ ಶಿಲ್ಪಗಳು :

ಊರು: ಪಸ್ತಾಪೂರ — ಸ್ಥಳ: ರಾಮಲಿಂಗೇಶ್ವರ ಗುಡಿ

ಕಾಲ: ಸು. ೧೧ನೇ ಶತಮಾನ — ಶಿಲ್ಪ: ಗಣೇಶ

ರಾಮಲಿಂಗೇಶ್ವರ ಗುಡಿಯ ಒಳಭಿತ್ತಿ ದೇವಕೋಷ್ಠದಲ್ಲಿ ಗಣೇಶ ಮೂರ್ತಿ ಶಿಲ್ಪವಿದೆ. ಹಣೆಪಟ್ಟಿ ಹೊಂದಿದ ಚಿಕ್ಕ ಕಿರೀಟ, ಕರ್ಣಕುಂಡಲ, ಉದರಕ್ಕೆ ಸರ್ಪಬಂಧ, ತೊಳ್ಬಂದಿ, ಮಣಿಕಂಠ, ಕೊರಳಾಭರಣ ಯಜ್ಞೋಪವೀತಕ್ಕೆ ಸರ್ಪ ಸುತ್ತಿದೆ. ಏಕದಂತನ ಶಿಲ್ಪವು ಚತುರ್ಭುಜಧಾರಿಯಾಗಿದ್ದು, ಹಿಂದಿನ ಕೈಯಲ್ಲಿ ಪರಶು ಮತ್ತು ಕಮಲ ಮುಂದಿನ ಎಡಗೈಯಲ್ಲಿ ಪಾತ್ರೆ ಹಿಡಿದಂತೆ ಅದರೊಳಗಿನ ಮೋದಕಗಳು, ಸೊಂಡಿಲಿನಿಂದ ಮೋದಕವನ್ನು

ತೆಗೆದುಕೊಳ್ಳುವಂತಿದೆ. ಮುಂದಿನ ಬಲಗೈಯಲ್ಲಿ ಮುರಿದ ದಂತವನ್ನು ಹಿಡಿದಿದೆ. ಸವ್ಯಲಲಿತಾಸನ ಭಂಗಿಯಲ್ಲಿ ಈ ಶಿಲ್ಪವಿದ್ದು, ಪ್ರಸ್ತುತ ತ್ರುಟಿತವಾಗಿದೆ.

ಊರು: ಮೋಘಾ ಸ್ಥಳ: ರಾಮಲಿಂಗೇಶ್ವರ

ಕಾಲ: ಸು. ೧೧ನೇ ಶತಮಾನ ಶಿಲ್ಪ: ಗಣೇಶ

ಗುಡಿಯ ಒಳಭಾಗದ ದೇವಕೊಷ್ಠದಲ್ಲಿ ಗಣಪತಿಯ ಶಿಲ್ಪವಿದೆ. ಕಿರೀಟಧಾರಿ ಅಭಯ ಹಸ್ತ, ಮೊದಕ ಹಸ್ತ, ಮೋದಕದ ಮೇಲೆ ಸೊಂಡಿಲು ಇಟ್ಟಿದೆ. ಹಿಂದಿನ ಬಲಗೈ ಪ್ರಸ್ತುತ ತ್ರುಟಿತ ಎಡಗೈಯಲ್ಲಿ ಕಮಲದಂತಿರುವ ಅಂಕುಶ ಸವ್ಯಲಲಿತಾಸನ ಭಂಗಿಯಲ್ಲಿದೆ. ಮಣಿಕಂಠ, ತೊಳ್ಬಂದಿ, ಉದರಲ್ಲಿ ಸರ್ಪ, ಕಾಲ್ಗಡಗ ಧರಿಸಿದೆ.

ಊರು: ಮೋಘಾ ಸ್ಥಳ: ರಾಮಲಿಂಗೇಶ್ವರ

ಕಾಲ: ಸು. ೧೧ನೇ ಶತಮಾನ ಶಿಲ್ಪ: ಗಣೇಶ

ಗುಡಿಯ ಒಳಭಾಗದ ದೇವಕೋಷ್ಠದಲ್ಲಿ ಮುಕುಟ ಕಿರೀಟಧಾರಿ ಮುತ್ತಿನ ಮಣಿಯ ಹಣೆಪಟ್ಟಿಕೆ ಧರಿಸಿದಂತೆ ವಿಘ್ನೇಶ್ವರ ಶಿಲ್ಪವಿದೆ. ಹಿಂದಿನ ಕೈಯಲ್ಲಿ ಪರಶು ಮತ್ತು ಅಂಕುಶ, ಮುಂದಿನ ಎಡಗೈ ಪ್ರಸ್ತುತ ತ್ರುಟಿತ ಮೊದಕಹಸ್ತ ಬಲಗೈ ದಂತ ಹಸ್ತವಾಗಿದ್ದು ಬಲಗಾಲ ಮೇಲೆ ಇದೆ. ಬಾಹುವಲ್ಯ, ತೊಳ್ಬಂದಿ, ಮಣಿಕಂಠ, ಮೂರು ಪದರದ ಕೊರಳಹಾರ, ಸರ್ಪಬಂಧ, ಕಾಲ್ಗಡಗ ಧರಿಸಿದೆ. ಈ ಮೂರ್ತಿಶಿಲ್ಪ ಸವ್ಯಲಲಿತಾಸನ ಭಂಗಿಯಲ್ಲಿದೆ.

ಗ್ರಾಮ: ದೇಗಲ್ಮಡಿ ಸ್ಥಳ: ಊರ ಪ್ರವೇಶದ ಗುಡಿ

ಕಾಲ: ಸು. ೧೦ನೇ ಶತಮಾನ ಶಿಲ್ಪ: ಗಣೇಶ

ಗಣೇಶನ ಶಿಲ್ಪ ಪ್ರಸ್ತುತ ತ್ರುಟಿತವಾಗಿದೆ. ಎಡಗೈ ಮೊದಕ ಹಸ್ತವಾಗಿದ್ದು ಬಲಗೈ ಪ್ರಸ್ತುತ ತ್ರುಟಿತವಾಗಿದೆ. ಕೊರಳಹಾರ, ಕರ್ಣಕುಂಡಲ, ಏಕದಂತ, ಕಿರೀಟಧಾರಿ, ಚತುರ್ಭುಜಧಾರಿಯಾಗಿದೆ. ಹಿಂದಿನ ಕೈಗಳಲ್ಲಿ ಶಂಖ ಮತ್ತು ಅಂಕುಶಗಳಿವೆ. ಸವ್ಯಲಲಿತಾಸನ ಭಂಗಿಯಲ್ಲಿದೆ.

ಗ್ರಾಮ: ರುಮ್ಮನಗೂಡು ಸ್ಥಳ: ಅಗಸಿ ಬಳಿ

ಕಾಲ: ಸು.೯ನೇ ಶತಮಾನ ಶಿಲ್ಪ: ಗಣಪತಿ

ದ್ವಿಬಾಹು ಗಣಪತಿ ಪುರಾತನವಾದ ಶಿಲ್ಪವಾಗಿದೆ. ಕಿರೀಟ ಮುಕುಟ, ಕುತ್ತಿಗೆಗೆ ಮುತ್ತಿನ ಹಾರ ಧರಿಸಿದೆ. ಎಡಗೈ–ಮೊದಕ ಹಸ್ತವಾಗಿದೆ. ಬಲಗೈಯಲ್ಲಿ ಭಗ್ನ ದಂತವಿದ್ದು, ಸುಖಾಸನದಲ್ಲಿದ್ದು ಕಾಲಿಗೆ ಕಾಲ್ಗಡಗ ಧರಿಸಿದೆ.

ಇಂತಹ ಶಿಲ್ಪಗಳು ರಾಯ್‌ಕೊಡ್, ಶಿರೋಳ್ಳಿ, ಸುಲೇಪೇಟೆ, ಕರಕ್‌ಮುಕ್ಕಿ ಭೂತಪೂರ ಮತ್ತು ಮಿರ್‍ಯಾಣದಲ್ಲಿವೆ. ರಾಯಕೋಡ್ ಹನುಮಾನ ಮಂದಿರದಲ್ಲಿ ದ್ವಿಬಾಹು ಗಣಪತಿ ಮೊದಕಹಸ್ತ, ದಂತಹಸ್ತವನ್ನೊಳಗೊಂಡಿದ್ದು ಸುಖಾಸನದಲ್ಲಿದೆ. ಅದರ ಕೆಳಭಾಗದಲ್ಲಿ ಲಿಪಿ ಇದೆ.

ಎಫ್. ಇತರೆ ಮೂರ್ತಿಶಿಲ್ಪಗಳು :

*** ನಾಗ ಶಿಲ್ಪಗಳು :**

ಪಸ್ತಾಪೂರುದ ರಾಮಲಿಂಗದೇವ ಗುಡಿಯಲ್ಲಿ ಸು.೧೧ನೇ ಶತಮಾನದ ನಾಗ ಶಿಲ್ಪವಿದೆ. ಐದು ಹೆಡೆಯ ಒಂದು ನಾಗರ ಶಿಲ್ಪ ಬಾಲದ ಮೇಲೆ ಅಂಕು-ಡೊಂಕಾಗಿ ನಿಂತಿದೆ. ತಲೆಯ ಮೇಲೆ ಐದು ಚಿಕ್ಕ ವಜ್ರಗಳ ಕಿರೀಟಗಳಿವೆ.

ಕರಕಮುಕ್ಕಿಯ ಅರಳಿಗಿಡ ಕಟ್ಟೆಯ ಬಳಿ ಸು೧೦ನೇ ಶತಮಾನದ ನಾಗ ಶಿಲ್ಪವಿದೆ. ದ್ವಿಪಾದುಕೆಗಳುಳ್ಳ ನಾಗಶಿಲ್ಪವಾಗಿದೆ(ಕ.ಸ.ಗೆ.ಕ.ಜಿ. ೧೯೯೭ ಪು-೬೪೪). ಏಳು ಹೆಡೆಯ ಮತ್ತು ಒಂದು ಹೆಡೆಯ ಹಾವುಗಳು ಒಂದಕ್ಕೊಂದು ಸುರಳಿ ಸುತ್ತಿದಂತೆ, ಶಿರದಿಂದ ಸೊಂಟದವರೆಗೆ ಹಾವಿನ ರೂಪದಲ್ಲಿವೆ. ಸೊಂಟದಿಂದ ಪಾದಗಳವರೆಗೆ ಮಾನವ ರೂಪವಿದೆ. ಅದು ದ್ವಿಪಾದಗಳಲ್ಲಿದೆ. ಉದ್ದನೆಯ ಧೋತಿ, ಕಟಿವಸ್ತ್ರ, ಕುಚಹಾರ, ಕಾಲ್ಗಡಗ ಧರಿಸಿದೆ. ಇಕ್ಕೆಲಗಳಲ್ಲಿ ಚಿಕ್ಕ ನಾಗಶಿಲ್ಪಗಳಿವೆ. ರುಮ್ಮನಗೂಡಿನ ರಾಮಲಿಂಗೇಶ್ವರ ದೇವಾಲಯದ ಪುಷ್ಕರಣಿ ಕಟ್ಟೆಯ ಮೇಲೆ ಐದು ಹೆಡೆಯ ನಾಗಶಿಲ್ಪವಿದೆ. ಇದು ಕಪ್ಪು ಶಿಲೆಯಲ್ಲಿದೆ.

ರಟ್ಕಲ್‌ನ ಬಂಕೇಶ್ವರ ದೇವಾಲಯದೊಳಗೆ ಸು.೩.೫ ಅಡಿ ಎತ್ತರದ ಐದು ಹೆಡೆಯ ಮತ್ತು ಒಂದು ಹೆಡೆಯ ಹಾವು ಎರಡು ಒಂದಕ್ಕೊಂದು ಸರಪಳಿಯಂತೆ ಸುತ್ತಿಕೊಂಡಿದೆ. ಪಸ್ತಾಪುರದ ರಾಮಲಿಂಗೇಶ್ವರ ದೇವಾಲಯದ ದೇವಕೋಷ್ಠದ ಮೇಲ್ಭಾಗದಲ್ಲಿ ಅರ್ಧನಾರಿ ಸ್ವರೂಪ ಉಳಿದರ್ಧ ನಾಗ ಸ್ವರೂಪದಲ್ಲಿದೆ. ನಾಗಕನ್ಯೆ ಕಿರೀಟಧಾರಿಣಿ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಚೂರಿ ಹಿಡಿದಂತೆ ತೋರುತ್ತದೆ. ಇದು ಸ್ವಲ್ಪ ತ್ರುಟಿತವಾಗಿದೆ. ಕೊರಳಹಾರ, ತೋಳ್ಬಂದಿ, ಕೈ ಬಳೆ ಧರಿಸಿದೆ. ಗೊಟ್ಟಂಗೊಟ್ಟಿಯ ನಾಗಶಿಲ್ಪ ರುಂಡ ಮಾತ್ರ ಉಳಿದಿದ್ದು ತ್ರುಟಿತವಾಗಿದೆ. ಚಿಕ್ಕ ಕಿರೀಟಧಾರಿ ನಾಗಶಿಲ್ಪವಿದೆ. ಇನ್ನೊಂದು ಅಲ್ಲಿಯೆ ಸುಮಾರು ಮೂರು ಅಡಿ ಎತ್ತರದ ಒಂದೇ ನಾಗಶಿಲ್ಪವಿದೆ. ಇದರ ಕಾಲ ಸು. ೧೦ನೇ ಶತಮಾನವಾಗಿದೆ. ಚೇಂಗಟಾದ ಸೋಮೇಶ್ವರ ಗುಡಿಯ ಬಳಿ ಜೋಡಿ ನಾಗಶಿಲ್ಪವಿದೆ. ರಾಮತೀರ್ಥದ ಜೋಡಿ ನಾಗಶಿಲ್ಪ ಈಶ್ವರ ದೇವಾಲಯದ ಬಳಿ ಇದೆ. ಬೃಹತ್ ಆಕಾರವಾಗಿದೆ. ಈ ಶಿಲ್ಪ ಶಿರೋಮಣಿ ಕಿರೀಟ ಧರಿಸಿದಂತಿದೆ. ಸುಮಾರು ಎಂಟು ಅಡಿ ಎತ್ತರವಾಗಿದೆ.

ಕೇಶಾವರ್(ಗಡಿ) ಊರ ಹೊರಗಿನ ಸಿದ್ದಪ್ಪನ ಗುಡಿ ಬಳಿ ಏಳುಹೆಡೆಯ ನಾಗ ಮತ್ತು ಒಂದು ಹೆಡೆಯ ನಾಗದೊಂದಿಗೆ ಸೇರಿ ಸುತ್ತಿಕೊಂಡು ಬಾಲದ ಮೇಲೆ ನಿಂತಿದೆ. ಈ ಗುಡಿಯ ಬಲಕ್ಕೆ ಇರುವ ಇನ್ನೊಂದು ಸು.೫ ಅಡಿ ಎತ್ತರದ ಏಳು ಹೆಡೆಯ ನಾಗಶಿಲ್ಪ ಬಾಲದ ಮೇಲೆ ನಿಂತಿದೆ. ಇವು ಕಪ್ಪು ಶಿಲೆಯಲ್ಲಿವೆ. ಮಿರ್ಯಾಣದ ತಾಂಡೂರು ರಸ್ತೆ ಬಳಿಯ ಪಾಪನಾಥಗುಡಿಯ ಪ್ರಾಂಗಣದಲ್ಲಿ ಏಳು ನಾಗಶಿಲ್ಪಗಳಿವೆ. ಅದರಲ್ಲಿ ಎರಡು ನಾಗಶಿಲ್ಪಗಳು ಸುರುಳಿ ಸುತ್ತಿಕೊಂಡಂತಿವೆ. ಇವುಗಳ ಪಕ್ಕದಲ್ಲಿರುವ ಇನ್ನೊಂದು ನಾಗಶಿಲ್ಪ ಆಯುಧಧಾರಿಣಿ ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗುರಾಣಿ ಹಿಡಿದಿದೆ. ಮೇಲಿನ ಅರ್ಧಭಾಗ ನಾರಿ ಸ್ವರೂಪ ಕೆಳಗಿನ ಇನ್ನರ್ಧ ಭಾಗ ಹಾವಿನ ಸ್ವರೂಪವಿದೆ. ಹಿಂದೆ ಏಳು ಹೆಡೆಯ ಪ್ರಭಾವಳಿ(ತಲೆ ಮೇಲೆ) ಇದೆ. ಇದರ ಪಕ್ಕದ ಇನ್ನೊಂದು ನಾಗಶಿಲ್ಪ ಎಡಗೈಯಲ್ಲಿ ಗುರಾಣಿ ಬಲಗೈಯಲ್ಲಿ ಖಡ್ಗ ಹಿಡಿದಿದೆ. ಮೇಲಿನ ಅರ್ಧಭಾಗ ನಾರಿ ಸ್ವರೂಪ ಕೆಳಭಾಗ ನಾಗ ಸ್ವರೂಪದಲ್ಲಿದೆ. ತಲೆಯ ಪ್ರಭಾವಳಿಯಲ್ಲಿ ಏಳು ಹೆಡೆಯ ನಾಗವಿದೆ. ಇಂತಹ ಶಿಲ್ಪಗಳನ್ನು ಇಲ್ಲಿ ಜಲಕನ್ಯೆಯರೆಂದು ಕರೆಯುತ್ತಾರೆ. ಅದರ ಪಕ್ಕದಲ್ಲಿ ಇದೇ ಮಾದರಿಯ ನಾಗಶಿಲ್ಪವಿದೆ. ಮಿರ್ಯಾಣದ ಮೂರು ದೇವರ ಗುಡಿಯಲ್ಲಿ ಒಂದು ಗರ್ಭಗುಡಿಯ ಬಾಗಿಲ ಬಳಿ ನಾಗಶಿಲ್ಪವಿದೆ. ಅರ್ಧನಾರಿ ಇನ್ನರ್ಧ ಭಾಗದಲ್ಲಿ ಹಾವಿನ ಬಾಲವಿದೆ(ಜಲಕನ್ಯೆ). ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಗುರಾಣಿ ಹಿಡಿದಿದೆ. ಕಿರೀಟಧಾರಿ, ಕರ್ಣಕುಂಡಲ, ಕೊರಳಹಾರ ತೋಳ್ಬಂದಿ, ಬಳೆ ಧರಿಸಿದೆ ತಲೆಯ ಮೇಲೆ ಮೂರು ಹೆಡೆ ಸರ್ಪ ಹೆಡೆಯೆತ್ತಿದೆ.

* ಕೂಡಹಳ್ಳಿಯಲ್ಲಿ ಹನುಮಾನ ಮಂದಿರದ ಬಳಿ ಅರ್ಧನಾರಿ ಇನ್ನರ್ಧ ಹಾವಿನ ಸ್ವರೂಪ ಹೊಂದಿದ ಆಯುಧಧಾರಿಣಿ ಶಿಲ್ಪವಿದೆ. ಹಲ್‌ಚೇರಾ ಈಶ್ವರಗುಡಿಯಲ್ಲಿ ಒಂದು ಹೆಡೆಯ ನಾಗಶಿಲ್ಪವಿದೆ. ಸುರುಳಿ ಜೋಡಿ ನಾಗಶಿಲ್ಪವು ವಜ್ರ ಮುಕುಟಧಾರಿಯಾಗಿದ್ದು, ಇಕ್ಕೆಲಲ್ಲಿ ಚಿಕ್ಕನಾಗಗಳ ಶಿಲ್ಪಗಳಿವೆ. ಮತ್ತೊಂದು ದ್ವಾರದ ಬಳಿ ವಜ್ರ ಕಿರೀಟಧಾರಿ ಏಳು ಹೆಡೆಯ ನಾಗಶಿಲ್ಪ ಬಾಲದ ಮೇಲೆ ನಿಂತಿದೆ. ಸುಲೇಪೇಟೆಯ ವೀರಭದ್ರೇಶ್ವರ ದೇವಾಲಯದ ದೇವಕೋಷ್ಠದಲ್ಲಿ ನಾಗದೇವ ಮತ್ತು ದೇವಿಯ ಮೇಲ್ಭಾಗ ಮಾನವ, ಸೊಂಟದಿಂದ ಕೆಳಭಾಗ ಸುರುಳಿ ಸುತ್ತಿದ ಹಾವಿನ ರೂಪ ಹೊಂದಿದ ನಾಗ ದಂಪತಿ ಶಿಲ್ಪವಿದೆ. ಹಿಂದಿನ ಪ್ರಭಾವಳಿಯಲ್ಲಿ ಏಳುಹೆಡೆ ನಾಗರ ಶಿಲ್ಪವಿದೆ. ಕಿರೀಟಧಾರಿ ನಾಗಿಣಿ ಸಂಕೋಚಧಾರಿ ಮುಖದಿಂದ ಕೂಡಿದೆ. ನಾಗನ ಬಲಗೈಯಲ್ಲಿ ಖಡ್ಗವಿದೆ ಮತ್ತು ಎಡಗೈಯಿಂದ ನಾಗಿಣಿಯ ಎಡಭುಜವನ್ನು ಬಳಸಿಕೊಂಡಿದೆ. ನಾಗಿಣಿ ಭಲ್ಯೆ? ಹಿಡಿದಂತೆ ತೋರುತ್ತದೆ. ಎದೆಹಾರ, ಕಂಠಹಾರ, ಸ್ತನಹಾರ, ಕರ್ಣಕುಂಡಲ, ನಾಗಿಣಿ ಕಿರೀಟ ಧರಿಸಿದಂತೆ ಕೆತ್ತಿದೆ.

* **ದೀಪಸ್ತಂಭ :**

ಕೆಲ ದೇವಾಲಯಗಳ ಎದುರು ದೀಪಸ್ತಂಭಗಳು ನಿರ್ಮಿಸಲ್ಪಟ್ಟಿವೆ. ಕಲ್ಲಿನ ಸ್ತಂಭದಲ್ಲಿ ದೀಪವಿಡಲು ಕೋಮು(ಬೋಧಿಗೆ)ಗಳಿವೆ. ಕಾರ್ತಿಕ ಮಾಸದಲ್ಲಿ ಈ ದೀಪಸ್ತಂಭಗಳಲ್ಲಿ ದೀಪಹಚ್ಚಿ ದೇವಾಲಯ ಬೆಳಕಿನಿಂದ ಕೂಡಿರುವಂತೆ ಮಾಡುತ್ತಿದ್ದರು. ಕೆಲವು ವೈಷ್ಣವ ದೇವಾಲಯದ ಎದುರು ಗರುಡ ಸ್ತಂಭದಲ್ಲಿಯೇ ದೀಪ ಸ್ತಂಭ ಕೆತ್ತಲ್ಪಟ್ಟಿರುತ್ತವೆ. ಚಿಂಚೋಳಿಯ ದೀಪಸ್ತಂಭ ಇಲ್ಲಿ ಉದಾಹರಿಸಬಹುದು. ಇದು ಸು.೧೫ನೇ ಶತಮಾನದ್ದಾಗಿದೆ. ಎತ್ತರದ ಜಗತಿ ಮೇಲೆ ಈ ದೀಪಸ್ತಂಭ ನಿರ್ಮಿಸಲ್ಪಟ್ಟಿದೆ. ಸುಲೇಪೇಟೆಯ ವೀರಭದ್ರೇಶ್ವರ ದೇವಾಲಯದಲ್ಲಿ ದೀಪಸ್ತಂಭವಿದೆ. ಹೂದಳದ ತಲವಿನ್ಯಾಸ ಮತ್ತು ದೀಪವಿಡಲು ಬೋದಿಗೆಯ ಕೋಮು ರಚಿಸಲ್ಪಟ್ಟಿವೆ. ಇಲ್ಲಿಯ ಈಶ್ವರ ದೇವಾಲಯದ ಗೋಡೆಗಳಲ್ಲಿಯೇ ಅರ್ಧ ಸ್ತಂಭಗಳಲ್ಲಿ ದೀಪಸ್ತಂಭ ನಿರ್ಮಿಸಿದ್ದಾರೆ. ರುದ್ನೂರು ಮಠದಲ್ಲಿರುವ ದೀಪಸ್ತಂಭ ಚೌಕಾಕಾರ ಜಗಲಿಯ ಮೇಲೆ ವೃತ್ತಾಕಾರದಲ್ಲಿ, ಹೂದಳಗಳನ್ನು ಕೆತ್ತಲ್ಪಟಿದೆ. ಅದರ ಮೇಲೆ ಹೂಜಿಯಾಕಾರದ ಸ್ತಂಭವಿದೆ. ಎತ್ತರ ದೀಪಸ್ತಂಭ ಹಲವು ಕೋಮುಗಳಿಂದ ರಚಿತವಾಗಿದೆ.

* **ಮದನಿಕೆಯರ ಶಿಲ್ಪ :**

ರುಮ್ಮನಗೂಡದ ಶಂಕರ ನಾರಾಯಣ ದೇವಾಲಯದ ಹೊರ ಭಿತ್ತಿಗಳಲ್ಲಿ ಮದನಿಕೆಯರ ಶಿಲ್ಪಗಳು ಕಾಣಬಹುದು. ಶುಕ ಸುಂದರಿಯರ ಶಿಲ್ಪಗಳಿವೆ. ಬೇಲೂರಿನ ಶಿಲಾಬಾಲಿಕೆಯಂತಿರುವ ಈ ಶಿಲ್ಪಗಳು ಕಪ್ಪು ಗ್ರ್ಯಾನೇಟ್ ಶಿಲೆಯಲ್ಲಿ ಕೆತ್ತಿದೆ. ಒಂದು ಶಿಲ್ಪ ಬಲಗೈಯಲ್ಲಿ ಚಿಕ್ಕ ಗಿಳಿ ಹಿಡಿದ ಶಿಲ್ಪವಿದೆ. ಕುಂತಲಧಾರಿ (ತುರುಬಿನಾಕಾರ ಕೇಶಾಲಂಕರ) ಮತ್ತು ಅದಕ್ಕೆ ಆಭರಣಗಳನ್ನು ಹಾಕಲಾಗಿದೆ. ಕರ್ಣಲಂಕಾರ ಆಭರಣ ಧರಿಸಿರುವಂತೆ ಕೆತ್ತಿದೆ. ಕೊರಳಹಾರ, ಸ್ತನಹಾರ, ಕಂಠಹಾರ, ಸೊಂಟಪಟ್ಟಿ, ಕುಚಹಾರ, ಕಟಿಬಂಧ, ಕಾಲ್ಗಡಗದಿಂದ ಅಲಂಕೃತ ಈ ಶುಕ ಸುಂದರಿಯ ಶಿಲ್ಪವಿದೆ. ನಗುಮುಖ ಮತ್ತು ನಾಚಿಕೆಯಿಂದ ಕೂಡಿದೆ. ಪ್ರಸ್ತುತ ಈ ಶಿಲ್ಪ ತ್ರುಟಿತವಾಗಿದೆ. ಇಲ್ಲಿಯ ಇನ್ನೊಂದು ಶಿಲ್ಪ ಜಟಾಭಾರ ಧರಿಸಿದ ಶುಕ ಸುಂದರಿ ಶಿಲ್ಪವಿದೆ. ತೋಳ್ಬಂದಿ, ಬಾಹುವಲ್ಯ, ಮಣಿಕಂಠ, ಸ್ತನಹಾರ, ಕೊರಳಹಾರ, ಕಂಠಹಾರ, ಕರ್ಣಕುಂಡಲ, ಕಾಲ್ಗಡಗ, ಸೊಂಟಪಟ್ಟಿ, ಕುಚಹಾರ, ಯಜ್ಞೋಪವೀತ, ಅರೋಪ್ಯಮಾಲಾ ಧರಿಸಿದೆ. ಎಡಗೈಯಲ್ಲಿ ಗಿಳಿ ಹಿಡಿದಿದೆ. ಆದರೆ ಪ್ರಸ್ತುತ ತ್ರುಟಿತವಾಗಿದೆ. ಇಲ್ಲಿರುವ ಮತ್ತೊಂದು ಶುಕ ಸುಂದರಿ ಶಿಲ್ಪ ಬಲ ಮುಂಗೈ ಹತ್ತಿರ ಗಿಳಿ ಸುಂದರಿಯ ಕೆನ್ನೆಗೆ ಅದರ ಮುಖ ಮಾಡಿ ಕುಳಿತಿದ್ದೆ.

ಕೇಶಾಲಂಕರಣೆಯ ಧಮ್ಮಿಲಧಾರಿಣಿ. ಸ್ತನಹಾರ, ಕೊರಳಹಾರ, ಬಳೆ, ಸೊಂಟಪಟ್ಟಿ, ಕುಚಹಾರ, ಯಜ್ಞೋಪವೀತ, ಕಾಲ್ಗಡಗ, ಪೈಜಾಮ ಆಭರಣಗಳು ಧರಿಸಿದೆ. ತ್ರಿಭಂಗಿಯಲ್ಲಿರುವ ಶಿಲ್ಪಗಳಿವೆ.

*** ಭುವನೇಶ್ವರಿಗಳು/ವಿತಾನ :**

ದೇವಾಲಯದ ಮೇಲ್ಭಾವಣಿಯಲ್ಲಿ ಹೂದಳಗಳಿಂದ ಛಾವಣಿ ಅಲಂಕರಿಸಿರುತ್ತಾರೆ. ಆ ಹೂವಿನ ದಳ ಹೊಂದಿರುವ ಶಿಲ್ಪವನ್ನು ಭುವನೇಶ್ವರಿಗಳೆಂದು ಅಥವಾ ವಿತಾನಗಳೆಂದು ಕರೆಯುವರು. ಪಸ್ತಾಪೂರದ ರಾಮಲಿಂಗೇಶ್ವರದಲ್ಲಿ ವೃತ್ತಾಕಾರದ ತ್ರಿದಳ ಕುಮುದ ಭುವನೇಶ್ವರಿ ನೋಡಬಹುದು. ಮಧ್ಯದಲ್ಲಿ ಒಂದು ಸಣ್ಣ ಮೊಗ್ಗು, ಅದರ ಸುತ್ತ ಮೂರು ಸ್ತರದಲ್ಲಿ ಹೂವಿನದಳಗಳು ಸುತ್ತಲೂ ಕೆತ್ತಲ್ಪಟ್ಟಿವೆ. ಸುಲೇಪೇಟೆಯ ಸಂಗಮೇಶ್ವರ ದೇವಾಲಯದಲ್ಲಿ ನಕ್ಷತ್ರಾಕಾರದ ಭುವನೇಶ್ವರಿ ಇದೆ. ಹೀಗೆ ವಿವಿಧ ಅಲಂಕರಣೆಗಳುಳ್ಳ ಹೂವಿನ ದಳದ ಭುವನೇಶ್ವರಿಗಳು ಹಲವಾರು ರೀತಿಯಲ್ಲಿ ಇಲ್ಲಿ ಕಾಣಬಹುದು. ನಿಡಗುಂದ, ಮಿರ್ಯಾಣದ ತೊಲೆಗಳ ಮತ್ತು ತೋರಣದಲ್ಲಿ ಇಳಿಬಿಟ್ಟ ಮೊಗ್ಗಿನಾಕಾರದ ಕುಮುದಗಳು, ಮೇಲ್ಭಾವಣಿ ಭುವನೇಶ್ವರಿಗಳು ಹೆಚ್ಚಿನ ಅಲಂಕರಣೆಯನ್ನೊಳಗೊಂಡಿವೆ. ರುಮ್ಮನಗೂಡಿನ ಶಂಕರ ನಾರಾಯಣ ಗುಡಿಯಲ್ಲಿ ವೃತ್ತಾಕಾರ ಮತ್ತು ನಕ್ಷತ್ರಾಕಾರ ಭುವನೇಶ್ವರಗಳು ವೈವಿಧ್ಯಪೂರ್ಣ ಅಲಂಕರಣೆಯನ್ನೊಳ ಗೊಂಡಿವೆ. ಮೋಘಾ ರಾಮಲಿಂಗೇಶ್ವರ, ಶಿರೋಳ್ಳಿಯ ಹರಿಹರ ದೇವಾಲಯಗಳಲ್ಲಿ ಸಹ ಈ ರೀತಿಯ ಭುವನೇಶ್ವರಿಗಳಿವೆ. ಇವು ಕಪ್ಪು ಗ್ರ್ಯಾನೇಟ್ ಶಿಲೆಯಲ್ಲಿವೆ. ಭೋಗಲಿಂಗದ ದ್ವಿದಳ ಭುವನೇಶ್ವರಿ, ಚೇಂಗಟಾದಲ್ಲಿಯ ತ್ರಿದಳ ಭುವನೇಶ್ವರಿಗಳಿವೆ. ಹೀಗೆ ದ್ವಿದಳ, ತ್ರಿದಳ, ಚತುರ್ದಳ, ಪಂಚದಳ, ಸಪ್ತದಳ, ಭುವನೇಶ್ವರಿಗಳಿರುವುದನ್ನು ಕಾಣುತ್ತೇವೆ. ಆದರೆ ಇಲ್ಲಿ ದ್ವಿದಳ, ತ್ರಿದಳ, ಪಂಚದಳ ಭುವನೇಶ್ವರಿ ಕಾಣಬಹುದು.

*** ಸಿಂಹಸ್ತಂಭ :**

ಮಿರ್ಯಾಣದ ಈ ಸಿಂಹಸ್ತಂಭ ಈಶ್ವರ ದೇವಾಲಯದ ಪ್ರಾಂಗಣದಲ್ಲಿದೆ. ಸು. ೮ನೇ ಶತಮಾನದ್ದಾಗಿದ್ದು ವೃತ್ತಾಕಾರದಲ್ಲಿದೆ. ಸಿಂಹದ ಬಾಯಿಯ ಇಕ್ಕೆಲಲ್ಲಿ ದವಡೆ ಹಲ್ಲುಗಳಿವೆ. ಎದ್ದು ಕಾಣುವ ದೊಡ್ಡ ಕಣ್ಣುಗಳು, ತ್ರಿಕೋನಾಕಾರ ನಾಸಿಕವಿದೆ. ವೃತ್ತಾಕಾರದ ಮೂರು ಪದರಗಳ ಮೇಲೆ ಒಂದು ಕಳಸ ಮತ್ತು ಬೋದಿಗೆ ಸಿಂಹದ ಶಿರೋಭಾಗದಲ್ಲಿದೆ. ಬೆನ್ನಿನ ಭಾಗದಲ್ಲಿ, ಸಿಂಹದ ಬಾಲವನ್ನು ಸುತ್ತಿಕೊಂಡ ಕುಬ್ಜನ ಶಿಲ್ಪವಿದೆ. ಇದು ಸಿಂಹ ಸವಾರನಂತೆ

ತೋರುತ್ತದೆ. ಸಿಂಹ ತನ್ನ ಮುಂಗಾಲುಗಳನ್ನು ಸಿಂಹ ಭಂಗಿಯಲ್ಲಿ ಕುಳಿತ ಕುಬ್ಜನ ಭುಜದ ಮೇಲಿಟ್ಟಿದೆ. ಕುಬ್ಜ ಶಿಲ್ಪವು ಗುಂಗುರು ಕೂದಲು, ಉದ್ದನೆ ಕಿವಿಯಿಂದ ಕೂಡಿದೆ. ಕಂಠಹಾರ, ಕೊರಳಹಾರ, ವಕ್ಷಬಂದ, ಸೊಂಟಪಟ್ಟಿ, ಉದರಪಟ್ಟಿಯ ಅಲಂಕರಣೆಯನ್ನೊಳಗೊಂಡಿದೆ.

*** ತೋರಣ ಶಿಲ್ಪಗಳು :**

ನಿಡಗುಂದದ ನವಕೋಟಿ ನಾರಾಯಣ ಗುಡಿಯ ಮಕರ ತೋರಣ ಮತ್ತು ಮಕರ ಸಾರಥಿ ಇದೆ. ಶಿಲ್ಪವೂ ನಿಧಿ ಮತ್ತು ಶ್ರೀನಿಧಿ ಕುಳಿತಿರುವ ಮತ್ತು ಮಧ್ಯಕ್ಕೆ ಸೂರ್ಯನ ಶಿಲ್ಪವನ್ನೊಳಗೊಂಡಿದೆ. ಮಕರಗಳ ಹಿಂದೆ ಕುಬ್ಜ ಶಿಲ್ಪಗಳ ಕೆತ್ತನೆ ಇದೆ. ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಗಜ ತೋರಣ ಮತ್ತು ಗಜಸವಾರರ ಮಧ್ಯದಲ್ಲಿ ಕೀರ್ತಿಮುಖಗಳಿವೆ.

* ಮಿರ್ಯಾಣದ ಈಶ್ವರ ದೇವಾಯದ ಮಕರ ತೋರಣದಲ್ಲಿ ಮಕರ ಸವಾರನಿದ್ದು ಮಕರ ನಾಲಿಗೆಗಳನ್ನು ತೋರಣದಂತೆ ಕೆತ್ತಿದೆ. ಅದರ ಮೇಲೆ ನೃತ್ಯ ಮಾಡುವ ಸ್ತ್ರೀ, ಸಂಗೀತ ವಾದ್ಯಗಾರರ ಶಿಲ್ಪಗಳು, ತಬಲ, ಕೊಳಲು ಊದುವವರ ಶಿಲ್ಪ, ನಂತರ ಗಿರಿಜಾ ಕಲ್ಯಾಣದ ಶಿಲ್ಪದಲ್ಲಿ ವಿಷ್ಣು ಗಿರಿಜೆಯನ್ನು ಶಿವನಿಗೆ ಧಾರೆಯರೆಯುವ ಶಿಲ್ಪವಿದೆ. ಕಮಲದ ಮೇಲೆ ಕುಳಿತ ಬ್ರಹ್ಮನ ಶಿಲ್ಪವಿದೆ. ಮಧ್ಯದಲ್ಲಿ ಆಪಸ್ಮಾರನ ಮೇಲೆ ಕುಣಿಯುತ್ತಿರುವ ಷಡ್ಭುಜ ನಟರಾಜ ನೃತ್ಯಭಂಗಿಯಲ್ಲಿ ನಿಂತಿರುವ ಶಿಲ್ಪವಿದೆ. ಇಕ್ಕೆಲಲ್ಲಿ ಬಲಕ್ಕೆ ಉದ್ದನೆಯ ದಂಡ ಹಿಡಿದು ಕುಣಿಯುತ್ತಿರುವ ಭೃಕುಟಿಯ ಶಿಲ್ಪ? ಎಡಕ್ಕೆ ಭೃಂಗಿ ಕುಣಿಯುತ್ತಿರುವ ಶಿಲ್ಪವಿದೆ. ನಂತರದ ಶಿಲ್ಪದಲ್ಲಿ ಮಹೇಶ್ವರನ ಬಲಗೈ ಕಾತ್ಯಾಯನ ಮುದ್ರೆ ಎಡಗೈ ಮೃಗಮುದ್ರೆಯಲ್ಲಿದೆ. ಹಿಂದಿನ ಕೈಯಲ್ಲಿ ತ್ರಿಶೂಲ ಹಿಡಿದ ಚತುರ್ಭುಜಧಾರಿ ತ್ರಿಭಂಗಿಯಲ್ಲಿರುವ ಗಿರಿಜೆಯ ಸೊಂಟವನ್ನು ಬಳಸಿದೆ. ಅವಳ ಪಕ್ಕಕ್ಕೆ ನೃತ್ಯ ಮಾಡುವ ಭೃಂಗಿ ಶಿಲ್ಪವಿದೆ. ಮಹಿಷನನ್ನು ಕೊಲ್ಲುತ್ತಿರುವ ಮಹಿಷಾಸುರ ಮರ್ದಿನಿ ಶಿಲ್ಪವಿದೆ. ನಂತರ ಚತುರ್ಭುಜಧಾರಿ ಶಿವ ತ್ರಿಶೂಲದಿಂದ ಅಂಧಕಾಸುರನನ್ನು ಕೊಲ್ಲುತ್ತಿರುವ, ಷಡ್ಭುಜಧಾರಿ ಶಿಲ್ಪ ಕಾಲಲ್ಲಿ ಆಪಸ್ಮಾರನನ್ನು ಹಿಡಿದಿರುವ ಶಿಲ್ಪವಿದೆ. ಮೇಲಿನ ಪಟ್ಟಿಯಲ್ಲಿ ಗಣಗಳ ಸಾಲಿದೆ.

* ಮಿರ್ಯಾಣದ ಮೂರುಗುಡಿ ಈಶ್ವರ ದೇವಾಲಯದ ಮಕರ ತೋರಣ ಮತ್ತು ಮಕರಸವಾರರ ಶಿಲ್ಪವಿದೆ. ದೇವಕನ್ಯೆ, ಭೃಂಗಿ, ಅಂಜಲಿ ಹಸ್ತದ ಚತುರ್ಮುಖ ಬ್ರಹ್ಮ, ಅವನ ಹಿಂದೆ ಹಂಸದ ಶಿಲ್ಪವಿದೆ. ಸ್ತಂಭದಿಂದ ಉದ್ಭವಿಸುತ್ತಿರುವ ನರಸಿಂಹನ ಶಿಲ್ಪವಿದೆ. ಜಟಾಮುಕುಟ ಚತುರ್ಭಜಧಾರಿ ಶಿವ? ನಂತರ ಭೃಂಗಿಯೂ ಎರಡು ಕುಬ್ಜಧಾರಿಗಳ ಮೇಲೆ ಕುಳಿತಂತಿದೆ.

ಅಷ್ಟ ಭುಜಧಾರಿ ನಟರಾಜ ಅಪಸ್ಮಾರನ ಮೇಲೆ ನಾಟ್ಯ ಭಂಗಿಯಲ್ಲಿ ನಿಂತಿರುವ ಶಿಲ್ಪ ಪಕ್ಕದಲ್ಲಿ ಗಿರಿಜೆಯ ಶಿಲ್ಪವಿದೆ. ಶಿವ ಪಾರ್ವತಿಯರ ಶಿಲ್ಪವಿದೆ. ಕಮಲದಂಡ ಹಿಡಿದ ಶಿವ ಮತ್ತು ಪಾರ್ವತಿ ನಂತರ ದೇವಪುರಷನ ಶಿಲ್ಪ, ಕೊನೆಗೆ ಕುಬ್ಜ ಶಿಲ್ಪವಿದೆ. ಅದರ ಮೇಲಿನ ಪಟ್ಟಿಯಲ್ಲಿ ಗಣಗಳ ಸಾಲುಗಳಿವೆ.

* **ಸುಲೇಪೇಟೆ ಈಶ್ವರ ದೇವಾಲಯದಲ್ಲಿಯ ತೋರಣ ಶಿಲ್ಪ :** ಅಂತರಾಳದ ತೊಲೆಯ ಮೇಲೆ ಮಕರತೋರಣವಿದೆ. ಇದು ಮಿರ‍್ಯಾಣದ ಈಶ್ವರ ದೇವಾಲಯದ ಅಂತರಾಳದ ಮಕರ ತೋರಣದ ಶಿಲ್ಪಗಳಿಗೂ, ಈ ಶಿಲ್ಪಗಳಿಗೂ ಬಹಳ ಹೋಲಿಕೆಯಿದೆ. ಒಂದೇ ತೆರನಾದಂತಹ ಶಿಲ್ಪಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಕಂಡು ಬಂದಿವೆ. ಇಲ್ಲಿ ತ್ರಿಪಟ್ಟಿಕೆಗಳಿದ್ದು, ಆರಂಭದಲ್ಲಿ ಮಕರ ತೋರಣ ಮತ್ತು ಮಕರ ಸವಾರ ಶಿಲ್ಪ ಉದ್ದನೆ ಮಕರದ ನಾಲಿಗೆ ಮೇಲೆ ಈಶ್ವರನ ವಿವಿಧ ಅವತಾರಗಳ ಶಿಲ್ಪ, ಎರಡನೆ ಪಟ್ಟಿಕೆಯಲ್ಲಿ ಮೂಡಿ ಬಂದಿದೆ. ಮೂರನೆ ಪಟ್ಟಿಕೆಯಲ್ಲಿ ಗಣಗಳ ಸಾಲಿದೆ.

ಎರಡನೆ ಪಟ್ಟಿಕೆಯ ಆರಂಭದಲ್ಲಿ ಮಕರದ ಮೇಲೆ ನಿಂತಿರುವ ಯಮುನೆಯ ಶಿಲ್ಪವಿದೆ. ನಂತರ ವಾದ್ಯಗಾರರ ಮತ್ತು ನೃತ್ಯಗಾರರ ಶಿಲ್ಪ, ನಂತರ ಗಿರಿಜಾ ಕಲ್ಯಾಣ ಶಿಲ್ಪವಿದೆ. ಈ ಶಿಲ್ಪದಲ್ಲಿ ಪಾರ್ವತಿಯ ಎಡಕ್ಕೆ ಒಂದು ಕುಬ್ಜಶಿಲ್ಪವಿದೆ. ನೀರು ಧಾರೆಯೆರೆಯಲು ತಂಬಿಗೆ ಹಿಡಿದ ವಿಷ್ಣುವಿನ ಶಿಲ್ಪವಿದೆ. ಕಮಲದಲ್ಲಿ ಕುಳಿತ ಚತುರ್ಮುಖ ಬ್ರಹ್ಮ ಮತ್ತು ನಾರಾಯಣನ? ಶಿಲ್ಪಗಳಿವೆ. ಹಿಂದೆ ಗಂಧರ್ವರ ಶಿಲ್ಪಗಳಿವೆ. ನಂತರ ಬರುವ ಮಕರದ ನಾಲಿಗೆ (ಜಿಹ್ವಾ) ಮಾಲೆಯಲ್ಲಿ ಒಬ್ಬ ಚತುರ್ಭುಜದ ವ್ಯಕ್ತಿ ಶಿಲ್ಪವಿದೆ. ಮುಂದೆ ಮೂರು ಚಿಕ್ಕ ಕಟ್ಟಡದಂತೆ ತೋರಿಸಿದ್ದು ಅದರ ಮೇಲೆ ಮುಂದಿನ ಎರಡು ಕೈ ಇಟ್ಟಿರುವಂತೆ ಹಿಂದಿನ ಎರಡು ಕೈಯಲ್ಲಿ ಅದೇ ರೀತಿಯ ಮೂರು ಇಟ್ಟಿಗೆ ಆಕಾರ ತನ್ನ ಕಿರೀಟದ ಮೇಲೆ ಹಿಡಿದಂತೆ ಅದರ ಮೇಲೆ ಶಿವ ನರ್ತಿಸುತ್ತಿರುವ ತ್ರಿಪುರಾಂತಕನ ಶಿಲ್ಪವಿದೆ. ನಂತರದ ಷಡ್ಬುಜಾಧಾರಿ ನಟರಾಜ ಅಪಸ್ಮಾರನ ಮೇಲೆ ಕುಣಿಯುತ್ತಿರುವ ಶಿಲ್ಪ ನಟರಾಜನ ಎಡಕ್ಕೆ ಭೃಂಗಿಯ ಶಿಲ್ಪವಿದೆ. ಗಿರಿಜೆ ತ್ರಿಭಂಗಿಯಲ್ಲಿ ಕಟಿಹಸ್ತ(ಎಡಗೈ), ಬಲಗೈ ಆಶ್ಚರ್ಯ ಚಕಿತ ಅಥವಾ ಅದ್ಭುತ ಎಂದು ತೋರಿಸುವ ಹಸ್ತ ಮುದ್ರೆಯಲ್ಲಿದೆ. ನಂತರದ ಚತುರ್ಭುಜಧಾರಿ ಶಿವ ಮುಂದಿನ ಬಲಗೈ ಕಟಿಹಸ್ತ ಬಾಗಿ, ಎಡಗೈಯಲ್ಲಿ ಉದ್ದನೆ ಆಯುಧ ಮೇಲೆ (ಗಂಗೆ ಇರುವ) ಗಂಗಾಮುಖ ಆಯುಧ ಕತ್ತರಿ ಬೆರಳಲ್ಲಿ ಹಿಡಿದಂತಿದೆ. ಹಿಂದಿನ ಬಲಗೈಯಲ್ಲಿ ತ್ರಿಶೂಲ ಮತ್ತು ಎಡಗೈಯಿಂದ

ಪಾರ್ವತಿಯ ಎಡಭುಜವನ್ನು ಬಳಸಿಕೊಂಡಂತೆ ಪಾರ್ವತಿ ತನ್ನ ಬಲಗೈಯನ್ನು ಶಿವನ ಬಲಭುಜದ ಮೇಲಿಟ್ಟ ಶಿಲ್ಪವಿದೆ. ಕೇಶಾಲಂಕಾರ, ಸೊಂಟಪಟ್ಟಿಗೆ ಔತ್ತರೀಯ ಅಲಂಕರಣೆಯಿಂದ ಕೂಡಿದ ಪಾರ್ವತಿಯ ಶಿಲ್ಪವಿದೆ. ಇದರಲ್ಲಿ ಶಿವ ಕಂಠದಲ್ಲಿ ಸರ್ಪಮಾಲೆ, ಉದರಬಂಧ, ಸೊಂಟಪಟ್ಟಿ, ಕಟಿವಸ್ತ್ರ, ಯಾಜ್ಞವಲ್ಯ, ತೋಳ್ಬಂದಿ, ಮುಂಗೈಮಣಿ, ಇಳಿಬಿಟ್ಟ ಚಿಕ್ಕಜಡೆಗಳ ಜಟಾ ಮುಕುಟಕ್ಕೆ ಚಂದ್ರನ ಅಲಂಕರಣೆಯಿದೆ. ಗಿರಿಜೆಯ ಎಡಕ್ಕೆ ಭೃಂಗಿ ಒಂದು ಎಡಗಾಲಿನ ಮೊಳಕಾಲು ಮಡಚಿ ತೊಡೆಯ ಮೇಲಿಟ್ಟಿದೆ. ನಂತರದ ಶಿಲ್ಪ ಅಪಸ್ಮಾರನನ್ನು ಸಿಂಹ ಹಿಡಿದಂತೆ, ಸಿಂಹದ ಮೇಲೆ ತನ್ನ ಬಲಗಾಲನ್ನು ಇಟ್ಟು ಅಷ್ಟಭುಜಧಾರಿಣಿ ಅಸುರನನ್ನು ಕೊಲ್ಲುವ ದುರ್ಗೆಯ ಶಿಲ್ಪವಿದೆ. ಚತುರ್ಭಜಧಾರಿ ಶಿವ ಮುಂದಿನ ಎರಡು ಕೈಯಲ್ಲಿರುವ ತ್ರಿಶೂಲದಿಂದ ಅಂಧಕಾಸುರನನ್ನು ಕೊಲ್ಲುತ್ತಿರುವ ಶಿಲ್ಪವಿದೆ. ಹಿಂದಿನ ಎಡಗೈ ಡಮರು ಮತ್ತು ಸೊಂಟದ ಮೇಲೆ ಕೈ ಇಟ್ಟಿರುವನು. ಕಾಲನ್ನು (ಬಲ) ಮಡಚಿ ಎಡಗಾಲನ್ನು ಅಪಸ್ಮಾರನ ಮೇಲಿಟ್ಟಂತಿದೆ. (ಸೊಂಟಪಟ್ಟಿ, ತೋಳ್ಬಂದಿ, ಮುಂಗೈಮಣಿ, ಜಟಾಮುಕುಟದಾರಿ) ನಟರಾಜನು– ಯಾಜ್ಞವಲ್ಯ, ತೋಳ್ಬಂದಿ, ಮುಂಗೈಮಣಿ, ವಕ್ಷಬಂಧ, ಹಾರ, ಕಂಠಹಾರ, ಸೊಂಟಪಟ್ಟಿ, ಕುಚಹಾರ ಧರಿಸಿರುವ ಶಿಲ್ಪವಿದೆ.

* ಗಿರಿಜಾ ಕಲ್ಯಾಣದಲ್ಲಿ–ಪಾರ್ವತಿ ಕುಂತಲ ಮಕುಟ, ಕರ್ಣ ಕುಂಡಲ, ಕೇಶಲಂಕಾರ ಆಭರಣ, ತೋಳ್ಬಂದಿ, ಬಳೆ ಧರಿಸಿರುವಳು. ಶಿವನು ಜಟಾಮುಕುಟ, ಕಂಠಹಾರ, ಎದೆಹಾರ, ವಕ್ಷಬಂಧ, ಯಾಜ್ಞವಲ್ಯ, ಕಟಿವಸ್ತ್ರ ಧರಿಸಿರುವ ಶಿಲ್ಪವಿದೆ. ಮಕರ ತೋರಣಕ್ಕೆ ಇಳಿಬಿಟ್ಟ ಕುಮುದಗಳ ಶಿಲ್ಪಗಳಿವೆ.

*** ಸ್ತಂಭ ಶಿಲ್ಪಗಳು :**

ನವರಂಗದ ಸ್ತಂಭಗಳ ಮೇಲಿನ ಶಿಲ್ಪಗಳು

ಮೋಘಾ : ರಾಮಲಿಂಗೇಶ್ವರ ಗುಡಿಯ ಸ್ತಂಭಗಳ ಮೇಲೆ ಶಿವ, ವಿಘ್ನೇಶ್ವರ, ವಿಷ್ಣು, ನರಸಿಂಹ, ಆದಿಶಕ್ತಿ ಹೀಗೆ ಹಲವು ದೇವರ ಶಿಲ್ಪಗಳಿವೆ. ಸ್ತಂಭವೊಂದರ ಶಿಲ್ಪದಲ್ಲಿ, ಮಹೇಶ್ವರನ ಬಲಗೈ ವರದ ಮುದ್ರೆಯಲ್ಲಿದೆ. ಎಡಗೈಯಲ್ಲಿ ಬೀಜಪೂರ ಹಿಡಿದಿದೆ ಮತ್ತು ಹಿಂದಿನ ಕೈಗಳಲ್ಲಿ ಡಮರು ಮತ್ತು ತ್ರಿಶೂಲಗಳಿವೆ. ಕೊರಳಹಾರ, ಮುಂಗೈಪಟ್ಟಿ, ಆರೋಪ್ಯಮಾಲ, ಹಿಂದೆ ಸೂರ್ಯ ಪ್ರಭಾವಳಿ, ಸೊಂಟಪಟ್ಟಿ, ಕಟಿವಸ್ತ್ರ, ಕಾಲ್ಗಡಗ ಧರಿಸಿದೆ. ಶಿಲ್ಪದ ಇಕ್ಕೆಲಲ್ಲಿ ಕುಡ್ಯಸ್ತಂಭ ನಂತರ ಚಾಮರಧಾರಿಗಳು ಎಡಬಲಕ್ಕೆ ಚಾಮರ ಹಿಡಿದು ನಿಂತಿರುವ ಶಿಲ್ಪಗಳು

ಕೊರಳಹಾರ, ಕೈಬಳೆ, ಕಟಿವಸ್ತ್ರ, ಸೊಂಟಪಟ್ಟಿ, ಕಾಲ್ಗಡಗ ಧರಿಸಿದೆ. ಮತ್ತು ಇವರು ನೀರಿನ ಬಿಂದಿಗೆ ಹಿಡಿದಿವೆ. ಹೀಗೆ ನರಸಿಂಹನ ಶಿಲ್ಪ, ಆದಿಶಕ್ತಿಯ ಶಿಲ್ಪಗಳಿವೆ. ಸ್ತಂಭಗಳು ತರಂಗ ಬೋದಿಗೆಯನ್ನೊಳಗೊಂಡಿವೆ. ಅಲ್ಲದೆ ಕೀರ್ತಿಮುಖಗಳು, ಹೂ ಬಳ್ಳಿಗಳ ಕೆತ್ತನೆ ಇವೆ.

ದೇಗಲ್ಮಡ್ಡಿಯ ಸಂಗಮೇಶ್ವರ ದೇವಾಲಯದ ಸ್ತಂಭಗಳ ಮೇಲೆ ಬ್ರಹ್ಮನ ಶಿಲ್ಪಗಳು ಮತ್ತು ಶಿವನ ಶಿಲ್ಪಗಳು ಅಧಿಕವಾಗಿ ಕಾಣುತ್ತೇವೆ. ದಂಡ, ಕಮಲ ಹಿಡಿದ ಚತುರ್ಭುಜಧಾರಿ, ಚತುರ್ಮುಖ ಬ್ರಹ್ಮನ ಶಿಲ್ಪಗಳಿವೆ. ಕೊರಳಹಾರ, ಯಜ್ಞೋಪವೀತ, ಸೊಂಟಪಟ್ಟಿ, ಮಣಿಕಂಠ, ಆಭಯ ಮತ್ತು ವರದ ಮುದ್ರೆಯಲ್ಲಿದೆ. ಬ್ರಹ್ಮನ ಎಡಭಾಗಕ್ಕೆ ಹಂಸದ ಕೆತ್ತನೆ ಇದೆ. ಇವು ಸ್ತಂಭಗಳ ಪೀಠಭಾಗದಲ್ಲಿವೆ. ಮೇಲ್ಭಾಗದಲ್ಲಿ ವಾದ್ಯಗಾರರ ಶಿಲ್ಪಗಳು, ಗಿರಿಜಾಕಲ್ಯಾಣ ಶಿಲ್ಪಗಳು, ಶಿವ ಮತ್ತು ಪಾರ್ವತಿ ಶಿಲ್ಪಗಳಿವೆ. ತರಂಗ ಬೋದಿಗೆಯ ಮೇಲೆ ಶಿಲ್ಪಗಳ (ಮಾನವ ರೂಪ) ಕೆತ್ತನೆಗಳಿವೆ.

* ಮಿರ್ಯಾಣದ ಪಾಪನಾಥ ದೇವಾಲಯದ ಸ್ಥಂಭಗಳಲ್ಲಿ ಕೀರ್ತಿಮುಖಗಳಿವೆ. ಒಂದೊಂದು ಮಾಲೆಯಲ್ಲಿ ದೇವಶಿಲ್ಪಗಳಿವೆ. ಶಿವ ನೃತ್ಯ ಮಾಡುತ್ತಿರುವ ಶಿಲ್ಪಗಳಿವೆ. ಸ್ತಂಭಗಳು ತರಂಗ ಬೋದಿಗೆಗಳನ್ನೊಳಗೊಂಡಿವೆ. ನಿಡಗುಂದದ ನವಕೋಟಿ ನಾರಾಯಣ ಗುಡಿಯ ಸ್ತಂಭಗಳು ಕುಬ್ಜವಾಗಿ ದುಂಡಗೆ ಕೆತ್ತಲ್ಪಟ್ಟಿವೆ. ದಶಾಷ್ಟಕೋನಗಳು ಮತ್ತು ತರಂಗ ಬೋದಿಗೆಯನ್ನೊಳಗೊಂಡಿವೆ. ಒಂದೊಂದು ಮಾಲೆಯಲ್ಲಿ ಕೀರ್ತಿಮುಖ, ಗಂಗೆ, ಮಾಧವ ಶಿಲ್ಪಗಳು ಹೀಗೆ ಹಲವು ಶಿಲ್ಪಗಳಿವೆ. ರುಮ್ಮನಗೂಡಿನ ಶಂಕರ ನಾರಾಯಣ ದೇವಾಲಯದ ಸ್ತಂಭಗಳ ಮೇಲೆ ಹೂಬಳ್ಳಿಗಳ ಅಲಂಕಾರಣೆ ವಿಷ್ಣುವಿನ, ಉಗ್ರನರಸಿಂಹ, ಲಕ್ಷ್ಮಿನರಸಿಂಹನ ಶಿಲ್ಪಗಳು, ಭಕ್ತಪ್ರಹ್ಲಾದ, ನರಸಿಂಹ ಲಕ್ಷ್ಮೀಯರ ಶಿಲ್ಪಗಳಿವೆ. ನೃತ್ಯಭಂಗಿಯ ವಿಷ್ಣು, ಮೃದಂಗ, ಡೋಲು ಬಾರಿಸುವ ಸಂಗೀತಗಾರರ ಶಿಲ್ಪಗಳಿವೆ. ಕೀರ್ತಿಮುಖಗಳು, ಕೀರ್ತಿಮುಖ ಮಾಲೆಗಳಲ್ಲಿ ವಿಷ್ಣುವಿನ ಶಿಲ್ಪಗಳಿವೆ. ತರಂಗ ಬೋದಿಗೆಗಳನ್ನೊಳಗೊಂಡಿವೆ. ಅಷ್ಟಭುಜಧಾರಿ ಉಗ್ರನರಸಿಂಹ ತನ್ನ ತೊಡೆಯ ಮೇಲೆ ಹಿರಣ್ಯ ಕಶ್ಯಪನನ್ನು ಅಡ್ಡಹಾಕಿ ಹೊಟ್ಟೆಯನ್ನು ಸೀಳುವ ದೃಶ್ಯವಿದೆ.

* ನಿಡಗುಂದದ ಕಾಳಿಕಾಗುಡಿಯ ಸ್ತಂಭಗಳಲ್ಲಿ ವಿವಿಧ ಕಥಾವಳಿಗಳನ್ನೊಳಗೊಂಡಿವೆ. ಪ್ರವೇಶ ದ್ವಾರದಿಂದ ಮೊದಲ ಸಾಲಿನ ನಾಲ್ಕನೇ ಕಂಬದಲ್ಲಿ ಮತ್ಸ್ಯ, ಕಮಲದ ಹೂ ಮೇಲೆ ನಿಂತ ಹಂಸ, ದುರ್ಗಮಾತೆ ಶಿಲ್ಪವಿದೆ. ಐದನೇ ಕಂಬದಲ್ಲಿ ಆನೆ, ಆರನೇ ಕಂಬ ಹೂವುಗಳಿಂದ ಕೂಡಿದೆ. ಏಳನೇ ಕಂಬದಲ್ಲಿ ಗರುಡ, ದೇವಕನ್ಯೆ–ಮೋಹಿನಿ? ಶಿಲ್ಪಗಳಿಂದ

ಕೂಡಿದೆ, ಎರಡನೇ ಸಾಲಿನ ಕಂಬಗಳ ನಾಲ್ಕನೇ ಕಂಭದಲ್ಲಿ ರಾಮನು ಬಾಣ ಮತ್ತು ಬಿಲ್ಲು ಹಿಡಿದು ನಿಂತಿರುವಂತೆ ಮತ್ತು ಅದರ ಪಕ್ಕದ ಮಾಲೆಯಲ್ಲಿ ಹತ್ತು ಕೈಯುಳ್ಳ ರಾವಣ ಬಾಣ ತಾಕಿ ತಲೆ ಕೆಳಗಾಗಿ ಬೀಳುತ್ತಿರುವ ದೃಶ್ಯವಿದೆ. ರಾಮಾಯಣದ ಕೆಲ ಪ್ರಸಂಗಗಳು ಶಿಲ್ಪಾವಳಿಯಲ್ಲಿವೆ. ರಾಮ ಲಕ್ಷ್ಮಣ ನಿಂತಿರುವ ಶಿಲ್ಪವಿದೆ. ರಾಮ-ಲಕ್ಷ್ಮಣರು, ಹನುಮಂತ ಮತ್ತು ಸುಗ್ರೀವರೊಂದಿಗಿನ ಭೇಟಿ ಮಾಡುವ ದೃಶ್ಯವಿದೆ. ರಾಮಸೀತೆಯರಿಗೆ ನಮಸ್ಕರಿಸುತ್ತಿರುವ ಹನುಮಂತ ಇತ್ಯಾದಿ ಶಿಲ್ಪಗಳಿವೆ. ಎರಡನೆಯ ಸಾಲಿನ ಐದನೇ ಕಂಬ ವಾಮನ ಶಿಲ್ಪ ಮತ್ತು ಕಮಂಡಲದಿಂದ ನೀರಿನ ಧಾರೆ ಎರೆಯುವ ಮೂಲಕ ಭೂದಾನ ಮಾಡುತ್ತಿರುವ ಬಲಿಯ ಶಿಲ್ಪವಿದೆ. ಮೂರನೇ ಕಂಬದಲ್ಲಿ ಕುಬ್ಜ ಶಿಲ್ಪಗಳಿವೆ. ಗರ್ಭಗುಡಿಯ ಎದುರಿನ ಸಾಲಿನಲ್ಲಿ ಮೂರನೆ ಸಾಲಿನ ಕಂಬದಲ್ಲಿ ಕೀರಾತಾರ್ಜುನ ವಿಜಯದ ಪ್ರಸಂಗಗಳ ಶಿಲ್ಪಗಳಿವೆ. ಹಂದಿ, ಅರ್ಜುನ, ಬೇಡರ ವೇಷದಲ್ಲಿ ಶಿವ ಪಾರ್ವತಿಯ ಶಿಲ್ಪಗಳಿವೆ. ಕೊನೆಗೆ ಅರ್ಜುನನಿಗೆ ಪಾಶುಪತಾಸ್ತ್ರ ನೀಡುವ ಕಥಾವಳಿಯಿದೆ.

ಎರಡನೆ ಕಂಬದಲ್ಲಿ ಸಮುದ್ರ ಮಂಥನ ಕಥಾವಳಿ ಇದೆ. ಸುರಾಸುರರು ಇಕ್ಕೆಲಲ್ಲಿ ನಿಂತು ಸರ್ಪದಿಂದ ಎಳೆಯುತ್ತಿರುವ ದೃಶ್ಯವಿದೆ. ವಿಷ್ಣುವಿನ ಉದರದಲ್ಲಿ ಬ್ರಹ್ಮನ ಜನನ ಶಿಲ್ಪ, ಲಕ್ಷ್ಮಿಯ ಉದ್ಬವ ಶಿಲ್ಪ, ಗಣಪತಿ ಶಿಲ್ಪಗಳಿವೆ. ಹೈಗ್ರಿವನ ಶಿಲ್ಪವಿದೆ. ಲಿಂಗದ ಉದ್ಬವ ಇದರ ಇಕ್ಕೆಲುಗಳಲ್ಲಿ ಬ್ರಹ್ಮ ವಿಷ್ಣು ಕೈಮುಗಿದು ನಿಂತಿರುವ ಶಿಲ್ಪಗಳಿವೆ. ಇದರ ಮೇಲೆ ಗಣೇಶನ ಶಿಲ್ಪವಿದೆ. ನಾಲ್ಕನೇ ಕಂಬ ಗಡ್ಡಧಾರಿ, ಸ್ತ್ರೀ ಶಿಲ್ಪ, ಬಾಲಭೃಂಗಿ, ಶಿವನ ಶಿಲ್ಪ, ಖಡ್ಗ ಮತ್ತು ಮೋದಕ ಹಿಡಿದ ವ್ಯಕ್ತಿ, ಅಶ್ವತ್ಥ ಮಂಗಳ ಶಿಲ್ಪ ಈ ಒಂದೊಂದು ಶಿಲ್ಪಗಳು ಮಾಲೆಗಳ ಮಧ್ಯ ಇವೆ. ಅರೆಗಂಬಗಳಲ್ಲಿ ಮಿಥುನ ಶಿಲ್ಪ ಮತ್ತು ಪಂಚತಂತ್ರದ ಕಥಾವಳಿಗಳಿವೆ (ಕ.ಸ.ಗೆ.ಕ.ಜಿ ೧೯೯೭ ಮತ್ತು ಗು.ಜಿ.ಇ ಮತ್ತು ಪು, ಪು.೩೩೮-೩೪೦). ಒಟ್ಟಿನಲ್ಲಿ ವಿಷ್ಣುವಿನ ದಶಾವತಾರದ ಕೆಲ ದೃಶ್ಯಾವಳಿ ಕಿರಾತಾರ್ಜುನ ಕಥಾವಳಿ ಬ್ರಹ್ಮ, ಲಿಂಗ ಮತ್ತು ಲಕ್ಷ್ಮಿಯ ಉದ್ಭವ ಶಿಲ್ಪ ಮತ್ತು ಪಂಚತಂತ್ರ ಕಥಾವಳಿಗಳನ್ನೊಳಗೊಂಡಿದೆ.

* **ಬ್ರಹ್ಮಮೂರ್ತಿ ಶಿಲ್ಪ:** ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಪ್ರವೇಶ ದ್ವಾರದಲ್ಲಿದೆ. ಚತುರ್ಮುಖ ಮತ್ತು ಚತುರ್ಭುಜಧಾರಿಯ ಶಿಲ್ಪ ಪ್ರಸ್ತುತ ತ್ರುಟಿತವಾಗಿದೆ. ಕಂಬಗಳ ಪೀಠಗಳ ಮೇಲೆ ಬ್ರಹ್ಮನ ಶಿಲ್ಪಗಳಿವೆ.

* **ಸಿಂಹಮುಖ ಶಿಲ್ಪ:** ಮೋಘಾದ ರಾಮಲಿಂಗೇಶ್ವರ ಗುಡಿಯ ಹೊರ ಆವರಣ ಮತ್ತು ಪ್ರವೇಶ ದ್ವಾರದಲ್ಲಿ ಅನೇಕ ಶಿಲ್ಪಗಳು ಕಂಡು ಬರುತ್ತವೆ. ಇವುಗಳಿಗೆ ಕೀರ್ತಿಮುಖ ಎಂದು

ಸಹ ಕರೆಯುತ್ತಾರೆ. ನಾಲಿಗೆ ಬಾಯಿಂದ ಅಗಲವಾಗಿ ಹೊರ ಸೂಸಿದೆ. ಕೆನ್ನೆ ಊದಿಕೊಂಡಿದೆ. ದಪ್ಪಕಣ್ಣು, ಅಗಲಮೂಗು, ತ್ರಿಕೋನಾಕಾರವಾಗಿದೆ. ಕಣ್ಣಿನ ಮೇಲ್ಭಾಗದ ಮೇಲೆ ಅರ್ಧವೃತ್ತಾಕಾರವಾಗಿ ಕೊರೆದಿವೆ. ತಲೆಯ ಇಕ್ಕೆಲ ಭಾಗದಲ್ಲಿ ಹಂಸಗಳಿವೆ.

ಅಷ್ಟದಿಕ್ಪಾಲಕರ ಶಿಲ್ಪ : ದೇಗಲ್ಮಡಿಯ ಸಂಗಮೇಶ್ವರ ದೇವಾಲಯದ ಮೇಲ್ಭಾವಣಿಯಲ್ಲಿ ವಾಯು ದಿಕ್ಪಾಲಕನ ಶಿಲ್ಪವಿದೆ. ಹಿಂದಿನ ಎರಡೂ ಕೈಗಳಲ್ಲಿ ಧ್ವಜಗಳಿವೆ. ಮುಂದಿನ ಕೈಯಲ್ಲಿ ಮೃಗರೂಢನಾಗಿದ್ದು, ಅದರ ಲಗಾಮು ಹಿಡಿದಿದೆ. ಮತ್ತು ಪತ್ನಿ ಶೀಲಾಳ ಜೊತೆಗೆ ಕುಳಿತಿದೆ.

♦ ♦ ♦

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಪ್ರಾಕ್ತನ ಆಧಾರಗಳ ಮೂಲಕ ಇತಿಹಾಸ ಕಟ್ಟಬಲ್ಲ ಇತಿಹಾಸಕಾರನಿಗೆ ಅನೇಕ ಸಮಸ್ಯೆಗಳು ಎದುರಾಗುವುದು ಸಹಜ. ವಸ್ತುನಿಷ್ಠ ಅಧ್ಯಯನಕ್ಕೆ ಆಯಾ ಸಮಕಾಲೀನ ಜನರ ಬರವಣಿಗೆಗಳಾದ ಶಾಸನಗಳು ನಮಗೆ ಶತಪ್ರತಿಶತವಾದ ವೈಜ್ಞಾನಿಕ ಇತಿಹಾಸ ಕಟ್ಟಲು ಸಹಾಯಕವಾಗಿವೆ. ಹಾಗೂ ಅಲ್ಲಿನ ಜನರ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಲ್ಲದೆ, ಸರ್ವತೋಮುಖ ಸ್ಥಿತಿಗತಿಯನ್ನರಿಯಲು ಆ ಕಾಲದಲ್ಲಿ ನಿರ್ಮಿತ ದೇವಾಲಯ ವಾಸ್ತುಶಿಲ್ಪ, ಮೂರ್ತಿಶಿಲ್ಪಗಳು ಹಾಗೂ ಶಾಸನಗಳು ಆಕರಗಳಾಗಿವೆ. ಪ್ರಸ್ತುತ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕನ್ನು ಸೀಮಿತ ಮಾಡಿಕೊಂಡು ಶಾಸನಗಳು, ದೇವಾಲಯಗಳು ಆಧಾರವಾಗಿಟ್ಟು ಈ ಸಂಪ್ರಬಂಧ ರಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾಯ ಒಂದರಲ್ಲಿ, ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನವನ್ನು ವಿವರಿಸಲಾಗಿದೆ. ಅಲ್ಲದೆ ಈವರೆಗೂ ನಡೆದ ಪೂರ್ವಾಧ್ಯಯನಗಳ ಸಮೀಕ್ಷೆ ಮಾಹಿತಿ ಇದರಲ್ಲಿ ಸೇರೆಹಿಡಿಯಲಾಗಿದೆ. ಅಧ್ಯಾಯ ಎರಡರಲ್ಲಿ, ಅಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗತಿಯ ಬಗ್ಗೆ ಹೊಸ ಅಂಶಗಳು ಶಾಸನಗಳನ್ನು ಮತ್ತು ವೀರಗಲ್ಲು ಹಾಗೂ ಮೂರ್ತಿಶಿಲ್ಪಗಳನ್ನಾಧರಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಈ ತಾಲೂಕಿನಲ್ಲಿ ಶಾತವಾಹನ, ಬಾದಾಮಿ ಮತ್ತು ಕಲ್ಯಾಣ ಚಾಲುಕ್ಯರು, ಕಲಚೂರಿಗಳು ಹಾಗೂ ನಿಜಾಮರ ಆಳ್ವಿಕೆಗೊಳಪಟ್ಟಿತ್ತು. ಆಯಾ ಕಾಲದಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕತೆಯ ಸ್ಥಿತಿಗತಿ ಬಗ್ಗೆ ವಿಮರ್ಶಿಸಿ ವಿವರಿಸಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಪ್ರದೇಶ ಐತಿಹಾಸಿಕ, ಕಲೆ, ವಾಸ್ತುಶಿಲ್ಪ, ದೇವಾಲಯ ಔನತ್ಯಕ್ಕೆ ಬಂದಿದ್ದು, ಹೆಚ್ಚು ಶಾಸನಗಳು ದೊರಕಿರುವುದು ಕಂಡುಬರುತ್ತದೆ.

ಅಧ್ಯಾಯ ಮೂರರಲ್ಲಿ, ಶಾಸನಗಳ ಅಧ್ಯಯನದಿಂದ ಹೊಸದಾದ ಕೆಲ ಅಂಶಗಳು ಬೆಳಕಿಗೆ ಬಂದಿವೆ. ಇಲ್ಲಿ ಕೇವಲ ದಾನಶಾಸನಗಳಿರದೆ ಅವು ಪ್ರಶಸ್ತಿ ಶಾಸನಗಳೂ ಆಗಿರುವ

ಬಗ್ಗೆ, ಅನೇಕ ವೈವಿಧ್ಯಮಯದಿಂದ ಕೂಡಿದ ವೀರಗಲ್ಲುಗಳು ಅಪ್ರಕಟಿತ ನಿಷಿಧಿಗಲ್ಲು, ಗಡಿಗಲ್ಲು ಹಾಗೂ ಅನೇಕ ತುರುಗೋಳ್ ಹೋರಾಟದ ವೀರಗಲ್ಲುಗಳ ವಿವರಣೆ ನೀಡುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ದೊರೆತ ಶಾಸನಗಳು ಹೆಚ್ಚಿನ ಮಟ್ಟದಲ್ಲಿ ಕಲ್ಯಾಣ ಚಾಲುಕ್ಯ ಅರಸರಿಗೆ ಸಂಬಂಧಿಸಿವೆ. ಈ ಶಾಸನಗಳು ಇಲ್ಲಿ ಹೆಚ್ಚಾಗಿ ದೇವಾಲಯಗಳಿಗೆ ಭೂದಾನ ಬಿಟ್ಟ ವಿಷಯವನ್ನು ತಿಳಿಸುವ ಅಂಶ ಕಂಡುಕೊಳ್ಳಲಾಗಿದೆ. ಕ್ಷೇತ್ರಕಾರ್ಯ ಮತ್ತು ಸಂದರ್ಶನ ಮೂಲಕ ಒಂದು ಪರ್ಶಿಯನ್ ಒಂದು ಉರ್ದು ಮತ್ತು ಉಳಿದವು ಕನ್ನಡ ಲಿಪಿ ಹೊಂದಿದ ಒಟ್ಟು ಎಂಟು ಅಪ್ರಕಟಿತ ಶಾಸನಗಳು ದೊರೆತಿವೆ. ಅವುಗಳೆಂದರೆ ರಾಯಕೋಡ್ ಶಾಸನ, ಗೌಡನಹಳ್ಳಿಯ ವೀರಗಲ್ಲು ಶಾಸನ, ರಟ್ಕಲ್‌ನ ಅಗಸಿಯ ಶಾಸನ, ಕುಪನೂರಿನ ಶಾಸನಗಳು, ಬೇಡಕ್‌ಪಲ್ಲಿ ಶಾಸನ, ದೇಗಲ್ಮಡಿಯ ಶಾಸನ ಮತ್ತು ಎತ್ಬಾಪುರ ಶಾಸನಗಳ ಹೆಚ್ಚಿನ ಅಧ್ಯಯನ ಮುಂದಿನ ಅಧ್ಯಯನದಲ್ಲಿ ಕೈಗೊಳ್ಳುವ ಪ್ರಯತ್ನ ನಡೆದಿದೆ.

ಅಧ್ಯಾಯ ನಾಲ್ಕರಲ್ಲಿ, ದೇವಾಲಯಗಳ ಅಧ್ಯಯನದಿಂದ ಇಲ್ಲಿ ಹೆಚ್ಚಿನ ದೇವಾಲಯಗಳು ರಾಮಲಿಂಗೇಶ್ವರ ದೇವಾಲಯಗಳು ಚಾಲುಕ್ಯ ಶೈಲಿ ಮತ್ತು ರಾಷ್ಟ್ರಕೂಟ ಶೈಲಿಯ ಸ್ತಂಭಗಳು, ಕದಂಬ ನಾಗರ ಮತ್ತು ವೇಸರ ಶೈಲಿಯ ಶಿಖರವುಳ್ಳ ಅಂಶ ಹೊಂದಿವೆ. ಅಲ್ಲದೆ ಇವುಗಳು ಹೆಚ್ಚಾಗಿ ಸುಣ್ಣದ ಕಲ್ಲುಗಳಿಂದ ನಿರ್ಮಿಸಿರುವ ಬಗ್ಗೆ ತಿಳಿದುಬರುತ್ತದೆ. ಈ ದೇವಾಲಯಗಳ ಮೂಲಕ ಕಾಳಾಮುಖ ಶೈವರ ಅಸ್ತಿತ್ವವನ್ನು ಮತ್ತು ಜೈನಧರ್ಮದ ಏಳಿಗೆ ಮತ್ತು ಅವಸಾನದ ವಿವರ ತಿಳಿಸುವ ಹೊಸ ಅಂಶಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನದ ಮೂಲಕ ದೇವಾಲಯಗಳು ಅಧಿಕವಾಗಿ ರಾಜ ಸಂಬಂಧಿಗಳು, ಮಾಂಡಳಿಕರು ಮತ್ತು ಅಧಿಕಾರಿ ವರ್ಗದವರು ಅಲ್ಲದೆ ಶ್ರೀಮಂತ ವರ್ಗಗಳಿಂದ ಕಟ್ಟಲ್ಪಟ್ಟವು. ಇಲ್ಲವೆ ಜೀರ್ಣಗೊಂಡ ವಿವರ ಶಾಸನಗಳಿಂದ ಕಂಡುಬರುತ್ತದೆ. ದೇವಾಲಯಗಳು ಕಲೆ, ಶಿಲ್ಪಕಲೆ ಬಗ್ಗೆ ಮತ್ತು ಅಲ್ಲಿನ ಧಾರ್ಮಿಕ ಜೀವನದ ನವೀನ ಅಂಶಗಳನ್ನು ತಿಳಿಸುವ ಕುರುಹುಗಳಾಗಿವೆ. ಇಂತಹ ಭವ್ಯ ಶಿಲ್ಪಕಲೆ, ವಾಸ್ತುಶಿಲ್ಪ ಹೊಂದಿದ ದೇವಾಲಯಗಳು ಅವಸಾನ ಸ್ಥಿತಿಯಲ್ಲಿವೆ. ಇವುಗಳ ಸಂರಕ್ಷಣೆ ಮಾಡುವುದು ಅವಶ್ಯಕ ಅಲ್ಲದೆ, ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳುವುದು ಅತ್ಯವಶ್ಯಕ. ದೇವಾಲಯದ ಶಾಸನೋಕ್ತ ಹೆಸರುಗಳನ್ನು ಬಿಟ್ಟು ಬೇರೆ ಹೆಸರು ಬಳಕೆ ಮಾಡುವ ಆ ದೇವಾಲಯಕ್ಕೂ, ಜನರು ಕರೆಯುವ ದೇವಾಲಯದ ಹೆಸರಿಗೂ ಒಂದಕ್ಕೊಂದು ಸಂಬಂಧವೇ ಇರುವುದಿಲ್ಲ. ಅಂತಹ ಹೊಸ ಅಂಶಗಳನ್ನು ಜನರ ಅರಿವಿಗೆ ತರುವ ಪ್ರಯತ್ನ ಇದಾಗಿದೆ.

ಅಧ್ಯಾಯ ಐದರಲ್ಲಿ, ಮೂರ್ತಿಶಿಲ್ಪಗಳು ಆ ಕಾಲದ ಜನರ ವೇಷಭೂಷಣ, ಆಭರಣಗಳು, ಪ್ರಾಣಿ–ಪಕ್ಷಿಗಳು ಅಲ್ಲದೆ ಧಾರ್ಮಿಕ ಆಚರಣೆ ಮತ್ತು ಧರ್ಮದ ಜನಪ್ರಿಯತೆ ಬಗ್ಗೆ ಇಲ್ಲಿ ವ್ಯಕ್ತಪಡಿಸಲಾಗಿದೆ. ಕಲ್ಯಾಣ ಚಾಲುಕ್ಯರ, ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚಾಗಿ ಕೆತ್ತಲ್ಪಟ್ಟ ಮೂರ್ತಿಶಿಲ್ಪಗಳು ನಿಜಾಮರ ಆಳ್ವಿಕೆ ಕಾಲದಲ್ಲಿ ರಜಾಕರರ ಮತ್ತು ಇಸ್ಲಾಂ ಬಾಂಧವರ ಮೂಲಕ ನಾಶವಾದ ಮಾಹಿತಿ ತಿಳಿಸುವ ರುಂಡ, ಮುಂಡ ಮತ್ತು ಇತರೆ ಭಾಗಗಳನ್ನು ಒಡೆದ ಅಂಶಗಳನ್ನು ತಿಳಿಸುವ ಈ ಶಿಲ್ಪಗಳ ಔನತ್ಯ ಮತ್ತು ಅವಸಾನವನ್ನು ಬಿಂಬಿಸಲಾಗಿದೆ.

ಶಾಸನ, ಕಲೆ ಮತ್ತು ವಾಸ್ತುಶಿಲ್ಪ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ, ಸಂಪ್ರಬಂಧವನ್ನು ವಿವರಿಸುವ ಪ್ರಯತ್ನ ಇದಾಗಿದೆ. ಈವರೆಗೂ ಚಿಂಚೋಳಿ ತಾಲೂಕಿನ ಶಾಸನಗಳ, ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಪರಿಪೂರ್ಣವಾದ ಅಧ್ಯಯನಗಳು ಈ ಪರಿಸರದಲ್ಲಿ ಆಗದಿರುವ ಕಾರಣ ಈ ಕಿರುಪ್ರಬಂಧವನ್ನು ರಚಿಸಲಾಗಿದೆ. ವ್ಯಾಪಕ ಕ್ಷೇತ್ರಕಾರ್ಯ ಕೈಗೊಂಡು ಇಲ್ಲಿಯ ಅಜ್ಞಾತವಾಗಿರುವ ಐತಿಹಾಸಿಕ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳನ್ನು ಗುರ್ತಿಸಿ ಅವುಗಳ ವ್ಯವಸ್ಥಿತ ಅಧ್ಯಯನವನ್ನು ಈ ಸಂಪ್ರಬಂಧದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

♦ ♦ ♦

ಅನುಬಂಧಗಳು

ಆಕರ ಗ್ರಂಥಗಳು

ಲೇಖಕರು	ಪ್ರಕಟಣೆ	ಗ್ರಂಥದ ಹೆಸರು
ಅನಂತರಂಗಚಾರ್ ಎನ್.	೧೯೫೪	ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ
ಅಪರ್ಣ ಕೂ.ಸ.	೧೯೯೯	ದೇವಾಲಯ ವಾಸ್ತು ಶಿಲ್ಪ ಪರಿಚಯ
ಕಪಿಲವಾಯಿಲಿಂಗಮೂರ್ತಿ	೨೦೦೭	ಸ್ವರ್ಣ ಶಿಲ್ಪಶಾಸ್ತ್ರ
ಕಲಬುರ್ಗಿ ಎಂ.ಎಂ.	೧೯೮೦	ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು
ಗೋಪಾಲ್ ಆರ್. (ಸಂ.)	೨೦೦೭	ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
ಗೋಪಾಲರಾವ್ ಎಸ್.ಎಸ್.	೧೯೯೩	ಕಲ್ಯಾಣ ಚಾಲುಕ್ಯರ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ
ಚನ್ನಕ್ಕ ಪಾವಟೆ	೨೦೦೩	ಶಾಸನ ಸಂಜೀವಿನಿ
ಚಿದಾನಂದ ಮೂರ್ತಿ ಎಂ.	೧೯೬೬	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಚೂಡಾಮಣಿ ನಂದಗೋಪಾಲ್	೨೦೦೧	ಶಿಲೆ–ಕಲೆ
ತಿಪ್ಪೇಸ್ವಾಮಿ ಪಿ.ಆರ್.(ಸಂ.)	೧೯೯೪	ಶಿಲ್ಪಕಲಾ ಪ್ರಪಂಚ
ತಿಪ್ಪೇಸ್ವಾಮಿ ಪಿ.ಆರ್.	೨೦೦೮	ಕಲಾಕೋಶ
ನರಸಿಂಹಮೂರ್ತಿ ಎ.ವಿ.	೧೯೭೨	ಕರ್ನಾಟಕದ ಶಾಸನದ ಸಂಪತ್ತು
	೨೦೦೩	ಕರ್ನಾಟಕ ನಾಣ್ಯ ಪರಂಪರೆ
ನಾಗಯ್ಯ ಜೆ.ಎಂ.	೧೯೯೨	ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ
ಪರಮಶಿವಮೂರ್ತಿ ಡಿ.ವಿ.	೧೯೯೯	ಕನ್ನಡ ಶಾಸನ ಶಿಲ್ಪ
ಪಾಟೀಲ ಎಂ.ಬಿ.(ಸಂ.)	೧೯೯೭	ಕರ್ನಾಟಕ ಸರ್ಕಾರದ ರಾಜ್ಯ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ
ಫ್ಲೀಟ್ ಜೆ.ಎಫ್.	೧೯೭೮	ಶಾಸನಶಾಸ್ತ್ರ ಪರಿಚಯ ಅನು:ಸಿ.ಪಿ.ಕೆ.
ಪ್ರಭಾಕರ್ ಎಂ.ಎನ್.	೨೦೦೦	ದೇವಾಲಯ ವಾಸ್ತು ಚಂದ್ರಿಕೆ
ಪ್ರಭಾಕರ್ ಎಂ.ಎನ್.	೨೦೧೧	ದೇವಾಲಯ ವಾಸ್ತು

ಭಟ್‌ಸೂರಿ ಕೆ.ಜಿ.	೧೯೯೬	ಗೇರುಸೊಪ್ಪೆ (ನಗರ ಬಸ್ತಿಕೇರಿ)ಯ ವಾಸ್ತು ಮತ್ತು ಮೂರ್ತಿಶಿಲ್ಪ
ಭಾಸ್ಕರ್ ಟಿ.ಎಂ.	೨೦೦೯	ಗುಲ್ಬರ್ಗಾ ಜಿಲ್ಲೆಯ ದರ್ಶನ
ಮರಿಶಾಮಾಚಾರ್ ಎನ್.	೨೦೦೧	ಭಾರತೀಯ ಕಲೆ
	೨೦೦೭	ದೃಶ್ಯಕಲಾ
ಮೂರ್ತಿ ಕೆ.ಎಲ್.ಎನ್.	೧೯೯೮	ಕರ್ನಾಟಕದ ಕಲೆ ಮತ್ತು ವಾಸ್ತು ಶಿಲ್ಪರಂಜಿತ
ರಾಜಶೇಖರ್ ಎಸ್.,	೧೯೮೮	ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ
ರಾಮಚಂದ್ರರಾವ್ ಎಸ್.ಕೆ.	೧೯೭೪	ಮೂರ್ತಿಶಿಲ್ಪ:ನೆಲೆ–ಹಿನ್ನೆಲೆ
ರಾಮೇಶ್ವರ ಎ.ಕೆ.	೧೯೮೬	ಚಿಂಚೋಳಿ ತಾಲೂಕಿನ ದರ್ಶನ
ವಿಜಯಕುಮಾರ ಪರುತೆ (ಸಂ.)	೨೦೦೭	ಹಸಿರು–ಹಸಿವು
ವೀರಭದ್ರ ಸಿಂಹ ನೆಲೋಗಿ (ಸಂ.)	೨೦೦೧	ಕಲ್ಬುರ್ಗಿ ಜಿಲ್ಲಾ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ
ಶಿವಣ್ಣ ಕೆ.ಎಸ್. (ಸಂ.)	೧೯೯೭	ಕರ್ನಾಟಕ ಚರಿತ್ರೆ
ಶಿವತಾರಕ ಕೆ.ಬಿ.	೨೦೦೧	ಕರ್ನಾಟಕದ ಪುರಾತತ್ವ ನೆಲೆಗಳು
ಶಿವರಾಮ ಕಾರಂತ ಕೆ.	೧೯೭೧	ಕರ್ನಾಟಕದಲ್ಲಿ ಚಿತ್ರಕಲೆ
ಶಿವಾನಂದ ವಿ.	೧೯೯೨	ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು
ಶೇಷಶಾಸ್ತ್ರಿ	೨೦೦೪	ಶಾಸನ ಪರಿಚಯ
ಶ್ರೀಶೈಲ ನಾಗರಾಳ (ಸಂ.)	೨೦೦೩	ಸಿರಿಗಂಧ (ಸ್ಮರಣ ಸಂಚಿಕೆ)
ಸುಂದರ ಅ.,	೧೯೯೫	ದೇವಾಲಯ ಮೂರ್ತಿಶಿಲ್ಪ ಚೈತ್ಯಾಲಯ ಒಂದು ವಿಶ್ಲೇಷಣೆ
ಹಂಜೆ ಅಪ್ಪಣ್ಣ ಎನ್.	೨೦೦೭	ಜೈನ ಶಿಲ್ಪಕಲೆ, ಪರಿಕಲ್ಪನೆಗಳು
ಹನುಮಾಕ್ಷಿ ಗೋಗಿ	೧೯೯೬	ಕಲ್ಬುರ್ಗಿ ಜಿಲ್ಲೆಯ ಶಾಸನಗಳು
ಜ್ಞಾನಾನಂದ ಜಿ. (ಸಂ.)	೨೦೦೨	ಶಿಲ್ಪಾ ದರ್ಶನ ಸಂ.೨
ಜ್ಞಾನಾನಂದ ಜಿ.	೨೦೦೫	ಶ್ರೀಕಾಶ್ಯಪ ಶಿಲ್ಪಶಾಸ್ತ್ರಂ(ಪೂರ್ವಾರ್ಧ)ಸಂ.೧

ಶೇರಿಕಾರ್ ಡಿ., (೨೦೦೭,೨೦೦೮,೨೦೦೯,೨೦೧೦ ಮತ್ತು ೨೦೧೧) ಪ್ರಜಾವಾಣಿ ಪತ್ರಿಕೆಯಲ್ಲಿನ ಚಿಂಚೋಳಿಯ ಲೇಖನಗಳು

ಆಂಗ್ಲಭಾಷೆಯ ಆಕರಗ್ರಂಥಗಳು


Agarwal P.K.	1994	Studies in Indian Iconography
Fletcher B.	2001	Encyclopaedia of World Art and Architecture (Vol-II)
George Michell	1995	Architecture and Art of Southern India
Gopal B.R.	1981	The Chalukyas of Kalyana & The Kalachuries, Dharwad
Gopinatha Rao T.A.	1985	Elements of Hindu Iconography Vol-I & II
Gopinatha Rao T.A.	1993	Elements of Hindu Iconography (IInd Edition)
Hardy Adom	1995	Indian Temples Architecture
Havell E.B.	1980	Indian Sculpture & Painting (IInd Edition)
Krishna Murthy K.	1987	Early Indian Secular Architecture
Nilakanta Sastri K.A.	2007	History of South India
Ramachandra Rao S.K.	1981	Iconography & Images in Indian Temples
Ramachandra Rao S.K.	1992	Encyclopeadia of Indian Icono graphy (Vol-II)
Srinivasan	1982	South Indian Images (An introdu ction to the study of Hindu Iconog raphy)
Census of India -2001	2006	Karnataka (Administrative Status)-District Gulbarga
Maruti Nandan, Tiwari, Kamal Giri		KALAA Journal of Indian Art History Congress


ಶಾಸನ ಸಂಪುಟಗಳು

1. Annual Report on South Indian Epigraphy
2. Epigraphia Indica
3. Epigraphia Carnatica
4. Karnataka Inscriptions


ಸಂಕೇತ ಸೂಚಿಗಳು

* ಎ.ಆ.ಹಿ.ಐ. – ಎಲಿಮೆಂಟ್ಸ್ ಆಫ್ ಹಿಂದೂ ಐಕೊನೋಗ್ರಾಫಿ
* ಕ.ಜಿ.ಶಾ. – ಕಲ್ಬುರ್ಗಿ ಜಿಲ್ಲೆಯ ಶಾಸನಗಳು
* ಕ.ವಿ. – ಕರ್ನಾಟಕದ ವೀರಗಲ್ಲುಗಳು
* ಕ.ಶಾ.ಸಾಂ.ಅ. – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
* ಕ.ಸ.ಗೆ.ಕ.ಜಿ. – ಕರ್ನಾಟಕ ಸರ್ಕಾರದ ರಾಜ್ಯ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ
* ಗು.ಜಿ.ಇ.ಮತ್ತು ಪು. – ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
* ಸ.ಹಿ.ಪ್ರಾ.ಶಾಲೆ – ಸರಕಾರಿ ಹಿರಿಯ ಪ್ರಾಥಮಿಕ ಶಾಲೆ


INDIA
KARNATAKA
DISTRICT GULBARGA
Km 5 0 5 10 15 Km
MAHARASHTRA
DISTRICT BIDAR
ANDHRA PRADESH
DISTRICT RAICHUR
DISTRICT BIJAPUR
ALAND
CHINCHOLI
GULBARGA U.A.
AFZALPUR
SHAHABAD U.A.
CHITAPUR
SEDAM
WADI U.A.
JEVARGI
GURMATKAL
YADGIR
BHIMARAYANAGUDI
SHAHPUR
SHORAPUR
Bhima River
Krishna River
Kagna River
BOUNDARY, STATE
DISTRICT
TALUK
HEADQUARTERS: DISTRICT : TALUK
STATE HIGHWAY
IMPORTANT METALLED ROAD
RAILWAY LINE WITH STATION, BROAD GAUGE
RIVER WITH STREAM
TANK
VILLAGES HAVING 5000 ANE ABOVE POPULATION WITH NAME
URBAN AREA WITH POPULATION SIZE – CLASS I, II, III, IV, V & VI
DEGREE COLLEGE AND TECHNICAL INSTITUTION
C.D. Block boundary of Gulbarga is co-terminus with taluk boundary.
TOTAL AREA OF DISTRICT (IN SQ.KM)......... 16,224.00
TOTAL POPULATION OF DISTRICT.............. 3,130,922
TOTAL NUMBER OF TOWNS IN DISTRICT....... 17
TOTAL NUMBER OF VILLAGES IN DISTRICT.... 1,437



INDIA
KARNATAKA
CHINCHOLI TALUK
GULBARGA DISTRICT
km 0 2 4 6 km
BIDAR DISTRICT
ANDHRA PRADESH
GULBARGA TALUK
CHITAPUR TALUK
SEDAM TALUK
CHINCHOLI
CHINCHOLI R.F.
TOTAL AREA OF TALUK (IN SQ.KM) 1,552.20
TOTAL POPULATION OF TALUK 223,646
TOTAL NUMBER OF TOWNS IN TALUK 01
TOTAL NUMBER OF VILLAGES IN TALUK 148
TOTAL DISTANCE FROM DISTRICT HEADQUARTERS (IN KM) 85
VILLAGES WITH POPULATION SIZE : BELOW 200: 200-499 : 500-999 : 1000-4999 : 5000 AND ABOVE
UNINHABITED VILLAGES WITH LOCATION CODE × 992
URBAN AREA WITH LOCATION CODE
STATE HIGHWAY SH 15
IMPORTANT METALLED ROAD
UNMETALLED AND OTHER ROADS
RIVER WITH STREAM
SUBMERGED AREA
POST OFFICE / TELEGRAPH OFFICE PO / TO
HIGHER SECONDARY SCHOOL S
POLICE STATION PS
PRIMARY HEALTH CENTRE
BANK COMMERCIAL / CO-OPERATIVE B
CD Block boundary of Chincholi is co-terminus with taluk boundary excluding statutory town.
BOUNDARY, STATE
DISTRICT
TALUK
VILLAGE WITH LOCATION CODE NUMBER 00294400
FOREST-RESERVED WITH NAME CHINCHOLI RF
HEADQUARTERS TALUK



ಗುಲ್ಬರ್ಗ ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು





ಜೈನ ಬಸದಿ ಶಾಸನ(ಗಡಿ ಕೇಶಾವರ)



ಈಶ್ವರ ದೇವಾಲಯದ ಶಾಸನ(ಸುಲೇಪೇಟೆ)



ಕರಿಸಿದ್ದೇಶ್ವರ ದೇವಾಲಯದ ಶಾಸನ(ಗಡಿ ಕೇಶಾವರ)



ಸಂಗಮೇಶ್ವರ ದೇವಾಲಯದ ಶಾಸನ(ದೇಗಲ್ಮಡಿ)



ರಾಮಲಿಂಗೇಶ್ವರ ದೇವಾಲಯದ ಶಾಸನ(ಮೋಘಾ)

ವೀರಗಲ್ಲುಗಳು



ತುರುಗೋಳ್ ವೀರಗಲ್ಲು ಚಿಂಚೋಳಿ



ನಿಷಿದಿಗಲ್ಲು ಎತ್ಬಾಪುರ




ವೀರಗಲ್ಲು ಬೇಡಕ್‌ಪಲ್ಲಿ



ವೀರಗಲ್ಲು ಗೋಟ್ಟಂಗೊಟ್ಟಿ



ತುರುಗೋಳ್
ವೀರಗಲ್ಲು
ಗಡಿಕೇಶ್ವಾರ್



ವೀರ ಮಹಿಳೆ
ಎತ್ಬಾಪುರ



ಮಾಸ್ತಿಗಲ್ಲು
ಐನಾಪೂರ



ಗಡಿಗಲ್ಲು
ಬೇಡಕ್‌ಪಲ್ಲಿ

ದೇವಾಲಯಗಳು



ಕಾಳಮ್ಮನಗುಡಿ ನಿಡಗುಂದ



ರಾಮಲಿಂಗೇಶ್ವರ ದೇವಾಲಯ ಮೋಘ




ತ್ರಿಕೂಟ ಈಶ್ವರ ದೇವಾಲಯ ಮಿರ್ಯಾಣ



ಬಂಕನಾಥ ದೇವಾಲಯ ರಟ್ಕಲ್



ಸೋಮೇಶ್ವರ ದೇವಾಲಯ ಚೇಂಗಟಾ



ಶಂಕರನಾರಾಯಣ ಗುಡಿ ರುಮ್ಮನ್‌ಗೂಡು




ಜೈನಬಸಿದಿ ದೇವಾಲಯ ಗಡಿಕೇಶ್ವಾರ್



ನವಕೋಟಿನಾರಾಯಣ ದೇವಾಲಯ ನಿಡಗುಂದ




ಕೇಶವ ನಾರಾಯಣ ಗುಡಿಯ ಬಾಗಿಲು (ನಿಡಗುಂದ)



ಶಂಕರ ನಾರಾಯಣ ಹೊರ ಬಾಗಿಲು (ರುಮ್ಮನಗೂಡು)



ಶಂಕರ ನಾರಾಯಣ ಒಳ ಬಾಗಿಲು (ರುಮ್ಮನಗೂಡು)



ಸೋಮೇಶ್ವರ ದೇವಾಲಯ ಬಾಗಿಲು (ಚೇಂಗಟಾ)



ಈಶ್ವರ ದೇವಾಲಯ ಬಾಗಿಲು. (ಮಿರ್ಯಾಣ)

ಶಿವಲಿಂಗಗಳು




ಸಂಗಮೇಶ್ವರ ದೇವಾಲಯ ದೇಗಲ್ಮಡಿ



ಮಲ್ಲಿಕಾರ್ಜುನ ದೇವಾಲಯ ಗಡಿಕೇಶ್ವಾರ್



ಪಂಚಲಿಂಗೇಶ್ವರ ದೇವಾಲಯ ಚಿಂಚೋಳಿ



ಈಶ್ವರ ದೇವಸ್ಥಾನ ಮಿರ್ಯಾಣ




ಈಶ್ವರ ದೇವಸ್ಥಾನ ಸುಲೇಪೇಟ್

ಮೂರ್ತಿ ಶಿಲ್ಪಗಳು




ವೀರಭದ್ರೇಶ್ವರ ಭೋಗಲಿಂಗದಹಳ್ಳಿ




ಭೈರವ ಶಿಲ್ಪ ಮೋಘ




ಭೈರವ ಶಿಲ್ಪ ಗೋಟ್ಟಿಂಗೊಟ್ಟಿ



ಮಹಿಷಾಸುರಮರ್ದಿನಿ ರೋಟ್ಟಿಂಗೊಟ್ಟಿ



ವೈಷ್ಣವಿ ಶಿಲ್ಪ ರುಮ್ಮನ್‌ಗೂಡು



ಹನುಮಾನ ಶಿಲ್ಪ ಕರಕ್‌ಮುಳ್ಳಿ



ಅನಂತಶಯನ ಶಿಲ್ಪ ಮೋಘ



ಕೇಶವನ ಮೂರ್ತಿಗಳು ಗಡಿಕೇಶ್ವಾರ್


ಮೂರ್ತಿ ಶಿಲ್ಪಗಳು




ಪಾರ್ಶ್ವನಾಥ ಮೂರ್ತಿ ಶಿಲ್ಪ
ದಡಿಕೇಶ್ವಾರ್



ಸ್ಥಾನಿಕ ಪಾರ್ಶ್ವವಾಥ
ಮೂರ್ತಿ ಶಿಲ್ಪ ದಡಿಕೇಶ್ವಾರ್




ಪಾರ್ಶ್ವನಾಥ ಮೂರ್ತಿ ಶಿಲ್ಪ
ಸುಲೇಪೇಟ್



ವೃಷಭನಾಥ ಶಿಲ್ಪ
ಸುಲೇಪೇಟ್




ಧರಣೇಂದ್ರ ಶಿಲ್ಪ
ದೇಗಲ್ಮಡಿ



ಗಣಪತಿಶಿಲ್ಪ ದೇಗಲ್ಮಡಿ



ಶೈವದ್ವಾರಪಾಲಕ (ನಿಡಗುಂದ)



ದ್ವಿ–ಪಾದ ನಾಗಶಿಲ್ಪ
ಕರಕ್‌ಮುಕ್ಲಿ



ನಾಗಕನ್ಯೆ
ಮಿರ್ಯಾಣ



ಗಣಪತಿಶಿಲ್ಪ (ಮಿರ್ಝಾಣ



ಶುಕ ಸುಂದರಿ (ರುಮ್ಮನಗೂಡು)




ನಂದಿಶಿಲ್ಪ (ಪಸ್ತಾಪುರ)



ಭೈರವ ಶಿಲ್ಪ (ಕೋಡ್ಲಿ)



ಸೂರ್ಯ ಶಿಲ್ಪ(ನಿಡಗುಂದ)



ಬ್ರಹ್ಮಶಿಲ್ಪ (ದೇಗಲ್ಮಡಿ)



ನವ ಮಾತೃಕೆಯರ ಶಿಲ್ಪ (ದೇಗಲ್ಮಡಿ)



ಭುವನೇಶ್ವರಿ (ದೇಗಲ್ಮಡಿ)


ಸಿಂಹ ಸ್ತಂಭ (ಮಿರ್‍ಯಾಣ)



ವಾಯು ದಿಕ್ಪಾಲಕನ ಶಿಲ್ಪ (ದೇಗಲ್ಮಡಿ)


ಅಂಧಕಾಸೂರ ವಧಾ ಮೂರ್ತಿ- (ಚೇಂಗಟಾ)



ತೋರಣಶಿಲ್ಪ (ಮಿರ್‍ಯಾಣ)


ತೋರಣಶಿಲ್ಪ (ನಿಡಗುಂದ)

ಅಪ್ರಕಟಿತ ಶಾಸನಗಳು




ದೇಗಲ್ಮಡಿ ಶಾಸನ,



ಎತ್ತಾಪುರ ಶಾಸನ



ಬೇಡಕ್‌ಪಲ್ಲಿ ಶಾಸನ



ಕುಪನೂರು ಶಾಸನಗಳು

ಶಾಸನಶಾಸ್ತ್ರ ವಿಭಾಗ